www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಆಳ-ಅಗಲ
ಫಲಿತಾಂಶದ ಕತೆ ಹೇಳುವ ದತ್ತಾಂಶಗಳು

ಶಿಕ್ಷಕರ ವರ್ಗಾವಣೆ: ಪರಿಷ್ಕೃತ ವೇಳಾಪಟ್ಟಿ ಪ್ರಕಟ 7

ಈದ್-ಉಲ್-ಅದಾ ಶುಭಾಶಯಗಳು 6



ಶಿಕ್ಷಣ
ಮಕ್ಕಳನ್ನು ಒತ್ತಡದ ಕೂಪಕ್ಕೆ ನೂಕುವ ಮುನ್ನ.....

370ಕ್ಕೂ ಹೆಚ್ಚು ಅಧಿಕಾರಿ, ನೌಕರರನ್ನು ಕೈಬಿಡಲು ಮುಖ್ಯ ಕಾರ್ಯದರ್ಶಿ ಸೂಚನೆ

ಆರ್ಥಿಕ ಹೊರೆ: 'ನಿವೃತ್ತ'ರಿಗೆ ಕೊಕ್

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಹೆಚ್ಚುವರಿ ಆರ್ಥಿಕ 'ಹೊರೆ' ಆಗಿರುವ, ಗುತ್ತಿಗೆ– ಹೊರಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ 370ಕ್ಕೂ ಹೆಚ್ಚು ನಿವೃತ್ತ ಸರ್ಕಾರಿ ಅಧಿಕಾರಿ, ನೌಕರರನ್ನು ತಕ್ಷಣದಿಂದಲೇ ಕೆಲಸದಿಂದ ಬಿಡುಗಡೆ ಮಾಡುವಂತೆ 20 ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಸೂಚನೆ ನೀಡಿದ್ದಾರೆ.

ಈ ಇಲಾಖೆಗಳು ಮತ್ತು ಅವುಗಳ ಅಧೀನದಲ್ಲಿರುವ ನಿಗಮ, ಮಂಡಳಿ, ಪ್ರಾಧಿಕಾರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಸರ್ಕಾರಿ ಅಧಿಕಾರಿ, ನೌಕರರ ಪಟ್ಟಿಯ ಸಹಿತ ಟಿಪ್ಪಣಿ ಮೂಲಕ ಅವರು ಈ ನಿರ್ದೇಶನ ನೀಡಿದ್ದಾರೆ.

ಅಲ್ಲದೆ, ನಿವೃತ್ತ ಅಧಿಕಾರಿ, ನೌಕರರನ್ನು ಬಿಡುಗಡೆಗೊಳಿಸಲು ತೆಗೆದುಕೊಂಡ ಕ್ರಮದ ವರದಿಯನ್ನು ಕೂಡಲೇ ತಮ್ಮ ಕಚೇರಿಗೆ ಸಲ್ಲಿಸಬೇಕು ಎಂದಿದ್ದಾರೆ. ಈ ಪಟ್ಟಿಯು 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ನಿವೃತ್ತರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸಿ, ಆ ಹುದ್ದೆಗಳಿಗೆ ಹಾಲಿ ಸೇವೆಯಲ್ಲಿರುವ ಸರ್ಕಾರಿ ಅಧಿಕಾರಿ, ನೌಕರರನ್ನು ನಿಯೋಜಿಸಲು ಕ್ರಮ ಕೈಗೊಂಡು ತಮ್ಮ ಕಚೇರಿಗೆ ವರದಿ ಸಲ್ಲಿಸುವಂತೆ ಜನವರಿ 9ರಂದು ಮುಖ್ಯ ಕಾರ್ಯದರ್ಶಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚಿಸಿದ್ದರು. ಈ ಸೂಚನೆಯನ್ನು ಉಲ್ಲೇಖಿಸಿ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಜನವರಿ 23 ಮತ್ತು ಫೆಬ್ರುವರಿ 22ರಂದು ಮುಖ್ಯ ಕಾರ್ಯದರ್ಶಿ ಟಿಪ್ಪಣಿ ಕಳುಹಿಸಿದ್ದರು.

ಆದರೆ, ಬಹುತೇಕ ಇಲಾಖೆಗಳು ಇನ್ನೂ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಅಲ್ಲದೆ, ಈ ಸೂಚನೆಯನ್ನು ಉಲ್ಲಂಘಿಸಿ ನಿವೃತ್ತ ಅಧಿಕಾರಿ, ನೌಕರರನ್ನು ಹೊಸದಾಗಿ ನೇಮಿಸಿಕೊಂಡಿವೆ. ಈ ಕಾರಣದಿಂದ ಮುಖ್ಯ ಕಾರ್ಯದರ್ಶಿ ಸ್ಪಷ್ಟ ಸೂಚನೆ ನೀಡಿದ್ದಾರೆ.

ಯಾರೆಲ್ಲ ಇದ್ದಾರೆ: ನಿವೃತ್ತ ಐಎಎಸ್, ಐಎಫ್ಎಸ್, ಕೆಎಎಸ್ ಅಧಿಕಾರಿಗಳು, ವಿಶ್ರಾಂತ ಕುಲಪತಿ, ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು, ಹಣಕಾಸು ಅಧಿಕಾರಿಗಳು, ವೈದ್ಯರು– ಗುತ್ತಿಗೆ, ಹೊರ ಗುತ್ತಿಗೆ ಆಧಾರದಲ್ಲಿ ವಿವಿಧ ಇಲಾಖೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

6ನೇ ಪುಟ ನೋಡಿ

ವಯೋ'ಮಿತಿ'ಯ ನಿರ್ಬಂಧ ಇಲ್ಲ

ಕೆಲವು ಇಲಾಖೆಗಳಲ್ಲಿ ನಿವೃತ್ತಿ ನಂತರದಿಂದಲೇ, ಸುಮಾರು 18–20 ವರ್ಷಗಳಿಂದಲೂ ಕೆಲಸ ಮಾಡುವವರೂ ಇದ್ದಾರೆ. 70 ವರ್ಷ ವಯಸ್ಸು ದಾಟಿದವರು 40ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದಾರೆ. ಪಟ್ಟಿಯಲ್ಲಿ ಇರುವವರ ಪೈಕಿ, ಉಪ ಮುಖ್ಯಮಂತ್ರಿ ಕಚೇರಿಯಲ್ಲಿ ವಿದ್ಯುತ್ ಸಲಹೆಗಾರ ಆಗಿರುವ ಬಿ. ಮುನಿಲಿಂಗೇಗೌಡ ಅವರಿಗೆ 82 ವರ್ಷ ವಯಸ್ಸು. ಇನ್ನು ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿರುವ ದ್ಯಾವಯ (79), ಕೆರೆ ಸಂರಕ್ಷಣಾ ಪ್ರಾಧಿಕಾರದಲ್ಲಿರುವ ಸಿ.ಎಸ್. ದೇಶಮುಖ್ (76), ತೋಟಗಾರಿಕೆ ಇಲಾಖೆಯಲ್ಲಿರುವ ಕೆ. ಆರ್ ರಾಮಮೂರ್ತಿ (75), ಬಿಬಿಎಂಪಿಯಲ್ಲಿರುವ ಕೆಂಚಯ್ಯ (76), ಕರ್ನಾಟಕ ನೀರಾವರಿ ನಿಗಮದಲ್ಲಿರುವ ಎಂ.ಸಿ. ರಂಗರಾಜನ್ (77), ಕಾವೇರಿ ನೀರಾವರಿ ನಿಗಮದಲ್ಲಿರುವ ಅಮರಪ್ಪ ಜಂಬಣ್ಣ ನಾಗಲೀಕರ (78), ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಲ್ಲಿರುವ ಮುನಿರಾಮಯ್ಯ ಶೆಟ್ಟಿ (75), ಎಂಎಸ್ಐಎಲ್‌ನಲ್ಲಿರುವ ಜ್ಯೋತಿಲಿಂಗಂ (76), ಗಂಗಾಧರ (76) ಹೀಗೆ 75 ವರ್ಷ ದಾಟಿದ ಹಲವರಿದ್ದಾರೆ.

ಪ್ರಧಾನ ಕಾರ್ಯದರ್ಶಿಯ ಸೌಲಭ್ಯ!

ನಿವೃತ್ತ ಐಎಎಸ್ ಅಧಿಕಾರಿ ಇ. ವೆಂಕಟಯ್ಯ ಅವರು ಸಮಾಜ ಕಲ್ಯಾಣ ಇಲಾಖೆಯ ಆಯುಕ್ತಾಲಯದಲ್ಲಿ ಗುತ್ತಿಗೆ ಆಧಾರದಲ್ಲಿ 'ಪರಿಶಿಷ್ಟ ಜಾತಿಯವರ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆ (ಎಸಿಎಸ್‌ಪಿ), ಬುಡಕಟ್ಟುಗಳ ಉಪ ಯೋಜನೆ'ಯ (ಟಿಎಸ್‌ಪಿ) ನೋಡಲ್ ಏಜೆನ್ಸಿ ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ. 69 ವರ್ಷ ವಯಸ್ಸಿನ ಅವರು, ಎಂಟು ವರ್ಷ ಆರು ತಿಂಗಳುಗಳಿಂದ ಕೆಲಸ ಮಾಡುತ್ತಿದ್ದಾರೆ. ವಿಕಾಸಸೌಧದಲ್ಲಿ ಪ್ರತ್ಯೇಕ ಕೊಠಡಿ ಹೊಂದಿರುವ ಅವರು ತಿಂಗಳಿಗೆ ₹ 1,15,735 ಸಂಭಾವನೆ ಪಡೆಯುತ್ತಿದ್ದು, ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ನೀಡುವ ಎಲ್ಲ ಸೌಲಭ್ಯಗಳನ್ನೂ ನೀಡಲಾಗುತ್ತಿದೆ.

ಹೆಸರು	ವೇತನ	ಸೌಲಭ್ಯ
₹2 ಲಕ್ಷಕ್ಕಿಂತ ಹೆಚ್ಚು ಸಂಭಾವನೆ		
ಎಂ.ಆರ್. ಕಾಂಬ್ಳೆ (ನಿವೃತ್ತ ಐಎಎಸ್ ಅಧಿಕಾರಿ)	₹2,53,611	ವಾಹನ
ವಿಶ್ವನಾಥ್ ಹಿರೇಮಠ (ಕಾನೂನು ಸಲಹೆಗಾರ)	₹2.25ಲಕ್ಷ	ಹವಾ ನಿಯಂತ್ರಣ ವಾಹನ (ಭತ್ಯೆ ₹37,450)
ವಿಜಯಲಾಲ್ ಮೀನ (ನಿವೃತ್ತ ಐಎಫ್‌ಎಸ್)	₹2,07,293	ವಾಹನ, ಮುಖ್ಯ ಎಂಜಿನಿಯರ್‌ಗೆ ನೀಡುವ ಟಿಎ, ಡಿಎ
ಸಿ.ಎನ್. ದೇವರಾಜ್ (ಸಹಕಾರ ಸಂಘಗಳ ಹೆಚ್ಚುವರಿ ನಿಬಂಧಕ (ನಿವೃತ್ತ)	₹2 ಲಕ್ಷ	ವಾಹನ
₹1.50 ಲಕ್ಷಕ್ಕಿಂತ ಹೆಚ್ಚು ಸಂಭಾವನೆ		
ವಿಜಯಕುಮಾರ್ ಗೋಗಿ (ಕರ್ನಾಟಕ ನೀರಾವರಿ ನಿಗಮ/ ಅರಣ್ಯ ಸಮಾಲೋಚಕರು)	₹1.65 ಲಕ್ಷ	ವಾಹನ
ಎಂ.ಸಿ. ರಂಗರಾಜನ್ (ಕರ್ನಾಟಕ ನೀರಾವರಿ ನಿಗಮ/ಸಲಹೆಗಾರರು)	₹1,61,051	ವಾಹನ
ಸೂರ್ಯದೇವ ಪಾಠಕ್ (ಕಾವೇರಿ ನೀರಾವರಿ ನಿಗಮ/ ಸಲಹೆಗಾರರು, ಅರಣ್ಯ ಕೋಶ)	₹1.50 ಲಕ್ಷ	ವಾಹನ
ಎಂ. ಶಿವಸ್ವಾಮಿ (ಕೆರೆ ಸಂರಕ್ಷಣ ಅಭಿವೃದ್ಧಿ ಪ್ರಾಧಿಕಾರ)	₹1.50 ಲಕ್ಷ	

ಗಂಗಾ ದಸರಾ — ಗಂಗಾ ದಸರಾದ ಅಂಗವಾಗಿ ಭಾನುವಾರ ಹರಿದ್ವಾರದ ಹರ್ ಕಿ ಪೌರಿ ಬಳಿ ಗಂಗಾ ನದಿಯಲ್ಲಿ ಭಕ್ತರು ತೀರ್ಥಸ್ನಾನ ಮಾಡಿದರು – ಪಿಟಿಐ ಚಿತ್ರ

ಮತಪತ್ರಗಳ ಬಳಕೆ ಚರ್ಚೆ ಮತ್ತೆ ಮುನ್ನೆಲೆಗೆ

ಇವಿಎಂ ಹ್ಯಾಕ್ ಸಾಧ್ಯ: ಮಸ್ಕ್

ಪ್ರಜಾವಾಣಿ ವಾರ್ತೆ

ಮುಂಬೈ: ವಿದ್ಯುನ್ಮಾನ ಮತಯಂತ್ರಗಳನ್ನು (ಇವಿಎಂ) ಹ್ಯಾಕ್ ಮಾಡಬಹುದು. ಹೀಗಾಗಿ, ಜಗತ್ತು ಮತ್ತೆ ಮತಪತ್ರಗಳ ವ್ಯವಸ್ಥೆಗೆ ಮೊರೆ ಹೋಗಬೇಕು ಎಂದು ಟೆಸ್ಲಾ ಕಂಪನಿ ಮಾಲೀಕ ಇಲಾನ್ ಮಸ್ಕ್ ಹೇಳಿರುವುದು ಭಾನುವಾರ ಚರ್ಚೆಗೆ ಕಾರಣವಾಗಿದೆ.

ಮಸ್ಕ್ ಹೇಳಿಕೆ ಟೀಕಿಸಿ ಬಿಜೆಪಿ ನಾಯಕರು ಪ್ರತಿಕ್ರಿಯಿಸಿದ್ದರೆ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಅವರು ಇವಿಎಂಗಳ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿದ್ದಾರೆ.

ಕೆರೀಬಿಯನ್ ದ್ವೀಪದಲ್ಲಿ ಇತ್ತೀಚೆಗೆ ನಡೆದಿದ್ದ ಚುನಾವಣೆ ವೇಳೆ ಇವಿಎಂ ಸಂಬಂಧಿತ ಅಕ್ರಮಗಳು ನಡೆದಿವೆ ಎಂದು ಅಮೆರಿಕದ ರಾಜಕಾರಣಿ ರಾಬರ್ಟ್ ಎಫ್.ಕೆನಡಿ ಜೂನಿಯರ್ ಹೇಳಿದ್ದರು.

ಇವಿಎಂಗಳ ಕುರಿತು ಅಮೆರಿಕ ರಾಜಕಾರಣಿಯ ಮಾತಿಗೆ ಮಸ್ಕ್ ಅವರು ಪ್ರತಿಕ್ರಿಯಿಸಿದ್ದರೂ ಮಸ್ಕ್ ಅವರ ಮಾತಿಗೆ ಬಿಜೆಪಿಯ ಹಿರಿಯ ನಾಯಕ ಹಾಗೂ ಕೇಂದ್ರದ ಮಾಜಿ ಸಚಿವ ರಾಜೀವ್ ಚಂದ್ರಶೇಖರ್ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.

ಅಲ್ಲದೇ, ವಾಯವ್ಯ ಮುಂಬೈ ಲೋಕಸಭಾ ಕ್ಷೇತ್ರದ ಮತ ಎಣಿಕೆ ವೇಳೆ ಹಲವು ಅಕ್ರಮಗಳು ನಡೆದಿವೆ ಎಂಬ ಆರೋಪಗಳು ಕೇಳಿಬಂದ ಸಂದರ್ಭದಲ್ಲಿಯೇ, ಇವಿಎಂ ಸುರಕ್ಷತೆ–ಕ್ಷಮತೆ ಬಗ್ಗೆ ವಿವಾದ ಎದ್ದಿದೆ.

6ನೇ ಪುಟ ನೋಡಿ

ನಾವು ಇವಿಎಂಗಳನ್ನು ತೆಗೆದು ಹಾಕಬೇಕು. ಮನುಷ್ಯನಿಂದ ಅಥವಾ ಕೃತಕ ಬುದ್ಧಿಮತ್ತೆ ಮೂಲಕ ಇವುಗಳನ್ನು ಹ್ಯಾಕ್ ಮಾಡುವ ಅಪಾಯ ಇದ್ದೇ ಇದೆ
ಇಲಾನ್ ಮಸ್ಕ್, ಟೆಸ್ಲಾ ಕಂಪನಿ ಮಾಲೀಕ

ಭಾರತದಲ್ಲಿ ಇವಿಎಂಗಳು ಬ್ಲ್ಯಾಕ್ ಬಾಕ್ಸ್ ಇದ್ದಂತೆ. ಇವುಗಳ ಪರಿಶೀಲನೆ ನಡೆಸಲು ಯಾರಿಗೂ ಅವಕಾಶ ನೀಡಲಾಗುವುದಿಲ್ಲ
ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

ಭಾರತವು ಅಭಿವೃದ್ಧಿಪಡಿಸಿರುವ ರೀತಿಯಲ್ಲಿ ಇವಿಎಂಗಳನ್ನು ತಯಾರಿಸಬಹುದು. ಈ ಸಂಬಂಧ ಇಲಾನ್ ಮಸ್ಕ್ ಅವರಿಗೆ ತಿಳಿವಳಿಕೆ ನೀಡಲು ನಾವು ಸಿದ್ಧರಿದ್ದೇವೆ
ರಾಜೀವ್ ಚಂದ್ರಶೇಖರ್, ಕೇಂದ್ರದ ಮಾಜಿ ಸಚಿವ

ಸಮಸ್ಯೆಗಳನ್ನು ಬಗೆಹರಿಸುವುದಕ್ಕಾಗಿ ತಂತ್ರಜ್ಞಾನ ಇದೆ. ಒಂದು ವೇಳೆ ತಂತ್ರಜ್ಞಾನವೇ ಸಮಸ್ಯೆಯಾದಾಗ ಅದರ ಬಳಕೆಯನ್ನು ನಿಲ್ಲಿಸಬೇಕು
ಅಖಿಲೇಶ್ ಯಾದವ್, ಎಸ್‌ಪಿ ನಾಯಕ

'ಇವಿಎಂ ತೆರೆಯಲು ಒಟಿಪಿ ಅಗತ್ಯವಿಲ್ಲ'

ಮುಂಬೈ(ಪಿಟಿಐ): 'ಇವಿಎಂ ಅತ್ಯಂತ ಸುರಕ್ಷಿತವಾದ ವ್ಯವಸ್ಥೆ. ಅದರಲ್ಲಿನ ದತ್ತಾಂಶವನ್ನು ಯಾವುದೇ ರೀತಿಯಿಂದ ಬದಲಿಸಲು ಆಗದಂತೆ ರೂಪಿಸಲಾಗಿದೆ. ಈ ಮತಯಂತ್ರವನ್ನು ತೆರೆಯುವುದಕ್ಕೆ ಒಟಿಪಿಯ ಅಗತ್ಯ ಇಲ್ಲ' ಎಂದು ವಾಯವ್ಯ ಮುಂಬೈ ಲೋಕಸಭಾ ಕ್ಷೇತ್ರದ ಚುನಾವಣಾಧಿಕಾರಿಯಾಗಿದ್ದ ವಂದನಾ ಸೂರ್ಯವಂಶಿ ಭಾನುವಾರ ಹೇಳಿದ್ದಾರೆ.

ಈ ಕ್ಷೇತ್ರದಿಂದ ಕೇವಲ 48 ಮತಗಳ ಅಂತರದಿಂದ ಗೆಲುವು ಸಾಧಿಸಿದ ಶಿವಸೇನಾ (ಶಿಂದೆ ಬಣ) ಅಭ್ಯರ್ಥಿ ರವೀಂದ್ರ ವಾಲ್ಕರ್ ಅವರ ಸಂಬಂಧಿಯೊಬ್ಬ ಮತ ಎಣಿಕೆ ನಡೆದ ಜೂನ್ 4ರಂದು ಇವಿಎಂ ಜೊತೆ ಮೊಬೈಲ್ ಫೋನ್ ಸಂಪರ್ಕ ಸಾಧಿಸಿದ್ದ ಎಂದು 'ಮಿಡ್ ಡೇ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿಗೆ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ. 'ವೈರ್‌ಲೆಸ್ ತಂತ್ರಜ್ಞಾನದ ಮೂಲಕ ಸಂಪರ್ಕ ಸಾಧಿಸುವಂತಹ ವ್ಯವಸ್ಥೆಯನ್ನು ಇವಿಎಂ ಹೊಂದಿಲ್ಲ. ಪತ್ರಿಕೆಯು ಸುಳ್ಳು ಸುದ್ದಿ ಹಬ್ಬಿಸುತ್ತಿದೆ. ಐಪಿಸಿ ಸೆಕ್ಷನ್ 499, 505 ಅಡಿ ಮಿಡ್ ಡೇ ಪತ್ರಿಕೆಗೆ ನೋಟಿಸ್ ಜಾರಿ ಮಾಡಿದ್ದೇವೆ' ಎಂದು ವಂದನಾ ಹೇಳಿದ್ದಾರೆ

ವಾಲ್ಮೀಕಿ ನಿಗಮದ ಹಗರಣ: ಎಸ್‌ಐಟಿ ಕಾರ್ಯಾಚರಣೆ

₹1.49 ಕೋಟಿ ನಗದು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ ಎನ್ನಲಾದ ಹಣ ಅಕ್ರಮ ವರ್ಗಾವಣೆ ಹಗರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡದ (ಎಸ್‌ಐಟಿ) ಅಧಿಕಾರಿಗಳು ಬಂಧಿತ ಆರೋಪಿ ನಾಗೇಶ್ವರ ರಾವ್‌ಗೆ ಸೇರಿದ ಮನೆಯಿಂದ ₹1.49 ಕೋಟಿ ಜಪ್ತಿ ಮಾಡಿದ್ದಾರೆ.

ನಾಗೇಶ್ವರ ರಾವ್ ಅವರ ಜಕ್ಕೂರಿನ ನಿವಾಸದ ಮೇಲೆ ದಾಳಿ ನಡೆಸಿ ಹಣ ಜಪ್ತಿ ಮಾಡಿಕೊಳ್ಳಲಾಗಿದೆ. ಈ ಹಣವನ್ನು ಹೈದರಾಬಾದ್‌ನ ಬ್ಯಾಂಕ್‌ನಿಂದ ಡ್ರಾ ಮಾಡಲಾಗಿತ್ತು. ಹಲವರ ಕೈಸೇರಿದ್ದ ಹಣವನ್ನು ಕೊನೆಗೆ ಜಕ್ಕೂರಿನ ಮನೆಯಲ್ಲಿ ಇಡಲಾಗಿತ್ತು ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಜೂನ್ 12ರಂದು ಮತ್ತೊಬ್ಬ ಆರೋಪಿ ಸತ್ಯನಾರಾಯಣ್ ವರ್ಮಾ ಎಂಬವರನ್ನು ಹೈದರಾಬಾದ್‌ನಲ್ಲಿ ಬಂಧಿಸಿದ್ದ ಎಸ್‌ಐಟಿ, ₹8.21 ಕೋಟಿ ಜಪ್ತಿ ಮಾಡಿಕೊಂಡಿತ್ತು. ಜೂನ್ 30ರಂದು ನಿಗಮದ ಮಾಜಿ ವ್ಯವಸ್ಥಾಪಕನ ಆಪ್ತನ ಬಳಿಯಿಂದ ₹30 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿತ್ತು. ಇದುವರೆಗೂ ಈ ಪ್ರಕರಣದಲ್ಲಿ ₹13.62 ಕೋಟಿ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಮೂಲಗಳು ಹೇಳಿವೆ.

ಎಂ.ಜಿ. ರಸ್ತೆಯ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ರುವ ಮಹರ್ಷಿ ವಾಲ್ಮೀಕಿ ಅಭಿವೃದ್ಧಿ ನಿಗಮದ ಖಾತೆಯಿಂದ 18 ಖಾತೆಗಳಿಗೆ ₹94.73 ಕೋಟಿ ಅಕ್ರಮವಾಗಿ ವರ್ಗಾವಣೆಯಾಗಿತ್ತು. ಈ ಸಂಬಂಧ ತನಿಖೆ ನಡೆಸಲು ರಾಜ್ಯ ಸರ್ಕಾರ ಎಸ್‌ಐಟಿ ರಚಿಸಿದೆ.

ಈ ಅಕ್ರಮ ಹಣ ವರ್ಗಾವಣೆ ಸಂಬಂಧ ಈಗಾಗಲೇ ತನಿಖೆಗೆ ಇಳಿದಿರುವ ಎಸ್‌ಐಟಿ, ನಿಗಮದ ಮಾಜಿ ವ್ಯವಸ್ಥಾಪಕ ನಿರ್ದೇಶಕ ಪದ್ಮನಾಭ, ಲೆಕ್ಕಾಧಿಕಾರಿ ಪರಶುರಾಮ್, ಮಾಜಿ ಸಚಿವ ಬಿ.ನಾಗೇಂದ್ರ ಅವರ ಆಪ್ತ ಎನ್ನಲಾದ ನಾಗರಾಜ್ ನೆಕ್ಕುಂಟಿ, ನಾಗೇಶ್ವರ್ ರಾವ್, ಹೈದರಾಬಾದ್ ಫಸ್ಟ್ ಫೈನಾನ್ಸ್ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಸತ್ಯನಾರಾಯಣ್ ಹಾಗೂ ಇವರ ಆಪ್ತ ಸತ್ಯನಾರಾಯಣ್ ವರ್ಮಾ ಎಂಬವರನ್ನು ಬಂಧಿಸಿದೆ. ಎಸ್‌ಐಟಿ ಅಧಿಕಾರಿಗಳು ಆರೋಪಿಗಳನ್ನು ಕಸ್ಟಡಿಗೆ ಪಡೆದುಕೊಂಡು ವಿಚಾರಣೆ ನಡೆಸುತ್ತಿದ್ದಾರೆ.

'ನೀಟ್‌ನಲ್ಲಿ ಕೆಲ ಅಕ್ರಮ ಪತ್ತೆ'

ಪ್ರಜಾವಾಣಿ ವಾರ್ತೆ

ಧರ್ಮೇಂದ್ರ ಪ್ರಧಾನ್

ನವದೆಹಲಿ: 'ನೀಟ್–ಯುಜಿ'ಯಲ್ಲಿ ಯಾವುದೇ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿಲ್ಲ ಎಂದು ಕೆಲ ದಿನಗಳ ಹಿಂದೆಯಷ್ಟೇ ಹೇಳಿದ್ದ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್, 'ಕೆಲವು ಅಕ್ರಮಗಳು ನಡೆದಿರುವುದು ನಿಜ' ಎಂದು ಭಾನುವಾರ ಒಪ್ಪಿಕೊಂಡಿದ್ದಾರೆ.

ಈ ಅಕ್ರಮಗಳಲ್ಲಿ ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ಅಧಿಕಾರಿಗಳು ತಪ್ಪಿತಸ್ಥರು ಎಂದು ಕಂಡು ಬಂದರೆ ಅವರನ್ನು ಹೊಣೆಗಾರರನ್ನಾಗಿ ಮಾಡಿ, ಕಠಿಣ ಕ್ರಮ ಜರುಗಿಸಲಾಗುವುದು ಎಂದೂ ಅವರು ತಿಳಿಸಿದ್ದಾರೆ.

'ಎರಡು ಕಡೆಗಳಲ್ಲಿ ಅಕ್ರಮಗಳು ನಡೆದಿರುವುದು ಕಂಡು ಬಂದಿವೆ. ಸರ್ಕಾರ ಇದನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದೆ ಎಂಬುದನ್ನು ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ತಿಳಿಸಲು ಬಯಸುತ್ತೇನೆ' ಎಂದು ಅವರು ಹೇಳಿದ್ದಾರೆ.

ಒಡಿಶಾದ ಸಂಬಲ್‌ಪುರದಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಎನ್‌ಟಿಎನಲ್ಲಿ ಗಮನಾರ್ಹ ಸುಧಾರಣೆಗಳನ್ನು ತರುವ ಅಗತ್ಯವಿದೆ. ಯಾವುದೇ ತಪ್ಪು ಮಾಡಿದವರು ಶಿಕ್ಷೆಯಿಂದ ಪಾರಾಗದಂತೆ ನೋಡಿಕೊಳ್ಳಲು ನಾವು ಬದ್ಧರಾಗಿದ್ದೇವೆ. ಎನ್‌ಟಿಎನ ಎಷ್ಟೇ ಹಿರಿಯ ಶ್ರೇಣಿಯ ಅಧಿಕಾರಿಗಳು ತಪ್ಪಿತಸ್ಥರೆಂದು ಕಂಡು ಬಂದರೂ ಅವರನ್ನು ಬಿಡುವುದಿಲ್ಲ. ಅಪರಾಧಿಗಳನ್ನು ಕಠಿಣ ಶಿಕ್ಷೆಗೆ ಒಳಪಡಿಸಲಾಗುವುದು' ಎಂದು ಪ್ರತಿಕ್ರಿಯಿಸಿದ್ದಾರೆ.

ಸುಪ್ರೀಂ ಕೋರ್ಟ್‌ಗೆ ನೀಡಿದ ಮಾಹಿತಿಯಂತೆ 1,563 ಅಭ್ಯರ್ಥಿಗಳಿಗೆ ಮರು ಪರೀಕ್ಷೆ ನಡೆಸಲು ಆದೇಶಿಸಲಾಗಿದೆ ಎಂದು ಹೇಳಿದ್ದಾರೆ.

ಗಲಭೆ, ಮಸೀದಿ ಧ್ವಂಸದ ಬೋಧನೆ ಅಗತ್ಯ ಇಲ್ಲ 10

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಡಿಜಿಟಲ್ ಸಾಕ್ಷ್ಯ ಸಂಗ್ರಹ ಚುರುಕು

• ಆದಿತ್ಯ ಕೆ.ಎ.

ದರ್ಶನ್

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು, ನಗರದ ಹಲವು ಕಡೆ ಸಾಕ್ಷ್ಯಾಧಾರಗಳಿಗಾಗಿ ಶೋಧ ನಡೆಸಿ, ಮಾಹಿತಿ ಕಲೆ ಹಾಕುತ್ತಿದ್ದಾರೆ. ಕೃತ್ಯ ಎಸಗಿದ್ದ ಬಳಿಕ ಆರೋಪಿಗಳು ಭೇಟಿ ನೀಡಿದ್ದ ಪ್ರತಿ ಸ್ಥಳಕ್ಕೂ ತನಿಖಾಧಿಕಾರಿಗಳ ತಂಡ ಭೇಟಿ ನೀಡಿ ಶೋಧಿಸುತ್ತಿದೆ.

ಇನ್ನೊಂದೆಡೆ ಪೊಲೀಸ್ ಕಸ್ಟಡಿಯಲ್ಲಿರುವ ನಟ ದರ್ಶನ್, ಅವರ ಆಪ್ತೆ ಪವಿತ್ರಾಗೌಡ ಸೇರಿ 16 ಆರೋಪಿಗಳ ವಿಚಾರಣೆ ತೀವ್ರಗೊಂಡಿದೆ.

'ಅನ್ನಪೂರ್ಣೇಶ್ವರಿ ನಗರ ಠಾಣೆಯ ಸೆಲ್‌ನಲ್ಲಿರುವ ಆರೋಪಿಗಳನ್ನು ಭಾನುವಾರ ಸಹ ಪ್ರತ್ಯೇಕ ಕಡೆ ಇರಿಸಿ ಪ್ರಶ್ನೆಗಳನ್ನು ಕೇಳಲಾಯಿತು. ಸಮರ್ಪಕ ಉತ್ತರ ನೀಡದಿದ್ದಾಗ ಡಿಜಿಟಲ್ ಸಾಕ್ಷ್ಯಾಧಾರ ಮುಂದಿಟ್ಟುಕೊಂಡು ಆರೋಪಿಗಳ ಬಾಯ್ಬಿಡಿಸುವ ಕೆಲಸ ಮಾಡಲಾಯಿತು. ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿರುವ ಪೊಲೀಸರು ವಿಶಿಷ್ಟ ಶೈಲಿಯಲ್ಲಿ ತನಿಖೆ ನಡೆಸುತ್ತಿದ್ದಾರೆ' ಎಂಬುದು ಗೊತ್ತಾಗಿದೆ.

'ಕೊಲೆಗೆ ಷಡ್ಯಂತ್ರ ರೂಪಿಸಿದವರು ಯಾರು? ರೇಣುಕಸ್ವಾಮಿಯನ್ನು ಅಪಹರಿಸಲು ಹೇಳಿದ್ದು ಯಾರು? ಎಷ್ಟು ಹೊತ್ತಿಗೆ ರೇಣುಕಸ್ವಾಮಿಯನ್ನು ಶೆಡ್ ಒಳಕ್ಕೆ ಕರೆದೊಯ್ಯಲಾಯಿತು. ಹಲ್ಲೆ ನಡೆಸಿದವರು ಯಾರು? ದರ್ಶನ್, ಪವಿತ್ರಾಗೌಡ ಸ್ಥಳದಲ್ಲಿ ಇದ್ದರೆ? ನಿಮಗೆ ಶೆಡ್ ಬಳಿಗೆ ಬರಲು ಹೇಳಿದವರ್ಯಾರು... ಎಂಬೆಲ್ಲಾ ಪ್ರಶ್ನೆಗಳನ್ನು ಮುಂದಿಟ್ಟುಕೊಂಡು ಮಾಹಿತಿ ದಾಖಲು ಮಾಡಿಕೊಳ್ಳಲಾಗುತ್ತಿದೆ' ಎಂದು ಮೂಲಗಳು ಹೇಳಿವೆ.

7ನೇ ಪುಟ ನೋಡಿ

ಎಲೆಕ್ಟ್ರಿಕ್ ಶಾಕ್ ನೀಡಿದ್ದ ಆರೋಪಿ ಬಂಧನ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿಯನ್ನು ಅಪಹರಿಸಿ ಕೊಲೆ ಮಾಡಿದ್ದ ಪ್ರಕರಣದಲ್ಲಿ ಮತ್ತೊಬ್ಬ ಆರೋಪಿಯನ್ನು ಪಶ್ಚಿಮ ವಿಭಾಗದ ಪೊಲೀಸರು ಭಾನುವಾರ ರಾತ್ರಿ ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 19ಕ್ಕೆ ಏರಿಕೆಯಾಗಿದೆ.

ರಾಜು ಅಲಿಯಾಸ್ ಧನರಾಜ್ ಬಂಧಿತ ಆರೋಪಿ. ರೇಣುಕಸ್ವಾಮಿ ಕೊಲೆಯಾದ ಬಳಿಕ ರಾಜು ತಲೆಮರೆಸಿಕೊಂಡಿದ್ದ. ಪ್ರಕರಣದಲ್ಲಿ ಈತ 9ನೇ ಆರೋಪಿ ಆಗಿದ್ದ. ವಿಶೇಷ ತಂಡ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಗಿದೆ ಎಂದು ಮೂಲಗಳು ತಿಳಿಸಿವೆ. 'ರೇಣುಕಸ್ವಾಮಿಯನ್ನು ಪಟ್ಟಣಗೆರೆ ಶೆಡ್‌ಗೆ ಕರೆತಂದಾಗ ಆರೋಪಿ ನಂದೀಶ್ ಜತೆಗೆ ಸೇರಿ ರಾಜು ಎಲೆಕ್ಟ್ರಿಕ್ ಶಾಕ್ ನೀಡಿದ್ದ. ಮೆಗ್ಗರ್ ಸಾಧನ ಬಳಸಿ ರೇಣುಕಸ್ವಾಮಿಗೆ ಎಲೆಕ್ಟ್ರಿಕ್ ಶಾಕ್ ನೀಡಲಾಗಿತ್ತು' ಎಂದು ಪೊಲೀಸರು ತಿಳಿಸಿದ್ದಾರೆ.

4ನೇ ಪುಟ ನೋಡಿ

ಸರ್ಕಾರದ ನಿರ್ಧಾರದಿಂದ ಮಕ್ಕಳ ಸಂಖ್ಯೆ ಗಣನೀಯವಾಗಿ ಇಳಿಕೆ

ಪೂರ್ವ ಪ್ರಾಥಮಿಕಕ್ಕೆ ಒತ್ತು; ಅಂಗನವಾಡಿಗೆ ಕುತ್ತು?

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು (ಎಲ್‌ಕೆಜಿ, ಯುಕೆಜಿ) ಆರಂಭಿಸಿದ ನಂತರ ಆ ಭಾಗದ ಬಹುತೇಕ ಅಂಗನವಾಡಿಗಳು ಬಾಗಿಲು ಮುಚ್ಚುವ ಪರಿಸ್ಥಿತಿ ನಿರ್ಮಾಣವಾಗಿದೆ.

ಈ ವರ್ಷ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪೂರ್ವ ಪ್ರಾಥಮಿಕ ಶಾಲೆಗಳನ್ನು ಆರಂಭಿಸಲು ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಪ್ರಸ್ತುತ ರಾಜ್ಯ ದಲ್ಲಿನ ಪೂರ್ವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎರಡು ಸಾವಿರ ದಾಟಿದೆ.

ಸರ್ಕಾರದ ನಿರ್ಧಾರ ಅಂಗನವಾಡಿಗಳ ಅಸ್ತಿತ್ವಕ್ಕೆ ಧಕ್ಕೆ ತಂದಿದೆ. ಮಕ್ಕಳ ಸಂಖ್ಯೆ ಗಣನೀಯವಾಗಿ ಕುಸಿದಿದೆ ಎಂದು ಕಾರ್ಯಕರ್ತೆಯರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಅಂಕಿ ಅಂಶಗಳು

65,911 ಕರ್ನಾಟಕದಲ್ಲಿರುವ ಅಂಗನವಾಡಿ ಕೇಂದ್ರಗಳು

64,816 ರಾಜ್ಯದಲ್ಲಿರುವ ಕಾರ್ಯಕರ್ತೆಯರು

23,263 ಪದವಿ, ಸ್ನಾತಕೋತ್ತರ ಪದವೀಧರ ಕಾರ್ಯಕರ್ತೆಯರು

2,178 ಸರ್ಕಾರಿ ಪೂರ್ವ ಪ್ರಾಥಮಿಕ ಶಾಲೆಗಳು

ರಾಷ್ಟ್ರೀಯ ಮಕ್ಕಳ ಶಿಕ್ಷಣ ನೀತಿ–1975ರ ಭಾಗವಾಗಿ ಜಾರಿಗೊಳಿಸಲಾಗಿದ್ದ ಸಮಗ್ರ ಶಿಶು ಅಭಿವೃದ್ಧಿ ಯೋಜನೆ ಮೂಲಕ ಆರು ವರ್ಷದ ಒಳಗಿನ ಮಕ್ಕಳ ಬೆಳವಣಿಗೆಗೆ ಅಗತ್ಯವಾದ ಪೌಷ್ಟಿಕ ಆಹಾರ ನೀಡುವ ಜತೆಗೆ, ಪೂರ್ವ ಪ್ರಾಥಮಿಕ ಶಿಕ್ಷಣದ ಖಾತ್ರಿಯನ್ನೂ ದಶಕಗಳ ಕಾಲ ಒದಗಿಸಿದೆ. ಅಂಗನವಾಡಿ ಕಾರ್ಯಕರ್ತೆಯರು ಅತ್ಯಂತ ಕಡಿಮೆ ಗೌರವ ಸಂಭಾವನೆ ಪಡೆದರೂ, ಯೋಜನೆಯ ಸಮರ್ಪಕ ಅನುಷ್ಠಾನಕ್ಕೆ ಗಣನೀಯ ಕೊಡುಗೆ ನೀಡಿದ್ದಾರೆ.

ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೆಳೆಯಲು ಪ್ರಾಥಮಿಕ ಶಾಲೆಗಳಲ್ಲೇ ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸಲು 2016ರಲ್ಲೇ ಯೋಜನೆ ರೂಪಿಸಲಾಗಿತ್ತು. ಪ್ರತಿ ವರ್ಷ ಆಯ್ದ 20–25 ಶಾಲೆಗಳಿಗೆ ಅವಕಾಶ ನೀಡುತ್ತಾ ಬರಲಾಗಿತ್ತು.

6ನೇ ಪುಟ ನೋಡಿ

ಕಲ್ಯಾಣ ಕರ್ನಾಟಕದಲ್ಲಿ ಸಾವಿರ ಶಾಲೆ

2024–25ನೇ ಸಾಲಿನಲ್ಲಿ ಕಲ್ಯಾಣ ಕರ್ನಾಟಕದ ಏಳು ಜಿಲ್ಲೆಗಳಲ್ಲಿ 1,008 ಶಾಲೆಗಳಿಗೆ ಅನುಮತಿ ನೀಡಿ ಶಾಲಾ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ (ಕೆಕೆಆರ್‌ಡಿಬಿ) ₹7.56 ಕೋಟಿ ಅನುದಾನ ಬಳಸಿಕೊಂಡು ಅಗತ್ಯ ಪರಿಕರ, ಮೂಲಸೌಕರ್ಯ ಕಲ್ಪಿಸಬೇಕು. ಶಾಲೆಯ ಒಂದು ಕೊಠಡಿ ಮೀಸಲಿಡಬೇಕು. ಆಗಸ್ಟ್ 1ರಿಂದ ತರಗತಿಗಳನ್ನು ಆರಂಭಿಸಬೇಕು ಎಂದು ಸೂಚಿಸಿದೆ.

ಪಿಯುಸಿ, ಪೂರ್ವ ಪ್ರಾಥಮಿಕ ತರಬೇತಿ, ಡಿ.ಇಡಿ ಕೋರ್ಸ್ ಪೂರೈಸಿದವರನ್ನು ಅತಿಥಿ ಶಿಕ್ಷಕರನ್ನಾಗಿ 10 ತಿಂಗಳಿಗೆ ನೇಮಕ ಮಾಡಿಕೊಳ್ಳಬೇಕು. ಅವರಿಗೆ ತಿಂಗಳಿಗೆ ₹10 ಸಾವಿರ ಗೌರವಧನ ನಿಗದಿ ಮಾಡಲಾಗಿದೆ.

ವರ್ಷ ಕಳೆದರೂ ಬಾರದ ಗೌರವಧನ

2023–24ನೇ ಶೈಕ್ಷಣಿಕ ಸಾಲಿನಲ್ಲಿ 262 ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಆರಂಭಿಸಲು ಸಮಗ್ರ ಶಿಕ್ಷಣ ಕರ್ನಾಟಕದ ನಿರ್ದೇಶಕರು ಆದೇಶ ಹೊರಡಿಸಿದ್ದರು. ಅಗತ್ಯವಿರುವ ಶಿಕ್ಷಕರನ್ನು ಆಯಾ ಶಾಲಾ ಮಟ್ಟದಲ್ಲೇ ನೇಮಿಸಿಕೊಳ್ಳಲು ಅನುಮತಿ ನೀಡಲಾಗಿತ್ತು. ಶಿಕ್ಷಕರಿಗೆ ₹7,500 ಹಾಗೂ ಸಹಾಯಕಿಯರಿಗೆ ₹5 ಸಾವಿರ ಗೌರವಧನ ನಿಗದಿ ಮಾಡಲಾಗಿತ್ತು. ವರ್ಷ ಕಳೆದರೂ ಒಂದು ತಿಂಗಳ ಹಣವನ್ನೂ ನೀಡಿಲ್ಲ.

ಇದು ಬ್ರಹ್ಮರ್ಷಿ ಆನಂದ ಸಿದ್ಧಿ ಪೀಠದ ಆಯುರ್ವೇದ ಉತ್ಪನ್ನ
ನಿಮ್ಮ ಬ್ಯುಸಿ ಕೆಲಸದಲ್ಲಿ ನಿಮ್ಮ ಕೂದಲ ಕಾಳಜಿ ಮರೆಯುವಿರಾ?
ನೀವು ಒತ್ತಡಕ್ಕೊಳಪಟ್ಟಿದ್ದೀರಾ?
ನಿಮಗೆ ನಿದ್ರೆಯ ಕೊರತೆಯಿದೆಯಾ?
ಇವೆಲ್ಲಕ್ಕೂ ಶಕುಂತಲಾ ಹರ್ಬಲ್ ಹೇರ್ ಟೋನ್ ಒಂದೇ ಉತ್ತರ

"ಶಕುಂತಲಾ ಹರ್ಬಲ್ ಹೇರ್ ಟೋನ್‌ನ್ನು ನಾನು ಸದಾ ಉಪಯೋಗಿಸುತ್ತಿದ್ದು, ಕೂದಲು ಬೆಳವಣಿಗೆಗೆ ಇದು ಬಲು ಪರಿಣಾಮಕಾರಿಯಾಗಿದ್ದು ನೀವೂ ಬಳಸಿ."
- ರಾಗಿಣಿ ದ್ವಿವೇದಿ, ಬಹುಭಾಷಾ ಚಲನಚಿತ್ರ ತಾರೆ
ಪ್ರಾಚೀನ ಗ್ರಂಥದಿಂದ ಪ್ರಮಾಣಿತವಾದ ಫಾರ್ಮುಲಾ ನಿಮ್ಮ ಹೊಸ ಪೀಳಿಗೆಗಾಗಿ
ಶಕುಂತಲಾ ಹರ್ಬಲ್ ಹೇರ್ ಟೋನ್
ನೂರಕ್ಕೆ ನೂರು ಪ್ರತಿಶತ ಪರಿಶುದ್ಧ ಮತ್ತು ಸ್ವಾಭಾವಿಕ
ಪ್ರಾಚೀನ ಗ್ರಂಥಗಳಲ್ಲಿ ತಿಳಿಸಲಾದ ಅಪರೂಪದ ಆಯುರ್ವೇದ ಔಷಧಿಯುಕ್ತ ಗಿಡಮೂಲಿಕೆಗಳಿಂದ ಪರಿಶುದ್ಧ ತೆಂಗಿನ ಎಣ್ಣೆಯಲ್ಲಿ ಶಕುಂತಲಾ ಹರ್ಬಲ್ ಹೇರ್ ಟೋನ್‌ನ್ನು ತಯಾರಿಸಲಾಗಿದೆ.
• ಇದು ಅತಿ ಉದ್ದನೆಯ ಕಪ್ಪಾದ ಸದೃಢ ಮತ್ತು ದಪ್ಪ ಕೂದಲ ಬೆಳವಣಿಗೆಗೆ ಸಹಕಾರಿ.
• ಇದು ನಿಮ್ಮ ತಲೆ ಮತ್ತು ಕಣ್ಣುಗಳನ್ನು ತಂಪಾಗಿಡುವುದು, ಇದರಿಂದ ಗಾಢ ನಿದ್ರೆ ಬರುವುದು.
• ಪ್ರತಿನಿತ್ಯದ ಒತ್ತಡವನ್ನು ಶಮನಗೊಳಿಸಿ ತಲೆನೋವನ್ನು ತಡೆಗಟ್ಟುವುದು.
• ಬಾಲನೆರೆ ಸಮಸ್ಯೆ, ತಲೆಕೂದಲು ಉದುರುವಿಕೆ, ತಲೆಹೊಟ್ಟು ಇತ್ಯಾದಿಗಳನ್ನು ತಡೆಗಟ್ಟಲು ಸಹಕಾರಿಯಾಗಿದೆ.
• ಪರಿಶುದ್ಧ ಕೇರಳ ಕೊಬ್ಬರಿ ಎಣ್ಣೆಯಿಂದ ತಯಾರಿಸಲಾಗಿದೆ.
ಇದು ಯಾವುದೇ ಹಾನಿಕಾರಕ ಕೃತಕ ಬಣ್ಣ ಅಥವಾ ರಾಸಾಯನಿಕ ಸುಗಂಧ ದ್ರವ್ಯಗಳಿಂದ ಮುಕ್ತವಾಗಿದ್ದು, ಕೂದಲಿಗೆ ನೈಸರ್ಗಿಕವಾಗಿ ಸಂಪೂರ್ಣ ಸುರಕ್ಷತೆ ನೀಡುತ್ತದೆ.
ಹೆಚ್ಚಿನ ವಿವರಗಳಿಗೆ ವಿಚಾರಿಸಿರಿ: From the house of A & J Health Care, Bangalore Ph: 8762226000, 9243112373.
For a Healthy Society
Also available at: amazon Flipkart

ಕೀಲು, ಸಂಧಿವಾತ ಹಾಗೂ ಸಕಲ ಅಂಗಾಂಗದ ನೋವುಗಳಿಗೆ
ಅಮೃತರತ್ನ ತೈಲ ಮತ್ತು ಮಾತ್ರೆ

ರೂ. 180/– ಮಾತ್ರ
'ಅಮೃತರತ್ನ' ನೋವು ನಿವಾರಕ ತೈಲವು ಗಂಟುನೋವು, ಬೆನ್ನುನೋವು, ಕತ್ತುನೋವು, ಸ್ನಾಯುಬೇನೆ, ಉಳುಕು, ತೀವ್ರ ತರಹದ ಬೇನೆ, ಸಂಧಿನೋವು, ಆಸ್ಟಿಯೊಪೊರೋಸಿಸ್ ಕಾಯಿಲೆಗಳಿಗೆ ಶೀಘ್ರ ಪರಿಹಾರ ನೀಡುವುದು.

'ಅಮೃತರತ್ನ'ದಿಂದ ಶೀಘ್ರ ಮುಕ್ತಿ
ತ್ವರಿತ ನೋವು ನಿವಾರಣೆಗೆ 'ಅಮೃತರತ್ನ' ಪರಿಣಾಮಕಾರಿ ಫಾರ್ಮುಲಾ. ಒಂದು ಅಮೃತರತ್ನ ಗುಳಿಗೆ ಸೇವಿಸಿ ಬಳಿಕ ನೋವಿರುವ ಭಾಗಕ್ಕೆ ಅಮೃತರತ್ನ ನೋವು ನಿವಾರಕ ತೈಲವನ್ನು ಹಚ್ಚಿದಲ್ಲಿ ತಟ್ಟನೇ ನೋವು ನಿವಾರಣೆಯಾಗುವುದು.
ಅಸಲಿ 'ಅಮೃತರತ್ನ' ಪ್ಯಾಕೆಟ್ ಮೇಲ್ಗಡೆ ಆನಂದ ಗುರೂಜಿ ಭಾವಚಿತ್ರವಿದ್ದು ಅದನ್ನು ವೀಕ್ಷಿಸಿಯೇ ಗ್ರಾಹಕರು ಖರೀದಿಸಬೇಕು.
ಎ&ಜೆ ಹೆಲ್ತ್ ಕೇರ್, ಬೆಂಗಳೂರು. Ph: 8762226000
Also available at: amazon Flipkart

ಶ್ರೀ ಅಶೋಕ್
ವಿರೋಧ ಪಕ್ಷದ ನಾಯಕರು
ಕರ್ನಾಟಕ ಸರ್ಕಾರ
ಗೊಟ್ಟಿಗೆರೆ ಮಂಜಣ್ಣ
ಪ್ರಧಾನ ಕಾರ್ಯದರ್ಶಿ,
ರಾಜ್ಯ ಯುವ ಜನತಾದಳ, ಜೆ.ಡಿ.ಎಸ್
ಡಾ॥ ಮಂಜುನಾಥ್
ಸಂಸದರು, ಬೆಂಗಳೂರು
ಗ್ರಾಮಾಂತರ ಲೋಕಸಭಾ ಕ್ಷೇತ್ರ
ಜಗಮೆಚ್ಚಿದ ನಾಯಕರು,
ಭಾರತದ ಹೆಮ್ಮೆಯ ಹ್ಯಾಟ್ರಿಕ್ ಪ್ರಧಾನಮಂತ್ರಿಗಳಾದ
ಸನ್ಮಾನ್ಯ ಶ್ರೀ ನರೇಂದ್ರ ಮೋದಿ ಅವರ ಸಂಪುಟದಲ್ಲಿ
ಉಕ್ಕು & ಬೃಹತ್ ಕೈಗಾರಿಕೆ ಸಚಿವರಾಗಿದ್ದು ಈ ಖಾತೆಯನ್ನು ಉತ್ತಮ
ರೀತಿಯಲ್ಲಿ ನಿರ್ವಹಿಸಿ, ದೇಶಕ್ಕೆ ಹಾಗೂ ಕರ್ನಾಟಕಕ್ಕೆ ಕೀರ್ತಿಯನ್ನು ತರಲಿ
ಎಂದು ಆಶಿಸುವ, ಕರುನಾಡಿನ ಹೆಮ್ಮೆಯ ಸುಪುತ್ರರಾದ
ಶ್ರೀ ಹೆಚ್.ಡಿ. ಕುಮಾರಸ್ವಾಮಿ ರವರಿಗೆ
ಹೃತ್ಪೂರ್ವಕ ಅಭಿನಂದನೆಗಳು.
ಶ್ರೀ ಜಿ.ಆರ್. ಸುನಿಲ್ ಕುಮಾರ್
ಬಿ.ಬಿ.ಎಂ.ಪಿ. ಮಾಜಿ ಗ್ರಾ.ಪಂ. ಮತ್ತು
ತಾ॥ ಪಂ. ಸದಸ್ಯರು, ಉತ್ತರಹಳ್ಳಿ ವಿಧಾಸಭಾ ಕ್ಷೇತ್ರ
ಶ್ರೀ ಬಿ.ಎನ್. ಕುಮಾರ್
ಬಸವನಪುರ
ಶುಭಕೋರುವವರು :
ಗೊಟ್ಟಿಗೆರೆ ಮಂಜಣ್ಣ ಅಭಿಮಾನಿಗಳ ಬಳಗ

ದಕ್ಷಿಣ ಭಾರತ ಉತ್ಸವ– 2024'ರ ಸಮಾರೋಪ ಸಮಾರಂಭದಲ್ಲಿ ಸಚಿವ ಎಚ್‌.ಕೆ. ಪಾಟೀಲ

ಪ್ರವಾಸೋದ್ಯಮಕ್ಕೆ ಇನ್ನಷ್ಟು ಹೂಡಿಕೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಉದ್ದಿಮೆದಾರರನ್ನು ಪ್ರೋತ್ಸಾಹಿಸುವ ಕಾರ್ಯಕ್ರಮ
- ಪ್ರವಾಸಿಗರ ಸಂಖ್ಯೆ ಶೇ 50ರಷ್ಟು ಹೆಚ್ಚಿದೆ
- ಮೂಲಸೌಕರ್ಯ ಅಭಿವೃದ್ಧಿಗೆ ವಿಪುಲ ಅವಕಾಶ

ಬೆಂಗಳೂರು: 'ದಕ್ಷಿಣ ಭಾರತ ಉತ್ಸವದ ಮೂಲಕ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಹರಿದು ಬಂದಿರುವ ಸುಮಾರು ₹ 4,200 ಕೋಟಿಯ ಜೊತೆಗೆ, ಇನ್ನಷ್ಟು ಹಣವನ್ನು ಮೂಲಸೌಕರ್ಯ ಅಭಿವೃದ್ಧಿಗೆ ಹೂಡಿಕೆ ಮಾಡಲಾಗುವುದು' ಎಂದು ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ ತಿಳಿಸಿದರು.

ಅರಮನೆ ಮೈದಾನದಲ್ಲಿ ನಡೆದ ಎರಡು ದಿನಗಳ 'ದಕ್ಷಿಣ ಭಾರತ ಉತ್ಸವ– 2024'ರ ಸಮಾರೋಪ ಸಮಾರಂಭದಲ್ಲಿ ಭಾನುವಾರ ಮಾತನಾಡಿದ ಅವರು, 'ಶಕ್ತಿ ಯೋಜನೆಯಿಂದಾಗಿ ರಾಜ್ಯದ ಪ್ರವಾಸೋದ್ಯಮ ಕ್ಷೇತ್ರಗಳಿಗೆ ಭೇಟಿ ನೀಡುವವರ ಸಂಖ್ಯೆ ಶೇ 50ರಷ್ಟು ಹೆಚ್ಚಾಗಿದೆ. ಈ ಕ್ಷೇತ್ರಗಳಲ್ಲಿ ಇನ್ನೂ ಹೆಚ್ಚಿನ ಮೂಲಸೌಕರ್ಯಗಳ ಅಭಿವೃದ್ಧಿಗೆ ಅವಕಾಶವಿದೆ' ಎಂದರು.

'ದಕ್ಷಿಣ ಭಾರತ ರಾಜ್ಯಗಳಲ್ಲಿ ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಹೂಡಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯ ಸಹಯೋಗದಲ್ಲಿ ಎಫ್‌ಕೆಸಿಸಿಐ ಆಯೋಜಿಸಿರುವ ಈ ಕಾರ್ಯಕ್ರಮ ಬಹಳ ಮಹತ್ವದ್ದಾಗಿದೆ. ಈ ಉತ್ಸವದ ಮೂಲಕ ಹೂಡಿಕೆಯ ಪ್ರಸ್ತಾವಗಳಿಗೆ ಒಡಂಬಡಿಕೆಯಾಗುವ ನಿಟ್ಟಿನಲ್ಲಿ ಎಫ್‌ಕೆಸಿಸಿಐ ಪದಾಧಿಕಾರಿಗಳು ಪ್ರಮುಖ ಪಾತ್ರ ವಹಿಸಿದ್ದಾರೆ' ಎಂದರು.

'ಪ್ರವಾಸೋದ್ಯಮ ಕ್ಷೇತ್ರಗಳಲ್ಲಿ ಮೂಲಸೌಕರ್ಯಗಳನ್ನು ಹೆಚ್ಚಿಸುವುದು ಸರ್ಕಾರದಿಂದ ಮಾತ್ರ ಸಾಧ್ಯವಿಲ್ಲ. ಪ್ರವಾಸೋದ್ಯಮ ಎಂದರೆ ಕೇವಲ ಲಕ್ಸುರಿ ಪ್ರವಾಸೋದ್ಯಮ ಅಲ್ಲ. ಈ ಕ್ಷೇತ್ರಗಳಲ್ಲಿ ಹೂಡಿಕೆಗೆ ವಿಪುಲ ಅವಕಾಶಗಳಿವೆ. ಇಲ್ಲಿನ ಹೂಡಿಕೆಯಿಂದ ಬಹಳಷ್ಟು ಉಪಯೋಗವನ್ನು ಉದ್ದಿಮೆದಾರರು ಪಡೆದುಕೊಳ್ಳಬಹುದಾಗಿದೆ. ಸಾಮಾನ್ಯ ಜನರ ಪ್ರವಾಸೋದ್ಯಮಕ್ಕೂ ಸರ್ಕಾರ ಆದ್ಯತೆ ನೀಡಲಿದೆ' ಎಂದು ಹೇಳಿದರು.

'ಈ ಉತ್ಸವದ ಮೂಲಕ ದಕ್ಷಿಣ ಭಾರತ ರಾಜ್ಯಗಳ ಐತಿಹಾಸಿಕ, ಪಾರಂಪರಿಕ, ಸ್ಮಾರಕ ಸಂಪನ್ಮೂಲಗಳಲ್ಲಿನ ಅವಕಾಶಗಳನ್ನು ಪ್ರದರ್ಶಿಸಲು ಸಾಧ್ಯವಾಗಿದೆ. ಎಲ್ಲರೂ ಜೊತೆಗೂಡಿ ವಿಶ್ವ ಪ್ರವಾಸೋದ್ಯಮ ಭೂಪಟದಲ್ಲಿ ಉತ್ತಮ ಸ್ಥಾನ ಪಡೆದುಕೊಳ್ಳುವ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗೋಣ' ಎಂದು ಕರೆ ನೀಡಿದರು.

ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ ಮಾತನಾಡಿ, 'ದಕ್ಷಿಣ ಭಾರತ ರಾಜ್ಯಗಳನ್ನು ಒಂದೇ ವೇದಿಕೆಯ ಅಡಿಯಲ್ಲಿ ತರುವ ಪ್ರಯತ್ನಕ್ಕೆ ಯಶಸ್ಸು ದೊರೆತಿದೆ. ಕೈಗಾರಿಕಾ ಉತ್ಪಾದನೆ, ಕೃಷಿಯ ನಂತರ ಹೆಚ್ಚಿನ ಉದ್ಯೋಗಾವಕಾಶ ಮತ್ತು ಹೂಡಿಕೆ ಅವಕಾಶ ಇರುವುದು ಪ್ರವಾಸೋದ್ಯಮ ಕ್ಷೇತ್ರದಲ್ಲಿ. ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆ ಮಾಡುವಂತೆ ಉದ್ದಿಮೆದಾರರನ್ನು ಎಫ್‌ಕೆಸಿಸಿಐ ಪ್ರೋತ್ಸಾಹಿಸಿದೆ. ಮುಂದಿನ ದಿನಗಳಲ್ಲೂ ಪ್ರವಾಸೋದ್ಯಮ ಕ್ಷೇತ್ರದಲ್ಲಿ ಹೂಡಿಕೆಗೆ ಪ್ರೋತ್ಸಾಹ ನೀಡಲು ಆದ್ಯತೆ ನೀಡಲಾಗುವುದು' ಎಂದರು.

ಪ್ರವಾಸೋದ್ಯಮ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಗೆ ಮುಂದಾದ ಉದ್ದಿಮೆದಾರರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರು ಒಡಂಬಡಿಕೆ ಪತ್ರಗಳನ್ನು ವಿತರಿಸಿದರು. ರಾಜ್ಯಸಭೆ ಸದಸ್ಯ ಲಹರ್ ಸಿಂಗ್ ಸಿರೋಯ, ಪ್ರವಾಸೋದ್ಯಮ ಸಚಿವ ಎಚ್‌.ಕೆ. ಪಾಟೀಲ, ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಹೋಟಿ, ಇಲಾಖೆಯ ನಿರ್ದೇಶಕ ರಾಮ್ ಪ್ರಸಾದ್ ಮನೋಹರ್ ಪಾಲ್ಗೊಂಡಿದ್ದರು

ಆಸ್ತಿಗಾಗಿ ಗಲಾಟೆ: ನರ್ಸ್ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ವಿಚಾರಕ್ಕೆ ಸಂಬಂಧಿಸಿದಂತೆ ನಡೆದ ಗಲಾಟೆಯಲ್ಲಿ ಚಾಮರಾಜಪೇಟೆಯಲ್ಲಿ ನರ್ಸ್ ಒಬ್ಬರನ್ನು ಕೊಲೆ ಮಾಡಲಾಗಿದೆ.

ಚಾಮರಾಜಪೇಟೆಯ ಸೋಮಿನಿ ಸತ್ಯಭಾಮ (49) ಕೊಲೆಯಾದವರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳಾದ ಸಾಗರ್, ಆಕಾಶ್, ಶಿವಶಂಕರ್, ಪ್ರವೀಣ್, ಪೂಜಾ ಮತ್ತು ಗಾಯತ್ರಿ ಎಂಬುವವರನ್ನು ಬಂಧಿಸಲಾಗಿದೆ.

'ವಿಂಡ್ಸರ್‌ಮ್ಯಾನರ್ ಸರ್ವೀಸ್ ರೋಡ್‌ನಲ್ಲಿ ಜೂನ್ 11ರ ಸಂಜೆ ಆರೋಪಿಗಳಾದ ಸಾಗರ್ ಹಾಗೂ ಆಕಾಶ್ ಅವರು ಸತ್ಯಭಾಮ ಅವರ ಮೇಲೆ ಹಲ್ಲೆ ನಡೆಸಿ ಕೊಲೆ ಮಾಡಿ ಪರಾರಿಯಾಗಿದ್ದರು. ಸತ್ಯಭಾಮ ಅವರ ಪುತ್ರ ಅನಿಲ್‌ಕುಮಾರ್ ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸತ್ಯಭಾಮ ಹಾಗೂ ಶಿವಶಂಕರ್ ಅವರು ಅಕ್ಕ– ತಮ್ಮ. ಇವರಿಗೆ ಚಾಮರಾಜಪೇಟೆಯಲ್ಲಿ ಪಿತ್ರಾರ್ಜಿತ ಆಸ್ತಿ ಇದೆ. ಅಲ್ಲದೇ ಹಲವು ಮನೆಗಳನ್ನು ಬಾಡಿಗೆಗೆ ನೀಡಿದ್ದಾರೆ. ಆಸ್ತಿ ವಿಚಾರದಲ್ಲಿ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ಹೀಗಾಗಿ, ತಂಗಿ ಸತ್ಯಭಾಮ ಅವರನ್ನು ಕೊಲ್ಲಲು ಸಂಚು ರೂಪಿಸಿದ್ದ ಶಿವಶಂಕರ್ ಹತ್ಯೆ ಮಾಡುವಂತೆ ತನ್ನ ಮಕ್ಕಳಿಗೆ ಸೂಚಿಸಿದ್ದ. ಇದಕ್ಕೆ ಸಂಬಂಧಿ ಆಕಾಶ್ ಕೂಡ ಸಹಕಾರ ನೀಡಿದ್ದ' ಎಂದು ಪೊಲೀಸರು ಹೇಳಿದರು.

ಸತ್ಯಭಾಮ ಅವರು ಐಟಿಸಿ ವಿಂಡ್ಸರ್‌ಮ್ಯಾನರ್ ಹೋಟೆಲ್‌ನಲ್ಲಿ ನರ್ಸ್ ಆಗಿ ಕೆಲಸ ಮಾಡುತ್ತಿದ್ದರು. ಅವರು ಕೆಲಸ ಮುಗಿಸಿ ಸರ್ವೀಸ್ ರೋಡ್‌ನಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಸಾಗರ್ ಹಾಗೂ ಆಕಾಶ್ ಬೈಕ್‌ನಲ್ಲಿ ಹಿಂಬಾಲಿಸಿಕೊಂಡು ಬಂದು ಅಡ್ಡಗಟ್ಟಿದ್ದರು. ಸಾಗರ್ ಮಚ್ಚಿನಿಂದ ಸತ್ಯಭಾಮ ಅವರ ತಲೆ, ಮುಖಕ್ಕೆ ಹೊಡೆದಿದ್ದ. ಆಕಾಶ್ ಚಾಕುವಿನಿಂದ ಇರಿದಿದ್ದ. ಆನಂತರ ಅಲ್ಲಿಂದ ಪರಾರಿಯಾಗಿದ್ದರು ಎಂದು ಪೊಲೀಸರು ಹೇಳಿದರು.

ವಾಹನ ಸಂಚಾರ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಕ್ರೀದ್ ಹಬ್ಬದ ಅಂಗವಾಗಿ ನಡೆಯುವ ಸಾಮೂಹಿಕ ಪ್ರಾರ್ಥನೆಗೆ ಬನ್ನೇರುಘಟ್ಟ ರಸ್ತೆಯ ಗುರಪ್ಪನಪಾಳ್ಯ ಜಂಕ್ಷನ್‌ನಲ್ಲಿ ಸೋಮವಾರ ಬೆಳಿಗ್ಗೆ ಹೆಚ್ಚಿನ ಜನರು ಸೇರುವ ನಿರೀಕ್ಷೆಯಿದ್ದು, ವಾಹನ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಎಲ್ಲಿಂದ ಎಲ್ಲಿಗೆ?

- ಬನ್ನೇರುಘಟ್ಟ ಮುಖ್ಯರಸ್ತೆಯ ಸಾಗರ್ ಆಸ್ಪತ್ರೆ ಜಂಕ್ಷನ್‌ನಿಂದ ಗುರಪ್ಪನಪಾಳ್ಯ ಜಂಕ್ಷನ್‌ವರೆಗೆ.
- ಬನ್ನೇರುಘಟ್ಟ ಮುಖ್ಯರಸ್ತೆಯ ಜೆಡಿ ಮರ ಜಂಕ್ಷನ್‌ನಿಂದ ಗುರಪ್ಪನಪಾಳ್ಯ ಜಂಕ್ಷನ್ ವರೆಗೆ.
- 39ನೇ ಕ್ರಾಸ್ ರಸ್ತೆಯಲ್ಲಿ ಗುರಪ್ಪನಪಾಳ್ಯ ಜಂಕ್ಷನ್‌ನಿಂದ ರೆಡ್ಡಿ ಆಸ್ಪತ್ರೆ ವರೆಗೆ.

ADHIYAMAAN COLLEGE OF AGRICULTURE AND RESEARCH
Athimugam, HOSUR –635 105, Krishnagiri Dist. Tamil Nadu.
www.acar.ac.in
(Approved by Govt. of TN, Affiliated to TNAU- Coimbatore., Accredited by ICAR)
ICAR ACCREDITED
B.Sc., (Hons) Agri 4 Years
For Admission Process contact: 6380277180, 9442006269, 8940297660, 9944331054

ತೈಲ ತೆರಿಗೆ ಹೆಚ್ಚಳ: ನಾಳೆ ಎಸ್‌ಯುಸಿಐ ಹೋರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೆಟ್ರೋಲ್, ಡೀಸೆಲ್ ಮೇಲಿನ ಚಿಲ್ಲರೆ ಮಾರಾಟ ತೆರಿಗೆ ಹೆಚ್ಚಿಸಿದ ರಾಜ್ಯ ಕಾಂಗ್ರೆಸ್ ಸರ್ಕಾರದ ನಡೆ ಖಂಡಿಸಿ ಇದೇ 18ರಂದು ರಾಜ್ಯದಾದ್ಯಂತ ಹೋರಾಟ ನಡೆಸಲು ಎಸ್‌ಯುಸಿಐ (ಕಮ್ಯುನಿಸ್ಟ್) ನಿರ್ಧರಿಸಿದೆ.

'ಬೆಲೆ ಏರಿಕೆಯ ಕುರಿತು ಮಾತನಾಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರದ ಈ ಕ್ರಮವು ಜನರಿಗೆ ಮಾಡಿದ ವಂಚನೆ. ಬೆಲೆ ಏರಿಕೆಯನ್ನು ತಕ್ಷಣವೇ ವಾಪಸ್ ಪಡೆಯಬೇಕು' ಎಂದೂ ಆಗ್ರಹಿಸಿದೆ.

'ಪೆಟ್ರೋಲ್, ಡೀಸೆಲ್ ಮಾರಾಟ ತೆರಿಗೆ ಹೆಚ್ಚಳದಿಂದ ರಾಜ್ಯ ಖಜಾನೆಗೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ಸುಮಾರು ₹ 3 ಸಾವಿರ ಕೋಟಿ ಹೆಚ್ಚುವರಿ ತೆರಿಗೆ ವಸೂಲಿ ಆಗಲಿದೆ. ಇದರಿಂದ ಸಾರಿಗೆ, ಸರಕು ಸಾಗಣೆ ವೆಚ್ಚ ಏರಿಕೆಯಾಗಿ ಬೆಲೆ ಏರಿಕೆಯ ಮೇಲೆ ಸರಣಿ ಪರಿಣಾಮ ಉಂಟಾಗಲಿದೆ. ತರಕಾರಿ, ದವಸಧಾನ್ಯಗಳ ಬೆಲೆ ಏರಿಕೆಯಿಂದ ಕಂಗಾಲಾದ ಜನರಿಗೆ ಇದು ಗಾಯದ ಮೇಲೆ ಬರೆ ಎಳೆದಂತಾಗುತ್ತದೆ' ಎಂದು ಪಕ್ಷದ ರಾಜ್ಯ ಕಾರ್ಯದರ್ಶಿ ಕೆ. ಉಮಾ ಅಭಿಪ್ರಾಯಪಟ್ಟಿದ್ದಾರೆ.

'ಪ್ರತಿ ಲೀಟರ್ ತೈಲದ ಬೆಲೆಯಲ್ಲಿ ಅರ್ಧದಷ್ಟು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಧಿಸಿರುವ ತೆರಿಗೆಯೇ ಇದೆ. ಲೋಕಸಭಾ ಚುನಾವಣೆಗೆ ಕೆಲವು ದಿನಗಳ ಮೊದಲು ಕೇಂದ್ರ ಬಿಜೆಪಿ ಸರ್ಕಾರ ಮತದಾರರನ್ನು ಓಲೈಸಲು ₹ 2 ಕಡಿತ ಮಾಡಿತ್ತು. ರಷ್ಯಾ - ಉಕ್ರೇನ್ ಯುದ್ಧದ ಲಾಭ ಪಡೆದು ಭಾರತ ಸರ್ಕಾರವು ಜಾಗತಿಕ ದರಕ್ಕಿಂತ ಸುಮಾರು ಶೇ 35ರಷ್ಟು ಕಡಿಮೆಗೆ ಕಚ್ಚಾ ತೈಲ ಖರೀದಿಸಿದ್ದರೂ, ಅದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸಲಿಲ್ಲ. ಲಕ್ಷಾಂತರ ಕೋಟಿ ರೂಪಾಯಿಗಳನ್ನು ಭಾರತದ ತೈಲ ಕಂಪನಿಗಳು ಕೊಳ್ಳೆ ಹೊಡೆದಿವೆ' ಎಂದು ಆರೋಪಿಸಿದ್ದಾರೆ.

'ಒಂದು ದೇಶ- ಒಂದು ತೆರಿಗೆ ಘೋಷಣೆಯೊಂದಿಗೆ ಬಂದ ಜಿಎಸ್‌ಟಿಯನ್ನು ಪೆಟ್ರೋಲಿಯಂ ಉತ್ಪನ್ನಗಳಿಗೆ ಅನ್ವಯ ಮಾಡಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮಗಿಷ್ಟ ಬಂದಂತೆ ತೆರಿಗೆಗಳನ್ನು ಹೇರುತ್ತಿವೆ. ಅದೇ ದಾರಿಯಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರವು ಕೂಡ ಜನವಿರೋಧಿ ತೀರ್ಮಾನ ತೆಗೆದುಕೊಂಡಿದ್ದಾರೆ' ಎಂದಿದ್ದಾರೆ.

'ಯೂನಿವರ್ಸೆಲ್ ಮ್ಯಾರಥಾನ್'ನಲ್ಲಿ ಅ.ನ.ಯಲ್ಲಪ್ಪರೆಡ್ಡಿ

'ದೊಡ್ಡ ಆಲದ ಮರ ಉತ್ಸವ'

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಸರ್ಕಾರದಿಂದ ಅನುಮತಿ ಪಡೆದು ಮುಂದಿನ ವರ್ಷದಿಂದ 'ವಿಶ್ವಪಾರಂಪರಿಕ ತಾಣ–3 ದೊಡ್ಡ ಆಲದಮರ ಉತ್ಸವ' ಆಚರಿಸೋಣ ಎಂದು ಪರಿಸರವಾದಿ ಅ.ನ. ಯಲ್ಲಪ್ಪರೆಡ್ಡಿ ತಿಳಿಸಿದರು.

ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್, ರಾಜರಾಜೇಶ್ವರಿ ವೈದ್ಯಕೀಯ ಆಸ್ಪತ್ರೆ ಮತ್ತು ವಿವಿಧ ಶಾಲಾ – ಕಾಲೇಜುಗಳ ಸಹಯೋದಲ್ಲಿ ಕೇತೋಹಳ್ಳಿ ಸಮೀಪದ ದೊಡ್ಡ ಆಲದ ಮರ ಬಳಿ ಭಾನುವಾರ ಆಯೋಜಿಸಿದ್ದ 'ದೊಡ್ಡ ಆಲದಮರ ಉಳಿಸಿ ಯೂನಿವರ್ಸಲ್ ಮ್ಯಾರಥಾನ್'ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಬೆಂಗಳೂರಿನ ಪ್ರವಾಸಿ ತಾಣಗಳಲ್ಲಿ ಒಂದಾಗಿರುವ ದೊಡ್ಡ ಆಲದ ಮರದ ರಕ್ಷಣೆಗೆ ಜಾಗೃತಿ ಮೂಡಿಸಲು ಎಲ್ಲರೂ ಈ ಉತ್ಸವ ಆಚರಿಸೋಣ' ಎಂದರು.

'ಜಾತಿ, ಧರ್ಮ, ಬಡವ, ಶ್ರೀಮಂತ ಎಂಬ ತಾರತಮ್ಯವಿಲ್ಲದೆ ಎಲ್ಲರಿಗೂ ಶುದ್ಧ ಗಾಳಿ, ನೀರು, ಆಹಾರ ನೀಡುತ್ತಿರುವ ಪರಿಸರ, ಪ್ರಕೃತಿಯೇ ನಿಜವಾದ ದೇವರು. ನಾವೆಲ್ಲರೂ ಗಿಡ, ಮರ, ಬೆಟ್ಟ, ಗುಡ್ಡ, ಜಲ ಮೂಲಗಳನ್ನು ಉಳಿಸುವ ಕೆಲಸ ಮಾಡಬೇಕಾಗಿದೆ' ಎಂದರು.

ಸಾಲುಮರದ ತಿಮ್ಮಕ್ಕ ಮಾತನಾಡಿ, 'ಗಿಡ–ಮರಗಳಿಂದ ಜಗತ್ತು ಉಳಿದಿದೆ. ಮರಗಳನ್ನು ಕಡಿಯಬೇಡಿ. ಮಳೆ, ಬೆಳೆಗೆ ಅಡ್ಡಿಮಾಡಬೇಡಿ. ಕೆರೆ ಉಳಿಸಿ, ಪ್ರತಿ ಊರಿನಲ್ಲಿ ಗಿಡಗಳನ್ನು ನೆಡಿ' ಎಂದರು.

ಕೇತೋಹಳ್ಳಿಯ ದೊಡ್ಡ ಆಲದಮರದ ಬಳಿ ಹಮ್ಮಿಕೊಂಡಿದ್ದ 'ದೊಡ್ಡ ಆಲದಮರ ಉಳಿಸಿ' ಕಾರ್ಯಕ್ರಮದಲ್ಲಿ ಪರಿಸರ ಪ್ರೇಮಿ ಸಾಲುಮರದ ತಿಮ್ಮಕ್ಕ ಅವರನ್ನು ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಸಮೂಹ ಸಂಸ್ಥೆಗಳ ಅಧ್ಯಕ್ಷ ಆರ್‌.ಉಪೇಂದ್ರ ಶೆಟ್ಟಿ ಸನ್ಮಾನಿಸಿದರು. ಸಮಾಜ ಸೇವಕ ರಾಕೇಶ್‌ಗೌಡ, ಅ.ನ.ಯಲ್ಲಪ್ಪರೆಡ್ಡಿ, ಸಂತೋಷ್ ಶೆಟ್ಟಿ ಭಾಗವಹಿಸಿದ್ದರು

ಯೂನಿವರ್ಸಲ್ ಸ್ಕೂಲ್ ಆಫ್ ಅಡ್ಮಿನಿಸ್ಟ್ರೇಷನ್ ಸಮೂಹ ಸಂಸ್ಥೆಯ ಅಧ್ಯಕ್ಷ ಆರ್.ಉಪೇಂದ್ರ ಶೆಟ್ಟಿ, 'ನಾವೆಲ್ಲರೂ ಮರ, ಗಿಡ, ಪರಿಸರ, ಬೆಟ್ಟ–ಗುಡ್ಡಗಳನ್ನು ರಕ್ಷಿಸಬೇಕಾಗಿದೆ. ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗೋಣ' ಎಂದರು. 'ದೊಡ್ಡ ಆಲದ ಮರ ರಕ್ಷಿಸಲು ಸರ್ಕಾರಕ್ಕೆ ಆರ್ಥಿಕ ತೊಂದರೆಯಾದರೆ, ಸಹಾಯಧನ ನೀಡುವುದಾಗಿ ಇದೇ ಸಂದರ್ಭದಲ್ಲಿ ಭರವಸೆ ನೀಡಿದರು.

ರಾಜರಾಜೇಶ್ವರಿ ವೈದ್ಯಕೀಯ ಆಸ್ಪತ್ರೆ ಅಧೀಕ್ಷಕ ಡಾ.ಪ್ರವೀಣ್‌ಕುಮಾರ್, 'ದೊಡ್ಡಾಲದಮರ ಸೇರಿ ಅರಣ್ಯ, ಬೆಟ್ಟ, ನದಿ, ಕೆರೆಗಳನ್ನು ರಕ್ಷಿಸುವ ಜೊತೆಗೆ, ಬಾಲ್ಯದಲ್ಲಿಯೇ ಮಕ್ಕಳಿಗೆ ಪರಿಸರ ಜಾಗೃತಿ ಮೂಡಿಸಬೇಕು' ಎಂದರು.

ಸಮಾಜ ಸೇವಕ ರಾಮೋಹಳ್ಳಿಯ ಚೇತನ್‌ಗೌಡ, ರಾಕೇಶ್‌ಗೌಡ ಮಾತನಾಡಿ ದೊಡ್ಡಾಲದದಮರದ ಸುತ್ತಮುತ್ತ ಉದ್ಯಾನವನ ನಿರ್ಮಿಸಿದರೆ, ಅಲ್ಲಿನ ಭದ್ರತಾ ಸಿಬ್ಬಂದಿಗೆ ತಗುಲುವ ವೇತನವನ್ನು ಪ್ರತಿ ತಿಂಗಳು ನೀಡುವುದಾಗಿ ಭರವಸೆ ನೀಡಿದರು.

ರಾಮೋಹಳ್ಳಿ ಗೇಟ್ ಬಳಿ ಮ್ಯಾರಾಥಾನ್‌ಗೆ ಚಾಲನೆ ನೀಡಲಾಯಿತು. ಪ್ರಾಂಶುಪಾಲ ಪ್ರೊ.ಜಯರಾಮ, ಕಿರಣ್‌ಶೆಟ್ಟಿ, ಗ್ರಾಮ ಪಂಚಾಯಿತಿ ಸದಸ್ಯ ರವಿಕುಮಾರ್, ಸಂತೋಷ್ ಶೆಟ್ಟಿ, ಎನ್‌ಎಸ್‌ಎಸ್‌ನ ರಾಮಕೃಷ್ಣ ಇದ್ದರು.

ಕನ್ನಡ ಕೃಷಿ ಪುಸ್ತಕ ಪ್ರಶಸ್ತಿಗೆ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ವಿಶ್ವವಿದ್ಯಾಲಯವು (ಜಿಕೆವಿಕೆ) 2024ನೇ ಸಾಲಿಗೆ 'ಕನ್ನಡ ಕೃಷಿ ಪುಸ್ತಕ' ಪ್ರಶಸ್ತಿಗಾಗಿ ಕೃತಿಗಳನ್ನು ಆಹ್ವಾನಿಸಿದೆ.

2023ರ ಜನವರಿಯಿಂದ ಡಿಸೆಂಬರ್ ಒಳಗೆ ಪ್ರಕಟವಾಗಿರುವ ಕೃಷಿ ಸಂಬಂಧಿತ ಪುಸ್ತಕಗಳನ್ನು ಪ್ರಶಸ್ತಿ ಆಯ್ಕೆಗೆ ಕಳುಹಿಸಬಹುದು.

ಪ್ರಶಸ್ತಿಯು ₹10 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರವನ್ನು ಒಳಗೊಂಡಿರುತ್ತದೆ. ಲೇಖಕರಿಗೆ ಮಾತ್ರ ಪ್ರಶಸ್ತಿ ನೀಡಲಾಗುತ್ತದೆ. ಪುಸ್ತಕದ ಮೂರು ಪ್ರತಿಗಳನ್ನು ಸ್ವವಿವರಗಳೊಂದಿಗೆ ಜುಲೈ 15ರ ಒಳಗೆ ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವ ವಿದ್ಯಾಲಯ, ಜಿಕೆವಿಕೆ, ಬೆಂಗಳೂರು–560065 ಇಲ್ಲಿಗೆ ಕಳುಹಿಸಬೇಕು.

ವಿವರಗಳಿಗೆ http://uasbangalore.edu.in ವೆಬ್‌ತಾಣಕ್ಕೆ ಭೇಟಿ ನೀಡಬಹುದು. kannada.uas@gmail.com ಇ–ಮೇಲ್ ಅಥವಾ ದೂರವಾಣಿ ಸಂಖ್ಯೆ 080 23330153/373 ಸಂಪರ್ಕಿಸಬಹುದು ಎಂದು ಕನ್ನಡ ಅಧ್ಯಯನ ವಿಭಾಗದ ಮುಖ್ಯಸ್ಥ ಜಿ. ವೀರಭದ್ರಗೌಡ ತಿಳಿಸಿದ್ದಾರೆ.

Organized by IDEMI Mumbai, Ministry of MSME, Govt. of India
Government Certificate Course On
HOSPITAL MANAGEMENT
Course Time-10.30AM to 5 PM Course Date-22,23 June 2024
Venue- IDEMI EXTENSION CENTER Bangaluru
c/o MSME DEVELOPMENT INSTITUTE ,WEST OF CHORD RD,INDUSTRIAL ESTATE, RAJAJINAGAR,BENGALURU,KARNATAKA 560010
Email: training@idemi.org Website: www.idemi.org
Contents: Total Quality Management & WHO Standards, Staff Patient Relationship & Communication in Hospitals, 7p's of Hospital Services, NABH Accreditations, Consent in Patient care and its Medico-Legal implications, Medico Legal issues, Various Liability in Healthcare, Laws in Healthcare - snapshot, Safety Management in Hospitals
Course Fees-4000/-+18 % GST (include lunch & tea) | Technical Detail No.8142416666
For Doctors, Hospital Staff, Management sector and other interested candidates
After completion Government certificate will be issued.
QR Code for Registration and Payment:-
Contact: 9019870803,9403566219,9481236511,9869087617

ಲಾಭದ ಆಸೆ: ₹20 ಲಕ್ಷ ವಂಚನೆ

ಚಿಂತಾಮಣಿ: ಸ್ಟಾಕ್ಸ್‌ನ್ನು ಕೊಂಡುಕೊಳ್ಳುವುದು ಮತ್ತು ಮಾರಾಟ ಮಾಡುವುದರಿಂದ ಹೆಚ್ಚಿನ ಲಾಭ ಪಡೆಯಬಹುದು ಎಂದು ನಂಬಿಸಿರುವ ಸೈಬರ್ ವಂಚಕರು ₹20.5 ಲಕ್ಷ ವಂಚಿಸಿರುವುದಾಗಿ ವ್ಯಕ್ತಿಯೊಬ್ಬರು ಸಿ.ಇ.ಎನ್.ಪೊಲೀಸ್ ಠಾಣೆಗೆ ಶನಿವಾರ ದೂರು ನೀಡಿದ್ದಾರೆ.

ತಾಲ್ಲೂಕಿನ ಮುರುಗಮಲ್ಲ ಹೋಬಳಿಯ ಕೊತ್ತಪಲ್ಲಿ ಗ್ರಾಮದ ನಿವಾಸಿ ಆರ್.ಭಾಸ್ಕರ್ ವಂಚನೆಗೆ ಒಳಗಾಗಿ ಹಣ ಕಳೆದುಕೊಂಡ ವ್ಯಕ್ತಿ.

ಮನೆಯಿಂದ ಕೆಲಸ ₹ 19 ಲಕ್ಷ ವಂಚನೆ

ಚಿಕ್ಕಬಳ್ಳಾಪುರ: ಮನೆಯಿಂದಲೇ ಕೆಲಸ ಮಾಡಬಹುದು. ಉತ್ತಮ ಆದಾಯಗಳಿಸಬಹುದು ಎಂದು ನಂಬಿಸಿ ಶಿಡ್ಲಘಟ್ಟದ ವ್ಯಕ್ತಿಯೊಬ್ಬರಿಗೆ ಆನ್‌ಲೈನ್ ವಂಚಕರು ₹ 19 ಲಕ್ಷ ವಂಚಿಸಿದ್ದಾರೆ. ಈ ಸಂಬಂಧ ಅವರು ನಗರದ ಸಿಇಎನ್ ಠಾಣೆಗೆ ದೂರು ನೀಡಿದ್ದಾರೆ.

ಕರೆ ಮಾಡಿದ ವ್ಯಕ್ತಿಯೊಬ್ಬರು ಟಿಕೆಟ್ ಬುಕಿಂಗ್ ಕೆಲಸವನ್ನು ಮನೆಯಿಂದಲೇ ಮಾಡಿದರೆ ನಿಮಗೆ ಒಳ್ಳೆಯ ಕಮಿಷನ್ ಕೊಡುತ್ತೇವೆ ಎಂದರು. ನನ್ನ ಟೆಲಿಗ್ರಾಮ್ ಗ್ರೂಪ್‌ಗೆ ಸೇರಿಸಿದರು. ಲಕ್ಷ್ಮಣ್ ಎಂಬುವರು ಟಿಕೆಟ್ ಬುಕಿಂಗ್ ಬಗ್ಗೆ ಮಾರ್ಗದರ್ಶನ ನೀಡಿದರು. ಉತ್ತಮ ಆದಾಯ ನೀಡುವುದಾಗಿ ನಂಬಿಸಿ. ಹಂತ ಹಂತವಾಗಿ ಹೂಡಿಕೆ ಮಾಡಿಸಿಕೊಂಡು ಆನ್ ಲೈನ್ ಮೂಲಕ ವಂಚಿಸಿದ್ದಾರೆ. ವಂಚಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ಮನವಿ ಮಾಡಿದ್ದಾರೆ.

ಬಿಬಿಎಂಪಿ ವಿಭಜನೆ: ನಾಗರಿಕರ ನಾಡಿಮಿಡಿತ

ಐದು ಪಾಲಿಕೆ ಬೇಡ



ಬೆಂಗಳೂರು ಮಹಾನಗರದಲ್ಲಿ ಎಲ್ಲರೂ ಐಟಿ ಕಂಪನಿ, ಕೇಂದ್ರ–ರಾಜ್ಯ ಸರ್ಕಾರದ ಉದ್ಯೋಗಿಗಳಲ್ಲ. ನಿವೃತ್ತರಾದ ಕೆಲವರಿಗೆ ಕೈ ತುಂಬಾ ನಿವೃತ್ತಿ ವೇತನ ಬರುತ್ತದೆ. ನಿವೃತ್ತಿ ವೇತನವಿಲ್ಲದವರು, ಅಸಂಘಟಿತ ಮತ್ತು ದಿನಗೂಲಿ ಮಾಡುವವರೂ ವಾಸ ಮಾಡುತ್ತಾರೆ. ಬೆಂಗಳೂರನ್ನು ಐದು ಪಾಲಿಕೆಗಳನ್ನಾಗಿ ಮಾಡಿದರೆ, ಖರ್ಚು ವೆಚ್ಚಗಳು ಅಧಿಕವಾಗಿ ಇವುಗಳನ್ನು ಸರಿದೂಗಿಸಲು ತೆರಿಗೆಗಳನ್ನು ಹೆಚ್ಚಿಸಲಾಗುತ್ತದೆ. ಹಾಲಿ ವಿಂಗಡಿಸಿರುವ ಎಂಟು ವಲಯಗಳ ವಿಶೇಷ ಆಯುಕ್ತರಿಗೆ ಹೆಚ್ಚಿನ ಅಧಿಕಾರ ಕೊಟ್ಟು, ಅನುದಾನ ನೀಡಿ, ಕೆಲಸ ಮಾಡುವಂತೆ ಮಾಡಿ.

ಸಿ.ಕಾಳಯ್ಯ, ಉಪಾಧ್ಯಕ್ಷ, ಬೆಂಗಳೂರು ನಿರ್ಮಾಪಕ ಕೆಂಪೇಗೌಡ ಕೇಂದ್ರ ಸಮಿತಿ

ಐದು ಭಾಗಗಳಾಗಿ ಮಾಡುವುದೇ ಲೇಸು



ರಸ್ತೆಗಳ ದುರವಸ್ಥೆ, ಪಾದಚಾರಿ ಮಾರ್ಗಗಳ ನಿರ್ವಹಣಾ ವೈಫಲ್ಯ, ಮಳೆನೀರು ಹರಿಯದ ಚರಂಡಿಗಳು, ಮಳೆಗಾಲಕ್ಕೆ ಪೂರ್ವ ಸಿದ್ಧತೆ ಇಲ್ಲದಿರುವುದು, ಬೀದಿ ದೀಪಗಳ ಸಮರ್ಪಕ ನಿರ್ವಹಣೆ ಇರದಿರುವುದು ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಕಸ ವಿಲೇವಾರಿಯಲ್ಲಿ ಪಾಲಿಕೆ ವಿಫಲವಾಗಿದೆ. ನಗರದ ಅನಿಯಂತ್ರಿತವಾಗಿ ಅತಿಯಾಗಿ ಬೆಳೆಯುತ್ತಿರುವುದರಿಂದ ಇದನ್ನು ಐದು ಭಾಗಗಳಾಗಿ ಮಾಡುವುದೇ ಲೇಸು.

ಊರ್ಮಿಳಾ ರಾಜೇಶ್ವರಿ, ಕೆ.ಆರ್. ಲೇಔಟ್, ಜೆ.ಪಿ. ನಗರ

ವಿಭಜನೆ, ಸೇರ್ಪಡೆ ಉತ್ತಮ

ಮೂಲಸೌಕರ್ಯಗಳು ಮತ್ತು ನಗರ ಅಭಿವೃದ್ಧಿಗಾಗಿ ಬಿಬಿಎಂಪಿ ವಿಭಜನೆ ಮತ್ತು ಸೇರ್ಪಡೆ ಒಳ್ಳೆಯ ವಿಚಾರವೇ ಸರಿ. ಬಿಬಿಎಂಪಿ ವ್ಯಾಪ್ತಿಯು ಹೆಚ್ಚಾಗಿರುವುದರಿಂದ, ಕೆಲವು ಹೊಸ ಬಡಾವಣೆಗಳು ಹಾಗೂ ಅಪಾರ್ಟ್‌ಮೆಂಟ್‌ಗಳು ಹೆಚ್ಚು ನಿರ್ಮಾಣವಾಗುತ್ತಿರುವುದರಿಂದ ವಿಭಜನೆ ಉತ್ತಮ ಎನಿಸುತ್ತದೆ.

ಮೋಹನ್ ಸಿದ್ದರಾಜು, ಬೆಟ್ಟಹಲಸೂರು, ಯಲಹಂಕ

ಎಲ್ಲ ಭಾಷಿಕರೂ ಎಲ್ಲ ಭಾಗದಲ್ಲೂ ಇರಲಿ

ಬಿಬಿಎಂಪಿಯನ್ನು ಮೂರು ಭಾಗಗಳಲ್ಲಿ 75 ವಾರ್ಡ್‌ನಂತೆ ವಿಂಗಡಿಸಿದರೆ ಒಳ್ಳೆಯದು. ಎಲ್ಲಾ ಭಾಷಿಕರು ಪ್ರತಿ ಪಾಲಿಕೆಯಲ್ಲೂ ಇರುವಂತೆ ಮಾಡಬೇಕು. ಏಕೆಂದರೆ ಜಾತಿ, ಧರ್ಮದ ಆಧಾರದಲ್ಲಿ ಬೆಂಗಳೂರು ಒಡೆಯುವುದು ತಪ್ಪುತ್ತದೆ. ತಮ್ಮದೇ ಪ್ರಾಬಲ್ಯವನ್ನು ಪ್ರತಿಪಾದಿಸುವ ಅಪಾಯವನ್ನು ಗಮನಿಸಿಯೇ ವಿಭಾಗ ಮಾಡಬೇಕು.

ಮಲ್ಲತ್ತಹಳ್ಳಿ ಎಚ್. ತುಕಾರಾಂ, ಬಾಲಗಂಗಾಧರ ನಗರ

ಐದು ಬೇಡ ಮೂರಾಗಲಿ

ಬಿಬಿಎಂಪಿಯನ್ನು ಐದು ಭಾಗವನ್ನಾಗಿ ಮಾಡುವುದಕ್ಕಿಂತ ಈಗಿನ ಪರಿಸ್ಥಿತಿಗೆ ಮೂರು ಭಾಗಗಳಾಗಿ ಮಾಡಿದರೆ ಒಳ್ಳೆಯದು. ಬೆಂಗಳೂರು ನಗರ ದಿನೇ ದಿನೇ ಬೆಳೆಯುತ್ತಿದೆ, ಪ್ರತಿ ವರ್ಷ ಹಲವು ಬಡಾವಣೆಗಳು ಹುಟ್ಟಿಕೊಳ್ಳುತ್ತಿವೆ. ಸದ್ಯಕ್ಕೆ ಮೂರು ಭಾಗಗಳಾದರೆ ನೀರು, ಒಳ ಚರಂಡಿ, ರಸ್ತೆ, ಸಾರಿಗೆ ವ್ಯವಸ್ಥೆ ಮಾಡಲು ಅನುಕೂಲ.

ಡಾ. ಲಕ್ಷ್ಮಮ್ಮ, ಕಾಳಸ್ತ್ರೀ ನಗರ, ಟಿ. ದಾಸರಹಳ್ಳಿ

ಉಸ್ತುವಾರಿಗೆ ವಿಭಜನೆ ಸರಿ

ಬಿಬಿಎಂಪಿ ವಿಭಜನೆ ಯಾವುದೇ ದೃಷ್ಟಿಕೋನದಿಂದ ನೋಡಿದರೂ ಇದೊಂದು ಸ್ವಾಗತಾರ್ಹ ಕ್ರಮ. ಈಗಾಗಲೇ ಮಿತಿ ಇಲ್ಲದಂತೆ ಬೆಳೆದಿರುವ ಬೆಂಗಳೂರು ನಗರದ ಅಭಿವೃದ್ಧಿಗೆ ಯೋಜನೆಗಳನ್ನು ತಯಾರಿಸಿ ಕಾರ್ಯರೂಪಕ್ಕೆ ತರಲು ಮತ್ತು ಉಸ್ತುವಾರಿಗೆ ಅಗತ್ಯ ಕ್ರಮ ಕೈಗೊಳ್ಳಲು ಅನುಕೂಲವಾಗುತ್ತದೆ.

ಟಿ.ವಿ.ಬಿ. ರಾಜನ್, ತಲಘಟ್ಟಪುರ, ಕನಕಪುರ ರಸ್ತೆ

ರಾಜಕೀಯ ಇಚ್ಛಾಶಕ್ತಿ ಇಲ್ಲ



ಪಾಲಿಕೆಯ ಅವಧಿ 2020ಕ್ಕೆ ಮುಗಿದಿದ್ದರೂ, ಈಗ ವಿಭಜನೆಯ ಸ್ವರ ಕೇಳಿಸುತ್ತಿದೆ. ಪಾಲಿಕೆಯಲ್ಲಿ ಚುನಾಯಿತ ಪ್ರತಿನಿಧಿಗಳಿದ್ದರೆ ಅವರನ್ನು ಸಾಮಾನ್ಯ ಜನರು ಸುಲಭವಾಗಿ ಸಂಪರ್ಕಿಸಬಹುದು. ಸ್ಥಳೀಯ ಚುನಾಯಿತ ಪ್ರತಿನಿಧಿಗಳಿಗೆ ಅಲ್ಲಿನ ಪೌರ ಸಮಸ್ಯೆ ಬಗ್ಗೆ ಅರಿವು ಇರುತ್ತದೆ. ಆದರೆ ಪ್ರತಿಬಾರಿಯೂ ಒಂದಲ್ಲ ಒಂದು ಕಾರಣ ಕೊಟ್ಟು ಚುನಾವಣೆ ಮುಂದೂಡುವ ಪ್ರಕ್ರಿಯೆ ನಡೆದಿದೆ. ಚುನಾವಣೆ ನಡೆಸಲು ರಾಜಕೀಯ ಇಚ್ಛಾಶಕ್ತಿ ಇಲ್ಲವೇನೋ ಅನ್ನಿಸುತ್ತದೆ.

ಜಿ. ಪಿ. ದಯಾನಂದ ಭುವನೇಶ್ವರಿನಗರ, ಹೆಬ್ಬಾಳ್ ದಾಸರಹಳ್ಳಿ

ವಿಭಜನೆಯ ಅಗತ್ಯ ಖಂಡಿತ ಇದೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಐದು ವಿಭಾಗಗಳನ್ನಾಗಿ ವಿಂಗಡಿಸುವ ಸರ್ಕಾರದ ಚಿಂತನೆ ಸರಿಯಿದೆ. ಆಡಳಿತಾತ್ಮಕ ದೃಷ್ಟಿಯಿಂದ ದೇಶದಲ್ಲಿ ಹೊಸ ರಾಜ್ಯಗಳನ್ನೂ, ರಾಜ್ಯಗಳಲ್ಲಿ ಹೊಸ ಜಿಲ್ಲೆಗಳನ್ನೂ, ಜಿಲ್ಲೆಗಳಲ್ಲಿ ಹೊಸ ತಾಲ್ಲೂಕುಗಳನ್ನೂ ಸೃಷ್ಟಿಸಿರುವುದು ಇದಕ್ಕೆ ಉದಾಹರಣೆ. ಬೆಂಗಳೂರಿನ ಜನಸಂಖ್ಯೆ ಒಂದು ಕೋಟಿಯನ್ನು ಮೀರಿದ್ದು ಜನರು ತಮ್ಮ ಪ್ರಮುಖ ಕೆಲಸಗಳಿಗೆ ಮತ್ತು ಸಮಸ್ಯೆಗಳ ಪರಿಹಾರಕ್ಕೆ ಕೇಂದ್ರ ಕಚೇರಿಗೇ ಬರುವುದು ತಪ್ಪಿ ಕಾಲವೂ ಉಳಿಯುತ್ತದೆ. ಆದರೆ, ಈ ವಿಭಜನೆ ನೆಪದಲ್ಲಿ ಚುನಾವಣೆ ಮುಂದೂಡದೇ ಶೀಘ್ರ ಚುನಾವಣೆ ನಡೆಸಲಿ.

ಪತ್ತಂಗಿ ಎಸ್. ಮುರಳಿ, ಕುಮಾರಸ್ವಾಮಿ ಬಡಾವಣೆ

ಹಲವರಾದರೆ ಯಶಸ್ಸು ಸಾಧ್ಯ



ಬಿಬಿಎಂಪಿ ಆಡಳಿತ ಸುಗಮವಾಗಬೇಕಾದರೆ ಐದು ಭಾಗವಾಗಬೇಕು. ಸಣ್ಣ ಪಾಲಿಕೆ ಆಗುವುದರಿಂದ ಆ ವ್ಯಾಪ್ತಿಯ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಬಹುದು. ಒಂದು ದೊಡ್ಡ ಕೆಲಸ ಒಬ್ಬರೇ ಮಾಡಿದರೆ ಯಶಸ್ಸು ಕಡಿಮೆ. ಅದನ್ನೇ ಹಲವರು ಹಂಚಿಕೊಂಡು ಮಾಡಿದರೆ ಯಶಸ್ಸು ಗ್ಯಾರಂಟಿ. ಬಿಡದಿ ಕೈಗಾರಿಕಾ ಪ್ರದೇಶ, ಎಲೆಕ್ಟ್ರಾನಿಕ್ ಸಿಟಿ ಮುಂತಾದ ಪ್ರದೇಶಗಳನ್ನು ಸೇರಿಸಿದರೆ ಪ್ರತಿಯೊಂದು ಪಾಲಿಕೆಯು ಸ್ವಾವಲಂಬಿಯಾಗುತ್ತದೆ.

ಎಸ್. ಗೋವರ್ಧನ್, ಬ್ಯಾಡರಹಳ್ಳಿ, ಮಾಗಡಿ ರಸ್ತೆ

ಕನ್ನಡಿಗರನ್ನು ಮೂಲೆಗುಂಪಾಗಿಸುವ ಸಂಚು

ಬಿಬಿಎಂಪಿಯನ್ನು ರಾಜಕೀಯ ಕಾರಣಗಳಿಗಾಗಿ ಎಷ್ಟೇ ವಲಯ ಮಾಡಿದರೂ ಅದೇ ಭ್ರಷ್ಟ ಅಧಿಕಾರಿಗಳು, ಕಾರ್ಪೊರೇಟರ್‌ಗಳ ಧನದಾಹಕ್ಕೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಉತ್ತರದಾಯಿತ್ವ ಇಲ್ಲದ ಕೇವಲ ಹಣ ಮಾಡಲು ಬೇರೆ ಇಲಾಖೆಗಳಿಂದ ಎರವಲು ಸೇವೆಯ ಹೆಸರಲ್ಲಿ ಬಂದು ಸಾರ್ವಜನಿಕರ ಹಣವನ್ನು ಭೂರಿಭೋಜನ ಮಾಡುವವರೇ ಹೆಚ್ಚು. ಈಗಿರುವ ವ್ಯವಸ್ಥೆಯನ್ನೇ ಮುಂದುವರಿಸಿ ಕರ್ತವ್ಯ ಪ್ರಜ್ಞೆಯ ಅಧಿಕಾರಿಗಳನ್ನು ನೇಮಿಸಿ. ಐದು ಪಾಲಿಕೆ ಮಾಡುವುದು ಬೆಂಗಳೂರನ್ನು ಪರಭಾಷಿಕರಿಗೆ ಹಂಚಿ, ಕನ್ನಡಿಗರ ಮೂಲೆಗುಂಪು ಮಾಡುವ ಸಂಚು.

ಬಿ.ಆರ್.ಮೋಹನ್, ಸಂಜಯನಗರ.

ಬಿಬಿಎಂಪಿ ವಿಭಜನೆ: ನೀವೇನನ್ನುತ್ತೀರಿ?

ಬಿಬಿಎಂಪಿಗೆ ಚುನಾವಣೆ ನಡೆಯದೆ ನಾಲ್ಕು ವರ್ಷವಾಗುತ್ತಿದೆ. ಈ ಮಧ್ಯೆ ತಲಾ 80 ವಾರ್ಡ್‌ಗಳ ಐದು ಪಾಲಿಕೆಯನ್ನಾಗಿ ಮಾಡಲು ರಾಜ್ಯ ಸರ್ಕಾರ ಚಿಂತಿಸುತ್ತಿದೆ. ಈ ಬಗ್ಗೆ ನಾಗರಿಕರಾದ ನಿಮ್ಮ ಅಭಿಪ್ರಾಯವನ್ನು 50 ಪದಗಳಲ್ಲಿ ವಾಟ್ಸ್‌ಆ್ಯಪ್ ಮಾಡಿ. ನಿಮ್ಮ ಹೆಸರು, ವಿಳಾಸ ಹಾಗೂ ಭಾವಚಿತ್ರವೂ ಜೊತೆಗಿರಲಿ.

ಪ್ರಜಾವಾಣಿ 96060 38256

ನಗರದಲ್ಲಿ ಇಂದು

40ನೇ ವಾರ್ಷಿಕೋತ್ಸವ ಹಾಗೂ ಬಸವಣ್ಣ ಅವರ ಜಯಂತ್ಯೋತ್ಸವ: ಸಾನ್ನಿಧ್ಯ: ಮುಮ್ಮಡಿ ನಿರ್ವಾಣಸ್ವಾಮೀಜಿ, ಚನ್ನಬಸವ ಸ್ವಾಮೀಜಿ, ಉದ್ಘಾಟನೆ: ಸಿರಿಶ್ ರಾಜ್‌ರಾಗ, ಎನ್. ಧರಣಿಕುಮಾರ್, ಅಧ್ಯಕ್ಷತೆ: ಮಹೇಶ ಅಂಗಡಿ, 'ಬಸವ ಸೇವಾರತ್ನ' ಪುರಸ್ಕಾರ: ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ, ಆಯೋಜನೆ: ವಿಮಾನ ಕಾರ್ಖಾನೆ ಬಸವ ಸೇವಾ ಸಮಿತಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 10

ಡಾ.ವಿಜಯಲಕ್ಷ್ಮಿ ಬಾಳೆಕುಂದ್ರಿ

224ನೇ ಮಾಸಿಕ ಸಮಾವೇಶ: ಅಭಿನಂದನೆ: ರೂಪಾ ಗುರುರಾಜ್, ಮುಖ್ಯ ಅತಿಥಿ: ರಂಜನಿ ವಾಸುಕಿ, ಅಧ್ಯಕ್ಷತೆ: ಎಸ್. ಷಡಕ್ಷರಿ, ಆಯೋಜನೆ: ಸದಾಶಿವನಗರ ವೀರಶೈವ ಸಮಾಜ, ಸ್ಥಳ: ಬೃಂದಾವನ್ ಹಾಲ್, ಸದಾಶಿವನಗಾರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಸಾರ್ವಜನಿಕ ಸೂಚನೆ

ನನ್ನ ಕಕ್ಷಿದಾರರು ಸರ್ಜಾಪುರ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿ 44 ಎಕರೆ 1 ಗುಂಟೆ ಮತ್ತು ಚಿಕ್ಕದುನ್ನಸಂದ್ರ ಗ್ರಾಮದ ವಿವಿಧ ಸರ್ವೆ ನಂಬರ್‌ಗಳಲ್ಲಿರುವ 125 ಎಕರೆ 14 ಗುಂಟೆ ಒಟ್ಟು 169 ಎಕರೆ 15 ಗುಂಟೆಗಳ ಪರಿವರ್ತಿತ ಜಮೀನಿನ ಸಂಪೂರ್ಣ ಮಾಲೀಕರಾಗಿದ್ದಾರೆ. ಆಸ್ತಿಯನ್ನು ಖರೀದಿಸಿದ ದಿನಾಂಕದಿಂದ, ನನ್ನ ಕಕ್ಷಿದಾರರು ಮೇಲೆ ತಿಳಿಸಿರುವ ಆಸ್ತಿಗಳ ನಿರಂತರ, ತಡೆರಹಿತ ಮತ್ತು ಶಾಂತಿಯುತ ಸ್ವಾಧೀನದಲ್ಲಿದ್ದಾರೆ.

ಕೆಲವು ಅನಧಿಕೃತ ವ್ಯಕ್ತಿಗಳು ಸುಳ್ಳು ದಾಖಲೆಗಳನ್ನು ನಿರ್ಮಿಸಲು ಪ್ರಯತ್ನಿಸುತ್ತಿದ್ದಾರೆ ಮತ್ತು ಕ್ರಿಮಿನಲ್ ಉದ್ದೇಶದಿಂದ ಮೂರನೇ ವ್ಯಕ್ತಿಗಳ ಪರವಾಗಿ ಅದನ್ನು ದೂರಮಾಡಲು ಪ್ರಯತ್ನಿಸುತ್ತಿದ್ದಾರೆ ಎಂಬುದು ನನ್ನ ಕಕ್ಷಿದಾರರ ಗಮನಕ್ಕೆ ಬಂದಿದೆ. ಅಂತಹ ವ್ಯಕ್ತಿಗಳ ಕಡೆಯಿಂದ ಅಂತಹ ಯಾವುದೇ ಪ್ರಯತ್ನಗಳು ಸಂಪೂರ್ಣವಾಗಿ ಕಾನೂನುಬಾಹಿರವಾಗಿದೆ, ಮೇಲೆ ಹೇಳಿದ ಆಸ್ತಿಗಳ ಸಂಪೂರ್ಣ ಮಾಲೀಕರಾಗಿರುವ ನನ್ನ ಕಕ್ಷಿದಾರರ ಅನುಮತಿಯಿಲ್ಲದೆ ವ್ಯವಹಾರ ಮಾಡುವಂತಹ ವ್ಯಕ್ತಿಗಳನ್ನು ಕ್ರಿಮಿನಲ್ ಮೊಕದ್ದಮೆಗೆ ಹೊಣೆಗಾರರನ್ನಾಗಿ ನನ್ನ ಕಕ್ಷಿದಾರರು ಮಾಡುತ್ತಾರೆ.

ಯಾವುದೇ ವ್ಯಕ್ತಿ ಅಥವಾ ಘಟಕವು ಆಸ್ತಿಗಳ ಮೇಲೆ ಯಾವುದೇ ರೀತಿಯ ಹಕ್ಕುಗಳು, ಶೀರ್ಷಿಕೆ ಅಥವಾ ಆಸಕ್ತಿಯನ್ನು ಹೊಂದಿಲ್ಲವೆಂದು ಮತ್ತು ಮೇಲೆ ತಿಳಿಸಿರುವ ಆಸ್ತಿಗಳಿಗೆ ಸಂಬಂಧಿಸಿದ ಯಾವುದೇ ವಹಿವಾಟು ಮಾಡಲು ಯಾರಿಗೂ ಮಾನ್ಯತೆಯನ್ನು ನೀಡಿಲ್ಲವಾದ್ದರಿಂದ, ಸಾರ್ವಜನಿಕರು ಮೇಲೆ ತಿಳಿಸಿರುವ ಆಸ್ತಿಗಳ ಮೇಲೆ ಹಕ್ಕುಗಳನ್ನು ಹೊಂದಿದ್ದೇವೆ ಎಂದು ಹೇಳಿಕೊಳ್ಳುವ ಯಾವುದೇ ವ್ಯಕ್ತಿಯೊಂದಿಗೆ ವ್ಯವಹರಿಸದಂತೆ ಎಚ್ಚರಿಕೆ ನೀಡಲಾಗಿದೆ. ಇಂತಹ ವ್ಯವಹಾರವು ನನ್ನ ಕಕ್ಷಿದಾರರನ್ನು ಬದ್ಧರನ್ನಾಗಿಸುವುದಿಲ್ಲ.

ಈ ಕೆಳಗೆ ವಿವರಿಸಿರುವ ಆಸ್ತಿಗಳ ವಿರುದ್ಧ ಹಕ್ಕುಗಳನ್ನು ಮತ್ತು ಕ್ಲೇಮ್‌ಗಳನ್ನು ಮಾಡುವ ಎಲ್ಲಾ ಪ್ರಯತ್ನಗಳನ್ನು ನನ್ನ ಕಕ್ಷಿದಾರರು ದೃಢವಾಗಿ ಸಮರ್ಥಿಸುತ್ತಾರೆ. ಅಂತಹ ಹಕ್ಕುಗಳನ್ನು ಮತ್ತು ಕ್ಲೇಮ್‌ಗಳನ್ನು ಮಾಡುವ ವ್ಯಕ್ತಿಗಳು ಮುಂದೆ ಎದುರಾಗುವ ಅಪಾಯ ಮತ್ತು ವೆಚ್ಚಗಳಿಗೆ ಅವರೇ ಹೊಣೆಗಾರರಾಗಿರುತ್ತಾರೆ.

ಸರ್ಜಾಪುರ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಇಲ್ಲಿರುವ ಆಸ್ತಿಗಳ ಪಟ್ಟಿ,

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತೀರ್ಣ	
		ಎಕರೆ	ಗುಂಟೆ
1.	476	00	32
2.	607/1	02	29
3.	490/2	01	12.08
4.	405/2	01	05
5.	490/1	01	18
6.	492/1	02	30
7.	494/2	02	08
8.	491	06	17
9.	485/1	02	11
10.	480/1	00	06
11.	500/2	00	30.08
12.	498	04	04

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತೀರ್ಣ	
		ಎಕರೆ	ಗುಂಟೆ
13.	496	03	21
14.	493	00	37
15.	492/2	01	17
16.	494/1	01	33
17.	500/1	01	22
18.	495	01	36
19.	499/2	00	30
20.	482/1	02	28
21.	482/2	00	05
22.	485/2	02	16
23.	488	00	28
24.	494/4	00	05
ಒಟ್ಟು		44	01

ಚಿಕ್ಕದುನ್ನಸಂದ್ರ, ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ಇಲ್ಲಿರುವ ಆಸ್ತಿಗಳ ಪಟ್ಟಿ,

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತೀರ್ಣ	
		ಎಕರೆ	ಗುಂಟೆ
1.	6	05	34
2.	11	06	15
3.	55/3	00	02.08
4.	80/2	01	30
5.	74/2	01	27
6.	84/1B	02	04
7.	84/2	01	00
8.	7/1	01	17.12
9.	38	09	13
10.	39	00	36
11.	48	00	12
12.	57	01	25
13.	42	00	14
14.	54	01	38
15.	55/2	01	02
16.	50/2	00	06
17.	17	01	21
18.	43	02	01
19.	47/1	00	05
20.	50/1	00	16
21.	55/1	03	34
22.	51	01	06
23.	61	03	16
24.	87	02	21
25.	64	01	35
26.	65	01	11.08
27.	69	01	07
28.	58/1	01	02
29.	49	04	03
30.	41/1	00	11
31.	41/2	00	22
32.	45	00	28
33.	48	01	09
34.	76	04	21
35.	41/6	00	08

ಕ್ರಮ ಸಂಖ್ಯೆ	ಸರ್ವೆ ನಂ.	ವಿಸ್ತೀರ್ಣ	
		ಎಕರೆ	ಗುಂಟೆ
36.	41/7	00	17
37.	41/5	00	14
38.	41/9	00	23
39.	41/3	00	11
40.	41/4	00	09
41.	41/10	00	18
42.	55/3	00	02.08
43.	78	02	28
44.	14/1	01	07.12
45.	41/2 (41/8)	00	07
46.	84/1	01	27
47.	94	07	15
48.	74/1	03	00
49.	84/1A (84/15)	00	10
50.	67	03	24
51.	89/3 (89/1A)	03	04
52.	47/2	00	02
53.	62	00	28
54.	70	02	22
55.	71	04	03
56.	73	01	27.08
57.	46	03	02
58.	63	00	28
59.	66	03	14
60.	44	00	10
61.	88/4	03	00
62.	73/2	01	27.08
63.	74/3	01	28
64.	84/2	00	10
65.	75	02	30
66.	77/3	01	22
67.	88/3	01	20
68.	75/2	03	09
ಒಟ್ಟು		125	14

(ಬಿ.ಎಸ್. ಶಂಕರನಾರಾಯಣ್)
ವಕೀಲರು,
ಈಡನ್ ಪಾರ್ಕ್, ನಂ.20, ವಿಠ್ಠಲ್ ಮಲ್ಯ ರಸ್ತೆ,
ಬೆಂಗಳೂರು-560001. ಫೋನ್: 22217971

ಬೆಂಗಳೂರು
ದಿನಾಂಕ: 15-06-2024

ನಾಲ್ಕು ತಿಂಗಳ ಹಿಂದೆ ಹೊಸ ವಿನ್ಯಾಸದ ಬಸ್ ಕಾರ್ಯಾಚರಣೆ ಆರಂಭಿಸಿದ್ದ ಕೆಎಸ್ಆರ್‌ಟಿಸಿ

ಹೆಚ್ಚುವರಿ ವರಮಾನ ತರುತ್ತಿರುವ ‘ಅಶ್ವಮೇಧ’

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಕೆಎಸ್ಆರ್‌ಟಿಸಿಯ ಕೆಂಪು ಬಸ್‌ಗಳಲ್ಲಿ ಪ್ರಯಾಣಿಕರು ‘ಅಶ್ವಮೇಧ’ ಬಸ್‌ಗಳಿಗೆ ಆದ್ಯತೆ ನೀಡುತ್ತಿದ್ದು, ಇದರಿಂದ ಸಾರಿಗೆ ಬಸ್‌ಗಿಂತ ‘ಅಶ್ವಮೇಧ’ ಬಸ್ ಕಿಲೋಮೀಟರ್‌ಗೆ ₹10ಕ್ಕೂ ಅಧಿಕ ವರಮಾನ ಗಳಿಸುತ್ತಿದೆ.

ಕೆಎಸ್ಆರ್‌ಟಿಸಿ ಈ ವರ್ಷದ ಫೆಬ್ರುವರಿಯಲ್ಲಿ ಹೊಸ ವಿನ್ಯಾಸದ ಈ ಬಸ್ ಅನ್ನು ‘ಅಶ್ವಮೇಧ’ ಎಂಬ ಹೊಸ ಬ್ರಾಂಡ್ ಅಡಿ ರಸ್ತೆಗೆ ಇಳಿಸಿತ್ತು. ಆಗ ಈ ಹೆಸರಿನ ಬಗ್ಗೆ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಪ್ರಯಾಣಿಕರು ಅದಕ್ಕೆ ತಲೆಕೆಡಿಸಿಕೊಳ್ಳದೇ ಸಾರಿಗೆ ಬಸ್‌ಗಿಂತ ಇದೇ ಬಸ್‌ಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

3.42 ಮೀಟರ್ ಎತ್ತರ ಇರುವ ‘ಅಶ್ವಮೇಧ’ (ಕ್ಲಾಸಿಕ್) ಬಸ್‌ನಲ್ಲಿ 52 ಆಸನಗಳಿದ್ದು, ‘ಬಕೆಟ್ ಟೈಪ್’ ವಿನ್ಯಾಸವನ್ನು ಹೊಂದಿವೆ. ವಾಹನದ ಮುಂದಿನ ಮತ್ತು ಹಿಂದಿನ ಗಾಜು ವಿಶಾಲವಾಗಿವೆ. ಕಿಟಕಿ ಫ್ರೇಮ್ ಹಾಗೂ ಮೇಲಿನ ಗಾಜು ದೊಡ್ಡದಾಗಿದ್ದು, ಟಿಂಟೆಡ್ ಗಾಜುಗಳನ್ನು ಹೊಂದಿವೆ. ಲಗೇಜ್ ಕ್ಯಾರಿಯರ್ ಕೂಡ ದೊಡ್ಡದಿದೆ. ಮಧ್ಯೆ ನಿಂತುಕೊಳ್ಳಲು ಕೂಡ ವಿಶಾಲ ಜಾಗ ಇರುವುದರಿಂದ ಸಾರಿಗೆ ಬಸ್‌ಗಳ ಬದಲು ಈ ಬಸ್‌ಗಳಲ್ಲಿ ಜನ ಪ್ರಯಾಣಿಸಲು ಬಯಸುತ್ತಿದ್ದಾರೆ. ಅಶ್ವಮೇಧದಲ್ಲಿ ಸೀಟು ಇಲ್ಲದೇ ಇದ್ದರೆ ಮಾತ್ರ ಸಾರಿಗೆ ಬಸ್‌ಗಳಿಗೆ ಹೋಗುತ್ತಿದ್ದಾರೆ ಎಂದು ಕೆಎಸ್ಆರ್‌ಟಿಸಿ ಅಧಿಕಾರಿಗಳು ಮಾಹಿತಿ ನೀಡಿದರು.

ಮುಖ್ಯಾಂಶಗಳು

- 3.42 ಮೀಟರ್ ಎತ್ತರದ ‘ಅಶ್ವಮೇಧ’ದಲ್ಲಿ ಬಕೆಟ್ ವಿನ್ಯಾಸದ ಸೀಟ್‌ಗಳು
- ಪ್ರತಿ ಕಿ.ಮೀಗೆ ₹52ರಿಂದ ₹62ರವರೆಗೆ ಗಳಿಸುತ್ತಿವೆ ಈ ಬಸ್‌ಗಳು
- ‘ಪಾಯಿಂಟ್ ಟು ಪಾಯಿಂಟ್’ ಬಸ್‌ನಲ್ಲಿ ಕಡಿಮೆ ನಿರ್ವಹಣಾ ವೆಚ್ಚ

‘ಅಶ್ವಮೇಧ’ ಕ್ಲಾಸಿಕ್ ಬಸ್

ಕೆಎಸ್ಆರ್‌ಟಿಸಿ ಸಾರಿಗೆ ಬಸ್‌ಗಳು ಪ್ರತಿ ಕಿಲೋಮೀಟರ್‌ಗೆ ₹44ರಿಂದ ₹ 50ರವರೆಗೆ ಗಳಿಸುತ್ತಿವೆ. ‘ಅಶ್ವಮೇಧ’ ಬಸ್‌ಗಳು ₹52ರಿಂದ ₹62ರವರೆಗೆ ಗಳಿಸುತ್ತಿವೆ. ಪಾಯಿಂಟ್ ಟು ಪಾಯಿಂಟ್‌ಗೆ ‘ಅಶ್ವಮೇಧ’ವನ್ನು ಬಳಸುತ್ತಿರುವುದು ಕೂಡ ಹೆಚ್ಚುವರಿ ವರಮಾನ ಪಡೆಯಲು ಕಾರಣವಾಗಿದೆ.

‘ಪಾಯಿಂಟ್ ಟು ಪಾಯಿಂಟ್ ಬಸ್‌ಗಳಾದರೆ ತಡೆರಹಿತವಾಗಿ ಸಂಚರಿಸುತ್ತವೆ. ಆಗ ನಿರ್ವಾಹಕರು ಬೇಕಾಗುವುದಿಲ್ಲ. ಆರಂಭದ ಸ್ಥಳದಲ್ಲಿ ಚಾಲಕರೇ ಪ್ರಯಾಣಿಕರಿಗೆ ಟಿಕೆಟ್ ನೀಡುತ್ತಾರೆ. ತಡೆರಹಿತ (ನಾನ್ ಸ್ಟಾಪ್) ಅಲ್ಲದ ಎಕ್ಸ್‌ಪ್ರೆಸ್ ಬಸ್‌ಗಳಲ್ಲಿ ಟಿಕೆಟ್ ನೀಡಲು ನಿರ್ವಾಹಕರು ಇರಲೇಬೇಕಾಗುತ್ತದೆ. ‘ಅಶ್ವಮೇಧ ಕ್ಲಾಸಿಕ್’ ಬಸ್‌ಗಳಲ್ಲಿ ಬಹುತೇಕ ಪಾಯಿಂಟ್ ಟು ಪಾಯಿಂಟ್ ಇರುವುದರಿಂದ ನಿರ್ವಾಹಕರು ಇರುವುದಿಲ್ಲ. ಇದರಿಂದ ನಿರ್ವಹಣಾ ವೆಚ್ಚ ಕಡಿಮೆಯಾಗುತ್ತಿದೆ. ನಿಲುಗಡೆ-ರಹಿತವಾಗಿರುವ ಕಾರಣ, ದೂರದ ಊರುಗಳಿಗೆ ಪ್ರಯಾಣಿಸುವವರು ಇದೇ ಬಸ್‌ಗಳನ್ನು ಆರಿಸಿಕೊಳ್ಳುತ್ತಿದ್ದಾರೆ’ ಎಂದು ಕೆಎಸ್ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ಮಾಹಿತಿ ನೀಡಿದರು.

ಬೆಂಗಳೂರು–ಮೈಸೂರು, ಬೆಂಗಳೂರು–ಹಾಸನ, ಮಂಗಳೂರು–ಧರ್ಮಸ್ಥಳ ಸಹಿತ ಅನೇಕ ಕಡೆಗಳಲ್ಲಿ ‘ಅಶ್ವಮೇಧ ಬಸ್‌ಗಳು ಸಂಚರಿಸುತ್ತಿದ್ದರೂ ಮತ್ತಷ್ಟು ಬಸ್‌ಗಳಿಗೆ ಬೇಡಿಕೆ ಬಂದಿದೆ ಎಂದು ತಿಳಿಸಿದರು.

ಅಂಕಿ ಅಂಶ

507 ಅಶ್ವಮೇಧ ಬಸ್‌ಗಳ ಸಂಖ್ಯೆ

400 ಪಾಯಿಂಟ್ ಟು ಪಾಯಿಂಟ್ ಸಂಚರಿಸುವ ಅಶ್ವಮೇಧ ಬಸ್‌ಗಳ ಸಂಖ್ಯೆ

7,000 ಸಾರಿಗೆ ಬಸ್‌ಗಳ ಸಂಖ್ಯೆ

400 ಪಾಯಿಂಟ್ ಟು ಪಾಯಿಂಟ್ ಸಂಚರಿಸುವ ಸಾರಿಗೆ ಬಸ್‌ಗಳು

ಇನ್ನಷ್ಟು ಬಸ್ ಖರೀದಿ: ಸಚಿವ

‘ಜನಸಾಮಾನ್ಯರು ಬಳಸುವ ಅಶ್ವಮೇಧ ಬಸ್‌ಗಳಿಗೆ ಉತ್ತಮ ಸ್ಪಂದನ ದೊರಕಿದೆ. ಈಗಾಗಲೇ 500ಕ್ಕೂ ಅಧಿಕ ‘ಅಶ್ವಮೇಧ’ ಬಸ್‌ಗಳಿವೆ. ಎಲ್ಲ ಕಡೆಯಿಂದ ಬೇಡಿಕೆ ಬರುತ್ತಿರುವುದರಿಂದ ಇನ್ನಷ್ಟು ಬಸ್ ಖರೀದಿಗೆ ಕ್ರಮ ಕೈಗೊಳ್ಳಲಾಗುವುದು’ ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ತಿಳಿಸಿದರು.

ಸುದ್ದಿ 2 ನಿಮಿಷ

ಹೋರಾಟಗಾರ್ತಿ ಮೀನಾಕ್ಷಿ ಬಾಳಿಗೆ ‘ಯಶೋಧರಮ್ಮ ದಾಸಪ್ಪ ಪ್ರಶಸ್ತಿ’

ಬೆಂಗಳೂರು: ಕನ್ನಡ ಜನಶಕ್ತಿ ಕೇಂದ್ರ ನೀಡುವ 2024ನೇ ಸಾಲಿನ ‘ಯಶೋಧರಮ್ಮ ದಾಸಪ್ಪ ಪ್ರಶಸ್ತಿ’ಗೆ ಮಹಿಳಾ ಹೋರಾಟಗಾರ್ತಿ ಮೀನಾಕ್ಷಿ ಬಾಳಿ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹ 15 ಸಾವಿರ ನಗದು ಒಳಗೊಂಡಿದೆ. ಮೀನಾಕ್ಷಿ ಬಾಳಿ ಅವರು ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ, ಸಮಾಜವಾದಿ ಚಿಂತನೆಗಳಿಂದ ಆಕರ್ಷಿತರಾಗಿ ಜನಪರ ಚಳವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಶೋಷಿತ, ದಮನಿತರ ನೋವಿಗೆ ಮಿಡಿಯಲೆಂದು ಅಖಿಲ ಭಾರತ ಜನವಾದಿಮಹಿಳಾ ಸಂಘಟನೆಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು, ಹೋರಾಟಗಳಲ್ಲಿ ಮುನ್ನುಗ್ಗಿದರು. 2005ರಲ್ಲಿ ಹೆಣ್ಣು ಭ್ರೂಣಹತ್ಯೆ ವಿರೋಧಿ ಆಂದೋಲನವನ್ನು ಹುಟ್ಟುಹಾಕಿ, ರಾಜ್ಯದಾದ್ಯಂತ ಸಂಚರಿಸಿ ಅರಿವು ಮೂಡಿಸಿದರು. ಸದ್ಯ ರಾಜ್ಯ ಜನವಾದಿ ಮಹಿಳಾ ಸಂಘಟನೆಯ ಅಧ್ಯಕ್ಷರಾಗಿದ್ದಾರೆ ಎಂದು ಜನಶಕ್ತಿ ಕೇಂದ್ರದ ಸಿ.ಕೆ. ರಾಮೇಗೌಡ ತಿಳಿಸಿದ್ದಾರೆ.

ಇದೇ 25ರಂದು ಕನ್ನಡ ಭವನದ ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ. ಮುಖ್ಯಮಂತ್ರಿಗಳ ಸಲಹೆಗಾರ ಹಾಗೂ ಶಾಸಕ ಬಿ.ಆರ್.ಪಾಟೀಲ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಮಾಜಿ ಸಚಿವ ಪಿ.ಜಿ.ಆರ್. ಸಿಂಧ್ಯಾ ಮತ್ತು ಸಾಹಿತಿ ಬಸವರಾಜ ಗಾರ್ಗಿ, ಪತ್ರಕರ್ತ ರಾಮಣ್ಣ ಎಚ್. ಕೋಡಿಹೊಸಹಳ್ಳಿ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುಳ್ಳು ಮಾಹಿತಿ: ವ್ಯಕ್ತಿ ವಿರುದ್ಧ ಎಫ್‌ಐಆರ್ ದಾಖಲು

ಬೆಂಗಳೂರು: ಸಂಸದ ರಾಹುಲ್ ಗಾಂಧಿ ಅವರ ಕುರಿತು ಅಪಪ್ರಚಾರ ನಡೆಸಿದ್ದಾರೆ ಎಂಬ ಆರೋಪದಡಿ ಲೇಖಕ ಅಜಿತ್ ಭಾರತಿ ಎಂಬುವವರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಕೆಪಿಸಿಸಿ ಕಾನೂನು ಘಟಕದ ಕಾರ್ಯದರ್ಶಿ ಬಿ.ಕೆ.ಬೋಪಣ್ಣ ಅವರು ನೀಡಿರುವ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

‘ಅಜಿತ್ ಭಾರತಿ ಅವರು ಜೂನ್ 6ರಂದು ತಮ್ಮ ಅಧಿಕೃತ ‘ಎಕ್ಸ್’ ಖಾತೆಯಲ್ಲಿ ವಿಡಿಯೊವೊಂದನ್ನು ಹಂಚಿಕೊಂಡಿದ್ದರು. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶ್ರೀರಾಮ ಮಂದಿರದ ಬದಲಿಗೆ ಬಾಬರಿ ಮಸೀದಿಯನ್ನು ಮರಳಿ ತರಲು ಉದ್ದೇಶಿಸಿದ್ದಾರೆ ಎಂದು ಹೇಳಿಕೆ ನೀಡಿದ್ದರು. ಆದರೆ, ರಾಹುಲ್ ಗಾಂಧಿ, ತಮ್ಮ ಭಾಷಣಗಳಲ್ಲಿ ಅಂತಹ ಹೇಳಿಕೆ ನೀಡಿರುವುದಿಲ್ಲ. ಸಮುದಾಯಗಳ ನಡುವೆ ಭಿನ್ನಾಭಿಪ್ರಾಯ ಮತ್ತು ದ್ವೇಷ ಬಿತ್ತುವ ಉದ್ದೇಶದಿಂದ, ಅಜೀತ್ ಭಾರತಿ ಅವರು ಸುಳ್ಳು ಮಾಹಿತಿ ಹಂಚಿಕೊಂಡಿದ್ದಾರೆ. ಇದು ಸಾರ್ವಜನಿಕ ವ್ಯವಸ್ಥೆಯಲ್ಲಿ ಶಾಂತಿಯನ್ನು ಕದಡುವ ಉದ್ದೇಶದಿಂದ ಕೂಡಿದೆ’ ಎಂದು ಅವರು ದೂರಿನಲ್ಲಿ ವಿವರಿಸಿದ್ದಾರೆ.

ಚಿರತೆ ದಾಳಿಗೆ ಹಸು, ಕುರಿಗಳು ಬಲಿ

ಕಗ್ಗಲೀಪುರ ಅರಣ್ಯ ಪ್ರದೇಶದಲ್ಲಿ ಘಟನೆ

ಪ್ರಜಾವಾಣಿ ವಾರ್ತೆ

ಕೆಂಗೇರಿ: ಚಿರತೆ ದಾಳಿಗೆ ಹಸು ಬಲಿಯಾದ ಘಟನೆ ಸೂಲಿಕೆರೆ ಗ್ರಾಮದಲ್ಲಿ ತಡವಾಗಿ ಬೆಳಕಿಗೆ ಬಂದಿದೆ.ಸೂಲಿಕೆರೆ ಪಂಚಾಯಿತಿ ವ್ಯಾಪ್ತಿಯ ಕಗ್ಗಲೀಪುರ ಅರಣ್ಯ ವ್ಯಾಪ್ತಿಯಲ್ಲಿ ಈ ಘಟನೆ ನಡೆದಿದ್ದು, ಜನರಲ್ಲಿ ಆತಂಕ ಮೂಡಿದೆ.

ಜೂನ್ 11ರ ಮುಂಜಾನೆ ಸ್ಥಳೀಯ ರೈತ ಲಕ್ಕಣ್ಣ ಎಂಬುವರಿಗೆ ಸೇರಿದ 15 ಹಸುಗಳು ಎಂದಿನಂತೆ ಮೇಯಲು ಹೋಗಿದ್ದವು. ಸಂಜೆ ವೇಳೆಗೆ ಕೇವಲ ಎಂಟು ಹಸುಗಳು ಮರಳಿ ಬಂದಿದ್ದವು. ಇದರಿಂದ ಗಾಬರಿಗೊಂಡಿದ್ದ ಲಕ್ಕಣ್ಣ ಹೊಸಕೆರೆ ಬಳಿಯ ಅರಣ್ಯ ಪ್ರದೇಶದಲ್ಲಿ ಹಸುಗಳಿಗೆ ಹುಡುಕಾಟ ನಡೆಸಿದಾಗ ಚಿರತೆ ಹಸುವೊಂದನ್ನು ಕೊಂದಿರುವ ವಿಷಯ ಗೊತ್ತಾಗಿದೆ.

ಚಿರತೆಗಳ ಭಯಕ್ಕೆ ಸುತ್ತಮುತ್ತಲಿನ ಅರಣ್ಯ ಪ್ರದೇಶಕ್ಕೆ ಬೆದರಿ ಹೋಗಿದ್ದ ಉಳಿದ ಆರು ಹಸುಗಳನ್ನು ಬಳಿಕ ಕರೆದುಕೊಂಡು ಬರಲಾಯಿತು ಎಂದು ರೈತ ಲಕ್ಕಣ್ಣ ತಿಳಿಸಿದ್ದಾರೆ. ಮರುದಿನ ಜೂನ್ 12ರಂದು ಇದೇ ಸೂಲಿಕೆರೆ ಗ್ರಾಮದಲ್ಲಿ ಎರಡು ಕುರಿಗಳನ್ನು ಚಿರತೆ ಬಲಿ ಪಡೆದಿದ್ದು, ಗ್ರಾಮಸ್ಥರಲ್ಲಿ ಭಯದ ವಾತಾವರಣ ನಿರ್ಮಾಣವಾಗಿದೆ.

ಐದು ಚಿರತೆಗಳಿಂದ ದಾಳಿ: ಸುಮಾರು ಐದು ಚಿರತೆಗಳು ಸೂಲಿಕೆರೆ ಅರಣ್ಯ ವ್ಯಾಪ್ತಿಯಲ್ಲಿ ಪದೇ ಪದೆ ಕಾಣಿಸಿಕೊಳ್ಳುತ್ತಿವೆ. 3 ಮರಿಗಳು ಹಾಗೂ 1 ಗಂಡು ಹಾಗೂ 1 ಹೆಣ್ಣು ಚಿರತೆಯ ಗುಂಪು ಆಗಾಗ್ಗೆ ಕಾಣಿಸಿಕೊಳ್ಳುತ್ತಿವೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಸ್ಥಳಕ್ಕೆ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಹಲವಾರು ದಿನಗಳಿಂದ ಸೂಲಿಕೆರೆ ಪಂಚಾಯಿತಿ ವ್ಯಾಪ್ತಿಯಲ್ಲಿ ಚಿರತೆ ಸಂಚಾರ ಜನರ ನಿದ್ದೆಗೆಡಿಸಿದೆ. ರಾತ್ರಿ ವೇಳೆ ಬೆಟ್ಟನಪಾಳ್ಯ, ಸೂಲಿಕೆರೆ ಪಾಳ್ಯ, ಯಲಚಗುಪ್ಪೆ, ಗುಲಗಂಜನಹಳ್ಳಿ ಗ್ರಾಮದಲ್ಲಿ ಚಿರತೆಗಳು ಸಂಚರಿಸುತ್ತಿವೆ. ಹೀಗಾಗಿ ರಾತ್ರಿ ಎಂಟರ ನಂತರ ಮನೆಯಿಂದ ಹೊರ ಹೋಗಲು ಭಯವಾಗುತ್ತಿದೆ. ಅರಣ್ಯಾಧಿಕಾರಿಗಳು ಚಿರತೆ ಸೆರೆಗೆ ಶೀಘ್ರ ಕ್ರಮ ಕೈಗೊಳ್ಳದಿದ್ದರೆ ಇನ್ನಷ್ಟು ಜಾನುವಾರುಗಳು ಬಲಿಯಾಗಬೇಕಾಗುತ್ತದೆ ಎಂದು ಸ್ಥಳೀಯ ಮುಖಂಡ ಅಶೋಕ್ ಆತಂಕ ವ್ಯಕ್ತ ಪಡಿಸಿದರು.

ಕುಡಿಯುವ ನೀರು ಸಮರ್ಪಕ ಪೂರೈಕೆಗೆ ಆಗ್ರಹ

ಹೊರಮಾವು ನಿವಾಸಿಗಳ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಕುಡಿಯುವ ನೀರು ಸಮರ್ಪಕ ಪೂರೈಕೆಯಲ್ಲಿ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿರುವ ಜಲಮಂಡಳಿ ಅಧಿಕಾರಿಗಳ ವಿರುದ್ಧ ಹೊರಮಾವು ವಾರ್ಡ್ ನಿವಾಸಿಗಳು ಎಚ್‌ಆರ್‌ಬಿಆರ್ ಬಡಾವಣೆಯಲ್ಲಿರುವ ಜಲಮಂಡಳಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ಒಳಪಡುವ ಹೊರಮಾವು ವಾರ್ಡ್‌ನ ಬಾಬುಸಾಪಾಳ್ಯ, ಚೇಳಿಕೆರೆ, ಹೊರಮಾವು ಆಗರ, ಕೆ.ನಾರಾಯಣಪುರ, ನಾಗೇನಹಳ್ಳಿ ಸೇರಿದಂತೆ ವಿವಿಧ ಬಡಾವಣೆಯಲ್ಲಿ ನೀರಿನ ಅಭಾವ ವಿಪರೀತವಾಗಿದೆ. ಸಮಸ್ಯೆ ಪರಿಹರಿಸುವ ವಿಚಾರದಲ್ಲಿ ಜಲಮಂಡಳಿ ಅಧಿಕಾರಿಗಳು ನಿರ್ಲಕ್ಷ್ಯ ತೋರಿದ್ದಾರೆ ಎಂದು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿದರು.

ಬೆಂಗಳೂರಿನಲ್ಲಿ ಅತಿ ಹೆಚ್ಚು ಜನಸಂಖ್ಯೆ ಹೊಂದಿರುವ ಹೊರಮಾವು ವಾರ್ಡ್‌ನಲ್ಲಿ ಎರಡು ಲಕ್ಷ ಜನಸಂಖ್ಯೆ ಇದ್ದು, ನೀರಿಗೆ ಪರದಾಡುವ ಪರಿಸ್ಥಿತಿ ಉದ್ಭವವಾಗಿದೆ. ಕಳೆದ ನಾಲ್ಕು ತಿಂಗಳಿಂದ ಕುಡಿಯುವ ನೀರು ಸರಬರಾಜು ಮಾಡುವಲ್ಲಿ ಜಲಮಂಡಳಿ ಅಧಿಕಾರಿಗಳು ನಿರ್ಲಕ್ಷ್ಯ ತೋರುತ್ತ ಬರುತ್ತಿದಾರೆ. ವಾರ್ಡ್‌ನಲ್ಲಿ ಕೊಳವೆಬಾವಿಗಳು ಬರಿದಾಗಿದ್ದು, ನೀರಿಗಾಗಿ ತೊಂದರೆ ಅನುಭವಿಸುವಂತಾಗಿದೆ ಎಂದು ಕೆ.ಆರ್.ಪುರ ಮಂಡಲ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷ ಸಂಪತ್ ದೂರಿದರು.

ಬಿಬಿಎಂಪಿ ಕಾವೇರಿ ನೀರು ಒದಗಿಸುವ 110 ಹಳ್ಳಿಯ ಯೋಜನೆಯಿಂದ ಕಾವೇರಿ ನೀರು ಪೂರೈಸದೇ ಜಲಮಂಡಳಿ ಅಧಿಕಾರಿಗಳು ಕಾಲಹರಣ ಮಾಡುತ್ತಿದ್ದಾರೆ. ಮಳೆಗಾಲ ಆರಂಭವಾದರೂ ನೀರು ಸರಬರಾಜು ಮಾಡುತ್ತಿಲ್ಲ. ಈ ಬಗ್ಗೆ ಜಲಮಂಡಳಿಯ ಹಿರಿಯ ಅಧಿಕಾರಿ ಕಾರ್ಯನಿರ್ವಾಹಕ ಎಂಜಿನಿಯರ್ ಚನ್ನಬಸವಯ್ಯ ಅವರನ್ನು ಕೇಳಿದರೆ ಉದ್ದಟತನ ತೋರುತ್ತಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

‘ಹಲವು ತಿಂಗಳುಗಳಿಂದ ಕುಡಿಯುವ ನೀರಿಲ್ಲದೆ ಸಂಕಷ್ಟ ಎದುರಿಸುತ್ತಿದ್ದೇವೆ. ಕಾವೇರಿ ನೀರು ಸರಬರಾಜು ಮಾಡುತ್ತೇವೆ ಎಂದು ಈಗಾಗಲೇ ಹಣ ಕಟ್ಟಿಸಿಕೊಂಡು ಕಾವೇರಿ ನೀರು ಇಲ್ಲಿಯವರೆಗೆ ನೀಡಿಲ್ಲ’ ಎಂದು ಚೇಳಿಕೆರೆ ನಿವಾಸಿ ಜಾನ್ಸಿ ದೂರಿದರು.

ಮುಖಂಡರಾದ ನಾಗೇನಹಳ್ಳಿ ನಾಗೇಶ್, ಆಗರ ಆನಂದ್, ಗುಂಡಾಲಪ್ಪ ಭಾಗವಹಿಸಿದ್ದರು.

ಹೊರಮಾವು ವಾರ್ಡ್‌ನ ನಿವಾಸಿಗಳು ಎಚ್‌ಆರ್‌ಬಿಆರ್ ಬಡಾವಣೆಯ ಜಲಮಂಡಳಿ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು

ಈಜಲು ಹೋದ ಬಾಲಕ ಸಾವು

ಆನೇಕಲ್: ತಾಲ್ಲೂಕಿನ ಬಳ್ಳೂರು ಕೆರೆಯಲ್ಲಿ ಭಾನುವಾರ ಈಜಲು ಹೋದ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಯೊಬ್ಬ ನೀರಿನಲ್ಲಿ ಮುಳುಗಿ ಮೃತಪಟ್ಟಿದ್ದಾನೆ.

ಧನುಷ್(15) ಮೃತ ಬಾಲಕ. ಧನುಷ್ ಮೃತದೇಹಕ್ಕಾಗಿ ಪೊಲೀಸ್ ಮತ್ತು ಅಗ್ನಿಶಾಮಕದಳ ಕಾರ್ಯಾಚರಣೆ ನಡೆಸಿದೆ. ರಾತ್ರಿ 8.30ಗಂಟೆಯಾದರೂ ಮೃತ ದೇಹ ಸಿಕ್ಕಿರಲಿಲ್ಲ. ಕಾರ್ಯಾಚರಣೆ ಮುಂದುವರೆದಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

ಸಾರ್ವಜನಿಕ ತಿಳುವಳಿಕೆ

ಶ್ರೀ ಸಂಜಯ್ ಮಹಥಾನಿ ಮೆ॥ ಜೆಎಂ ಕಾರ್ಪೊರೇಷನ್ ಪ್ರೈವೇಟ್ ಲಿಮಿಟೆಡ್ (ಶಿರೋ) ನಂ.222, 3ನೇ ಫ್ಲೋರ್, ಯುಬಿ ಸಿಟಿ 'Coment' ವಿಠಲ್ ಮಲ್ಯ ರಸ್ತೆ, ಬೆಂಗಳೂರು–560001 ಇಲ್ಲಿ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ಈ ಬಗ್ಗೆ ಸಾರ್ವಜನಿಕರ ಆಕ್ಷೇಪಣೆ/ ಸಲಹೆಗಳು ಏನಾದಾರೂ ಇದ್ದಲ್ಲಿ, ಅವುಗಳನ್ನು ಲಿಖಿತ ಮೂಲಕ ಸಹಿಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ 15 ದಿನಗಳೊಳಗಾಗಿ ಉಪ ಪೊಲೀಸ್ ಆಯುಕ್ತರು (ಆಡಳಿತ), ಪೊಲೀಸ್ ಆಯುಕ್ತರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು– 560001 ರವರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗಧಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ ಸಲಹೆಗಳು ಬಾರದಿದ್ದಲ್ಲಿ ಅರ್ಜಿದಾರರು ಸದರಿ ಸ್ಥಳದಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
ದಿನಾಂಕ: 17/06/2024
ಸಹಿ/–
ಪೊಲೀಸ್ ಆಯುಕ್ತರು,
ಬೆಂಗಳೂರು ನಗರ

HEALTH SPECIAL ಕ್ಲಾಸಿಫೈಡ್ಸ್

ಶ್ರೇಯಾ ಹಿಯರಿಂಗ್ ಕ್ಲಿನಿಕ್ Dr. Sathya Ranna's
SHRÉYA HEARING CLINIC

1800 425 3435
HOME VISITS 9945633115
Purchase between 17th to 22nd June
Upto 25% Discount on certain Hearing Aids
We believe in sound relationship...

Indiranagar	Jayanagar	Koramangala	Bannerghatta Road
25214746 / 47	2653 3055 /56/ 57	2563 4411 /12/13	2648 6034/9686449370
Sadashivanagar	Vijayanagar	Kammanahalli	Marathalli
2361 8037 /38/ 39	9900044214 /23180012	2545 5078 /79	9686449392

ReSound GN Made for iPhone
Centers at Hyderabad , Mangaluru and Mysuru
sathya@shreyahearingclinic.com www.shreyahearingclinic.com
signia Life sounds brilliant.

EDUCATIONAL

Admission

AISECT UNIVERSITIES Spot Admission. UGC AICTU Government Recognised, Approved Courses. Metro College Day/ Evening: 9341273990

REAL ESTATE BUYING

Industrial & Factory

General

NEED INDUSTRIAL land or convertible land of around 2 to 3 acres in 10 km radius of TVS Motor company hosur. Intrested sellers may call on below number. 9886020888

REAL ESTATE SELLING

Commerical

Banashankari

OM SARAVANA bhava Commercial building for sale.15000 sqft over 5 floors. bsk 6th stage. opp omkar Integrated Township Projects. land size 80 × 60 BDA. South Faces 80ft RD North Faces 30 Ft Rd Contact 98802 96163. Brokers excuse

EDUCATION
To Place your Classified Ads Contact:
9845114560

Home Finance

General

BEST INVESTMENT OPPORTUNITY For Middle Income Group. Buy Sites in Pre-Launch Cost to Cost Bank Loans/ Installments: 9952936298

Sites

Banashankari

SALE: 30*40 North Facing BDA Site Near Patallamma TempleAdjacent to 80ft Utarahalli Main Rd Banashankari 5th stagePh 9731225386

DH DECCAN HERALD Classifieds More value, more impact | ಪ್ರಜಾವಾಣಿ
NAME CHANGE
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಡಾ. ಮಂಜುನಾಥ್ ಗೆಲುವು: ಹರಕೆ ತೀರಿಸಿದ ಅಭಿಮಾನಿ

ಕನಕಪುರ: ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಡಾ.ಸಿ.ಎನ್. ಮಂಜುನಾಥ್ ಗೆಲುವಿಗಾಗಿ ಕಬ್ಬಾಳಮ್ಮ ದೇವಿಗೆ ಹರಕೆ ಹೊತ್ತಿದ್ದ ಕಂಚನಹಳ್ಳಿ ಮಂಚೇಗೌಡ ಭಾನುವಾರ ಕಬ್ಬಾಳಮ್ಮನ ಸೇವೆ ನಡೆಸಿ ಹರಕೆ ತೀರಿಸಿದರು.

ಸಾತನೂರು ಹೋಬಳಿ ಕಂಚನಹಳ್ಳಿ ಗ್ರಾಮದ ಜೆಡಿಎಸ್ ಮುಖಂಡ ಮಂಚೇಗೌಡ ಹರಕೆ ತೀರಿಸಿದ ಕ್ಷಣಕ್ಕೆ ಸಂಸದ ಡಾ.ಸಿ.ಎನ್.ಮಂಜುನಾಥ್ ಕೂಡ ಸಾಕ್ಷಿಯಾದರು. ಜೆಡಿಎಸ್ ಮತ್ತು ಬಿಜೆಪಿ ಮುಖಂಡರು ಮೆರವಣಿಗೆಯಲ್ಲಿ ಮಂಜುನಾಥ್ ಅವರನ್ನು ಕರೆ ತಂದರು. ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಬಿ.ನಾಗರಾಜು, ಮಾಜಿ ಅಧ್ಯಕ್ಷ ಸಿದ್ದಮರೀಗೌಡ, ಪುಟ್ಟರಾಜು, ಪಾಲ್ಗೊಂಡಿದ್ದರು.

ಹಳ್ಳಿಕಾರ್ ತಳಿ ಉಳಿಯಬೇಕು: ಲಿಂಬಾವಳಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಭಾರತದ ಗೋವು ಪರಂಪರೆಯಲ್ಲಿ ಅಳಿವನಂಚಿನಲ್ಲಿರುವ ತಳಿಗಳಲ್ಲಿ ಒಂದಾದ ಹಳ್ಳಿಕಾರ್ ತಳಿಯನ್ನು ಉಳಿಸಿ, ಪೋಷಿಸಬೇಕಾಗಿದೆ ಎಂದು ಮಾಜಿ ಶಾಸಕ ಅರವಿಂದ ಲಿಂಬಾವಳಿ ಹೇಳಿದರು.

ಕೆ.ಆರ್.ಪುರ ಸಮೀಪದ ರಾಮಗೊಂಡನಹಳ್ಳಿಯಲ್ಲಿ ಹಳ್ಳಿಕಾರ್ ಹೋರಿಗಳ ಮೆರವಣಿಗೆ ಮತ್ತು ವಿವಿಧ ಕ್ಷೇತ್ರಗಳ ಬಸಪ್ಪನವರುಗಳ ಮತ್ತು ಶ್ರೀ ದುಗ್ಗಮ್ಮ ದೇವಿ ದೀಪೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು.

ರೈತರ ಜೀವನಾಡಿಯಾಗಿರುವ ಹಳ್ಳಿಕಾರ್ ತಳಿ ನಶಿಸಲು ಬಿಡದೆ ಪೋಷಿಸುವ ಹೊಣೆ ಹೊರಬೇಕು. ಹಳ್ಳಿಕಾರ್ ತಳಿ ರಕ್ಷಣೆಗೆ ನನ್ನಿಂದಾದ ಸಹಕಾರ ನೀಡುತ್ತೇನೆ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಅರವಿಂದ ಲಿಂಬಾವಳಿ ಹಾಗೂ ಶಾಸಕಿ ಮಂಜುಳಾ ಲಿಂಬಾವಳಿ ಅವರು ಹಳ್ಳಿಕಾರ್ ಹೋರಿಗಳಿಗೆ ಪೂಜೆ ಸಲ್ಲಿಸಿದರು

ಕಾರ್ಯಕ್ರಮ ಆಯೋಜಕ ರಾಮಗೊಂಡನಹಳ್ಳಿ ಸಂಜೀವ್ ಮಾತನಾಡಿ, ಹಳ್ಳಿಕಾರ್ ರಾಸುಗಳನ್ನು ಉಳಿಸುವ ಉದ್ದೇಶದಿಂದ ಬೀಜದ ಹೋರಿಗಳ ಮೆರವಣಿಗೆ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ವಿವಿಧ ಮೂಲೆಗಳಿಂದ ರಾಸುಗಳ ಜೊತೆಗೆ ಮಾಲೀಕರು ಪಾಲ್ಗೊಂಡಿದ್ದರು. ಮಾಲೀಕರಿಗೆ ಒಂದು ಗ್ರಾಂ ಚಿನ್ನ ಬಹುಮಾನ ರೂಪವಾಗಿ ನೀಡಲಾಗಿದೆ ಎಂದರು.

ಶಾಸಕಿ ಮಂಜುಳಾ ಲಿಂಬಾವಳಿ, ನಟ ಧ್ರುವಸರ್ಜಾ, ಎನ್.ನಾರಾಯಣಸ್ವಾಮಿ, ಸಂಜೀವ್, ಎಲ್.ರಾಜೇಶ್ ಇದ್ದರು.

ಗಜಾನನ ನಗರ ಸಂಪರ್ಕಿಸುವ ಸೊಲ್ಲಾಪುರದಮ್ಮ ದೇವಸ್ಥಾನದ ಮುಖ್ಯರಸ್ತೆಯ ದುಃಸ್ಥಿತಿ

ರಸ್ತೆಯಲ್ಲಿ ಗುಂಡಿ, ಮೋರಿಯಿಂದ ದುರ್ನಾತ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಮಾಗಡಿ ಮುಖ್ಯರಸ್ತೆಯಿಂದ ಗಜಾನನ ನಗರಕ್ಕೆ ಸಂಪರ್ಕ ಕಲ್ಪಿಸುವ ಸೊಲ್ಲಾಪುರದಮ್ಮ ದೇವಸ್ಥಾನದ ರಸ್ತೆ ಹಾಳಾಗಿದೆ. ರಸ್ತೆಯ ಅಕ್ಕಪಕ್ಕದಲ್ಲಿರುವ ಚರಂಡಿಗಳಲ್ಲಿ ನೀರಿನಿಂದ ತೊಂದರೆಯಾಗಿದೆ.

ಚನ್ನಕೇಶವ ಬೇಕರಿಯಿಂದ ಸೊಲ್ಲಾಪುರದಮ್ಮ ದೇವಸ್ಥಾನದವರೆಗಿನ ರಸ್ತೆಯ ಎರಡೂ ಬದಿಯಲ್ಲಿ ಚರಂಡಿ ಕುಸಿದಿದೆ. ಚಪ್ಪಡಿ ಕಲ್ಲುಗಳು ಕಿತ್ತುಹೋಗಿವೆ. ಚರಂಡಿಯಲ್ಲಿ ನೀರು ನಿಂತು ದುರ್ವಾಸನೆ ಬೀರುತ್ತಿದೆ. ಸೊಳ್ಳೆ ಉತ್ಪತ್ತಿಯ ತಾಣವಾಗಿದೆ.

ಈ ರಸ್ತೆಯಲ್ಲಿ ಅಶ್ವತ್ಥ ಕಟ್ಟೆಗಳು, ವೃದ್ಧಾಶ್ರಮ, ಶನೇಶ್ವರ, ಸೊಲ್ಲಾಪುರದಮ್ಮ ದೇವಸ್ಥಾನಗಳಿವೆ. ಕುಂಚಿಟಿಗರ ಸಾರ್ವಜನಿಕ ವಿದ್ಯಾರ್ಥಿನಿಲಯ, ಕುಂಚಿಟಿಗರ ಶ್ರೀಗಂಧ ವಿದ್ಯೋದಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಇದೆ. ಗಜಾನನ ನಗರದಲ್ಲಿ ನಾಗದೇವತಾ, ಶ್ರೀ ಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನ ಬರುತ್ತವೆ. ಜನಸಂದಣಿ ಹೆಚ್ಚಾಗಿರುವ ಈ ರಸ್ತೆಯುಲ್ಲಿ, ಪಾದಚಾರಿ ಮಾರ್ಗದಲ್ಲಿನ ಸಿಮೆಂಟ್ ಕಲ್ಲುಗಳು ಕಿತ್ತು ಬಂದಿವೆ. ಜನರು ನಡೆಯಲು ಹರಸಾಹಸಪಡುತ್ತಾರೆ.

‘ಕೆಲವೆಡೆ ಮಳೆ ಬಂದಾಗ ಚರಂಡಿ ನೀರಿನ ಜೊತೆಗೆ, ಒಳಚರಂಡಿಯ ನೀರು ರಸ್ತೆಯ ಮೇಲೆ ಹರಿಯುತ್ತದೆ. ಅಲ್ಲಲ್ಲಿ ಕಸ ಮತ್ತು ತ್ಯಾಜ್ಯ ಬಿದ್ದಿದೆ. ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ’ ಎಂದು ನಾಗರಿಕರು ದೂರುತ್ತಾರೆ.

‘ಈ ಪ್ರದೇಶದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಒಂದೇ ಪಕ್ಷದ ಶಾಸಕರು, ಸಂಸದರು ಇದ್ದರೆ, ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ ಎಂದು ಚುನಾವಣೆ ವೇಳೆ ಮತ ಕೇಳಲು ಬರುವ ಪಕ್ಷದ ಮುಖಂಡರು ಹೇಳುತ್ತಾರೆ. ನಾವು ಪ್ರತಿಬಾರಿಯೂ ಮತ ಹಾಕುತ್ತೇವೆ. ಆದರೆ ಅಭಿವೃದ್ಧಿ ಮಾತ್ರ ಶೂನ್ಯ ಎಂದು ಗೀತಾ, ಶೋಭಾ ಗೌಡ ಅವರು ಬೇಸರ ವ್ಯಕ್ತಪಡಿಸಿದರು.

ಸೊಲ್ಲಾಪುರದಮ್ಮ ರಸ್ತೆಯ ಜಲಮಂಡಳಿ ಕಚೇರಿ ಎದುರು ಚರಂಡಿಯಲ್ಲಿ ಕಲುಷಿತ ನೀರು ಶೇಖರಣೆಯಾಗಿದೆ

ಸೊಲ್ಲಾಪುರದಮ್ಮ ದೇವಸ್ಥಾನ ಬಳಿಯ ರಸ್ತೆಯಲ್ಲಿ ಕಸದ ರಾಶಿ

ಮಳೆಗಾಲ ಆರಂಭವಾಗಿದೆ. ಚರಂಡಿಗಳು ಭರ್ತಿಯಾಗಿ ಕೊಳಚೆ ನೀರು ರಸ್ತೆಗೆ ಹರಿಯುತ್ತದೆ. ರಸ್ತೆಯಲ್ಲಿರುವ ಗುಂಡಿಗಳಲ್ಲಿ ಮಳೆ ನೀರು ನಿಂತು, ವಾಹನ ಸಂಚಾರರಿಗೆ ತುಂಬಾ ತೊಂದರೆಯಾಗುತ್ತದೆ. ಸ್ಥಳೀಯ ಜನಪ್ರತಿನಿಧಿಗಳು, ರಸ್ತೆ, ಚರಂಡಿ ಅವ್ಯವಸ್ಥೆ ಸರಿಪಡಿಸುವತ್ತ ಗಮನಹರಿಸಬೇಕೆಂದು ನಾಗರಿಕರು ಒತ್ತಾಯಿಸಿದ್ದಾರೆ.

ಶ್ರೀ ಸುಧಾ ಕೋ-ಆಪರೇಟಿವ್ ಬ್ಯಾಂಕ್ ಲಿ.,

[Financially Sound and Well Managed Bank as per RBI Parameters Dated 01-12-2022]

ಆಡಳಿತ ಕಛೇರಿ : ನಂ.195/33 , "ಶ್ರೀ ಸುಧಾ ರಜತ ಭವನ", 1ನೇ ಮಹಡಿ ಆರ್.ವಿ.ರಸ್ತೆ , ಜಯನಗರ , ಬೆಂಗಳೂರು-560 004. ದೂರವಾಣಿ : 26565651, 26560195, 8867701055 ಫ್ಯಾಕ್ಸ್ : 26567189
Email : generalmanager@srisudhabank.com Website : www.srisudhabank.com

ಸ್ಥಾಪನೆ : 1976

ದಿನಾಂಕ: 31-03-2024ಕ್ಕೆ ಅಂತ್ಯಗೊಂಡ 2023-2024ನೇ ಸಾಲಿನ ಲಾಭ ಮತ್ತು ನಷ್ಟದ ತಃಖ್ತೆ

31-03-2023ಕ್ಕೆ	ಷೇ ಸಂಖ್ಯೆ	ನಷ್ಟಾಂಶಗಳು		31-03-2024ಕ್ಕೆ ಮೊಬಲಗು	31-03-2023ಕ್ಕೆ	ಷೇ ಸಂಖ್ಯೆ	ಲಾಭಾಂಶಗಳು		31-03-2024ಕ್ಕೆ ಮೊಬಲಗು
	1	ಠೇವಣಿ ಮೇಲೆ ಬಡ್ಡಿ ಪಾವತಿಸಿದ್ದು	23,84,58,510.66			1	ಬಡ್ಡಿ ಮತ್ತು ಸೋಡಿ	40,29,24,925.93	
19,57,17,204.67		(-) ಅಂತರ ಶಾಖಾ ಬಡ್ಡಿ	4,02,57,699.00	19,82,00,811.66	33,85,81,837.41		(-) ಅಂತರ ಶಾಖಾ ಬಡ್ಡಿ	4,02,57,699.00	36,26,67,226.93
6,94,49,212.00	2	ಸಿಬ್ಬಂದಿ ವೇತನ, ಸಿಬ್ಬಂದಿ ಭವಿಷ್ಯ ನಿಧಿ ಮತ್ತು ಇತರೆ		7,32,60,648.00					
------		ನಿರ್ದೇಶಕರು/ಉಪಸಮಿತಿ ಸದಸ್ಯರ ಫೀ		–	2,15,920.00	2	ದಳ್ಳಾಳಿ ಮತ್ತು ವಿನಿಮಯಗಳು		3,49,682.00
1,15,39,214.94	3	ಕರ/ದರ/ವಿಮೆ/ವಿದ್ಯುತ್/ಇತರೆ		1,26,90,681.40					
20,000.00		ಕಾನೂನು ಸಲಹಾ ಶುಲ್ಕ		72,000.00	25,98,750.00	3	ಸರ್ಕಾರಿ ಋಣಪತ್ರಗಳ ಮಾರಾಟದಿಂದ ಬಂದ ಲಾಭ		14,37,500.00
6,81,420.00	4	ಅಂಚೆ ಮತ್ತು ದೂರವಾಣಿ		5,40,668.00					
15,53,400.00	5	ಆಡಿಟ್ ಶುಲ್ಕ		18,07,470.00	1,53,07,282.49	4	ಇತರೆ ಆದಾಯಗಳು		1,36,36,717.74
60,87,271.40	6	ಸವಕಳಿ ಮತ್ತು ರಿಪೇರಿ		52,76,317.00					
18,33,991.31	7	ಮುದ್ರಣ ಮತ್ತು ಲೇಖನ ಸಾಮಾಗ್ರಿ/ ಜಾಹೀರಾತು		20,58,697.68					
1,42,337.00	8	ಬ್ಯಾಂಕಿಂಗೇತರ ಆಸ್ತಿ ಮಾರಾಟದಿಂದ ನಷ್ಟ		1,00,210.00					
60,87,800.00	9	ಪ್ರಾವಿಜನ್ ಅಂಡ್ ಕಂಟಿಂಜೆನ್ಸೀಸ್		91,93,960.00					
1,15,87,016.59	10	ಇತರೆ ಖರ್ಚು		1,38,15,356.94					
1,37,14,000.00		ಆದಾಯ ತೆರಿಗೆ		1,52,00,000.00					
3,82,90,921.99		ನಿವ್ವಳ ಲಾಭ		4,58,74,305.99					
35,67,03,789.90		**ಒಟ್ಟು**		**37,80,91,126.67**	**35,67,03,789.90**		**ಒಟ್ಟು**		**37,80,91,126.67**
		ಅವಕಾಶಗಳು :			**3,82,90,921.99**		ನಿವ್ವಳ ಲಾಭ B/F		**4,58,74,305.99**
		ಇನ್‌ವೆಸ್ಟ್‌ಮೆಂಟ್ ಫ್ಲಕ್ಚ್ಯುಯೇಷನ್ ರಿಸರ್ವ್	64,78,200.00				ಹಿಂದಿನ ಸಾಲಿನ ಹೆಚ್ಚುವರಿ ಅವಕಾಶ :		
–		ಆಪದ್ಧನ ನಿಧಿ	21,59,400.00	**86,37,600.00**			ಹೂಡಿಕೆ ಸವಕಳಿ ನಿಧಿ		**86,37,600.00**
3,82,90,921.99		ನಿವ್ವಳ ಲಾಭ C/F		**4,58,74,305.99**					
3,82,90,921.99		ಒಟ್ಟು		**5,45,11,905.99**	**3,82,90,921.99**		ಒಟ್ಟು		**5,45,11,905.99**

ದಿನಾಂಕ 31-03-2024ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆ

31-03-2023ಕ್ಕೆ	ಕ್ರಮ. ಸಂಖ್ಯೆ	ಬಂಡವಾಳ ಮತ್ತು ಜವಾಬ್ದಾರಿಗಳು		31-03-2024ಕ್ಕೆ ಮೊಬಲಗು	31-03-2023ಕ್ಕೆ	ಕ್ರಮ. ಸಂಖ್ಯೆ	ಆಸ್ತಿ ಮತ್ತು ಸ್ವತ್ತುಗಳು		31-03-2024ಕ್ಕೆ ಮೊಬಲಗು
25,00,00,000-00		**ಅಧಿಕೃತ ಷೇರು ಬಂಡವಾಳ**		**30,00,00,000-00**	29,04,56,024.32	1	ಕೈಯಲ್ಲಿರುವ ಹಾಗೂ ಬ್ಯಾಂಕ್ ಚಾಲ್ತಿ ಖಾತೆಗಳಲ್ಲಿರುವ ನಗದು		26,95,06,757.32
23,50,47,800.00	1	ಹಂಚಿಕೆಯಾಗಿರುವ ಹಾಗೂ ಪಾವತಿಯಾದ ಷೇರು ಬಂಡವಾಳ		25,02,51,700.00	57,21,15,302.77	2	ಇತರೆ ಬ್ಯಾಂಕ್ ಖಾತೆಗಳು		64,95,29,071.08
43,06,33,607.09	2	ಆಪದ್ಧನ ಮತ್ತು ಇತರೆ ನಿಧಿಗಳು		46,04,56,503.94	-------	3	ಕರೆ ಠೇವಣಿ		5,00,00,000.00
------	3	ಪ್ರಿನ್ಸಿಪಲ್ ಸಬ್ಸಿಡಿಯರಿ ಸ್ಟೇಟ್ ಪಾಲುದಾರಿಕೆ ನಿಧಿ		------	1,26,20,88,620.00	4	ಹೂಡಿಕೆಗಳು		1,20,53,94,660.00
3,55,08,02,145.98	4	ಠೇವಣಿಗಳು		3,69,09,11,114.07	------	5	ಪ್ರಿನ್ಸಿಪಲ್ ಸಬ್ಸಿಡಿಯರಿ ಸ್ಟೇಟ್ ಪಾಲುದಾರಿಕೆ ನಿಧಿಯಿಂದ ಹೂಡಿಕೆ		------
------	5	ಹೊರಗಿನಿಂದ ತಂದ ಸಾಲಗಳು		------	2,05,51,41,062.92	6	ಸಾಲ ಮತ್ತು ಮುಂಗಡಗಳು		2,17,71,93,056.22
------	6	ಹೊಂದಾಣಿಕೆಗೆ ಬಾಕಿ ಇರುವ-ಬರತಕ್ಕ ಬಿಲ್ಲುಗಳು		------	6,72,60,846.00	7	ವಸೂಲಾಗತಕ್ಕ ಬಡ್ಡಿ		6,73,05,965.00
1,66,44,24,428.91	7	ಶಾಖಾ ಹೊಂದಾಣಿಕೆಗಳು (ಕಾಂಟ್ರ)	**1,69,78,38,723.77**		------	8	ಬರತಕ್ಕ ಬಿಲ್ಲುಗಳು		------
2,92,15,965.00	8	ಓವರ್ ಡ್ಯೂ ಇಂಟರೆಸ್ಟ್ ರಿಸರ್ವ್ (ಕಾಂಟ್ರ)		3,40,62,672.00	**1,66,44,24,428.91**	9	ಶಾಖೆಗಳ ಹೊಂದಾಣಿಕೆ (ಕಾಂಟ್ರ)	**1,69,78,38,723.77**	------
1,61,13,188.00	9	ಪಾವತಿಸಬೇಕಾದ ಬಡ್ಡಿ		1,31,24,927.00					
2,38,91,276.13	10	ಇತರೆ ಜವಾಬ್ದಾರಿಗಳು		2,08,09,446.57	1,73,94,747.00	10 & 11	ಸ್ಥಿರ/ಚರ ಆಸ್ತಿಗಳು (ತೇಮಾನ ನಂತರ)		1,70,36,117.00
------		ಹೊಂದಾಣಿಕೆಗೆ ಬಾಕಿಯಿರುವ ಖಾತೆ		------	5,95,38,301.18	12	ಇತರೆ ಆಸ್ತಿಗಳು		7,95,25,042.95
3,82,90,921.99	11	ನಿವ್ವಳ ಲಾಭ		4,58,74,305.99					
	12	**ಆಕಸ್ಮಿಕ ಹೊಣೆಗಳು**							
1,46,40,366.00		ಬ್ಯಾಂಕ್ ಗ್ಯಾರಂಟಿ ಬಾಬ್ತು	**1,89,05,366.00**						
65,15,633.34		ಡಿ.ಇ.ಎ.ಎಫ್.ಪೇಯಬಲ್	**69,55,045.34**						
1,52,70,388.00		ಗಳಿಕೆ ರಜೆ ವೇತನ ಪೇಯಬಲ್	**2,41,34,294.00**						
2,13,966.00		ದಾವಾ ಖರ್ಚು	**1,40,108.00**						
8,12,528.00		ಅಮಲ್ಜಾರಿ ಖರ್ಚು	**7,03,017.00**						
4,32,39,94,904.19		**ಒಟ್ಟು ಮೊತ್ತ**		**4,51,54,90,669.57**	**4,32,39,94,904.19**		**ಒಟ್ಟು ಮೊತ್ತ**		**4,51,54,90,669.57**

B. Disclosure in financial statements – 'Notes to Accounts'

1. Regulatory Capital - a) Composition of Regulatory Capital (Amount in crore)

Sr. No.	Particulars	31-03-2024	31-03-2023
i)	Paid up share capital and reserves (net of deductions, if any)	53.08	50.24
ii)	Other Tier 1 capital including 25% of net profit	1.15	0.96
iii)	Tier 1 capital (i + ii)	54.23	51.20
iv)	Tier 2 capital	4.99	4.52
v)	Total capital (Tier 1+Tier 2)	59.22	55.72
vi)	Total Risk Weighted Assets (RWAs)	218.76	221.41
vii)	Paid-up share capital and reserves as percentage of RWAs	24.26%	22.69%
viii)	Tier 1 Ratio (Tier 1 capital as a percentage of RWAs)	24.79%	23.12%
ix)	Tier 2 Ratio (Tier 2 capital as a percentage of RWAs)	2.28%	2.04%
x)	Capital to Risk Weighted Assets Ratio (CRAR) (Total Capital as a percentage of RWAs)	27.07%	25.16%

2. Asset liability management - a) Maturity pattern of certain items of assets and liabilities (Amount in crore)

	Day 1	2 to 7 days	8 to 14 Days	15 to 30 Days	31 days to 2 months	Over 2 months and to 3 months	Over 3 months and up to 6 Months	Over 6 months and up to 1 year	Over 1 year and up to 3 years	Over 3 years and up to 5 years	Over 5 years	Total
Deposits	84.03	5.54	1.89	18.69	24.61	16.39	49.81	101.40	63.89	0.60	2.24	369.09
Advances	54.13	0.98	0.88	1.31	3.23	3.54	8.41	28.54	62.95	27.18	26.57	217.72
Investments	-	-	-	-	-	-	-	-	-	-	120.54	120.54
Borrowings	-	-	-	-	-	-	-	-	-	-	-	-

3. Investments - a) Composition of Investment Portfolio (Amount in crore)

Particulars	As on 31-03-2024				As on 31-03-2023			
	Government Securities	Other Approved Securities	Others	Total investments in India	Government Securities	Other Approved Securities	Others	Total investments in India
Held to Maturity								
Gross	80.14	-	0.12	80.26	81.16	-	0.12	81.28
Less: Provision for non- performing investments (NPI)	0	-	-	0	0	-	-	0
Net	80.14	-	0.12	80.26	81.16	-	0.12	81.28
Held for Trading								
Gross	40.28	-	-	40.28	44.93	-	-	44.93
Less: Provision for depreciation and NPI	1.06	-	-	1.06	1.92	-	-	1.92
Net	39.22	-	-	39.22	43.01	-	-	43.01
Total Investments	120.41	-	0.12	120.53	126.09	-	0.12	126.21
Less: Provision for non-performing investments	0	-	-	00	0	-	-	00
Less: Provision for depreciation and NPI	1.06	-	-	1.06	1.92	-	-	1.92
Net	119.35	-	0.12	119.35	124.29	-	0.12	124.29

b) Movement of Provisions for Depreciation and Investment Fluctuation Reserve (Amount in crore)

Particulars	31-03-2024	31-03-2023
i) Movement of provisions held towards depreciation on investments		
a) Opening balance	1.92	1.92
b) Add: Provisions made during the year	-	-
c) Less: Write off / write back of excess provisions during the year	0.86	0
d) Closing balance	1.06	1.92
ii) Movement of Investment Fluctuation Reserve		
a) Opening balance	1.75	1.75
b) Add: Provisions made during the year	1.15	0
c) Less: Write off / write back of excess provisions during the year	-	-
d) Closing balance	2.90	1.75
iii) Closing balance in IFR as a percentage of closing balance of investments in AFS and HFT/Current category	7.20%	3.89%

c) Sale and transfers to/from HTM category

Securities amounting to Rs. **Nil** transferred from AFS to HTM category at the beginning of the year

d) Non-SLR investment portfolio

i) Non-performing Non-SLR investments : NIL

ii) Issuer composition of non-SLR investments (Amount in crore)

Sr. No.	Issuer	Amount		Extent of Private Placement		Extent of Below Investment Grade Securities		Extent of Unrated Securities		Extent of Unlisted Securities	
(1)	(2)	(3)		(4)		(5)		(6)		(7)	
		31-03-2024	31-03-2023	31-03-2024	31-03-2023	31-03-2024	31-03-2023	31-03-2024	31-03-2023	31-03-2024	31-03-2023
a)	PSUs										
b)	FIs										
c)	Banks										
d)	Private Corporates										
e)	Subsidiaries/ Joint Ventures										
f)	Others (NTPCL)	0.12	0.12	0.12	0.12	NIL	NIL	NIL	NIL	NIL	NIL
g)	Provision held towards depreciation										
	Total *	0.12	0.12	0.12	0.12	NIL	NIL	NIL	NIL	NIL	NIL

e) Repo transactions (in face value terms) : NIL

4) Asset quality

a) Classification of advances and provisions held (Amount in crore)

Particulars	Standard	Non-Performing				Total
	Total Standard Advances	Sub- standard	Doubtful	Loss	Total Non-Performing Advances	
Gross Standard Advances and NPAs						
Opening Balance	199.13	2.50	2.75	1.13	6.38	205.51
Add: Additions during the year	84.55	0.82	1.87	0	2.69	87.24
Less: Reductions during the year*	71.31	2.39	1.33	0	3.72	75.03
Closing balance	212.37	0.93	3.29	1.13	5.35	217.72
Reductions in Gross NPAs due to						
i) Upgradation						
ii) Recoveries (excluding recoveries from upgraded accounts)						
iii) Technical/ Prudential16 Write-offs						
iv) Write-offs other than those under (iii) above						
Provisions (excluding Floating Provisions)						
Opening balance of provisions held (including excess provision held)	0.98	0.25	5.06	1.13	6.44	7.42
Add: Fresh provisions made during the year	0.05	0	0	0	0	0.05
Less: Excess provision reversed/ Write-off loans	0	0	0.58	0	0.58	0.58
Closing balance of provisions held	1.03	0.25	5.64	1.13	7.02	8.05
Net NPAs						
Opening Balance						
Add: Fresh additions during the year						
Less: Reductions during the year						
Closing Balance						

Ratios (in per cent)	Current Year 31-03-2024	Previous Year 31-03-2023
Gross NPA to Gross Advances	2.46%	3.11%
Net NPA to Net Advances	0%	0%
Provision coverage ratio	131.11%	100.78%

b) Sector-wise Advances and Gross NPAs (Amount in crore)

Sl. No.	Sector	Current Year 31-03-2024			Previous Year 31-03-2023		
		Outstanding Total Advances	Gross NPAs	Percentage of Gross NPAs to Total Advances in that sector	Outstanding Total Advances	Gross NPAs	Percentage of Gross NPAs to Total Advances in that sector
i)	Priority Sector	104.11					
a)	Agriculture and allied activities						
b)	Advances to industries sector eligible as priority sector lending						
c)	Services						
d)	Personal loans & Others	104.36	3.93	3.7	100.17	5.54	3.1%
	Subtotal (i)	104.36	3.93	3.7	100.17	5.54	3.1%
ii)	Non-priority Sector						
a)	Agriculture and allied activities						
b)	Industry						
c)	Services						
d)	Personal loans & Others	113.36	1.42	1.25	105.38	0.84	0.79%
	Sub-total (ii)	113.36	1.42	1.25	105.38	0.84	0.79%
	Total (I + ii)	217.72	5.35	2.46	205.51	6.38	3.10%

c) Particulars of resolution plan and restructuring : NIL

d) Fraud account (Amount in crores)

	Current year 31-03-2024	Previous year 31-03-2023
Number of frauds reported	6	7
Amount involved in fraud	0.93	1.00
Amount of provision made for such frauds	0.93	0.96
Amount of Unamortised provision debited from 'other reserves' as at the end of the year	NIL	NIL

e) Disclosure under Resolution Framework for COVID-19-related Stress

Format for disclosures to be made half yearly starting September 30, 2021 (Amounts in crore)

Type of borrower	Exposure to accounts classified as Standard consequent to implementation of resolution plan– Position as at the end of the previous half-year (A)	Of (A), aggregate debt that slipped into NPA during the half- year	Of (A) amount written off during the half-year	Of (A) amount paid by the borrowers during the half- year	Exposure to accounts classified as Standard consequent to implementation of resolution plan – Position as at the end of this half-year
Personal Loans					
Corporate persons*					
Of which MSMEs					
Others & personal	43.54	NIL	-	10.70	32.84
Total	**43.54**	**NIL**	**-**	**10.70**	**32.84**

5) Exposures

a) Exposure to real estate sector (Amount in crore)

Category	Current Year 31-03-2024	Previous Year 31-03-2023
Residential Mortgages – Lending fully secured by mortgages on residential property that is or will be occupied by the borrower or that is rented. Individual housing loans eligible for inclusion in priority sector advances shall be shown separately. Exposure would also include non-fund based (NFB) limits.	6.98	5.83
Commercial Real Estate – Lending secured by mortgages on commercial real estate (office buildings, retail space, multipurpose commercial premises, multifamily residential buildings, multi tenanted commercial premises, industrial or warehouse space, hotels, land acquisition, development and construction, etc.). Exposure would also include non-fund based (NFB) limits;	37.07	32.99
Total Exposure to Real Estate Sector	44.05	38.82

b) Risk category-wise country exposure : NIL

c) Unsecured advances (Amounts in crore)

Particulars	Current Year 31-03-2024	Previous Year 31-03-2023
Total unsecured advances of the bank	**21.32**	**22.84**

6) Concentration of deposits, advances, exposures and NPAs

a) Concentration of deposits (Amount in crore)

Particulars	Current Year 31-03-2024	Previous Year 31-03-2023
Total deposits of the twenty largest depositors	**72.08**	**70.12**
Percentage of deposits of twenty largest depositors to total deposits of the bank	**19.53**	**19.74**

b) Concentration of advances (Amount in crore)

Particulars	Current Year 31-03-2024	Previous Year 31-03-2023
Total advances to the twenty largest borrowers	**69.40**	**66.86**
Percentage of advances to twenty largest borrowers to total advances of the bank	**31.88**	**32.53**

c) Concentration of NPAs (Amount in crore)

	Current Year 31-03-2024	Previous Year 31-03-2023
Total Exposure to the top twenty NPA accounts	**1.95**	**2.43**
Percentage of exposures to the twenty largest NPA exposure to total Gross NPAs.	**36.45**	**38.09**

7) Transfers to Depositor Education and Awareness Fund (DEA Fund) (Amount in crore)

Sl. No	Particulars	Current Year 31-03-2024	Previous Year 31-03-2023
i)	Opening balance of amounts transferred to DEA Fund	**0.65**	**0.54**
ii)	Add: Amounts transferred to DEA Fund during the year	**0.05**	**0.11**
iii)	Less: Amounts reimbursed by DEA Fund towards claims	**0.0032**	**0.0009**
iv)	Closing balance of amounts transferred to DEA Fund	**0.70**	**0.65**

8) Disclosure of complaints : NIL

9) Disclosure of penalties imposed by the Reserve Bank of India : NIL

10) **Other Disclosures :** ***a) Business ratios***

Sl. No.	Particular	Current Year 31-03-2024	Previous Year 31-03-2023
i	Interest Income as a percentage to Working Funds	8.11%	7.88%
Ii	Non-interest income as a percentage to Working Funds	0.41%	0.42%
Iii	Cost of Deposits	6.31%	6.34%
iv	Net Interest Margin	3.75%	2.74%
v	Operating Profit as a percentage to Working Funds	1.60%	0.98%
vi	Return on Assets	1.03%	0.86%
vii	Business (deposits plus advances) per employee (in crore)	8.76%	8.12
viii	Profit per employee (in crore)	0.07	0.06

b) Provisions and contingencies (Amount in crore)

Provision debited to Profit and Loss Account	Current Year 31-03-2024	Previous Year 31-03-2023
Provisions for NPI	NIL	NIL
Provision towards NPA	0.60	0.40
Provision made towards Income tax	1.52	1.37
Other Provisions and Contingencies (IDR + IFR + Housing Reserve + Amortization)	0.32	0.21

c) Payment of DICGC Insurance Premium (Amount in crore)

Sl.No.	Particulars	Current Year 31-03-2024	Previous Year 31-03-2023
i)	Payment of DICGC Insurance Premium	**0.40**	**0.39**

d) Disclosure of facilities granted to directors and their relatives : NIL

ಸಹಿ/-	ಸಹಿ/-	ಸಹಿ/-	ಸಹಿ/-
[ಕೋಕಿಲ ಎನ್.ಎಸ್.]	[ಮುರಳೀಧರ]	[ಟಿ. ವಾಸನ್]	[ಡಾ|| ಎಂ.ತಿಮ್ಮೇಗೌಡ]
ಪ್ರಧಾನ ವ್ಯವಸ್ಥಾಪಕರು	ನಿರ್ದೇಶಕರು	ಉಪಾಧ್ಯಕ್ಷರು	ಅಧ್ಯಕ್ಷರು

ದೃಢೀಕರಣ

ದೃಢೀಕರಣ : ನಮ್ಮ ತಿಳುವಳಿಕೆ, ಅಭಿಪ್ರಾಯದಂತೆ ಹಾಗೂ ಲೆಕ್ಕ ಪರಿಶೋಧನಾ ಕಾಲಕ್ಕೆ ನಮಗೆ ನೀಡಿದ ಮಾಹಿತಿ ಹಾಗೂ ವಿವರಣೆಗಳಂತೆ, ಬ್ಯಾಂಕಿನ ಆರ್ಥಿಕ ತ:ಖ್ತೆಗಳು, ಅನುಸೂಚಿಗಳು ಹಾಗೂ ಮಾಹಿತಿಗಳ ಮೇಲಿನ ಟಿಪ್ಪಣಿಗಳು, ಬ್ಯಾಂಕಿಂಗ್ ನಿಯಂತ್ರಣ ಕಾಯ್ದೆ 1949 (ಸಹಕಾರಿ ಬ್ಯಾಂಕುಗಳಿಗೆ ಅನ್ವಯವಾಗುವಂತೆ), ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959, ಹಾಗೂ ನಿಯಮಗಳು 1960ರಲ್ಲಿರುವ ಅವಕಾಶಗಳಂತೆ, ಅಲ್ಲದೆ ರಿಜರ್ವ ಬ್ಯಾಂಕು, ಸಹಕಾರ ಸಂಘಗಳ ನಿಬಂಧಕರು ಕರ್ನಾಟಕ ರಾಜ್ಯ, ನಿರ್ದೇಶಕರು ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆ ಕರ್ನಾಟಕ ರಾಜ್ಯ ಇವರು ಹೊರಡಿಸುವ ಕಾಲಕಾಲೀನ ಮಾರ್ಗಸೂಚಿಗಳು ಮತ್ತು ಸುತ್ತೋಲೆಗಳನ್ನು ಗಮನಿಸಿ ಸಿದ್ದಪಡಿಸಿರುವ ಬ್ಯಾಂಕಿನ (1)ದಿನಾಂಕ 31.03.2024ರಂತ್ಯಕ್ಕೆ ಇರುವ ಆಸ್ತಿ ಜವಾಬ್ದಾರಿ ತಃಖ್ತೆ, (2) ಸನ್ 2023-2024ನೇ ಸಾಲಿನ ಲಾಭ ಹಾನಿ ಪತ್ರಿಕೆ ಹಾಗೂ ಸನ್ 2023-2024 ನೇ ಸಾಲಿಗೆ ಪ್ರಾರಂಭಿಕ/ಅಂತಿಮ ಶಿಲ್ಕುಗಳನ್ನೊಳಗೊಂಡ ಜಮಾ ಖರ್ಚು ತಃಖ್ತೆಯು, ವರದಿಯಲ್ಲಿ ವಿವರವಾಗಿ ವಿಮರ್ಷಿಸಿದ ಅಲಾಯದಾ ವರದಿಗೊಳಪಟ್ಟು ಬ್ಯಾಂಕಿನ ನೈಜ ಹಾಗೂ ನ್ಯಾಯಸಮ್ಮತವಾದ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬುಸುತ್ತದೆಂದು ದೃಢೀಕರಿಸುತ್ತೇವೆ.

ಜಿ.ಆರ್.ಎಸ್.ಎಂ ಆಂಡ್ ಅಸೋಸಿಯೇಟ್ಸ್ ಪರವಾಗಿ
ಚಾರ್ಟರ್ಡ್ ಅಕೌಂಟೆಂಟ್ಸ್ **FRN 000863S**
ಸಹಿ/-
CA, ರಾಜಗೋಪಾಲ್ .ಎ
ಪಾಲುದಾರರು
M.No. 205296
UDIN NO. 24205296BKACQM2000

ಬೆಂಗಳೂರು.
ದಿನಾಂಕ : 17-05-2024

ವಿಶೇಷ ಸೂಚನೆ: ದಿನಾಂಕ 17.06.2024ನೇ ಸೋಮವಾರ ಬೆಳಿಗ್ಗೆ 10 ಗಂಟೆಗೆ "ಸಿಂಧೂರ ಕನ್‌ವೆನ್ಷನ್ ಸೆಂಟರ್", 48/75, 15ನೇ ಅಡ್ಡರಸ್ತೆ, ಸಾರಕ್ಕಿ 1ನೇ ಫೇಸ್, ಜೆ.ಪಿ.ನಗರ ರಿಂಗ್ ರೋಡ್ (ಜೆ.ಪಿ.ನಗರ ಮೆಟ್ರೋ ಸ್ಟೇಷನ್ ಹತ್ತಿರ) ರಲ್ಲಿ ನಡೆಯುವ 47ನೇ ಸರ್ವ ಸದಸ್ಯರ ಸಭೆಗೆ ಅಸೋಸಿಯೇಟೆಡ್ ಸದಸ್ಯರನ್ನು ಹೊರತುಪಡಿಸಿ, ಉಳಿದ ಎಲ್ಲಾ ಸಾಮಾನ್ಯ ಸದಸ್ಯರಿಗೆ ನೋಟಿಸ್ ಕಳುಹಿಸಿದ್ದು, ತಲುಪದಿದ್ದವರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಹಾಜರಾಗಲು ಕೋರಲಾಗಿದೆ. ಸಹಿ/- ಪ್ರಧಾನ ವ್ಯವಸ್ಥಾಪಕರು

ಸೋಮವಾರ • ಜೂನ್ 17, 2024 ಪ್ರಜಾವಾಣಿ

ಮಾರಕಾಸ್ತ್ರಗಳಿಂದ ಕೊಚ್ಚಿ ಯುವಕನ ಕೊಲೆ

ಪ್ರಜಾವಾಣಿ ವಾರ್ತೆ

ಹೊಸಕೋಟೆ: ತಾಲ್ಲೂಕಿನ ಬೆಂಗಳೂರು–ಚೆನ್ನೈ ರಾಷ್ಟ್ರೀಯ ಹೆದ್ದಾರಿ-75ರ ಮೈಲಾಪುರ ಸಮೀಪ ಯುವಕನೊಬ್ಬನನ್ನು ಮಾರಕಾಸ್ತ್ರಗಳಿಂದ ಕೊಲೆ ಮಾಡಲಾಗಿದೆ. ತಾಲ್ಲೂಕಿನ ಗಂಗಾಪುರ ಗ್ರಾಮದ ನವೀನ್ ನಾಯಕ್(27) ಕೊಲೆಯಾದ ಯುವಕ.

ತರಕಾರಿ ವ್ಯಾಪಾರಿಯಾಗಿದ್ದ ನವೀನ್ ನಾಯಕ್ ಶನಿವಾರ ರಾತ್ರಿ ತರಕಾರಿ ತರಲು ಕೆ.ಆರ್.ಪುರ ಮಾರುಕಟ್ಟೆಗೆ ಹೋಗಿದ್ದರು. ತರಕಾರಿ ಖರೀದಿಸಿ ಭಾನುವಾರ ಬೆಳಿಗ್ಗೆ ಜಾವ ಸ್ವಗ್ರಾಮಕ್ಕೆ ಮರಳುವ ವೇಳೆ ಘಟನೆ ನಡೆದಿದೆ.

ಮೈಲಾಪುರ ಗ್ರಾಮದ ಬಳಿ ಹೆದ್ದಾರಿಯಲ್ಲಿ ಕಾರೊಂದು ಅಡ್ಡಾದಿಡ್ಡಿ ಹೋಗುತ್ತಿದ್ದನ್ನು ನವೀನ್ ನಾಯಕ್ ಪ್ರಶ್ನಿಸಿದ್ದಾರೆ. ಇದರಿಂದ ಕುಪಿತಗೊಂಡ ಕಾರಿನಲ್ಲಿದ್ದವರು ಜಗಳಕ್ಕೆ ಇಳಿದರು. ಜಗಳ ವಿಕೋಪಕ್ಕೆ ತಿರುಗಿ ನವೀನ್ ನಾಯಕ್ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ ಪರಾರಿಯಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಪೊಲೀಸರು, ಕೊಲೆಗೆ ನಿಖರ ಕಾರಣ ತಿಳಿದುಬಂದಿಲ್ಲ. ಕೊಲೆ ಆರೋಪಿಗಳಿಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್‌.ಎನ್‌. ಮುಕುಂದರಾಜ್ ಅಭಿಮತ

'ಕಾಂಗ್ರೆಸ್ ಸರಿದಾರಿಗೆ ತರಬೇಕಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೂರಾರು ವರ್ಷಗಳ ಚರಿತ್ರೆಯಿರುವ ಕಾಂಗ್ರೆಸ್ ಪಕ್ಷ, ಸ್ವಾತಂತ್ರ್ಯ ಹೋರಾಟಕ್ಕೆ ಕೊಡುಗೆ ನೀಡಿದೆ. ಇತ್ತು ಪಕ್ಷವನ್ನು ಸರಿದಾರಿಗೆ ತರುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ನಾವು ಕೇಳಿಗೆಲ್ಲಿಗೂ, ಕಾಂಗ್ರೆಸ್ ಕಚೇರಿಗೂ ಹೋಗಲು ತಯಾರಿದ್ದೇವೆ' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹೇಳಿದರು.

ಭಾವನಾ ಸಾಂಸ್ಕೃತಿಕ ಸಂಘಟನೆ ನಗರದಲ್ಲಿ ಭಾನುವಾರ ಹಮ್ಮಿಕೊಂಡ 'ಡಾ.ಎಲ್. ಹನುಮಂತಯ್ಯ–65; ಬದುಕು ಬರಹ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

'ಈ ಕಾಲದಲ್ಲಿ ಲೇಖಕರಿಗೂ ಜನರಿಗೂ ಸಂಬಂಧ ಇಲ್ಲವೇನೋ ಎನ್ನುವಂತಾಗಿದೆ. ಸಾಹಿತಿಗಳವರು ದಂತಗೋಪುರದಲ್ಲಿ ಇರಬೇಕು, ಅವರು ಎಲ್ಲಿಗೂ ಹೋಗಬಾರದೆಂದು ಭಾವನೆಯಿದೆ. ಪ್ರಭುತ್ವಕ್ಕೂ ಮತ್ತು ಸಾಹಿತ್ಯಕ್ಕೂ ಮೊದಲಿನಿಂದಲೂ ಸಂಬಂಧವಿದೆ. ನಾವು ಎಲ್ಲರ ಬಳಿಯೂ ಹೋಗಬೇಕಾಗುತ್ತದೆ. ಸಾಹಿತ್ಯ ಅಕಾಡೆಮಿಯು ವಿದ್ವತ್ ವಲಯಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಅದು ಜನರ ತೆರಿಗೆ ಹಣದಿಂದ ನಡೆಯುವ ಸಂಸ್ಥೆ. ಆ ಸಾಹಿತ್ಯವನ್ನು ಕನ್ನಡದ ಪ್ರತಿಯೊಬ್ಬ ಪ್ರಜೆಗೂ ತಲುಪಿಸುವ ಜವಾಬ್ದಾರಿ ಸಾಹಿತಿಗಳ ಮೇಲಿದೆ' ಎಂದು ತಿಳಿಸಿದರು.

ಕವಿ ಎಚ್.ಎಸ್. ಶಿವಪ್ರಕಾಶ್, 'ಸಾಹಿತಿಗಳು ದೊಡ್ಡ ಮಾತನಾಡುತ್ತಾರೆ. ಆದರೆ, ಅವರು ಕಷ್ಟ ಕಾಲದಲ್ಲಿ ನೆರವಿಗೆ ಬರುವುದಿಲ್ಲ. ಇದಕ್ಕೆ ಹನುಮಂತಯ್ಯ ಅವರು ಅಪವಾದ. ಸಾಹಿತಿಗಳಿಗೆ ಕನಸುಗಳಿದ್ದರೂ ಅದನ್ನು ನನಸು ಮಾಡುವ ಶಕ್ತಿ ಇರುವುದಿಲ್ಲ. ರಾಜಕಾರಣಿಗಳಿಗೆ ಶಕ್ತಿ ಇದ್ದರೂ ಕನಸುಗಳು ಇರುವುದಿಲ್ಲ. ಹನುಮಂತಯ್ಯ ಅವರು ಸಾಹಿತ್ಯ ಸೃಷ್ಟಿಯ ಜತೆಗೆ ರಾಜಕೀಯದಲ್ಲಿಯೂ ಮುಂದೆ ಬಂದರು. ಅವರು ಸಂಸತ್ತಿನಲ್ಲಿ ಅತ್ಯಂತ ಧ್ವನಿಯಾಗಿ ಹಾಗೂ ಜನಪರವಾಗಿ ಮಾತನಾಡುತ್ತಿದ್ದರು' ಎಂದು ತಿಳಿಸಿದರು.

ಕಾಂಗ್ರೆಸ್ ಮುಖಂಡ ಪ್ರೊ.ಬಿ.ಕೆ. ಚಂದ್ರಶೇಖರ್, 'ದಲಿತ ಹಿನ್ನೆಲೆಯಿಂದ ಬಂದ ಎಲ್.ಹನುಮಂತಯ್ಯ ಅವರು ಸಾಹಿತ್ಯ ಹಾಗೂ ರಾಜಕೀಯ ಕ್ಷೇತ್ರಕ್ಕೆ ಉತ್ತಮ ಕೊಡುಗೆ ನೀಡಿದ್ದಾರೆ. ಅವರು ಉತ್ತಮ ರಾಜಕೀಯ ಪಟುವಾಗಿದ್ದಾರೆ. ಈ ಹಿಂದೆ ರಾಜ್ಯಸಭೆ ಸದಸ್ಯರಾಗಿದ್ದಾಗ ಸದನದಲ್ಲಿ ಉತ್ತಮವಾಗಿ ವಿಚಾರಗಳನ್ನು ಮಂಡನೆ ಮಾಡಿದ್ದಾರೆ. ಅವರ ವಾಕ್ ಚಾತುರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿತ್ತು. ಅವರನ್ನು ರಾಜ್ಯಸಭೆಯ ಸದಸ್ಯರಾಗಿ ಮುಂದುವರಿಸಬೇಕಿತ್ತು' ಎಂದು ಹೇಳಿದರು.

ಬೆಳಿಗ್ಗೆಯಿಂದ ಸಂಜೆಯವರೆಗೆ ನಡೆದ ಕಾರ್ಯಕ್ರಮದಲ್ಲಿ ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ, ಗಾಯನ ಹಾಗೂ ರಂಗ ಗೌರವ ನಡೆಯಿತು. ಹನುಮಂತಯ್ಯ ಅವರ ಬದುಕು ಹಾಗೂ ಬರಹಗಳ ಬಗ್ಗೆ ಚರ್ಚೆಗಳು ನಡೆದವು.

'ಡಾ.ಎಲ್. ಹನುಮಂತಯ್ಯ–65; ಬದುಕು ಬರಹ' ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಎಲ್ ಹನುಮಂತಯ್ಯ ಮತ್ತು ವಿಜಯಾಂಬಿಕೆ ದಂಪತಿಗೆ ರಂಗ ಗೌರವ ಸಲ್ಲಿಸಲಾಯಿತು. ಕಾನೂನು ಸಚಿವ ಎಚ್.ಕೆ. ಪಾಟೀಲ, ವಿದ್ಯಾರಣ್ಯ ಭಾಗವತರು ಸಂಘಟನೆಯ ಕೆ. ರೇವಣ್ಣ, ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ ಮತ್ತು ಎಲ್.ಎನ್. ಮುಕುಂದರಾಜ್ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಸುದ್ದಿ 2 ನಿಮಿಷ

'ಬಡವರ ಅಭಿವೃದ್ಧಿಗೆ ದರ ಏರಿಕೆ'

ಕಲಬುರಗಿ: 'ನಮ್ಮ ಸರ್ಕಾರ ಜನಪರವಾದ ಆಡಳಿತ ಕೊಡುತ್ತಿದ್ದು, ₹ 52 ಸಾವಿರ ಕೋಟಿ ಅನುದಾನವನ್ನು ಗ್ಯಾರಂಟಿಗಾಗಿ ಮೀಸಲಿಟ್ಟಿದ್ದೇವೆ. ಬಡವರಿಗಾಗಿ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಮಾಡಲು ತೆರಿಗೆ ಹಣ ಬೇಕಾಗುತ್ತದೆ' ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಅವರು ಪೆಟ್ರೋಲ್, ಡೀಸೆಲ್ ದರ ಏರಿಕೆಯನ್ನು ಸಮರ್ಥಿಸಿಕೊಂಡರು.

ಇಲ್ಲಿ ಭಾನುವಾರ ಮಾಧ್ಯಮ ಪ್ರತಿನಿಧಿಗಳ ಜತೆಗೆ ಮಾತನಾಡಿದ ಅವರು, 'ನೆರೆಯ ತೆಲಂಗಾಣ, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಇನ್ನೂ ಕಡಿಮೆ ಇದೆ. ಒಮ್ಮೆ ಇತಿಹಾಸವನ್ನು ಗಮನಿಸಿ ನೋಡಿ' ಎಂದರು.

ಕರ್ನಾಟಕಕ್ಕಿಂತ ದೆಹಲಿ, ಜಾರ್ಖಂಡ್ ರಾಜ್ಯದಲ್ಲಿ ಕಡಿಮೆ ದರ ಇದೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, 'ನಮ್ಮ ಪಕ್ಕದ ರಾಜ್ಯ ಯಾವುದು ಇದೆ ಹೇಳಿ? ಯಾವಾಗಲೂ ಪಕ್ಕದ ರಾಜ್ಯಗಳಲ್ಲಿ ನಮಗಿಂತ ಹೆಚ್ಚಿನ ದರ ಇದೆ. ಅನಿವಾರ್ಯ ಕಾರಣಕ್ಕಾಗಿ ಬಡವರ ಅಭ್ಯುದಯ ದರ ಏರಿಕೆ ಮಾಡಿದ್ದೇವೆ. ಬಿಜೆಪಿಯವರು ರಾಜಕೀಯ ಮಾಡುವುದನ್ನು ಬಿಟ್ಟು ಕೇಂದ್ರ ಸರ್ಕಾರವು ತನ್ನ ಪಾಲಿನ ಸುಂಕ ತಗ್ಗಿಸುವಂತೆ ಒತ್ತಾಯಿಸಿ ಬೀದಿಗೆ ಇಳಿದು ಹೋರಾಟ ಮಾಡಲಿ' ಎಂದು ತಾಕೀತು ಮಾಡಿದರು.

'ಬಳ್ಳಾರಿಯ ದೇವದಾರಿ ಕಬ್ಬಿಣದ ಅದಿರು ಗಣಿಗಾರಿಕೆ ಸಂಬಂಧ ಈ ಹಿಂದೆ ಸಲ್ಲಿಕೆಯಾದ ವರದಿಯನ್ನು ತರಿಸಿಕೊಂಡು, ಅಧ್ಯಯನ ಮಾಡಿ ಪ್ರತಿಕ್ರಿಯಿಸುತ್ತೇನೆ' ಎಂದರು.

ಭಯೋತ್ಪಾದನೆ ನಿಗ್ರಹಕ್ಕೆ ಸೂಚನೆ

ನವದೆಹಲಿ (ಪಿಟಿಐ): ಜಮ್ಮು ವಿಭಾಗದ ಪ್ರದೇಶಗಳ ಮೇಲೆ ಸಂಪೂರ್ಣ ನಿಯಂತ್ರಣ ಸಾಧಿಸುವ ಹಾಗೂ ಭಯೋತ್ಪಾದನೆಯ ವಿಚಾರದಲ್ಲಿ ಶೂನ್ಯ ಸಹನೆಯ ಯೋಜನೆಗಳನ್ನು ಜಾರಿಗೆ ತರುವಂತೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಭದ್ರತಾ ಪಡೆಗಳಿಗೆ ಸೂಚನೆ ನೀಡಿದ್ದಾರೆ.

ಈ ಯೋಜನೆಗಳನ್ನು ಕಾಶ್ಮೀರ ವಿಭಾಗದಲ್ಲಿ ಜಾರಿಗೆ ತಂದು ಯಶಸ್ಸು ಕಾಣಲಾಗಿದೆ, ಅವುಗಳನ್ನು ಜಮ್ಮು ವಿಭಾಗದಲ್ಲಿಯೂ ಜಾರಿಗೆ ತರಬೇಕು ಎಂದು ಅವರು ಹೇಳಿದ್ದಾರೆ. ಜಮ್ಮು ಮತ್ತು ಕಾಶ್ಮೀರದಲ್ಲಿ ಹೊಸ ಕ್ರಮಗಳ ಮೂಲಕ ಭಯೋತ್ಪಾದಕರನ್ನು ಮಟ್ಟ ಹಾಕಲು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಬದ್ಧವಾಗಿದೆ ಎಂದು ಅವರು ಸ್ಪಷ್ಟಪಡಿಸಿದ್ದಾರೆ.

ಜಮ್ಮು ಮತ್ತು ಕಾಶ್ಮೀರದ ಭದ್ರತಾ ಪರಿಸ್ಥಿತಿಯನ್ನು ಅವಲೋಕಿಸಲು ಕರೆದಿದ್ದ ಉನ್ನತ ಮಟ್ಟದ ಸಭೆಯಲ್ಲಿ ಅವರು ಈ ಸೂಚನೆಯನ್ನು ಅಧಿಕಾರಿಗಳಿಗೆ ರವಾನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ವಾರ್ಷಿಕ ಅಮರನಾಥ ಯಾತ್ರೆಗೆ ನಡೆದಿರುವ ಸಿದ್ಧತೆಗಳನ್ನು ಶಾ ಅವರು ಇನ್ನೊಂದು ಸಭೆಯಲ್ಲಿ ಪರಿಶೀಲಿಸಿದರು. ಯಾತ್ರೆಯು ಜೂನ್ 29ರಿಂದ ಆರಂಭವಾಗಲಿದೆ. ಜಮ್ಮು ಮತ್ತು ಕಾಶ್ಮೀರದಲ್ಲಿನ ಪರಿಸ್ಥಿತಿಯ ಬಗ್ಗೆ ಶಾ ಅವರಿಗೆ ವಿಸ್ತೃತ ವಿವರಣೆ ನೀಡಲಾಯಿತು ಎಂದು ಮೂಲಗಳು ಹೇಳಿವೆ. ಇಲ್ಲಿ ಭಯೋತ್ಪಾದಕರನ್ನು ಗುರಿಯಾಗಿಸಿಕೊಂಡ ಕಾರ್ಯಾಚರಣೆಗಳು ಮುಂದಿನ ದಿನಗಳಲ್ಲಿ ತೀವ್ರಗೊಳ್ಳಲಿವೆ ಎಂದು ಮೂಲಗಳು ಹೇಳಿವೆ.

'ಅನ್ಯಾಯ ಮುಂದುವರಿದರೆ ಪಿಐಎಲ್'

ತೆರಿಗೆ ಹಣ ಹಂಚಿಕೆಯಲ್ಲಿ ಅನ್ಯಾಯ: ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರ ಸರ್ಕಾರ ವರ್ಷಕ್ಕೆ ₹2.50 ಸಾವಿರ ಕೋಟಿ ಸೆಸ್ ಸಂಗ್ರಹಿಸುತ್ತಿದ್ದರೂ, ಅದರ ಹಂಚಿಕೆಯಲ್ಲಿ ಕರ್ನಾಟಕದಂತಹ ಅಭಿವೃದ್ಧಿ ಪಥದಲ್ಲಿರುವ ರಾಜ್ಯಗಳಿಗೆ ಅನ್ಯಾಯ ಮಾಡುತ್ತಿದೆ' ಎಂದು ಕೈಗಾರಿಕೆ ಸಚಿವ ಎಂ.ಬಿ. ಪಾಟೀಲ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಎಕ್ಸ್' ಖಾತೆಯಲ್ಲಿ ಅಸಮಾಧಾನ ವ್ಯಕ್ತಪಡಿಸಿರುವ ಸಚಿವರು,'ಪರಿಸ್ಥಿತಿ ಹೀಗೆಯೇ ಮುಂದುವರಿದರೆ ಕರ್ನಾಟಕದಂತಹ ರಾಜ್ಯಗಳು ತಮಗೆ ಬರಬೇಕಾದ ತೆರಿಗೆ ಪಾಲಿಗಾಗಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿ, ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ಹಾಕಬೇಕಾದ ಪ್ರಮೇಯ ಬರಲಿದೆ' ಎಂದು ಎಚ್ಚರಿಕೆ ನೀಡಿದ್ದಾರೆ.

'ತೆರಿಗೆ ಪಾವತಿಯಲ್ಲಿ ಕರ್ನಾಟಕ, ತಮಿಳುನಾಡು, ತೆಲಂಗಾಣದಂತಹ ರಾಜ್ಯಗಳು ಮುಂಚೂಣಿಯಲ್ಲಿವೆ. ಆದರೆ, ಅದಕ್ಕೆ ಪ್ರತಿಯಾಗಿ ಕೇಂದ್ರದಿಂದ ಈ ರಾಜ್ಯಗಳಿಗೆ ನ್ಯಾಯೋಚಿತ ಪಾಲು ಬರುತ್ತಿಲ್ಲ. ಉತ್ತರಪ್ರದೇಶ, ಬಿಹಾರದಂತಹ ರಾಜ್ಯಗಳಿಗೆ ಬದಲಿಗೆ ಹೆಚ್ಚಿನ ಪಾಲು ಹೋಗುತ್ತಿದೆ. ಇದು ಖಂಡಿತವಾಗಿಯೂ ಪ್ರಶ್ನಾರ್ಹ' ಎಂದಿದ್ದಾರೆ.

ತಮಿಳುನಾಡು ಸಿಎಂ ಎಂ.ಕೆ. ಸ್ಟಾಲಿನ್ ಮತ್ತು ತೆಲಂಗಾಣ ಸಿಎಂ ರೇವಂತ್ ರೆಡ್ಡಿ ಇತರರಿಗೆ ಇದನ್ನು ಟ್ಯಾಗ್ ಮಾಡಿದ್ದಾರೆ.

'ಕರ್ನಾಟಕದಲ್ಲಿ ನೆಗೆಟಿವ್ ರೇಟಿಂಗ್'

'ಕರ್ನಾಟಕದಲ್ಲಿ ಈಗ ಬಂಡವಾಳ ಹೂಡಿಕೆಗೆ ಪೂರಕ ವಾತಾವರಣ ಇಲ್ಲ. ನೆಗೆಟಿವ್ ರೇಟಿಂಗ್ ಇದೆ' ಎಂದು ಬಿಜೆಪಿ ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಉದ್ಯಮ ಸ್ಥಾಪನೆಗೆ ಭೂಮಿ ಸಿಗುತ್ತಿಲ್ಲ. ಸರ್ಕಾರ ನೀರು ಕೊಡುತ್ತಿಲ್ಲ, ವಿದ್ಯುತ್ ದರವೂ ಹೆಚ್ಚು. ಉದ್ಯಮ ಕ್ಷೇತ್ರ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ ಎಂದರು.

'ಪೂರಕ ವಾತಾವರಣ ಸೃಷ್ಟಿಸುವುದರ ಬದಲು ಇರುವವರ ಕತ್ತನ್ನೇ ಕುಯ್ದು ಅವರೂ ಇರಲಾಗದ ಸ್ಥಿತಿ ನಿರ್ಮಾಣ ಮಾಡಿದ್ದಾರೆ. ಇದು ಕಾಂಗ್ರೆಸ್‌ನ ಆಡಳಿತ ವೈಖರಿ. ಇದರಿಂದಾಗಿ ಬಿಲ್ಡರ್‌ಗಳು, ಉದ್ಯಮಿಗಳು ರಾಜ್ಯವನ್ನು ತೊರೆಯುವಂತಾಗಿದೆ' ಎಂದು ಕಿಡಿಕಾರಿದರು.

ಅಪರಾಧಿಗೆ ಶಿಕ್ಷೆಯಾದರೆ ಚಿತ್ರರಂಗ ಖುಷಿಪಡುತ್ತದೆ: ನಟ ಸುದೀಪ್

ಬೆಂಗಳೂರು: 'ನ್ಯಾಯದ ಮೇಲೆ ಎಲ್ಲರಿಗೂ ನಂಬಿಕೆ ಮೂಡಬೇಕಾದರೆ ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ನ್ಯಾಯಯುತ ತೀರ್ಪು ಹೊರಬರಬೇಕು. ಅಪರಾಧಿಗೆ ಶಿಕ್ಷೆಯಾದರೆ ಚಿತ್ರರಂಗ ಖುಷಿಪಡುತ್ತದೆ' ಎಂದು ನಟ ಕಿಚ್ಚ ಸುದೀಪ್ ಹೇಳಿದರು.

ಭಾನುವಾರ ಕಲಾವಿದರ ಸಂಘದಲ್ಲಿ ಕಾರ್ಯಕ್ರಮವೊಂದರ ಬಳಿಕ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ದರ್ಶನ್ ಹೆಸರನ್ನು ನೇರವಾಗಿ ಪ್ರಸ್ತಾಪಿಸದೆ ಪ್ರಕರಣದ ಕುರಿತು ಚಾಟಿ ಬೀಸಿದರು.

'ಮಾಧ್ಯಮದವರು ತೋರಿಸುತ್ತಿರುವುದನ್ನು ನೋಡಿ ವಿಚಾರ ತಿಳಿದುಕೊಳ್ಳುತ್ತಿದ್ದೇವೆ. ಈ ಕೊಲೆ ಪ್ರಕರಣದಲ್ಲಿ ಮಾಧ್ಯಮದವರು ಮತ್ತು ಪೊಲೀಸ್ ಸಿಬ್ಬಂದಿ ಬಹಳ ಪ್ರಯತ್ನ ಹಾಕಿ ಸತ್ಯಾಂಶ ಹೊರತರಲು ಸಾಕಷ್ಟು ಕೆಲಸ ಮಾಡುತ್ತಿದ್ದೀರಿ. ಅದರಲ್ಲಿ ಎರಡನೇ ಮಾತೇ ಇಲ್ಲ' ಎಂದರು.

'ಆ ಕುಟುಂಬಕ್ಕೆ ನ್ಯಾಯ ಸಿಗಬೇಕು. ಆ ಹೆಣ್ಣುಮಗುವಿಗೆ ನ್ಯಾಯ ಸಿಗಬೇಕು. ರೇಣುಕಸ್ವಾಮಿ ಅವರು ಎಲ್ಲೋ ರಸ್ತೆಯಲ್ಲಿ ಆ ರೀತಿ ಬಿದ್ದಿದ್ದರಲ್ಲ, ಅವರಿಗೆ ನ್ಯಾಯ ಸಿಗಬೇಕು. ಹುಟ್ಟಬೇಕಾಗಿರುವ ಆ ಮಗುವಿಗೆ ನ್ಯಾಯ ಸಿಗಬೇಕು' ಎಂದರು.

'ಮುಖ್ಯಮಂತ್ರಿಗಳೇ ಈ ಪ್ರಕರಣದ ಬಗ್ಗೆ ಹಟ ಹಿಡಿದು ಕುಳಿತಿದ್ದಾರೆ ಎಂಬ ಸುದ್ದಿ ನೋಡಿದೆ. ಕರ್ನಾಟಕದ ದೊಡ್ಡ ಸ್ಥಾನದಲ್ಲಿರುವ ಅವರು, ಮಾಧ್ಯಮದವರು ಹಾಗೂ ಪೊಲೀಸರು ಸರಿಯಾಗಿ ಕೆಲಸ ಮಾಡುತ್ತಿದ್ದಾರೆ ಎಂದಾಗ, ಕಾಮನ್‌ಮ್ಯಾನ್ ಆಗಿ ನಾನು ಅವರ ಪರ, ಇವರ ಪರ ಎಂದು ಮಾತನಾಡುವುದು ತಪ್ಪಾಗುತ್ತದೆ. ವಿರುದ್ಧವಾಗಿ ಮಾತನಾಡಿದರೂ ತಪ್ಪಾಗುತ್ತದೆ' ಎಂದರು.

ಪ್ರಶ್ನೆಪತ್ರಿಕೆ ಸೋರಿಕೆ ಪ್ರಕರಣ • ಇದುವರೆಗೆ 13 ಮಂದಿ ಬಂಧನ

ನೀಟ್: ಆರು ಚೆಕ್ ಪೊಲೀಸ್ ವಶ

ಪಟ್ನಾ (ಪಿಟಿಐ): ಕಳೆದ ತಿಂಗಳು ನಡೆದ 'ನೀಟ್–ಯುಜಿ' ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಗೆ ಸಂಬಂಧಿಸಿದಂತೆ ಬಿಹಾರ ಪೊಲೀಸ್‌ನ ಆರ್ಥಿಕ ಅಪರಾಧಗಳ ಘಟಕವು (ಇಒಯು) ಆರು 'ಪೋಸ್ಟ್ ಡೇಟೆಡ್ ಚೆಕ್'ಗಳನ್ನು ವಶಪಡಿಸಿಕೊಂಡಿದೆ. ಇದು ಪ್ರಶ್ನೆ ಪತ್ರಿಕೆಗೆ ಸಂಬಂಧಿಸಿದಂತೆ ಪ್ರತಿ ಅಭ್ಯರ್ಥಿಗಳು ತಲಾ ₹ 30 ಲಕ್ಷವನ್ನು ಮಾಫಿಯಾದವರಿಗೆ ನೀಡಿದ ಚೆಕ್‌ಗಳಾಗಿವೆ.

ಆಕಾಂಕ್ಷಿಗಳಿಗೆ ಪರೀಕ್ಷೆಗೂ ಮುಂಚಿತವಾಗಿಯೇ ಪ್ರಶ್ನೆ ಪತ್ರಿಕೆಗಳನ್ನು ಪೂರೈಸಲು ಮಾಫಿಯಾದವರಿಗೆ ನೀಡಲಾದ ಚೆಕ್‌ಗಳು ಇವಾಗಿವೆ ಎಂಬುದು ತನಿಖೆ ವೇಳೆ ಗೊತ್ತಾಗಿದೆ ಎಂದು ಡಿಐಜಿ ಮಾನವಜಿತ್ ಸಿಂಗ್ ಧಿಲ್ಲೋನ್ ತಿಳಿಸಿದ್ದಾರೆ.

ಸಂಬಂಧಪಟ್ಟ ಬ್ಯಾಂಕ್‌ಗಳಿಂದ ಖಾತೆದಾರರ ವಿವರಗಳನ್ನು ತನಿಖಾಧಿಕಾರಿಗಳು ಖಚಿತಪಡಿಸಿಕೊಳ್ಳುವ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಒಟ್ಟು 13 ಜನರ ಬಂಧನ: ನೀಟ್–ಯುಜಿ ಪ್ರಶ್ನೆ ಪತ್ರಿಕೆ ಸೋರಿಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಇಒಯು ಇಲ್ಲಿಯವರೆಗೆ ನಾಲ್ವರು ಅಭ್ಯರ್ಥಿಗಳು ಮತ್ತು ಅವರ ಕುಟುಂಬದ ಸದಸ್ಯರು ಸೇರಿ ಒಟ್ಟು 13 ಜನರನ್ನು ಬಂಧಿಸಿದೆ. ಎಲ್ಲ ಆರೋಪಿಗಳು ಬಿಹಾರದ ಮೂಲದವರಾಗಿದ್ದಾರೆ ಎಂದು ಅವರು ವಿವರಿಸಿದ್ದಾರೆ.

ಬಿಹಾರದ ನಾಲ್ವರು ಪರೀಕ್ಷಾರ್ಥಿಗಳು ಸೇರಿದಂತೆ ಒಂಬತ್ತು ಆಕಾಂಕ್ಷಿಗಳು ಪರೀಕ್ಷೆಗೂ ಒಂದು ದಿನ ಮುನ್ನ ಪಟ್ನಾದ ಗೋಪ್ಯ ಸ್ಥಳದಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರಗಳನ್ನು ಪಡೆದಿರುವ ಶಂಕೆಯಿದೆ ಎಂದು ಮೂಲಗಳು ತಿಳಿಸಿವೆ.

'ತಮ್ಮ ಪೋಷಕರು ಪರೀಕ್ಷೆಗೆ ಮುನ್ನ ಪ್ರಶ್ನೆ ಪತ್ರಿಕೆ ಒದಗಿಸಲು ತಲಾ ₹30 ಲಕ್ಷಕ್ಕೂ ಹೆಚ್ಚು ಹಣವನ್ನು ಪಾವತಿಸಿದ್ದಾರೆ' ಎಂದು ನೀಟ್ ಆಕಾಂಕ್ಷಿಗಳು ವಿಚಾರಣೆ ವೇಳೆ ಬಾಯಿಬಿಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸುಟ್ಟ ಪ್ರಶ್ನೆ ಪತ್ರಿಕೆ ವಶಕ್ಕೆ: 'ಈ ಕುರಿತು ನಡೆದಿರುವ ಹಣಕಾಸಿನ ವ್ಯವಹಾರದ ಪುರಾವೆಗಳು ಸಹ ಪತ್ತೆಯಾಗಿದ್ದು, ತನಿಖೆ ಸಮಯದಲ್ಲಿ ಆರು ಪೋಸ್ಟ್ ಡೇಟೆಡ್ ಚೆಕ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಲ್ಲದೆ ಗೋಪ್ಯ ಸ್ಥಳದಿಂದ ಭಾಗಶಃ ಸುಟ್ಟ ಪ್ರಶ್ನೆ ಪತ್ರಿಕೆಯ ತುಣುಕುಗಳನ್ನು ವಶಪಡಿಸಿಕೊಳ್ಳಲಾಗಿದೆ' ಎಂದು ಡಿಐಜಿ ವಿವರಿಸಿದ್ದಾರೆ.

'ನಾವು ಎನ್‌ಟಿಎಯಿಂದ ಉಲ್ಲೇಖಿತ ಪ್ರಶ್ನೆ ಪತ್ರಿಕೆಗಳನ್ನು ಕೇಳಿದ್ದೇವೆ. ಆದರೆ ಅದು ಇಲ್ಲಿಯವರೆಗೆ ಪ್ರತಿಕ್ರಿಯಿಸಿಲ್ಲ. ಎನ್‌ಟಿಎಯಿಂದ ಪ್ರಶ್ನೆ ಪತ್ರಿಕೆ ದೊರೆತ ಬಳಿಕ, ಸುಟ್ಟ ಪ್ರಶ್ನೆ ಪತ್ರಿಕೆಯ ತುಣುಕುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸುತ್ತೇವೆ' ಎಂದು ಅವರು ಹೇಳಿದ್ದಾರೆ.

ಮೇ 5ರ ನೀಟ್–ಯುಜಿ ಪರೀಕ್ಷೆಗೂ ಮುನ್ನ ಸುಮಾರು 35 ಆಕಾಂಕ್ಷಿಗಳಿಗೆ ಪ್ರಶ್ನೆ ಪತ್ರಿಕೆ ಮತ್ತು ಅವುಗಳ ಉತ್ತರಗಳನ್ನು ಒದಗಿಸಲಾಗಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದು ಇಒಯು ಮೂಲಗಳು ತಿಳಿಸಿವೆ.

ಪಟ್ನಾದ ರಾಮಕೃಷ್ಣನಗರದ ಬಾಡಿಗೆ ಮನೆಯೊಂದಕ್ಕೆ ಆಕಾಂಕ್ಷಿ ಅಭ್ಯರ್ಥಿಗಳನ್ನು ಕರೆಸಿ, ಅಲ್ಲಿ ಅವರಿಗೆ ಪ್ರಶ್ನೆ ಪತ್ರಿಕೆ ಮತ್ತು ಉತ್ತರಗಳನ್ನು ಒದಗಿಸಲಾಗಿದೆ. ಪೊಲೀಸರು ಈ ಬಾಡಿಗೆ ಮನೆಯ ಶೋಧ ನಡೆಸಿದ್ದು, ಅಲ್ಲಿ ಮೊಬೈಲ್ ಫೋನ್‌ಗಳು, ಪ್ರವೇಶ ಪತ್ರಗಳು ಮತ್ತು ಇತರ ಪೂರಕ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಬಕ್ರೀದ್ ಹಬ್ಬಕ್ಕಾಗಿ ಭಾನುವಾರ ಶಿವಾಜಿನಗರದಲ್ಲಿ ಮುಸ್ಲಿಂ ಸಮುದಾಯದವರು ಖರೀದಿಯಲ್ಲಿ ತೊಡಗಿದ್ದರು –ಪ್ರಜಾವಾಣಿ ಚಿತ್ರ/ಕಿಶೋರ್ ಕುಮಾರ್ ಬೋಳಾರ್

ಎಲೆಕ್ಟ್ರಿಕ್ ಶಾಕ್ ನೀಡಿದ್ದ ಆರೋಪಿ ಬಂಧನ

ಒಂದನೇ ಪುಟದಿಂದ...

ಮರ್ಮಾಂಗಕ್ಕೆ ಎಲೆಕ್ಟ್ರಿಕ್ ಶಾಕ್: ರೇಣುಕಸ್ವಾಮಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿ ಮರಣೋತ್ತರ ಪರೀಕ್ಷೆಯ ಅಂತಿಮ ವರದಿ ಬಂದಿದ್ದು ದೇಹದ 39 ಕಡೆ ಗಾಯ ಆಗಿರುವುದು ಪತ್ತೆಯಾಗಿದೆ. ಪ್ರಾಥಮಿಕ ವರದಿಯಲ್ಲಿ 15 ಕಡೆ ಗಾಯವಾಗಿದೆ ಎಂದು ವೈದ್ಯರು ಉಲ್ಲೇಖಿಸಿದ್ದರು.

'ರೇಣುಕಸ್ವಾಮಿಗೆ ಎಲೆಕ್ಟ್ರಿಕ್ ಶಾಕ್ ನೀಡಲಾಗಿದ್ದು ಹಲವು ಕಡೆ ಗಾಯವಾಗಿದೆ' ಎಂಬುದನ್ನು ವಿಶೇಷ ಪ್ರಾಸಿಕ್ಯೂಟರ್ ಪ್ರಸನ್ನಕುಮಾರ್ ಅವರು ಕೋರ್ಟ್‌ನಲ್ಲಿ ಹೇಳಿದ್ದರು. 'ಮರ್ಮಾಂಗಕ್ಕೆ ಕಾಲಿನಿಂದ ಒದೆಯಲಾಗಿದೆ. ಎಲೆಕ್ಟ್ರಿಕ್ ಶಾಕ್ ನೀಡಲಾಗಿದೆ. ತಲೆ ಹಾಗೂ ಶ್ವಾಸಕೋಶಕ್ಕೆ ಬಲವಾದ ಪೆಟ್ಟು ಬಿದ್ದಿದೆ. ಮಿದುಳಿನಲ್ಲಿ ತೀವ್ರ ರಕ್ತಸ್ರಾವವಾಗಿದೆ. ಮೈಮೇಲಿನ ಹಲವು ಭಾಗಗಳಲ್ಲಿ ಸುಟ್ಟ ಗಾಯಗಳಾಗಿವೆ. ಮೂಳೆಗಳು ಮುರಿದು ಶ್ವಾಸಕೋಶಕ್ಕೆ ಚುಚ್ಚಿಕೊಂಡಿವೆ. ಇದರಿಂದ ಸಾವು ಸಂಭವಿಸಿದೆ' ಎಂದು ವರದಿಯಲ್ಲಿ ವೈದ್ಯರು ವಿವರಿಸಿದ್ದಾರೆ.

ಆಹಾರ ಇಲಾಖೆ ಡಿ.ಡಿ, ಮಧ್ಯವರ್ತಿ ನ್ಯಾಯಾಂಗ ಬಂಧನಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಂಚ ಪ್ರಕರಣದಲ್ಲಿ ಬಂಧಿತರಾಗಿದ್ದ ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆಯ ಬೆಂಗಳೂರು ನಗರ ಜಿಲ್ಲೆಯ ಉಪ ನಿರ್ದೇಶಕಿ ಪ್ರೀತಿ ಚಂದ್ರಶೇಖರ್ ಮತ್ತು ಖಾಸಗಿ ಮಧ್ಯವರ್ತಿ ರಮೇಶ್ ಅವರನ್ನು ಜೂನ್ 28 ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ನ್ಯಾಯಬೆಲೆ ಅಂಗಡಿಯೊಂದರ ಪರವಾನಗಿ ಅಮಾನತುಗೊಳಿಸಿ ಹೊರಡಿಸಿದ್ದ ಆದೇಶ ಹಿಂಪಡೆಯಲು ₹ 70,000 ಲಂಚಕ್ಕೆ ಬೇಡಿಕೆ ಇಟ್ಟಿದ್ದ ಉಪ ನಿರ್ದೇಶಕಿ, ₹ 50,000 ಮುಂಗಡ ಪಡೆದಿದ್ದರು. ಆದೇಶ ಹಿಂಪಡೆಯುವ ಮುನ್ನ ಬಾಕಿ ₹ 20,000 ನೀಡುವಂತೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ತುಂಗಾನಗರ ನಿವಾಸಿ ಪುರುಷೋತ್ತಮ ಎಂಬುವವರು ಲೋಕಾಯುಕ್ತ ಪೊಲೀಸ್ ವಿಭಾಗದ ಬೆಂಗಳೂರು ನಗರ ಘಟಕ–1ಕ್ಕೆ ದೂರು ಸಲ್ಲಿಸಿದ್ದರು.

ಶುಕ್ರವಾರ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸಭೆಯಲ್ಲಿದ್ದ ಪ್ರೀತಿ ಚಂದ್ರಶೇಖರ್, ಕೆಂಪೇಗೌಡ ನಗರದ ನ್ಯಾಯಬೆಲೆ ಅಂಗಡಿಯೊಂದರ ಬಳಿ ಹೋಗಿ ರಮೇಶ್ ಎಂಬ ಮಧ್ಯವರ್ತಿಗೆ ಹಣ ತಲುಪಿಸುವಂತೆ ಸೂಚಿಸಿದ್ದರು. ಅದರಂತೆ ದೂರುದಾರರು ರಮೇಶ್ ಭೇಟಿಮಾಡಿ ಹಣ ನೀಡಿದ್ದರು. ತಕ್ಷಣ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ಮಧ್ಯವರ್ತಿಯನ್ನು ಬಂಧಿಸಿದ್ದರು. ನಂತರ ಕೆಂಪೇಗೌಡ ರಸ್ತೆಯಲ್ಲಿರುವ ಜಿಲ್ಲಾಧಿಕಾರಿ ಕಚೇರಿಗೆ ಬಂದು, ಅಲ್ಲಿ ಸಭೆ ಮುಗಿಸಿ ಹೊರಬಂದ ಉಪ ನಿರ್ದೇಶಕಿಯನ್ನು ಬಂಧಿಸಿದ್ದರು.

ಪ್ರಾಥಮಿಕ ವಿಚಾರಣೆ ಪೂರ್ಣಗೊಳಿಸಿ, ಶನಿವಾರ ಸಂಜೆ ಇಬ್ಬರೂ ಆರೋಪಿಗಳನ್ನು ಭ್ರಷ್ಟಾಚಾರ ನಿಯಂತ್ರಣ ಕಾಯ್ದೆ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಪ್ರೀತಿ ಚಂದ್ರಶೇಖರ್ ಮತ್ತು ರಮೇಶ್ ಅವರನ್ನು ಜೂನ್ 28ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶ ಹೊರಡಿಸಿದರು. ಇಬ್ಬರೂ ಆರೋಪಿಗಳನ್ನು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಶಕ್ಕೆ ನೀಡಲಾಗಿದೆ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಕುಂದು ಕೊರತೆ ಜನದನಿ

ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ 9606038256

ದುಃಸ್ಥಿತಿಯಲ್ಲಿ ಬಸ್ ತಂಗುದಾಣ

ಕೆಂಗೇರಿ ಉಪನಗರದ ಶಿರ್ಕೆ ಸರ್ಕಲ್ ಬಸ್ ತಂಗುದಾಣದಲ್ಲಿ ಕೂರಲು ಹಾಕಿದ್ದ ಬೆಂಚ್‌ಗಳು ಕುಸಿದು ಬಿದ್ದು ಹಲವು ದಿನಗಳಾಗಿವೆ. ಅದರಲ್ಲಿ ಒಂದು ಬೆಂಚ್ ಕಣ್ಮರೆಯಾಗಿದ್ದು, ಯಾರೋ ಅದನ್ನು ಕದ್ದೊಯ್ದಿರಬಹುದು. ಅಲ್ಲಿ ಕುಳಿತುಕೊಳ್ಳಲು ಆಸನ ಇರದಿರುವುದರಿಂದ ವೃದ್ಧರು, ಶಾಲಾ ವಿದ್ಯಾರ್ಥಿಗಳು ಬಸ್‌ಗಾಗಿ ನಿಂತೇ ಕಾಯಬೇಕಾಗಿದೆ. ನೆಲವು ಕೊಳೆ ಆಗಿರುವುದರಿಂದ ಶಾಲಾ ಬ್ಯಾಗ್ ಹಾಗೂ ಲಗೇಜ್‌ಗಳನ್ನು ಕೈಯಲ್ಲಿ ಹಿಡಿದುಕೊಂಡು ನಿಲ್ಲಬೇಕಾಗಿದೆ. ಬಿಎಂಟಿಸಿ ಮತ್ತು ಬಿಬಿಎಂಪಿ ಸಿಬ್ಬಂದಿ ಕೂಡ ಇದೇ ತಂಗುದಾಣದಲ್ಲಿ ಬಸ್‌ಗಳಿಗೆ ಕಾಯುತ್ತಾರೆ. ಕಳೆದ ಆರೇಳು ತಿಂಗಳಿಂದ ಅವರ ಕಣ್ಣಿಗೆ ಈ ದುರವಸ್ಥೆಯ ದೃಶ್ಯ ಕಂಡಂತಿಲ್ಲ. ಇನ್ನಾದರೂ ಎಚ್ಚೆತ್ತುಕೊಂಡ ಆಸನ ವ್ಯವಸ್ಥೆಯನ್ನು ಕಲ್ಪಿಸಬೇಕು.

ನಾಗೇಶ್ ಹೆಗಡೆ, ಶಿರ್ಕೆ ಸರ್ಕಲ್ ನಿವಾಸಿ

ಶಿರ್ಕೆ ಸರ್ಕಲ್ ಬಸ್ ತಂಗುದಾಣದ ಸ್ಥಿತಿ

ರಸ್ತೆ ಅಗಲೀಕರಣ ನನೆಗುದಿಗೆ

ರಾಜರಾಜೇಶ್ವರಿ ನಗರ ವಿಧಾನಸಭೆ ವ್ಯಾಪ್ತಿಯಲ್ಲಿನ ಹೊಸಕೆರೆಹಳ್ಳಿ ಲಿಂಕ್ ರಸ್ತೆ ಅಗಲೀಕರಣ ಕಾಮಗಾರಿ ನನೆಗುದಿಗೆ ಬಿದ್ದಿದೆ. ಒಂದೂವರೆ ವರ್ಷದ ಹಿಂದೆ ಕೆರೆ ಏರಿ ಒಡೆದು ಕಾಮಗಾರಿ ಮಾಡುತ್ತಿದ್ದ ಬಿಬಿಎಂಪಿ, ಕಳೆದ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಈ ಕಾಮಗಾರಿ ನಿಲ್ಲಿಸಿತ್ತು. ಈವರೆಗೂ ಕಾಮಗಾರಿಯನ್ನು ಪುನರಾರಂಭಿಸಿಲ್ಲ. ಹೊಸಕೆರೆಹಳ್ಳಿ, ಮುನೇಶ್ವರ ನಗರ, ಕೆರೆಪಾಳ್ಯ, ಕೃಷ್ಣಪ್ಪ ಲೇಔಟ, ಬಂಗಾರಪ್ಪ ನಗರ, ಗ್ಲೋಬಲ್ ವಿಲೇಜ್ ಮುಂತಾದ ಪ್ರದೇಶಗಳ ನಿವಾಸಿಗಳಿಗೆ ಸಂಚರಿಸಲು ಸಮಸ್ಯೆಯಾಗಿದೆ. ರಸ್ತೆಯಲ್ಲಿ ದೊಡ್ಡದಾದ ಗುಂಡಿ ಬಿದ್ದಿದ್ದು, ಮಳೆ ಬಂದಲ್ಲಿ ನೀರು ನಿಂತು ಸಮಸ್ಯೆಯಾಗುತ್ತಿದೆ. ಅಪಘಾತ ಸಂಭವಿಸುವ ಮುನ್ನ ಈ ಸಮಸ್ಯೆ ಸರಿಪಡಿಸಬೇಕು.

ಶ್ರೀನಿವಾಸ ಎಚ್.ಸಿ., ಹೊಸಕೆರೆಹಳ್ಳಿ ನಿವಾಸಿ

ಹೊಸಕೆರೆಹಳ್ಳಿ ಲಿಂಕ್ ರಸ್ತೆಯಲ್ಲಿ ಗುಂಡಿ ಬಿದ್ದಿರುವುದು

ರಸ್ತೆಗೆ ಕೊಳಚೆ ನೀರು

ನಾಗರಬಾವಿ ಬಡಾವಣೆಯ 2ನೇ ಹಂತದ 11ನೇ ಬ್ಲಾಕ್‌ನಲ್ಲಿ ತೆರಿಗೆ ಭವನದಿಂದ ಪಾಪರೆಡ್ಡಿ ಪಾಳ್ಯ ಸೇರುವ ರಸ್ತೆಗೆ ಕೊಳಚೆ ನೀರು ಬರುತ್ತಿದೆ. ಜಲಮಂಡಳಿ ನಿರ್ವಹಿಸುತ್ತಿರುವ ಒಳಚರಂಡಿಯಿಂದ ಕೊಳಚೆ ನೀರು ಉಕ್ಕುತ್ತಿದ್ದು, ಈ ಭಾಗದ ನಿವಾಸಿಗಳು ಮೂಗು ಮುಚ್ಚಿಕೊಂಡು ರಸ್ತೆಯಲ್ಲಿ ಸಂಚರಿಸಬೇಕಾಗಿದೆ. ಅಧಿಕ ಸಾಮರ್ಥ್ಯದ ಕೊಳವೆಗಳನ್ನು ಅಳವಡಿಸಿದಲ್ಲಿ ಈ ನೀರು ಸರಾಗವಾಗಿ ಹರಿಯಲಿದೆ. ಈ ಕೊಳವೆಗಳ ಅಳವಡಿಕೆ ಕಾಮಗಾರಿಗೆ ಈ ಭಾಗದ ಶಾಸಕರು ಗುದ್ದಲಿ ಪೂಜೆಯನ್ನೂ ನೆರವೇರಿಸಿದ್ದಾರೆ. ಆದರೆ, ಕಾಮಗಾರಿ ಪ್ರಾರಂಭ ಆಗದಿರುವುದರಿಂದ ಬಡಾವಣೆಯ ನಾಗರೀಕರು ಶಿಕ್ಷೆ ಅನುಭವಿಸುತ್ತಿದ್ದಾರೆ. ಸಂಬಂಧಪಟ್ಟವರು ಈ ಬಗ್ಗೆ ಕ್ರಮವಹಿಸಬೇಕು.

ಜವರಾಯಿಗೌಡ, ನಾಗರಬಾವಿ ನಿವಾಸಿ

ತೆರಿಗೆ ಭವನದಿಂದ ಪಾಪರೆಡ್ಡಿ ಪಾಳ್ಯ ಸೇರುವ ರಸ್ತೆಗೆ ಕೊಳಚೆ ನೀರು ಬರುತ್ತಿರುವುದು

ಬಸ್ ತಂಗುದಾಣದಲ್ಲಿ ಕಟ್ಟಡ ಸಾಮಗ್ರಿ

ಹೆಬ್ಬಾಳದ ಕಾಫಿ ಬೋರ್ಡ್ ಲೇಔಟ್‌ನ ಮುಖ್ಯರಸ್ತೆಯ ಬಸ್ ತಂಗುದಾಣ ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ದಾಸ್ತಾನು ಮಾಡುವ ಸ್ಥಳವಾಗಿ ಮಾರ್ಪಟ್ಟಿದೆ. ಬಸ್ ತಂಗುದಾಣದ ಹಿಂಬದಿಯಲ್ಲಿ ಬೃಹತ್ ಕಟ್ಟಡವೊಂದು ನಿರ್ಮಾಣಗೊಳ್ಳುತ್ತಿದ್ದು, ಅದಕ್ಕೆ ಅಗತ್ಯವಿರುವ ಕಬ್ಬಿಣದ ಸರಳುಗಳನ್ನು ಪ್ರಯಾಣಿಕರು ಕೂರುವ ಆಸನಗಳ ಮೇಲೆ ಮತ್ತು ತಂಗುದಾಣದ ಮುಂಭಾಗದಲ್ಲಿ ಹಾಕಲಾಗಿದೆ. ಜಲ್ಲಿ ಕಲ್ಲುಗಳ ರಾಶಿಯನ್ನೂ ಹಾಕಿರುವುದರಿಂದ ವಾಹನ ಸವಾರರಿಗೆ ಸಮಸ್ಯೆಯಾಗುತ್ತಿದೆ. ಪ್ರಯಾಣಿಕರೂ ಮಳೆ–ಬಿಸಿಲಿನಲ್ಲಿಯೇ ನಿಲ್ಲಬೇಕಾಗಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಅಕ್ರಮವಾಗಿ ಬಸ್ ತಂಗುದಾಣದಲ್ಲಿ ಇರಿಸಿರುವ ಕಬ್ಬಿಣದ ಸರಳುಗಳನ್ನು ತೆರವುಗೊಳಿಸಿ, ಬಳಕೆಗೆ ಯೋಗ್ಯವನ್ನಾಗಿಸಬೇಕು.

ಶಿವಪ್ರಸಾದ್ ಎಸ್., ಸ್ಥಳೀಯ ನಿವಾಸಿ

ಕಾಫಿ ಬೋರ್ಡ್ ಲೇಔಟ್‌ನ ಮುಖ್ಯರಸ್ತೆಯ ಬಸ್ ತಂಗುದಾಣದಲ್ಲಿ ಕಬ್ಬಿಣದ ಸರಳು ಇರಿಸಿರುವುದು

ಶೇಷಾದ್ರಿಪುರ ಕಾಲೇಜಿನಲ್ಲಿ ಆಯೋಜನೆ

'ಎಸ್‌ಎಫ್‌ಜಿಸಿ ಉತ್ಸವ'ದ ಸಂಭ್ರಮ

ಪ್ರಜಾವಾಣಿ ವಾರ್ತೆ

ಯಲಹಂಕ: ಕೊಠಡಿಗಳಲ್ಲಿ ವಿವಿಧ ದೇವರ ಮೂರ್ತಿಗಳ ಪ್ರತಿಷ್ಠಾಪನೆ, ವಿಶೇಷ ಅಲಂಕಾರ, ಸಾಂಪ್ರದಾಯಿಕ ಹಬ್ಬಗಳ ಆಚರಣೆ, ತೆಂಗಿನ ಚಪ್ಪರ, ತಳಿರುತೋರಣ, ವಿವಿಧ ಬಗೆಯ ಹೂವುಗಳು ಹಾಗೂ ಚಿತ್ತಾರದ ರಂಗೋಲಿಗಳಿಂದ ಸಿಂಗಾರಗೊಂಡಿದ್ದ ಕಾಲೇಜು ಆವರಣ, ವಿವಿಧ ಬಗೆಯ ಉಡುಪುಗಳನ್ನು ತೊಟ್ಟು, ಅಲಂಕೃತಗೊಂಡಿದ್ದ ಎತ್ತಿನ ಬಂಡಿಯಲ್ಲಿ ಸವಾರಿಮಾಡಿ ಸಂಭ್ರಮಿಸಿದ ವಿದ್ಯಾರ್ಥಿಗಳು....

ಒಟ್ಟಾರೆ ಇಡೀ ಕಾಲೇಜಿನ ತುಂಬಾ ಹಬ್ಬದ ವಾತಾವರಣ. ಹಾಡು, ನೃತ್ಯ, ತೇಲಿಬರುತ್ತಿದ್ದ ಸಂಗೀತದ ಬೀಟ್ಸ್‌ಗಳಿಗೆ ಕುಣಿದು ಕುಪ್ಪಳಿಸಿದ ವಿದ್ಯಾರ್ಥಿಗಳು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನ ಸಾಂಸ್ಕೃತಿಕ ವೇದಿಕೆ ವತಿಯಿಂದ ಭಾರತೀಯ ಹಬ್ಬಗಳ ಪರಿಕಲ್ಪನೆಯಡಿಯಲ್ಲಿ ಆಯೋಜಿಸಿದ್ದ ಎಸ್.ಎಫ್.ಜಿ.ಸಿ ಉತ್ಸವದಲ್ಲಿ ಕಂಡುಬಂದ ದೃಶ್ಯಗಳಿವು.

ಯಲಹಂಕದ ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನ ಸಾಂಸ್ಕೃತಿಕ ವೇದಿಕೆ ವತಿಯಿಂದ ಭಾರತೀಯ ಹಬ್ಬಗಳ ಪರಿಕಲ್ಪನೆಯಡಿಯಲ್ಲಿ ಆಯೋಜಿಸಿದ್ದ ಎಸ್‌.ಎಫ್‌.ಜಿ.ಸಿ ಉತ್ಸವದಲ್ಲಿ ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ಎತ್ತಿನಬಂಡಿಯಲ್ಲಿ ಸವಾರಿ ಮಾಡಿ ಸಂಭ್ರಮಿಸಿದರು

ವಿದ್ಯಾರ್ಥಿಗಳಿಂದ ವಿಶೇಷವಾಗಿ ಅಲಂಕೃತಗೊಳಿಸಿದ್ದ ಒಟ್ಟು 34 ಕೊಠಡಿಗಳಲ್ಲಿ ವಿವಿಧ ದೇವರ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ವಿಶೇಷವಾಗಿ ಅಲಂಕರಿಸಿ ಪೂಜೆ ನೆರವೇರಿಸಿದರು. ತುಳಸಿಹಬ್ಬ, ವೈಕುಂಠ ಏಕಾದಶಿ, ವಿವಿಧ ರಾಜ್ಯಗಳಲ್ಲಿ ಆಚರಿಸುವ ಸಂಕ್ರಾಂತಿ, ಓಣಂ ಸೇರಿಂದ ವಿವಿಧ ಹಬ್ಬಗಳ ಆಚರಣೆಯ ಪರಿಕಲ್ಪನೆಯ ಮಾದರಿಗಳು ಗಮನ ಸೆಳೆದವು.

ವಿದ್ಯಾರ್ಥಿಗಳು ಹಬ್ಬಗಳಿಗೆ ತಕ್ಕಂತೆ ಸಾಂಪ್ರದಾಯಿಕ ಉಡುಗೆಗಳನ್ನು ತೊಟ್ಟು ಸಂಭ್ರಮಿಸಿದರು. ಅಲ್ಲದೆ ಹಾಡುಗಳನ್ನು ಹಾಡುವುದರ ಜೊತೆಗೆ ನೃತ್ಯಮಾಡಿ ಖುಷಿಪಟ್ಟರು.

ಈ ವೇಳೆ ಮಾತನಾಡಿದ ಶೇಷಾದ್ರಿಪುರ ಶಿಕ್ಷಣದತ್ತಿಯ ಟ್ರಸ್ಟಿ ಡಬ್ಲ್ಯು.ಡಿ ಅಶೋಕ್, 'ವಿದ್ಯಾರ್ಥಿಗಳಲ್ಲಿ ಭಾವೈಕ್ಯ, ದೇಶದ ಸಂಸ್ಕೃತಿ ಮತ್ತು ಪರಂಪರೆಯ ಕುರಿತು ಪರಿಚಯಿಸುವ ದಿಸೆಯಲ್ಲಿ ಇಂತಹ ಉತ್ಸವಗಳು ಅತ್ಯಗತ್ಯ' ಎಂದು ಅಭಿಪ್ರಾಯಪಟ್ಟರು.

ಪ್ರಾಂಶುಪಾಲ ಡಾ.ಎಸ್.ಎನ್. ವೆಂಕಟೇಶ್, ಶೈಕ್ಷಣಿಕ ಮಂಡಳಿ ಸದಸ್ಯೆ ಗೋದಾಮಣಿ, ಎಂ.ಬಿ.ಎ ವಿಭಾಗದ ನಿರ್ದೇಶಕ ಡಾ.ವಿನಯ್, ಎಂ.ಕಾಂ ವಿಭಾಗದ ನಿರ್ದೇಶಕ ರಾಜೀವ್ ಪಿಳ್ಳೈ, ಪಿಯು ಕಾಲೇಜಿನ ಪ್ರಾಂಶುಪಾಲ ಪ್ರೊ.ಟಿ.ದೊಡ್ಡೇಗೌಡ, ಸಾಂಸ್ಕೃತಿಕ ಉತ್ಸವ ಸಮಿತಿಯ ಸಂಚಾಲಕಿ ಪಾವನ ಉಪಸ್ಥಿತರಿದ್ದರು.

ಮಕ್ಕಳನ್ನು ಒತ್ತಡದ ಕೂಪಕ್ಕೆ ನೂಕುವ ಮುನ್ನ.....

> ನಮ್ಮ ಮಕ್ಕಳ ಬಗ್ಗೆ ವ್ಯಾಮೋಹ ಇರುವುದು ತೀರಾ ಸಹಜ. ಅಂತೆಯೇ ಅವರು ಕೇವಲ ನಮ್ಮವರೇ ಆಗಿ ಉಳಿಯುವುದಿಲ್ಲ. ಅವರು ದೇಶದ, ವಿಶ್ವದ ಅಮೂಲ್ಯ ಸಂಪತ್ತಾಗಿ ರೂಪುಗೊಳ್ಳುತ್ತಾರೆ. ಒಳ್ಳೆಯ ಮಕ್ಕಳಿಂದ ಒಳ್ಳೆಯ ಸಮಾಜ, ಒಳ್ಳೆಯ ದೇಶ, ಒಳ್ಳೆಯ ಪ್ರಪಂಚ ನಿರ್ಮಾಣವಾಗುತ್ತದೆ.

ಸವಿತಾ ಯಾಜಿ

ಎಲ್ಲಾ ಪೋಷಕರಿಗೂ ತಮ್ಮ ಮಕ್ಕಳು ಓದಿನಲ್ಲಿ ಇತರ ಚಟುವಟಿಕೆಗಳಲ್ಲಿ ಎಲ್ಲರಿಗಿಂತ ಮುಂದಿರಬೇಕು ಎಂಬ ಆಸೆ ಇದ್ದೇ ಇರುತ್ತದೆ. ಮಕ್ಕಳ ಲಾಲನೆ-ಪಾಲನೆಯಲ್ಲಿ, ವಿದ್ಯಾಭ್ಯಾಸದಲ್ಲಿ ಪೋಷಕರ ಪಾತ್ರ ತುಂಬಾ ಮುಖ್ಯ. ಇವತ್ತಿನ ಜಂಜಡದ ಜೀವನದಲ್ಲಿ ಬೆಳಿಗ್ಗೆ ಎದ್ದ ಕೂಡಲೇ ಗಡಿಬಿಡಿಯಲ್ಲಿ ಶಾಲೆಗೆ ತಯಾರಾಗುವ ಮಕ್ಕಳು ಅಲ್ಲಿ 5ರಿಂದ 6 ತಾಸು ಪಾಠ ಕೇಳಿ, ಮನೆಗೆ ಮರಳಿದ ನಂತರ ಮತ್ತೆ ಮನೆಪಾಠಕ್ಕೆ ಹೋಗುತ್ತಾರೆ. ಎಲ್.ಕೆ.ಜಿ., ಯು.ಕೆ.ಜಿಯಿಂದಲೇ ಮನೆಪಾಠದ ಅವಶ್ಯಕತೆ ಇದೆಯೇ?

ತಂದೆ-ತಾಯಿಗಳ, ಕುಟುಂಬದವರ ನಡುವೆ ಆಟ ಆಡುತ್ತಾ ಬಾಲ್ಯವನ್ನು ಕಳೆಯಬೇಕಾದ ಮಗು ಪಾಲಕರ ಒತ್ತಾಯಕ್ಕೆ ಮಣಿದು, ತನ್ನ ಆಸೆ-ಆಕಾಂಕ್ಷೆಯನ್ನು ಬಲಿಕೊಟ್ಟು ತನಗೆ ಇಷ್ಟ ಇಲ್ಲದ ಚಟುವಟಿಕೆಯಲ್ಲಿ ಭಾಗವಹಿಸಿ ಬಾಲ್ಯವನ್ನು ಕಳೆದುಕೊಳ್ಳಬೇಕೆ?

ಹೆತ್ತವರು ತಮ್ಮ ಆಸಕ್ತಿ, ಅಭಿರುಚಿ, ಇಷ್ಟವನ್ನು ಮಗುವಿನ ಮೇಲೆ ಹೇರುತ್ತಾರೆ. ಮಗುವಿನ ಸಹಜ ಅಭಿರುಚಿಗಳನ್ನು ಅರಿತು, ಅದಕ್ಕೆ ತಕ್ಕುದಾದ ಪ್ರೋತ್ಸಾಹ ನೀಡಬೇಕು. ಕೈ ಹಿಡಿದು ನಡೆಸಬೇಕು, ಎಡವಿದರೆ ಕೈ ಹಿಡಿದು ಎತ್ತಬೇಕು. ಕ್ರಮೇಣ ತನ್ನ ದಾರಿಯನ್ನು ತೋರಿಸಿ ಮುಂದುವರೆಯಲು ಬಿಟ್ಟುಬಿಡಬೇಕು.

ಆದರೆ ಹೆತ್ತವರು ಮಾಡುವ ತಪ್ಪೇನೆಂದರೆ ಎಂಜಿನಿಯರ್, ಡಾಕ್ಟರ್ ಆಗಬೇಕೆಂದು ನಿರೀಕ್ಷಿಸುವುದು. ಮಕ್ಕಳಿಗೂ ತಮ್ಮ ವೃತ್ತಿಯನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಿ ಅವರನ್ನು ಪ್ರೋತ್ಸಾಹಿಸಬೇಕು.

ಮಕ್ಕಳು ಸೋತಾಗ, ಅವಮಾನಕ್ಕೆ ತುತ್ತಾದಾಗ, ಅನುತ್ತೀರ್ಣರಾದಾಗ ಹೆತ್ತವರು ಸಹಾನುಭೂತಿ ತೋರಬೇಕು. ಶಿಕ್ಷಿಸಬಾರದು. ಶಿಕ್ಷೆಯಿಂದಲೇ ಮಕ್ಕಳಿಗೆ ಒಳ್ಳೆಯ ವಿದ್ಯೆ ಬುದ್ಧಿ ಕಲಿಸಬಹುದು ಎಂಬ ತಪ್ಪು ಅಭಿಪ್ರಾಯವಿದೆ. ಹೆತ್ತವರು ಶಿಕ್ಷೆಯನ್ನು ಸಾಕಷ್ಟು ಕಡಿಮೆ ಮಾಡಿ ಸಂದರ್ಭ ಬಂದಾಗಲೆಲ್ಲ ಮಕ್ಕಳ ಸದ್ವರ್ತನೆಗಳನ್ನು ಕೊಂಡಾಡಿ ಉತ್ತೇಜನ ನೀಡಿ ಸುಧಾರಣೆಯಾಗುವಂತೆ ನೋಡಿಕೊಳ್ಳಬೇಕು.

ಓದು ಗರಿಷ್ಠ ಅಂಕ ತೆಗಿ, ಪ್ರಥಮ ಬಹುಮಾನ ತರಬೇಕು; ಇಲ್ಲವಾದರೆ ಮನೆಗೆ ಬರಬೇಡ ಎಂದು ಮಕ್ಕಳ ಮೇಲೆ ವಿಪರೀತ ಒತ್ತಡ ಹೇರಬಾರದು. ಯಶಸ್ಸಿನ ಭರವಸೆ ತುಂಬಿ, ಸೋಲಿನ ಭಯವನ್ನು ಮಕ್ಕಳ ಮನದಿಂದ ದೂರ ಮಾಡಿ, ನೀನೂ ಕಲಿಯಬಲ್ಲೆ, ನೀನಿದನ್ನು ಸಾಧಿಸಬಲ್ಲೆ ಎಂಬ ಭರವಸೆಯ ಭಾವವನ್ನು ಮಕ್ಕಳಲ್ಲಿ ತುಂಬಬೇಕು.

ಮಕ್ಕಳು ಗಳಿಸುವ ಅಂಕಗಳೇ ಸರ್ವಸ್ವವಲ್ಲ. ಅಂಕಗಳೇ ವಿದ್ಯಾರ್ಥಿಗಳ ಬುದ್ಧಿಶಕ್ತಿ, ಸೃಜನಶೀಲತೆಯನ್ನು ನಿರ್ಧರಿಸುವುದಿಲ್ಲ. ಹಾಗೆಯೇ ಇಬ್ಬರು ಮಕ್ಕಳ ನಡುವೆ ತುಲನೆ ಮಾಡುವುದು. ಸರಿಯಲ್ಲ. ಒಬ್ಬೊಬ್ಬರಲ್ಲೂ ಒಂದೊಂದು ವಿಶಿಷ್ಟ ಗುಣವಿರುತ್ತದೆ. ಅಂಕಗಳಿಗಿಂತ ಮುಖ್ಯವಾದದ್ದು ಯಶಸ್ವೀ ಜೀವನಕ್ಕೆ ಲೋಕಜ್ಞಾನ, ವ್ಯವಹಾರಜ್ಞಾನ, ಅನುಭವ ಎನ್ನುವುದನ್ನು ಪೋಷಕರು ಅರಿಯಬೇಕು.

ಅನೇಕ ಹೆತ್ತವರು ಶಾಲೆಗೆ ಸೇರಿಸಿದ ದಿನದಿಂದಲೇ ತಮ್ಮ ಮಕ್ಕಳು ಅದ್ಭುತವಾದ ಸಾಧನೆ ಮಾಡಬೇಕೆಂದು ನಿರೀಕ್ಷಿಸುತ್ತಾರೆ. ಪ್ರತಿಯೊಂದು ಪರೀಕ್ಷೆಯಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಬೇಕು; ಪ್ರತಿಯೊಂದು ಸ್ಪರ್ಧೆಯಲ್ಲೂ ಬಹುಮಾನಗಳನ್ನು ಗಳಿಸಬೇಕು ಎಂದು ಅಪೇಕ್ಷಿಸುತ್ತಾರೆ. ಆದರೆ ಸಾಧನೆಯ ಪ್ರಮಾಣವು ಎಲ್ಲಾ ಸಂದರ್ಭಗಳಲ್ಲಿ ಒಂದೇ ಬಗೆಯಾಗಿರುವುದಿಲ್ಲ.

ಕೆಲವು ಮಕ್ಕಳು ಬೇಗ ಬೇಗನೇ ಪ್ರಗತಿ ಸಾಧಿಸುತ್ತ ಅಸಾಧಾರಣ ಪ್ರತಿಭಾವಂತರೆನ್ನಿಸಿಕೊಂಡು ಆಮೇಲೆ ಒಮ್ಮೆಲೆ ರಂಗದಿಂದ ಕಣ್ಮರೆಯಾಗುವ, ಹೇಳ ಹೆಸರಿಲ್ಲದಂತಾಗಿರುವ ಉದಾಹರಣೆಗಳೂ ನಮ್ಮ ಮುಂದಿವೆ. ಮತ್ತೆ ಕೆಲವರು ಬಾಲ್ಯ ಕಾಲದಲ್ಲಿ ತೀರ ಸಾಮಾನ್ಯ ಮಟ್ಟದಲ್ಲಿದ್ದು ಹರೆಯಕ್ಕೆ ಬಂದ ಮೇಲೆ ವಿಶೇಷ ಸಾಧನೆ ಮಾಡುತ್ತಿರುವುದು ನಮ್ಮ ಕಣ್ಮುಂದಿವೆ. ಇದನ್ನು ಹಿರಿಯರು ಅರ್ಥಮಾಡಿಕೊಂಡು ಮಕ್ಕಳ ಪ್ರಗತಿ, ಸಾಧನೆ ಬಗ್ಗೆ ತಾಳ್ಮೆಯಿಂದ ಕಾಯಬೇಕು. ಇವತ್ತು ಬಿತ್ತಿದ ಬೀಜ ನಾಳೆಯೇ ಗಿಡವಾಗಿ ನಾಡಿದ್ದು ಫಲ ಕೊಡಬೇಕೆಂದರೆ ಹೇಗೆ? ಅಂತೆಯೇ ಮಕ್ಕಳು ಬೇಗನೆ ಸಾಧನೆ ಮಾಡಬೇಕೆಂದು ನಿರೀಕ್ಷಿಸಿ ಅವರ ಮೇಲೆ ಒತ್ತಡ ಹೇರಬಾರದು. ಅವರು ಸಹಜಗತಿಯಲ್ಲಿ ಅರಳುವುದಕ್ಕೆ ಸನ್ನಿವೇಶ ನಿರ್ಮಾಣ ಮಾಡುವುದಷ್ಟೇ ಪೋಷಕರ ಕರ್ತವ್ಯ.

ಟಿ.ವಿ, ಮೊಬೈಲ್‌ಗಳನ್ನು ನೋಡಲೇಬಾರದು ಎಂದು ಮಕ್ಕಳಿಗೆ ತಾಕೀತು ಮಾಡುವುದು ಸೂಕ್ತವಲ್ಲ. ಈ ಮಾಧ್ಯಮಗಳು ಅನೇಕ ಶೈಕ್ಷಣಿಕ ಮಹತ್ವದ ವಿಚಾರಗಳನ್ನು ಪ್ರಸಾರ ಮಾಡುತ್ತವೆ. ಯಾವುದನ್ನು ಎಷ್ಟು ಹೊತ್ತು ನೋಡಬೇಕು ಎಂಬುದನ್ನು ಹಿರಿಯರು ನಿರ್ಧರಿಸಬೇಕು. ಮಕ್ಕಳು ಓದುವ ಸಮಯದಲ್ಲಿ ಹಿರಿಯರೂ ನೋಡಬಾರದು.

ಕಾರ್ಯಕ್ರಮಗಳ ಇತಿಮಿತಿ ಅದರ ದುಷ್ಪರಿಣಾಮಗಳು ಇತ್ಯಾದಿಗಳ ಬಗ್ಗೆ ಮಕ್ಕಳ ಜೊತೆ ಚರ್ಚಿಸಬೇಕು. ಆದಷ್ಟು ಮಟ್ಟಿಗೆ ಮಕ್ಕಳಲ್ಲಿ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಬೇಕು. ಓದುಗಾರಿಕೆಯಿಂದ ಮಕ್ಕಳ ವಿಚಾರಶಕ್ತಿ ಹೆಚ್ಚಾಗುತ್ತದೆ ಎಂಬುದನ್ನು ತಿಳಿಸಬೇಕು.

ನಿತ್ಯ ಮಕ್ಕಳು ಶಾಲೆ ಮುಗಿಸಿ ಬಂದೊಡನೆ ಪೋಷಕರು ಒಂದರ್ಧಗಂಟೆ ಅವರ ಜೊತೆ ಕಾಲ ಕಳೆಯಬೇಕು. ಅವರ ಶಾಲೆ, ಶಿಕ್ಷಕರು, ಪಾಠಪ್ರವಚನಗಳು, ಆಟೋಟಗಳು, ಗೆಳೆಯರು ಇತ್ಯಾದಿಗಳ ಬಗ್ಗೆ ಕೇಳಿ ಅವರೊಪ್ಪಿಸುವ ವರದಿಯನ್ನು ತಾಳ್ಮೆಯಿಂದ ಆಲಿಸಬೇಕು. ಅವರ ಸಾಧನೆಗಳನ್ನು ಮೆಚ್ಚಿ ಕೊಂಡಾಡಬೇಕು. ಸೋಲಿನ, ಅಪಮಾನ ಆದಲ್ಲಿ ಅವರ ಜೊತೆ ಕುಳಿತು ಚರ್ಚಿಸಿ ಧೈರ್ಯ ತುಂಬಬೇಕು.

ಈಗಿನ ಸ್ಪರ್ಧಾತ್ಮಕ ಜಗತ್ತಿನ ಹಿಂದೆ ಬಿದ್ದಿರುವ ಪೋಷಕರು ಅನಗತ್ಯ ಒತ್ತಡ ಹಾಕುತ್ತಿರುವುದರಿಂದ ಮಕ್ಕಳು ಆತ್ಮಹತ್ಯೆಯಂಥ ಅಪಾಯಕಾರಿ ನಿರ್ಧಾರ ತೆಗೆದುಕೊಳ್ಳುತ್ತಿದ್ದಾರೆ. ಶೇಕಡ 90ರಷ್ಟು ಅಂಕ ಪಡೆದರೂ ಕಡಿಮೆ ಎಂಬ ಭಾವನೆ ಕೆಲವರಲ್ಲಿ ಬೇರೂರಿದೆ.

ಎಸ್ಸೆಸ್ಸೆಲ್ಸಿ, ಪಿಯುಸಿ ಪರೀಕ್ಷೆಯೇ ಅಂತಿಮವಲ್ಲ; ಅದರಾಚೆಗೂ ಜೀವನದ ಪರೀಕ್ಷೆಯೂ ಇದೆಯೆಂಬ ವಾಸ್ತವತೆಯನ್ನು ಪೋಷಕರಾದ ನಾವು ಅರಿತುಕೊಳ್ಳಬೇಕು.

ಮಕ್ಕಳನ್ನು ಹೆದರಿಸಿ ಬೆದರಿಸಿ ಸರಿ ದಾರಿಗೆ ತರುವ ಒತ್ತಡಕ್ಕಿಂತ ಪ್ರೀತಿ ವಾತ್ಸಲ್ಯದ ಮಾತುಗಳು ಅತಿ ಅವಶ್ಯ. ಇದು ಮಕ್ಕಳ ಪೋಷಕರಾಗಬೇಕಾದವರಿಗೆ ಇರುವ ಮೊದಲ ಅರ್ಹತೆ. ಉತ್ತಮ ಮಕ್ಕಳು ಬೇಕೆಂದಲ್ಲಿ ಉತ್ತಮ ಪೋಷಕರು ನಾವಾಗೋಣ. ❖

ಮಕ್ಕಳನ್ನು ಅರಿಯುವುದು ಅಂದರೆ...

1. State, CBSE, ICSEಗೆ ಸೇರಿಸಿ ತಮ್ಮ ಮಕ್ಕಳು ತುಂಬಾ ಬುದ್ಧಿವಂತರಾಗಬೇಕು ಎನ್ನುವ ಹಂಬಲ. ಯಾವುದಕ್ಕೇ ಸೇರಿಸುವ ಮೊದಲು ಮಕ್ಕಳ ಬುದ್ಧಿಮತ್ತೆಯನ್ನು ನೋಡಿ ಸೇರಿಸಿ. ಕ್ಲಿಷ್ಟ ಪಠ್ಯದ ಒತ್ತಡದಿಂದ ಕೆಲವೊಂದು ಮಕ್ಕಳು ಮಾನಸಿಕವಾಗಿ ಕುಗ್ಗಿರುವ ಉದಾಹರಣೆ ಇದೆ.
2. ಟ್ಯೂಷನ್‌ಗೆ ಹೋಗಲು ಮಗುವಿಗೆ ಆಸಕ್ತಿ ಇದೆಯೇ ವಿಚಾರಿಸಿ.
3. ಸಂಗೀತ, ನೃತ್ಯ, ಈಜು, ಅಬಾಕಸ್ ಇವುಗಳಲ್ಲಿ ಮಗುವಿನ ಅಭಿರುಚಿ ಯಾವುದರಲ್ಲಿ ಎಂಬುದನ್ನು ಅರಿತು ಮುಂದುವರಿಸಿ.
4. ಮಕ್ಕಳನ್ನು ವಸ್ತುಗಳಂತೆ ಕಾಣಬೇಡಿ. ಪದೇ ಪದೇ ಮಕ್ಕಳಿಗೆ ಆಸಕ್ತಿ ಇಲ್ಲದ ವಿಷಯದಲ್ಲಿ ಒತ್ತಡ ಹಾಕಬೇಡಿ.
5. ಸ್ವಲ್ಪ ಸಮಯ ಅವರ ಪಾಡಿಗೆ ಆಡಲು, ಓದಲು, ಮೌನವಾಗಿರಲು ಬಿಡಿ. ಮಕ್ಕಳಿಗೂ ಖಾಸಗಿತನದ ಅಗತ್ಯವಿರುತ್ತದೆ..
6. ಮಕ್ಕಳನ್ನು ಅತಿಯಾದ ಶಿಸ್ತಿನಿಂದ ಅಥವಾ ಅತಿ ಪ್ರೀತಿ ತೋರಿಸಿ ಸ್ವೇಚ್ಛೆಗೆ ಆಸ್ಪದ ಕೊಡಬೇಡಿ.
7. ಎಲ್ಲ ಮಕ್ಕಳ ಬುದ್ಧಿಮತ್ತೆ ಒಂದೇ ರೀತಿ ಇರುವುದಿಲ್ಲ. ಹಾಗಾಗಿ ಬೇರೆ ಮಕ್ಕಳಂತೆ ನೀನೂ ಕಲಿಯಬೇಕು ಎಂಬ ಒತ್ತಡ ತರದಿರಿ.
8. ಎಸ್ಸೆಸ್ಸೆಲ್ಸಿ, ಪಿಯುಸಿ ನಂತರದ ಕೋರ್ಸ್ ಆಯ್ಕೆಗೆ ಅವರಿಗೂ ಅವಕಾಶ ಕೊಟ್ಟು ಚರ್ಚಿಸಿ, ಮುಂದುವರಿಯಬೇಕು.
9. ಯಾವ ಕಾಲೇಜು, ಯಾವ ಊರು ಎಲ್ಲವನ್ನೂ ಮಕ್ಕಳ ಇಚ್ಛೆಗನುಗುಣವಾಗಿ ಬಿಟ್ಟುಬಿಡಿ.
10. ಮಕ್ಕಳು ಕಾಲೇಜು ನಂತರ ಯಾವುದೇ ವೃತ್ತಿಯನ್ನು ಆಯ್ಕೆ ಮಾಡಿಕೊಂಡರೂ ಅವರನ್ನು ಪ್ರೋತ್ಸಾಹಿಸಿ, ಗೌರವಿಸಿ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಸಮಾಜವಿಜ್ಞಾನ

ಅಧ್ಯಾಯ:1 ಭಾರತಕ್ಕೆ ಯುರೋಪಿಯನ್ನರ ಆಗಮನ

8) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಎಲ್ಲಿಗೆ ಬಂದು ತಲುಪಿದನು.?

ಎ) ತಿರುವನಂತಪುರ ಬಿ) ಕಾಪ್ಪಡ್
ಸಿ) ಕೊಚ್ಚಿನ್ ಡಿ) ಮೇಲಿನ ಯಾವುದೂ ಅಲ್ಲ

9) ಸಮುದ್ರದ ಮೇಲಿನ ಏಕಸ್ವಾಮ್ಯಕ್ಕಾಗಿ ನೌಕಾಶಕ್ತಿಯನ್ನು ಬಲಪಡಿಸುವ 'ನೀಲಿ ನೀರಿನ ನೀತಿ' (Blue Water Policy)ಯನ್ನು ಯಾರು ಜಾರಿಗೆ ತಂದನು?

ಎ) ವಾಸ್ಕೊಡಗಾಮ ಬಿ) ಆಲ್ಫೋನ್ಸೊ–ಡಿ–ಅಲ್ಬುಕರ್ಕ್
ಸಿ) ಡೂಪ್ಲೆ ,ಡಿ) ಫ್ರಾನ್ಸಿಸ್ಕೊ ಡಿ ಅಲ್ಮೇಡ

10) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?

ಎ) ರಾಮ ವರ್ಮಾ ,ಬಿ) ಮಾರ್ತಾಂಡ ವರ್ಮ
ಸಿ) ಅನಂತ ವರ್ಮಾ ಡಿ) ಮೇಲಿನ ಯಾರೂ ಅಲ್ಲ

ಉತ್ತರ: 1)ಡಿ 2)ಎ 3)ಬಿ 4)ಎ 5)ಸಿ 6)ಬಿ 7)ಸಿ 8)ಬಿ 9)ಡಿ 10)ಬಿ

I. ಖಾಲಿ ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ಭರ್ತಿ ಮಾಡಿ.

1) ಬಂಗಾಳದಲ್ಲಿ ದ್ವಿ ಪ್ರಭುತ್ವವನ್ನು ಜಾರಿಗೆ ತಂದವನು.......
2) 17ನೇ ಶತಮಾನದ ಭಾರತದಲ್ಲಿ ಯುರೋಪಿನ ವ್ಯಾಪಾರವು ....ಏಕಸ್ವಾಮ್ಯತೆಗೆ ಒಳಪಟ್ಟಿತ್ತು.
3) ಮೊದಲನೇ ಕರ್ನಾಟಿಕ್ ಯುದ್ಧವು ಇಂಗ್ಲಿಷರು ಮತ್ತು .... ರ ನಡುವೆ ನಡೆಯಿತು.
4) ಫ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸೋಲಿಸಿದ ಇಂಗ್ಲಿಷ್ ಸೇನಾಧಿಕಾರಿ ....
5) ಪ್ಲಾಸಿ ಕದನದಲ್ಲಿ ಇಂಗ್ಲಿಷ್ ಸೇನೆಯ ನೇತೃತ್ವ ವಹಿಸಿದ್ದವನು.................

ಉತ್ತರ:– 1) ರಾಬರ್ಟ್ ಕ್ಲೈವ್ 2) ಇಟಲಿ 3) ಫ್ರೆಂಚ್ 4) ಸರ್‌ಐರ್‌ಕೂಟ್ 5) ರಾಬರ್ಟ್ ಕ್ಲೈವ್

II. ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

1) ಕಾಲಾನುಕ್ರಮದಲ್ಲಿ ಜೋಡಿಸಿ

1) ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು
2) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.
3) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು
4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

ಕಾಲಾನುಕ್ರಮದಲ್ಲಿ ಜೋಡಿಸಿ

ಉತ್ತರ:– 1) ಲಿಸ್ಬನ್‌ನಿಂದ ಹೊರಟ ಪೋರ್ಚುಗಲ್ ನಾವಿಕ ವಾಸ್ಕೊಡಗಾಮನು 1498ರಲ್ಲಿ ಭಾರತದ ಪಶ್ಚಿಮ ಕರಾವಳಿ ತೀರದ ಕಲ್ಲಿಕೋಟೆ ಸಮೀಪ ಬಂದು ತಲುಪಿದನು
2) 1617ರಲ್ಲಿ ಇಂಗ್ಲೆಂಡಿನ ರಾಜ ಒಂದನೆಯ ಜೇಮ್ಸ್‌ನ ರಾಯಭಾರಿಯಾಗಿ ಜಹಾಂಗೀರನ ಆಸ್ಥಾನಕ್ಕೆ ಬಂದನು
3) ಇಂಗ್ಲೆಂಡಿನ ರಾಜಕುಮಾರ ಎರಡನೇ ಚಾರ್ಲ್ಸ್‌ನು ಬಾಂಬೆಯನ್ನು 1668ರಲ್ಲಿ ಕಂಪನಿಗೆ ವಾರ್ಷಿಕ 10 ಪೌಂಡುಗಳ ಬಾಡಿಗೆಗೆ ವಹಿಸಿಕೊಟ್ಟನು.
4) ಮೀರ್ ಖಾಸಿಂ ನೇತೃತ್ವದ ಮೂರೂ ಸಂಯುಕ್ತ ಸೇನೆಗಳು ಹೆಕ್ಟರ್ ಮನ್ರೋ ನೇತೃತ್ವದ ಬ್ರಿಟಿಷ್ ಸೇನೆಯನ್ನು 1764ರಲ್ಲಿ ಬಕ್ಸರ್ ಎಂಬಲ್ಲಿ ಮುಖಾಮುಖಿಯಾದವು.

2) ಕಾಲಾನುಕ್ರಮದಲ್ಲಿ ಜೋಡಿಸಿ

1) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು.
2) ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.
3) ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು
4) ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಆಲ್ಫೋನ್ಸೊ–ಡಿ–ಅಲ್ಬುಕರ್ಕ್ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು

ಉತ್ತರ:–
1) 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಆಲ್ಫೋನ್ಸೊ–ಡಿ–ಅಲ್ಬುಕರ್ಕ್ ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು
2) ಫ್ರೆಂಚ್ ಈಸ್ಟ್ ಇಂಡಿಯಾ ಕಂಪನಿಯು ಆರಂಭವಾಯಿತು. (1664)
3) ಡೂಪ್ಲೆ ಪಾಂಡಿಚೇರಿಯ ಗವರ್ನರ್ ಆಗಿ ಬಂದನು (1746)
4) ಯುವ ನವಾಬನಾದ ಸಿರಾಜ್–ಉದ್–ದೌಲನಿಗೂ ಮತ್ತು ಬ್ರಿಟಿಷರಿಗೂ 1757ರಲ್ಲಿ ಇತಿಹಾಸ ಪ್ರಸಿದ್ಧ ಪ್ಲಾಸಿ ಕದನ ನಡೆಯಿತು.

ಬಿಟ್ಟ ಸ್ಥಳ ತುಂಬಿರಿ

1) ಭಾರತದಲ್ಲಿ ಪೋರ್ಚುಗೀಸ್ ಸಾಮ್ರಾಜ್ಯದ ನಿಜವಾದ ಸ್ಥಾಪಕ ....
ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

2 1510ರಲ್ಲಿ ಬಿಜಾಪುರದ ಸುಲ್ತಾನನಿಂದ ಗೋವಾವನ್ನು ಗೆದ್ದುಕೊಂಡು ಪೋರ್ಚುಗೀಸರ ಆಡಳಿತ ಕೇಂದ್ರವಾಗಿ ಪರಿವರ್ತಿಸಿದವನು ....
ಉತ್ತರ:– ಆಲ್ಫೋನ್ಸೊ–ಡಿ–ಅಲ್ಬುಕರ್ಕ್

3) ....ರಲ್ಲಿ ಡಚ್ ಈಸ್ಟ್ ಇಂಡಿಯಾ ಕಂಪನಿಯು ಭಾರತಕ್ಕೆ ವ್ಯಾಪಾರಕ್ಕಾಗಿ ಬಂತು.
ಉತ್ತರ:– 1602

4) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ....
ಉತ್ತರ:– ಮಾರ್ತಾಂಡ ವರ್ಮ

7) ಇಂಗ್ಲೆಂಡಿನ ಎಲಿಜಬೆತ್ ರಾಣಿಯು ಸಾ.ಶ. 1600 ಡಿಸೆಂಬರ್ 31ರಂದು ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಗೆ .... ಗಳೊಂದಿಗೆ ವ್ಯಾಪಾರ ನಡೆಸಲು 15 ವರ್ಷಗಳ ಪರವಾನಗಿ ನೀಡಿದಳು.
ಉತ್ತರ:– ಪೂರ್ವದೇಶ

8) ಇಂಗ್ಲಿಷರು..........................ಎಂಬಲ್ಲಿ ಸೆಂಟ್ ಜಾರ್ಜ್ ಫೋರ್ಟ್ ಎಂಬ ಬಲಿಷ್ಠ ಕೋಟೆಯನ್ನು ಕಟ್ಟಿದರು
ಉತ್ತರ:– ಮದ್ರಾಸ್ (ಮುಂದುವರಿಯುವುದು)

II PUC MATHS

DIFFERENTIABILITY

9. (iii) $\sin(e^x \log x)$

$$\text{Soln}:- \frac{d}{dx}\sin(e^x.\log x)$$
$$=\cos(e^x \log x).\frac{d}{dx}(e^x \log x)$$
$$\Rightarrow \cos(e^x \log x)\left\{e^x \frac{d}{dx}\log x + \log x.\frac{d}{dx}e^x\right\}$$

(.......Contd)

$$\Rightarrow \cos(e^x \log x)\left\{e^x\left(\frac{1}{x}\right)+(\log x)e^x\right\}$$
$$\Rightarrow e^x.\cos(e^x \log x)\left(\frac{1}{x}+\log x\right)$$

iv) $\frac{d}{dx}\frac{e^x+\log x}{\sin(3x)}$

$$\text{Soln}:- \frac{d}{dx}\frac{e^x+\log x}{\sin(3x)}$$
$$=\frac{(\sin 3x)\left(e^x+\frac{1}{x}\right)-(e^x+\log x)(\cos 3x)(3)}{(\sin 3x)^2}$$
$$=\frac{(\sin 3x)\left(\frac{xe^x+1}{x}\right)-3(e^x+\log x)\cos 3x}{\sin^2 3x}$$
$$=\frac{(\sin 3x)(xe^x+1)-3x(e^x+\log x)\cos 3x}{x\sin^2 3x}$$

10. Differentiate w.r.t. x:

i) $\log_{\sin x}^{\cos x}$ ii) $\log \sin\sqrt{x^2+1}$
iii) $\sin\{\sin(\log 3x)\}$

Soln :— i) $\log_{\sin x}^{\cos x}$

We know that $\log_n m = \frac{\log_e m}{\log_e n}$

$$\therefore \frac{d}{dx}\text{Log}_{\sin x}^{\cos x} = \frac{d}{dx}\left\{\frac{\log\cos x}{\log\sin x}\right\}$$
$$\Rightarrow \frac{\log\sin x.\frac{d}{dx}\log\cos x - \log\cos x\frac{d}{dx}\log\sin x}{(\log\sin x)^2}$$
$$\Rightarrow \frac{\left[(\log\sin x)\left(\frac{1}{\cos x}\right)(-\sin x) - (\log\cos x)\frac{1}{\sin x}(\cos x)\right]}{(\log\sin x)^2}$$
$$\Rightarrow \frac{-\{\tan x\log\sin x + \cot x\log\cos x\}}{(\log\sin x)^2}$$

ii) $\frac{d}{dx}\log\left(\sin\sqrt{x^2+1}\right)$

$$\text{Soln}:- \frac{d}{dx}\log\left(\sin\sqrt{x^2+1}\right)$$
$$=\frac{1}{\sin\sqrt{x^2+1}}\frac{d}{dx}\sin\sqrt{x^2+1}$$
$$\Rightarrow \frac{1}{\sin\sqrt{x^2+1}}\left\{\cos\sqrt{x^2+1}\right\}.\frac{d}{dx}(x^2+1)^{1/2}$$
$$\Rightarrow \left(\cot\sqrt{x^2+1}\right)\frac{1}{2}(x^2+1)^{-1/2}\frac{d}{dx}(x^2+1)$$
$$=\frac{\cot\sqrt{x^2+1}}{2\sqrt{x^2+1}}.(2x+0)$$
$$\Rightarrow \frac{x\cot\sqrt{x^2+1}}{\sqrt{x^2+1}}$$

iii) $\sin\{\sin(\log 3x)\}$

$$\text{Soln}:- \frac{d}{dx}\sin\{\sin(\log 3x)$$
$$=\cos\{\sin(\log 3x)\}.\frac{d}{dx}\sin(\log 3x)$$
$$\Rightarrow \cos\{\sin(\log 3x)\}.\cos(\log 3x)\frac{d}{dx}\log(3x)$$
$$=\cos\{\sin(\log 3x)\}.\cos(\log 3x)\frac{1}{3x}.\frac{d}{dx}(3x)$$
$$=\cos\{\sin(\log 3x)\}.\cos(\log 3x)\left(\frac{1}{3x}\right).(3)$$
$$=\frac{1}{x}\cos\{\sin(\log 3x)\}\cos(\log 3x).$$

Answer the following:-

1. If $y=\sqrt{\frac{1+e^x}{1-e^x}}$, show that $\frac{dx}{dy}=\frac{e^x}{(1-e^x)\sqrt{1-e^{2x}}}$

$$\text{oln}:- \frac{d}{dx}y=\frac{d}{dx}\left(\frac{1+e^x}{1-e^x}\right)^{1/2}$$
$$=\frac{1}{2}\left(\frac{1+e^x}{1-e^x}\right)^{-1/2}.\frac{d}{dx}\frac{1+e^x}{1-e^x}$$
$$\Rightarrow \frac{1}{2}\sqrt{\frac{1+e^x}{1-e^x}}.\left\{\frac{(1-e^x)\frac{d}{dx}(1+e^x)-(1+e^x)\frac{d}{dx}1-e^x}{(1-e^x)^2}\right\}$$

(Contd......)

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

ಬಕ್ರೀದ್: ಭಕ್ತಿ ತ್ಯಾಗಗಳ ಅನುಸಂಧಾನ

• ಅಬ್ದುಲ್ ರಹಿಮಾನ್

ಪ್ರವಾದಿ ಇಬ್ರಾಹಿಂ ಅವರ ಜೀವನದಲ್ಲಿ ನಡೆದ ಘಟನೆಗಳನ್ನು ಸ್ಮರಿಸುವ ಹಬ್ಬವಾಗಿದೆ ಬಕ್ರೀದ್ ಅಥವಾ ಈದ್-ಉಲ್- ಅದಾ. ಅವರ ತ್ಯಾಗ, ಸಹನೆ, ಧರ್ಮನಿಷ್ಠೆಯನ್ನು ಕೊಂಡಾಡುವ ಸಲುವಾಗಿಯೇ ಈ ಅವಧಿಯಲ್ಲಿ ಮಕ್ಕಾಗೆ ತೆರಳುವ ಮುಸ್ಲಿಮರು, ಇಸ್ಲಾಮ್‌ನ ಐದು ಕಡ್ಡಾಯ ಆರಾಧನೆಗಳಲ್ಲಿ ಒಂದಾಗಿರುವ 'ಹಜ್' ಕರ್ಮವನ್ನು ನಿರ್ವಹಿಸುತ್ತಾರೆ. ಇಸ್ಲಾಮಿಕ್ ಕ್ಯಾಲೆಂಡರ್‌ನ ಅಂತಿಮ ತಿಂಗಳಾದ 'ದುಲ್ ಹಿಜ್ಜಾ'ದ 10ನೇ ದಿನದಂದು ಬಕ್ರೀದ್ ಆಚರಿಸಲಾಗುತ್ತದೆ. ಆ ದಿನ ಪ್ರತಿಯೊಬ್ಬರೂ 'ಲಬ್ಬೈಕಲ್ಲಾಹುಮ್ಮ ಲಬ್ಬೈಕ್' ಎನ್ನುವ ಮಂತ್ರ ಜಪಿಸುತ್ತಾರೆ. ಮಸೀದಿಯ ಮಿನಾರಗಳಲ್ಲಿ ಸಂಭ್ರಮದ ತರಂಗಗಳು ಮೊಳಗುತ್ತವೆ.

ವಾರ್ಧಕ್ಯದಲ್ಲಿ ಮಡಿಲಿಗೆ ಬಿದ್ದ ಮಗು ಇಸ್ಮಾಯಿಲರನ್ನು ತಾಯಿ ಹಾಜರಾ ಸಮೇತ ಜನವಾಸವಿಲ್ಲದ ಅಂದಿನ ಮಕ್ಕಾ ಮರುಭೂಮಿಯ ಕಾಡಿನಲ್ಲಿ ಬಿಟ್ಟು ಬರಬೇಕು ಎನ್ನುವ ದೇವಸಂದೇಶವನ್ನು ಇಬ್ರಾಹಿಂ ವಿಧೇಯರಾಗಿ ಪಾಲಿಸುತ್ತಾರೆ. ತಂದಿದ್ದ ಅಲ್ಪ ಖರ್ಜೂರ ಹಾಗೂ ನೀರು ಖಾಲಿಯಾಗಿ, ದಾಹದಿಂದ ಪುಟ್ಟ ಮಗು ಇಸ್ಮಾಯಿಲ್ ಕಾಲನ್ನು ನೆಲಕ್ಕೆ ಬಡಿಯುತ್ತಿದ್ದರೆ, ತಾಯಿ ಹಾಜರಾ ನೀರು ಅರಸಿ ಸಫಾ-ಮರ್‌ವಾ ಎಂಬ ಬೆಟ್ಟಗಳ ನಡುವೆ ಓಡುತ್ತಾರೆ. ನೀರು ಸಿಗದೆ ನಿರಾಸೆಯಿಂದ ಹಿಂದಿರುಗುವಾಗ ಅಲ್ಲಿನ ದೃಶ್ಯವನ್ನು ಕಂಡು ಹಾಜರಾ ಚಕಿತರಾಗುತ್ತಾರೆ. ಮಗುವಿನ ಕಾಲ ಬುಡದಲ್ಲಿ ನೀರು ಒಂದೇ ಸಮನೆ ಒಸರುತ್ತಿದೆ! 'ಝುಂ ಝುಂ'.. (ನಿಲ್ಲು..ನಿಲ್ಲು) ಹಾಜರಾರ ಬಾಯಲ್ಲಿ ಉದ್ಗಾರ. ಅಂದು ಮರುಭೂಮಿಯಲ್ಲಿ ಚಿಮ್ಮಿದ ನೀರು ಇಂದಿಗೂ ಬತ್ತದೆ ಇರುವುದು ವಿಶೇಷ. ಈ ನೀರು ಮುಸಲ್ಮಾನರಿಗೆ ಪವಿತ್ರ ಜಲ. ಅದರಲ್ಲಿ ರೋಗಶಮನದ ಗುಣವಿದೆ ಎನ್ನುವುದು ವಿಶ್ವಾಸ. ಹಾಜರಾರ ಆ ಓಟವನ್ನು ನೆನಪಿಸಲೋಸುಗ ಹಜ್‌ನ ಪ್ರಕ್ರಿಯೆಯಲ್ಲಿ ಸಫಾ-ಮರ್‌ವಾ ಬೆಟ್ಟಗಳ ನಡುವೆ ಓಡುವುದು ಕಡ್ಡಾಯ. ಅಂದು ಚಿಮ್ಮಿದ ನೀರು ಅರಬ್ ನಾಗರಿಕತೆಯ ಉಗಮಕ್ಕೂ ಕಾರಣವಾಯಿತು.

ಜೀವನವೇ ಪರೀಕ್ಷೆಯಾಗಿದ್ದ ಇಬ್ರಾಹಿಂ ಅವರಿಗೆ ಮತ್ತೊಂದು ಸಂಕಷ್ಟದ ಸಮಯ. ಹದಿಮೂರು ವರ್ಷದ ಮಗ ಇಸ್ಮಾಯಿಲರನ್ನು ಬಲಿಕೊಡಬೇಕೆನ್ನುವ ದೇವಾಜ್ಞೆ. ಅಪ್ರತಿಮ ದೈವಭಕ್ತರಾಗಿದ್ದ ಇಬ್ರಾಹಿಂ ದೇವನ ಆಜ್ಞೆ ಮುಂದೆ ಪುತ್ರವಾತ್ಸಲ್ಯ ಮಿಗಿಲಲ್ಲವೆಂದು ಕಂದನ ಕತ್ತಿಗೆ ಕತ್ತಿ ಇಡಲು ಅಣಿಯಾದರು! ಮಗನನ್ನು ಬಲಿ ಕೊಡಲು ಕರೆದುಕೊಂಡು ಹೋಗುವಾಗ ಪ್ರಲೋಭನೆಗೆ ಒಳಪಡಿಸಲು ಬಂದ ಪಿಶಾಚಿಗೆ ಅಂದು ಇಸ್ಮಾಯಿಲರು ಕಲ್ಲು ಬಿಸಾಡಿದ್ದರ ಸ್ಮರಣೆಗಾಗಿ, ಹಜ್ ಕರ್ಮದಲ್ಲಿ ಕಲ್ಲೆಸೆಯುವ ಪ್ರಕ್ರಿಯೆ ಇದೆ.

ಬಂಡೆಯೊಂದರ ಮೇಲೆ ಮಲಗಿಸಿ ಮಗನನ್ನು ಬಲಿ ನೀಡಲು ಇಬ್ರಾಹಿಂ ಅವರು ಮುಂದಾಗುತ್ತಾರೆ. ಆದರೆ ಕತ್ತಿ ಹರಿಯುತ್ತಿಲ್ಲ. ಆಗ ದೇವದೂತ ಜಿಬ್ರೀಲ್ ಪ್ರತ್ಯಕ್ಷಗೊಂಡು 'ನೀವು ಜಯಶಾಲಿಯಾಗಿದ್ದೀರಿ. ನನಗೆ ಬೇಕಾದುದು ರಕ್ತವೋ ಮಾಂಸವೋ ಅಲ್ಲ; ನಿಮ್ಮೊಳಗಿನ ಭಕ್ತಿ. ನೀವು ಇದನ್ನು ಬಲಿಯರ್ಪಿಸಿ' ಎಂಬ ಅಲ್ಲಾಹನ ಸಂದೇಶವನ್ನೂ ಜೊತೆಗೆ ಆಡೊಂದನ್ನೂ ನೀಡುತ್ತಾರೆ. ಇದರ ಸಂಕೇತವಾಗಿ ಬಕ್ರೀದ್‌ಗೆ ಮೃಗಗಳನ್ನು ಬಲಿಕೊಡಲಾಗುತ್ತದೆ. ಇದನ್ನೇ 'ಉಳುಹಿಯ್ಯತ್' ಅರ್ಥಾತ್ 'ಕುರ್ಬಾನಿ' ಎನ್ನುತ್ತಾರೆ. ಆಡುಗಳನ್ನು ಹೆಚ್ಚಾಗಿ ಬಲಿ ಕೊಡುವುದರಿಂದ ಈ ಹಬ್ಬಕ್ಕೆ 'ಬಕ್ರೀದ್' ಎಂಬ ಹೆಸರು ಬಂದಿದೆ.

ಇಂದು ಬಕ್ರೀದ್

ಬಕ್ರೀದ್‌ನ ಹಿಂದಿನ ದಿನ 'ಅರಫಾ ದಿನ'ಕ್ಕೆ ಭಾರಿ ಮಹತ್ವವಿದೆ. ಅಂದು ಹಜ್‌ಗೆ ತೆರಳಿದ ಕೋಟ್ಯಂತರ ಮಂದಿ ಅರಫಾ ಮೈದಾನದಲ್ಲಿ ಒಗ್ಗೂಡಿ ಸಾಮೂಹಿಕ ಪ್ರಾರ್ಥನೆ ನೆರವೇರಿಸುತ್ತಾರೆ. ಇದು ವಿಶ್ವದ ಅತಿ ದೊಡ್ಡ ಸಂಗಮಗಳಲ್ಲಿ ಒಂದು. ಅಂದು ವ್ರತವಿರುವುದು ಪುಣ್ಯದಾಯಕವಾದುದು ಎನ್ನುವುದು ಮುಸ್ಲಿಮರ ನಂಬಿಕೆ. 14 ಶತಮಾನಗಳ ಹಿಂದೆ ಪ್ರವಾದಿ ಮೊಹಮ್ಮದ್ ಪೈಗಂಬರರು, ತಮ್ಮ ಜೀವನದ ಕೊನೆಯ ಹಜ್ ನೆರವೇರಿಸಿ ಈ ಮೈದಾನದಲ್ಲಿ ಮಾಡಿದ ಭಾಷಣಕ್ಕೆ ಇಸ್ಲಾಮಿನಲ್ಲಿ ಮಹತ್ತರ ಸ್ಥಾನವಿದೆ. ಹಜ್ ವೇಳೆ ಇಬ್ರಾಹಿಂ ಅವರು ಹಾಗೂ ಇಸ್ಮಾಯಿಲರು ಪುನರುಜ್ಜೀವನಗೊಳಿಸಿದ ಕಾಬಾಗೆ ಹಜ್ ಯಾತ್ರಿಗಳು ಪ್ರದಕ್ಷಿಣೆ ಹಾಕುತ್ತಾರೆ; ದೇವಸ್ಮರಣೆಯಲ್ಲಿ ತಲ್ಲೀನರಾಗುತ್ತಾರೆ.

ತ್ಯಾಗ, ಸಹನೆಗಿಂತ ಮಿಗಿಲಾದುದ್ದು ಯಾವುದೂ ಇಲ್ಲ. ದೈವಭಕ್ತಿಯೇ ಪರಮೋಚ್ಚ ಎನ್ನುವುದನ್ನು ಪ್ರವಾದಿ ಇಬ್ರಾಹಿಂ ಅವರ ಜೀವನದ ಮೂಲಕ ತಿಳಿಯಪಡಿಸಲಾಗಿದೆ. ಅದಕ್ಕಾಗಿಯೇ ಇಸ್ಲಾಮಿನ ಪ್ರಮುಖ ಆರಾಧನೆಗಳಾದ ನಮಾಜ್ ಹಾಗೂ ಹಜ್‌ನಲ್ಲಿ ಅವರನ್ನು ನೆನಪಿಸಿಕೊಳ್ಳುವುದು ಕಡ್ಡಾಯ. ❖

ಸುದ್ದಿ 2 ನಿಮಿಷ

ಸ್ವತಂತ್ರ ಧರ್ಮ ಮಾನ್ಯತೆಗೆ ಮರಳಿ ಪ್ರಯತ್ನ: ಎಸ್.ಎಂ. ಜಾಮದಾರ

ಕೊಪ್ಪಳ: 'ಲಿಂಗಾಯತ ಸ್ವತಂತ್ರ ಧರ್ಮ ಮಾನ್ಯತೆ ಗಳಿಸಲು ರಾಜ್ಯ ಹಾಗೂ ಕೇಂದ್ರ ಸರ್ಕಾರಕ್ಕೆ ಮತ್ತೊಮ್ಮೆ ಮನವರಿಕೆ ಮಾಡಿಕೊಡಲಾಗುವುದು. ಇನ್ನೊಂದು ತಿಂಗಳಲ್ಲಿ ಮರಳಿ ಮನವಿ ಸಲ್ಲಿಸಲಾಗುವುದು' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ಹೇಳಿದರು.

ಇಲ್ಲಿ ನಡೆದ ಮಹಾಸಭಾದ ಕಾರ್ಯಕಾರಿ ಸಮಿತಿ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಲಿಂಗಾಯತದಲ್ಲಿ ದಲಿತರು, ಎಸ್.ಟಿಗಳು ಇದ್ದಾರೆ. ಲಿಂಗಾಯತರಿಗೆ ಸ್ವತಂತ್ರ ಧರ್ಮದ ಮಾನ್ಯತೆ ನೀಡಿದರೆ ಹಲವು ಸೌಲಭ್ಯಗಳು ನಿಲ್ಲುತ್ತವೆ ಎಂದು ಕೇಂದ್ರ ಕಾರಣ ನೀಡಿದೆ. ಬೌದ್ಧ ಧರ್ಮದಲ್ಲಿರುವ ಬಹುತೇಕರು ದಲಿತರು. ಅವರಿಗೆ ಸೌಲಭ್ಯ ನಿಂತಿಲ್ಲ. ಹೀಗಾಗಿ ಸ್ವತಂತ್ರ ಧರ್ಮ ಮಾನ್ಯತೆ ನಿರಾಕರಿಸಿ ಕೇಂದ್ರ ನೀಡಿದ ಕಾರಣ ಸರಿಯಲ್ಲ' ಎಂದು ಅಭಿಪ್ರಾಯಪಟ್ಟರು.

'ಎಲ್ಲ ವೀರಶೈವರು ಲಿಂಗಾಯತರು. ಆದರೆ ಎಲ್ಲ ಲಿಂಗಾಯತರು ವೀರಶೈವರಲ್ಲ. ಐದಾರು ವರ್ಷಗಳ ಹಿಂದೆಯಷ್ಟೇ ನಮ್ಮ ಸಂಘಟನೆ ಆರಂಭಿಸಲಾಗಿದ್ದು ಸ್ವತಂತ್ರ ಧರ್ಮಕ್ಕಾಗಿ ಹೋರಾಟ ನಿರಂತರವಾಗಿರುತ್ತದೆ. ರಾಜ್ಯದ ಎಲ್ಲ ಕಡೆಯೂ ಆದಷ್ಟು ಬೇಗನೆ ಸಾಂಸ್ಥಿಕ ಚುನಾವಣೆಗಳನ್ನು ನಡೆಸುತ್ತೇವೆ. ಜಿಲ್ಲಾಮಟ್ಟದಲ್ಲಿ ಹೊಸ ಘಟಕಗಳನ್ನು ಪ್ರಾರಂಭಿಸುತ್ತೇವೆ' ಎಂದರು.

'ಅಂತರ್ಜಾತಿ ವಿವಾಹ ಹೆಚ್ಚಾಗಬೇಕು'

ವಿಜಯಪುರ: 'ಜಾತಿ ವ್ಯವಸ್ಥೆ ಹೋಗಬೇಕಾದರೆ ಅಂತರ್ಜಾತಿ ವಿವಾಹ ಹೆಚ್ಚಾಗಬೇಕು. ಆ ಮೂಲಕಜಾತಿ ವ್ಯವಸ್ಥೆ ಅಳಿಸಲು ಸಾಧ್ಯ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದಿಸಿದರು.

ಭಾನುವಾರ ಚಡಚಣ ತಾಲ್ಲೂಕಿನ ಇಂಚಗೇರಿ ಮಠದಲ್ಲಿ ಮಾಧವಾನಂದ ಪ್ರಭುಗಳ 44ನೇ ಪುಣ್ಯತಿಥಿ ಅಂಗವಾಗಿ ನಿರ್ಮಿಸಿರುವ ಮಾಧವಾನಂದ ಪ್ರಭು ದೇವಾಲಯ ಉದ್ಘಾಟಿಸಿ ಅವರು ಮಾತನಾಡಿದರು.

'ಯಾರೂ ಕೂಡ ಇಂತಹದ್ದೇ ಜಾತಿಯಲ್ಲಿ ಜನಿಸಬೇಕು ಎಂದು ಅರ್ಜಿ ಹಾಕುವುದಿಲ್ಲ, ಆಪರೇಷನ್ ಮಾಡುವ ವೈದ್ಯ, ರಕ್ತ ಪಡೆದುಕೊಳ್ಳುವ ವ್ಯಕ್ತಿಯ ಜಾತಿ ನೋಡುವುದಿಲ್ಲ. ಕುರುಬರಿಗೆ ಕುರುಬರ ರಕ್ತ, ಬ್ರಾಹ್ಮಣರಿಗೆ ಬ್ರಾಹ್ಮಣರ ರಕ್ತ ಬೇಕು ಎಂದು ಯಾರೂ ಕೇಳುವುದಿಲ್ಲ, ಆದರೆ ನಾನು ಲಿಂಗಾಯತ, ನೀನು ದಲಿತ ಎಂದು ಹೇಳುತ್ತೇವೆ, ಇದು ಸ್ವಾರ್ಥವಲ್ಲವೇ?' ಎಂದರು.

ಸಿದ್ಧತೆ

ಕಲಬುರಗಿಯ ಬಹಮನಿ ಕೋಟೆ ಆವರಣದಲ್ಲಿನ ಐತಿಹಾಸಿಕ ಜಾಮಿಯಾ ಮಸೀದಿಯಲ್ಲಿ ಬಕ್ರೀದ್ ಆಚರಣೆ ಅಂಗವಾಗಿ ಪ್ರಾರ್ಥನೆಗಾಗಿ ಭಾನುವಾರ ಸಿದ್ಧತೆಯಲ್ಲಿ ಸಿಬ್ಬಂದಿ ತೊಡಗಿದ್ದರು –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಬಿಎಸ್‌ವೈ ವಿಚಾರಣೆಗೆ ಎಲ್ಲ ಸಿದ್ಧತೆ – ತನಿಖಾಧಿಕಾರಿ

ಸಿಐಡಿ ಎದುರು ಹಾಜರು ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿನೇಳು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ದಾಖಲಾಗಿರುವ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ತನಿಖಾಧಿಕಾರಿಗಳ ಎದುರು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್ .ಯಡಿಯೂರಪ್ಪ ಸೋಮವಾರ ವಿಚಾರಣೆಗೆ ಹಾಜರಾಗುವ ಸಾಧ್ಯತೆಯಿದೆ.

ಇದೇ ಪ್ರಕರಣ ಸಂಬಂಧ ಈ ಹಿಂದೆ ಯಡಿಯೂರಪ್ಪ ಅವರನ್ನು ವಿಚಾರಣೆ ನಡೆಸಿದ್ದ ಸಿಐಡಿ, ಧ್ವನಿ ಮಾದರಿ ಸಂಗ್ರಹಿಸಿತ್ತು. ಜೂನ್ 12ರಂದು ವಿಚಾರಣೆಗೆ ಹಾಜರಾಗುವಂತೆ ಸಿಐಡಿ ತನಿಖಾಧಿಕಾರಿಗಳು 2ನೇ ಬಾರಿಗೆ ನೋಟಿಸ್ ಜಾರಿ ಮಾಡಿದ್ದರು. ಅವರು ಅಂದು ಗೈರಾಗಿದ್ದರು. ಜೂನ್ 17ರಂದು ವಿಚಾರಣೆಗೆ ಬರುವುದಾಗಿ ಪತ್ರ ಬರೆದಿದ್ದರು. ಹೀಗಾಗಿ ಸೋಮವಾರ ಅವರು ವಿಚಾರಣೆಗೆ ಬರುವ ಸಾಧ್ಯತೆಯಿದೆ ಎಂದು ಮೂಲಗಳು ಹೇಳಿವೆ.

'ಯಡಿಯೂರಪ್ಪ ಅವರ ವಿಚಾರಣೆಗೆ ಎಲ್ಲ ರೀತಿಯ ಸಿದ್ಧತೆ ಮಾಡಿಕೊಳ್ಳಲಾಗಿದೆ. ಪ್ರಕರಣದ ಸಂಬಂಧ ಕೆಲವು ಪ್ರಶ್ನೆಗಳನ್ನು ಕೇಳಲಾಗುವುದು' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಫೆಬ್ರುವರಿ 2ರಂದು ನಡೆದಿದ್ದ ಪ್ರಕರಣದ ಬಗ್ಗೆ ಬಾಲಕಿಯ ತಾಯಿ ದೂರು ಸಲ್ಲಿಸಿದ್ದರು. ಆ ದೂರು ಆಧರಿಸಿ ಲೈಂಗಿಕ ದೌರ್ಜನ್ಯ (ಐಪಿಸಿ 354) ಆರೋಪ ಹಾಗೂ ಪೋಕ್ಸೊ ಕಾಯ್ದೆಯ ಅಡಿ ಸದಾಶಿವನಗರ ಠಾಣೆಯಲ್ಲಿ ಯಡಿಯೂರಪ್ಪ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು ಎಂದು ಪೊಲೀಸರು ಹೇಳಿದರು.

'ಮಗಳ ಮೇಲೆ ನಡೆದಿದ್ದ ಅತ್ಯಾಚಾರ ಪ್ರಕರಣದಲ್ಲಿ ನ್ಯಾಯ ಒದಗಿಸುವಂತೆ ಕೋರಿ ಯಡಿಯೂರಪ್ಪ ಅವರ ಮನೆಗೆ ತೆರಳಿದ್ದೆ. ಅಂದು ಮಗಳು ಸಹ ನನ್ನ ಜೊತೆಗೆ ಇದ್ದರು. ಇದೇ ಸಂದರ್ಭದಲ್ಲಿ ಪುತ್ರಿಯ ಕೈಹಿಡಿದು ಕೊಠಡಿಗೆ ಕರೆದೊಯ್ದಿದ್ದ ಯಡಿಯೂರಪ್ಪ, ಅವರು ಪುತ್ರಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ' ಎಂದು ಆರೋಪಿಸಿ ಮಹಿಳೆಯೊಬ್ಬರು ದೂರು ನೀಡಿದ್ದರು. ದೂರು ನೀಡಿದ್ದ ಮಹಿಳೆ ಇತ್ತೀಚೆಗೆ ಅನಾರೋಗ್ಯದಿಂದ ಮೃತಪಟ್ಟಿದ್ದರು. ಇದೇ ಪ್ರಕರಣದಲ್ಲಿ ಜೂನ್ 13ರಂದು ಯಡಿಯೂರಪ್ಪ ವಿರುದ್ಧ ಜಾಮೀನು ರಹಿತ ಬಂಧನದ ವಾರಂಟ್ ಹೊರಡಿಸಲಾಗಿತ್ತು. ಅವರ ಬಂಧನಕ್ಕೆ ಸಿಐಡಿ ಶೋಧ ಆರಂಭಿಸಿತ್ತು. ಅದಾದ ಮೇಲೆ 'ಮುಂದಿನ ವಿಚಾರಣೆವರೆಗೂ ಯಡಿಯೂರಪ್ಪ ಅವರನ್ನು ಬಂಧಿಸಬಾರದು' ಎಂದು ಹೈಕೋರ್ಟ್ ಆದೇಶಿಸಿತ್ತು.

ಸರ್ಕಾರದ ಬಳಿ ಹಣ ಇಲ್ಲ, ನೌಕರರಿಗೆ ಸಂಬಳ ಕೊಡಲೂ ಆಗದ ಸ್ಥಿತಿ ನಿರ್ಮಾಣ– ಟೀಕೆ

ಕನ್ನಡಿಗರಿಗೆ ಬೆಲೆ ಏರಿಕೆ ಶಿಕ್ಷೆ: ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗ್ಯಾರಂಟಿಗಳಿಂದಾಗಿ ಸರ್ಕಾರದ ಬಳಿ ಹಣ ಇಲ್ಲ. ನೌಕರರಿಗೆ ಸಂಬಳ ಕೊಡಲೂ ಆಗದ ಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ತೈಲ ಬೆಲೆ ಏರಿಕೆ ಮಾಡಿ ₹3,000 ಕೋಟಿಯಿಂದ ₹4,000 ಕೋಟಿ ಸಂಗ್ರಹಿಸಲು ಜನ ಸಾಮಾನ್ಯರ ಮೇಲೆ ಬರೆ ಹಾಕಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಕಿಡಿಕಾರಿದರು.

'ಬೆಲೆ ಏರಿಕೆ ಪರಿಣಾಮ ಬಸ್, ಆಟೊ, ಕ್ಯಾಬ್, ಹೋಟೆಲ್ ತಿಂಡಿಗಳ ಬೆಲೆಯೂ ಗಗನಕ್ಕೆ ಏರುತ್ತದೆ. ಕಾಂಗ್ರೆಸ್ ಸರ್ಕಾರ ಕನ್ನಡಿಗರನ್ನು ಶಿಕ್ಷಿಸುತ್ತಿರುವ ವಿಧಾನವಿದು. ಜನರ ತಲೆ ಮೇಲೆ ಚಪ್ಪಡಿ ಕಲ್ಲನ್ನೇ ಹಾಕಿದ್ದಾರೆ' ಎಂದು ಅವರು ಭಾನುವಾರ ಸುದ್ದಿಗೋಷ್ಠಿಯಲ್ಲಿ ಹರಿಹಾಯ್ದರು.

'ಸಿದ್ದರಾಮಯ್ಯ 'ಔಟ್ ಗೋಯಿಂಗ್ ಮುಖ್ಯಮಂತ್ರಿ', ಹೀಗಾಗಿ ವಿಧಾನಸೌಧವನ್ನೇ ಅಡ ಇಟ್ಟರೂ ಅಚ್ಚರಿ ಇಲ್ಲ. ಅಷ್ಟರ ಮಟ್ಟಿಗೆ ರಾಜ್ಯವನ್ನು ದಿವಾಳಿ ಎಬ್ಬಿಸಿದ್ದಾರೆ. 15 ಬಾರಿ ಬಜೆಟ್ ಮಂಡಿಸಿದ ಅವರು ಆರ್ಥಿಕ ವ್ಯವಸ್ಥೆಯನ್ನು ಹಾಳು ಮಾಡಿದ್ದಾರೆ' ಎಂದರು.

'ನಮ್ಮ ಅವಧಿಯಲ್ಲಿ ಸಣ್ಣ ಪ್ರಮಾಣದಲ್ಲಿ ಪೆಟ್ರೋಲ್– ಡೀಸೆಲ್ ಬೆಲೆ ಏರಿಕೆ ಮಾಡಿದಾಗ ಸಿದ್ದರಾಮಯ್ಯ–ಡಿ.ಕೆ.ಶಿವಕುಮಾರ್ ತಮ್ಮ ಹೆಗಲ ಮೇಲೆ ಸ್ಕೂಟರ್ ಶವಯಾತ್ರೆ ಮಾಡಿದ್ದರು. ಈಗ ಯಾವ ಯಾತ್ರೆ ಮಾಡುತ್ತಾರೆ? ಬೆಲೆ ಏರಿಕೆ ಮೂಲಕ ಬಡವರ ಮೇಲೆ ದೊಡ್ಡ ಹೊಡೆತವನ್ನೇ ಕೊಟ್ಟಿದ್ದಾರೆ. ತೈಲ ಬೆಲೆ ಏರಿಕೆಯಿಂದ ಅಗತ್ಯ ವಸ್ತುಗಳ ಬೆಲೆಯೂ ಜಾಸ್ತಿ ಆಗುತ್ತದೆ. ಸಿದ್ದರಾಮಯ್ಯಗೆ ಮಾನ, ಮರ್ಯಾದೆ ಏನಾದರೂ ಇದೆಯಾ? ಮಾತೆತ್ತಿದರೆ ಅಶೋಕನಿಗೆ ಜ್ಞಾನ ಇಲ್ಲ ಎನ್ನುತ್ತಾರೆ. ನಿನಗೆ ಜ್ಞಾನ ಇದೆಯಾ? ನಾಚಿಕೆ ಆಗೋದಿಲ್ವಾ' ಎಂದು ಏಕವಚನದಲ್ಲೇ ಹರಿಹಾಯ್ದರು.

ಇಂದು ಪ್ರತಿಭಟನೆ

ಹಾಸನ/ಬೆಂಗಳೂರು: 'ಬೆಲೆ ಏರಿಕೆ ಖಂಡಿಸಿ ಜೂನ್ 17ರಂದು ರಾಜ್ಯದ ಎಲ್ಲ ಜಿಲ್ಲಾ ಕೇಂದ್ರಗಳಲ್ಲಿ ಬಿಜೆಪಿ ಪ್ರತಿಭಟಿಸಲಿದೆ. ನಾವು ಇಷ್ಟಕ್ಕೇ ಸುಮ್ಮನಾಗುವುದಿಲ್ಲ. ಹಿರಿಯ ಮುಖಂಡರ ಜೊತೆಗೆ ಚರ್ಚಿಸಿ, ಮುಂದಿನ ಹೋರಾಟ ರೂಪಿಸುತ್ತೇವೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಹಾಸನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು 'ಲೋಕಸಭೆ ಚುನಾವಣೆ ಫಲಿತಾಂಶದಿಂದ ರಾಜ್ಯ ಸರ್ಕಾರ ಹತಾಶವಾಗಿದೆ. ಗ್ಯಾರಂಟಿಗಳಿಗೆ ಹಣ ಹೊಂದಿಸಲಾಗದೆ ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸುವ ಕೆಲಸ ಮಾಡಿದೆ. ಆ ನಿರ್ಧಾರವನ್ನು ಕೂಡಲೇ ಹಿಂಪಡೆಯಬೇಕು' ಎಂದರು.

ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ವಿರೋಧಿಸಿ ಸೋಮವಾರ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನ ಮತ್ತು ರಾಜ್ಯದ ಎಲ್ಲ ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಪಕ್ಷದ ವತಿಯಿಂದ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ತಿಳಿಸಿದರು.

ಕಾಂಗ್ರೆಸ್ ಸರ್ಕಾರವು ಆಸ್ತಿ ತೆರಿಗೆ, ಕುಡಿಯುವ ನೀರಿನ ದರ, ವಿದ್ಯುತ್ ಶುಲ್ಕ, ವಾಹನಗಳ ತೆರಿಗೆ ಮತ್ತು ಆಸ್ತಿ ತೆರಿಗೆಯನ್ನೂ ಹೆಚ್ಚಿಸಿದೆ. ಸಾಲ ಪಡೆಯಲು ಬ್ಯಾಂಕಿಗೆ ಹೋದರೆ ನೋಂದಣಿ ದರವನ್ನೂ ಹೆಚ್ಚಿಸಿದ್ದಾರೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಕಿಡಿಕಾರಿದರು.

ಹರಿಯಾಣದಲ್ಲಿ ಪೆಟ್ರೋಲ್ ದರ ಲೀಟರ್‌ಗೆ ₹95.54, ಉತ್ತರ ಪ್ರದೇಶದಲ್ಲಿ ₹94.55, ಗುಜರಾತ್‌ನಲ್ಲಿ ₹94.50, ಅಸ್ಸಾಂನಲ್ಲಿ ₹97 ಇದೆ. ಆದರೆ ಕಾಂಗ್ರೆಸ್ ಮತ್ತು ಅದರ ಮಿತ್ರ ಪಕ್ಷಗಳು ಆಡಳಿತ ನಡೆಸುತ್ತಿರುವ ರಾಜ್ಯಗಳಲ್ಲಿ ಪೆಟ್ರೋಲ್ ದರ ₹103 ರಿಂದ ₹109 ರವರೆಗೆ ಇದೆ ಎಂದರು.

ದರ ಏರಿಕೆಗೆ ಬಿಜೆಪಿ ನೀತಿ ಕಾರಣ: ಸಿದ್ದರಾಮಯ್ಯ

ವಿಜಯಪುರ: 'ಪೆಟ್ರೋಲ್, ಡೀಸೆಲ್ ದರ ಏರಿಕೆಗೂ ಚುನಾವಣೆಗೂ ಸಂಬಂಧವಿಲ್ಲ, ದರ ಏರಿಕೆಗೆ ಬಿಜೆಪಿ ನೀತಿಯೇ ಕಾರಣ' ಎಂದು ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿದರು.

ವಿಜಯಪುರದಲ್ಲಿ ಭಾನುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, '2021 ರಲ್ಲಿ ಪೆಟ್ರೋಲ್ ದರದಲ್ಲಿ ಶೇ 35 ರೂಪಾಯಿ ತೆರಿಗೆ, ಡೀಸೆಲ್‌ಗೆ ಶೇ 24ರಷ್ಟು ತೆರಿಗೆ ಇತ್ತು. ಇದಕ್ಕೆ ಬಿಜೆಪಿಯೇ ಕಾರಣ' ಎಂದು ಆರೋಪಿಸಿದರು.

'ರಾಜ್ಯದಲ್ಲಿ ಪೆಟ್ರೋಲ್ ₹102.86 ಪೈಸೆ ಇದೆ, ಆಂಧ್ರ ಪ್ರದೇಶದಲ್ಲಿ ₹109.06, ಮಹಾರಾಷ್ಟ್ರ ದಲ್ಲಿ ₹104, ಮಧ್ಯಪ್ರದೇಶದಲ್ಲಿ ₹106.47 ರಷ್ಟಿದೆ. ಈ ಹಿಂದೆ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದಾಗಲೂ ತೈಲ ಬೆಲೆ ಏರಿಕೆ ಮಾಡಿದ್ದರು. ಅದಕ್ಕೂ ಚುನಾವಣೆಗೂ ಸಂಬಂಧವೇ ಇಲ್ಲ' ಎಂದರು.

'ಪೆಟ್ರೋಲ್, ಡೀಸೆಲ್ ದರ ಹೆಚ್ಚಳ ಮಾಡಿದ್ದು ಲೋಕಸಭಾ ಚುನಾವಣೆಯಲ್ಲಿನ ಸೇಡು' ಎಂಬ ಪ್ರತಿಪಕ್ಷ ನಾಯಕ ಆರ್. ಅಶೋಕ ಹೇಳಿಕೆಗೆ ತಿರುಗೇಟು ನೀಡಿದ ಅವರು, 'ಕಳೆದ ಚುನಾವಣೆಯಲ್ಲಿ ಒಂದೇ ಸ್ಥಾನ ನಾವು ಗಳಿಸಿದ್ದೆವು. 2024ರ ಚುನಾವಣೆಯಲ್ಲಿ 9 ಸ್ಥಾನಕ್ಕೆ ಬಂದಿದ್ದೇವೆ. ಅವರು 25 ಸ್ಥಾನದಿಂದ ರಿಂದ 17 ಸ್ಥಾನಕ್ಕೆ ಕುಸಿದಿದ್ದಾರೆ. ಚುನಾವಣೆಯಲ್ಲಿ ನಾವು ಸೋತಿಲ್ಲ, ಬಿಜೆಪಿಯವರು ಸೋತಿದ್ದಾರೆ'ಎಂದರು.

ಜನರು ದಂಗೆ ಏಳಲಿ: ಎಚ್‌ಡಿಕೆ

ಮಂಡ್ಯ: 'ಪೆಟ್ರೋಲ್ ಮತ್ತು ಡೀಸೆಲ್ ದರ ಏರಿಕೆ ಖಂಡಿಸಿ ಬಿಜೆಪಿ ಮತ್ತು ಜೆಡಿಎಸ್ ಪ್ರತಿಭಟಿಸುವುದಕ್ಕಿಂತ, ರಾಜ್ಯ ಸರ್ಕಾರದ ದುರಾಡಳಿತ ವಿರುದ್ಧ ಜನರು ದಂಗೆ ಏಳಬೇಕು' ಎಂದು ಕೇಂದ್ರ ಬೃಹತ್ ಕೈಗಾರಿಕೆ ಮತ್ತು ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಹೇಳಿದರು.

ನಾಗಮಂಗಲ ತಾಲ್ಲೂಕಿನ ಆದಿಚುಂಚನಗಿರಿ ಕ್ಷೇತ್ರದ ಕಾಲಭೈರವೇಶ್ವರ ಸ್ವಾಮಿ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದ ನಂತರ ಭಾನುವಾರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

'ಪಂಚ ಗ್ಯಾರಂಟಿ ಯೋಜನೆಗಳನ್ನು ಮುಂದುವರಿಸಲು ಬೆಲೆ ಏರಿಕೆ ಮಾಡಿರುವುದಾಗಿ ಕಾಂಗ್ರೆಸ್ ಸಚಿವರೇ ಒಪ್ಪಿಕೊಂಡಿದ್ದಾರೆ. ಜನರಿಂದಲೇ ದುಡ್ಡು ವಸೂಲಿ ಮಾಡಿ, ಜನರಿಗೆ ಹಣ ನೀಡಲು ಮುಂದಾಗಿದ್ದಾರೆ. ಈ ಬಗ್ಗೆ ಜನರು ಪ್ರತಿಭಟಿಸಿ ಸರ್ಕಾರವನ್ನು ಎಚ್ಚರಿಸಬೇಕು' ಎಂದು ಅವರು ಹೇಳಿದರು.

ಆರ್ಥಿಕ ಹೊರೆ: 'ನಿವೃತ್ತ'ರಿಗೆ ಕೊಕ್

ಒಂದನೇ ಪುಟದಿಂದ...

ಕೆಲವರು ತಿಂಗಳಿಗೆ ₹ 2 ಲಕ್ಷಕ್ಕೂ ಹೆಚ್ಚು ಸಂಭಾವನೆ ಪಡೆಯುತ್ತಿದ್ದಾರೆ. ಈ ಪೈಕಿ, ಕೆಲವರು ಕಾನೂನು, ಆರ್ಥಿಕ, ತಾಂತ್ರಿಕ ಸಲಹೆಗಾರರಾಗಿ, ಸಮಾಲೋಚಕರಾಗಿ ಕೆಲಸ ಮಾಡುತ್ತಿದ್ದಾರೆ.

ಕೆಲವರಿಗೆ ವಾಹನ ಸೌಲಭ್ಯ ಮಾತ್ರ ನೀಡಿದ್ದರೆ, ಇನ್ನೂ ಕೆಲವರಿಗೆ ಹವಾ ನಿಯಂತ್ರಿತ ವಾಹನ ಸೌಲಭ್ಯದ ಜೊತೆಗೆ ಡಾಟಾ ಎಂಟ್ರಿ ಆಪರೇಟರು, ಆಪ್ತ ಕಾರ್ಯದರ್ಶಿ, ಆಪ್ತ ಸಹಾಯಕ ಸಿಬ್ಬಂದಿಯನ್ನೂ ನೀಡಲಾಗಿದೆ. ದೂರವಾಣಿ ಸೌಲಭ್ಯ, ಇಂಟರ್‌ನೆಟ್ ಸೌಲಭ್ಯವೂ ಇದೆ. ಕೆಲವರಿಗೆ ಸರ್ಕಾರಿ, ಇನ್ನೂ ಕೆಲವರಿಗೆ ಬಾಡಿಗೆ ವಾಹನ ನೀಡಲಾಗಿದೆ. ಕೆಲವರಿಗೆ ಚಾಲಕರನ್ನು ನೇಮಿಸಿಕೊಳ್ಳಲು ಪ್ರತ್ಯೇಕ ಭತ್ಯೆ ನೀಡಲಾಗಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಾರ್ಯದರ್ಶಿ, ಮುಖ್ಯ ಎಂಜಿನಿಯರ್‌ಗಳು ಪಡೆಯುತ್ತಿರುವ ಸೌಲಭ್ಯವನ್ನು ಪಡೆಯುತ್ತಿರುವವರೂ ಇದ್ದಾರೆ.

'ವಾರ್ಷಿಕ' ಸಂಭಾವನೆ: ವಾರ್ಷಿಕ ಸಂಭಾವನೆ ನಿಗದಿಪಡಿಸಿ ಕೆಲವರನ್ನು ನೇಮಿಸಿಕೊಳ್ಳಲಾಗಿದೆ. ಬೆಸ್ಕಾಂನಲ್ಲಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ. ಎಚ್. ಪಿ ಕಿಂಚ ಅವರು ಎಂಟು ವರ್ಷಗಳಿಂದ ಇದ್ದಾರೆ. 78 ವರ್ಷ ವಯಸ್ಸಿನ ಅವರಿಗೆ ವಾರ್ಷಿಕ ₹ 5 ಲಕ್ಷ ನಿಗದಿಯಾಗಿದೆ. ಕಾರಾಗೃಹ ಮತ್ತು ಸುಧಾರಣಾ ಇಲಾಖೆಯಲ್ಲಿರುವ ಮಹದೇವ ಪ್ರಸಾದ್ ಅವರಿಗೆ ವರ್ಷಕ್ಕೆ ₹ 4,74,500 ವೇತನವಿದೆ.

ಕೆಲವೆಡೆ 'ನಿವೃತ್ತ'ರದ್ದೇ ಸಿಂಹಪಾಲು: ಕೆಐಎಡಿಬಿಯ ಬೆಂಗಳೂರು (ಕೇಂದ್ರ ಕಚೇರಿ, ತುಮಕೂರು, ಬೆಳಗಾವಿ, ಧಾರವಾಡ, ದಾವಣಗೆರೆ, ಶಿವಮೊಗ್ಗ, ಮೈಸೂರು, ಮಂಗಳೂರು ಕಚೇರಿಯಲ್ಲಿ 42 ಮಂದಿ ನಿವೃತ್ತರಿದ್ದಾರೆ. ಎಂಎಸ್‌ಐಎಲ್‌ನಲ್ಲಿ 41, ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ 31 ಮಂದಿ ಇದ್ದಾರೆ.

ಪುನರ್ವಸತಿ ಕಲ್ಪಿಸಲು ಹುದ್ದೆ ಸೃಜನೆ: 'ಕೆಲವು ಇಲಾಖೆಗಳಲ್ಲಿ ಮತ್ತು ಸಚಿವಾಲಯದಲ್ಲಿ ಅನಗತ್ಯವಾಗಿ ಹುದ್ದೆಗಳನ್ನು ಸೃಜಿಸಿ, ಸರ್ಕಾರಿ ಸೇವೆಯಿಂದ ನಿವೃತ್ತಿ ಹೊಂದಿದ ಅಧಿಕಾರಿ, ನೌಕರರನ್ನು ಸಮಾಲೋಚಕರು, ವಿಶೇಷ ಸಂಪನ್ಮೂಲ ವ್ಯಕ್ತಿಗಳಾಗಿ ನೇಮಿಸಿಕೊಳ್ಳಲಾಗಿದೆ. ಹೀಗೆ ನೇಮಕಗೊಂಡವರಿಗೆ ವೇತನ, ವಾಹನ ಮತ್ತಿತರ ಸೌಲಭ್ಯಗಳನ್ನು ನೀಡಲಾಗುತ್ತಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ಹೇಳಿದರು.

ಸಂಭಾವನೆ ವಿವರ

ಪಿ. ಶಿವಶಂಕರ್ (ನಿವೃತ್ತ ನಿರ್ದೇಶಕ, ಕೆಜಿಸ್)	₹1,25,789	ವಾಹನ
ಇಲ್ಯಾಸ್ ಉಲ್ಲಾ ಷರೀಫ್ (ಸಹಕಾರ ಸಂಘಗಳ ಹೆಚ್ಚುವರಿ ನಿಬಂಧಕ (ನಿವೃತ್ತ)	₹1.32 ಲಕ್ಷ	ವಾಹನ
ಇ. ವೆಂಕಟಯ್ಯ (ನಿವೃತ್ತ ಐಎಎಸ್)	₹1,15,735	ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ನೀಡುವ ಸೌಲಭ್ಯ
ಎಂ.ಕೆ. ಸಜ್ಜನ್ (ಕರ್ನಾಟಕ ನೀರಾವರಿ ನಿಗಮ/ ರಚನಾ ಸಲಹೆಗಾರರು)	₹1,08,900	
ಆರ್. ನಾಗರಾಜು (ನಿವೃತ್ತ ಹಣಕಾಸು ಅಧಿಕಾರಿ)	₹1,04,938	ವಾಹನ
ಆರ್.ಎಸ್. ಪಶುಪತಿ (ಆರ್ಥಿಕ ಸಲಹೆಗಾರ)	₹1,02,300	ವಾಹನ ಮತ್ತು ತಿಂಗಳಿಗೆ ಭತ್ಯೆ ₹ 1000
ಸುಧೀರ್ ಹನುಮಂತಪ್ಪ ಕೋರಡ್ಡಿ (ನಿವೃತ್ತ ಜಿಲ್ಲಾ ಮತ್ತ ಸೆಷನ್ಸ್ ನ್ಯಾಯಾಧೀಶರು)	₹1 ಲಕ್ಷ	ಬಾಡಿಗೆ ವಾಹನ
ಹೊಸಮನಿ ಸಿದ್ದಪ್ಪ (ನಿವೃತ್ತ ಜಿಲ್ಲಾ ಮತ್ತ ಸೆಷನ್ಸ್ ನ್ಯಾಯಾಧೀಶರು)	₹1 ಲಕ್ಷ	ಬಾಡಿಗೆ ವಾಹನ
ಪ್ರೊ. ತಿಮ್ಮೇಗೌಡ (ಪರೀಕ್ಷಾ ಸಲಹೆಗಾರ)	₹1 ಲಕ್ಷ	
ಎಸ್.ಎ. ಕಾತರಕಿ (ಕೌಶಲ್ಯಾಭಿವೃದ್ಧಿ ಇಲಾಖೆ/ ಹಿರಿಯ ನಿರ್ದೇಶಕರು)	₹1 ಲಕ್ಷ	ಡಾಟಾ ಎಂಟ್ರಿ ಆಪರೇಟರ್, ದಲಾಯತ್, ವಾಹನ ಚಾಲಕ
ಅನ್ವರ್ ಪಾಷಾ (ಕೌಶಲ್ಯಾಭಿವೃದ್ಧಿ ಇಲಾಖೆ/ ನಿವೃತ್ತ ಐಎಎಸ್)	₹1 ಲಕ್ಷ	ಕಿರಿಯ ಸಂಶೋಧನಾ ಸಹಾಯಕ, ದಲಾಯತ್, ವಾಹನ ಚಾಲಕ
ಎಸ್. ತುಕಾರಾಮ್ (ವಿಶ್ರಾಂತ ನಿರ್ದೇಶಕರು, ರಾಜ್ಯ ಸಂಪನ್ಮೂಲ ಕೇಂದ್ರ, ಆಡಳಿತ ಸಂಸ್ಥೆ)	₹1 ಲಕ್ಷ	ವಾಹನ
ಎಚ್.ಎಸ್. ರೇಣುಕಾದೇವಿ (ಬೆಂಗಳೂರು ಜಲ ಮಂಡಳಿ)	₹1 ಲಕ್ಷ	ವಾಹನ ಸೌಲಭ್ಯ
ಮಲ್ಲಿಕಾರ್ಜುನ ಗೌಡ (ಗಣಿ ಇಲಾಖೆ/ ನಿವೃತ್ತ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು)	₹1 ಲಕ್ಷ	ವಾಹನ
ಯು.ಎಚ್. ನಾರಾಯಣಸ್ವಾಮಿ (ನಗರ ನೀರ ಸರಬರಾಜು)	₹95,000	ವಾಹನ ಸೌಲಭ್ಯಕ್ಕೆ ತಿಂಗಳಿಗೆ ₹40 ಸಾವಿರ
ಬಸವರಾಜ ದೇವನೂರ	₹1 ಲಕ್ಷ	ವಾಹನಕ್ಕೆ ತಿಂಗಳಿಗೆ ₹90 ಸಾವಿರ, ಕಚೇರಿ ವೆಚ್ಚಕ್ಕೆ ₹10 ಸಾವಿರ, ಆಪ್ತ ಸಹಾಯಯಕ–1, ಗ್ರೂಪ್ ಡಿ –1
ಐ.ಎಸ್. ಗಿರಡ್ಡಿ (ಸಹಕಾರ ಸಂಗಳ ಹೆಚ್ಚುವರಿ ನಿಬಂಧಕ (ನಿವೃತ್ತ)	₹90 ಸಾವಿರ ಮತ್ತು ಭತ್ಯೆಗಳು	ವಾಹನ

ಎಲ್ಲಿ, ಎಷ್ಟು 'ನಿವೃತ್ತ'ರು?

ಇಲಾಖೆ	ಸಂಖ್ಯೆ
ಸಹಕಾರ	6
ಇಂಧನ	33
ಆರೋಗ್ಯ	2
ಉನ್ನತ ಶಿಕ್ಷಣ	16
ತೋಟಗಾರಿಕೆ	2
ಕಾರ್ಮಿಕ	5
ಸಣ್ಣ ಕೈಗಾರಿಕೆ	1
ಸಣ್ಣ ನೀರಾವರಿ	4
ಗೃಹ	22
ಲೋಕೋಪಯೋಗಿ	3
ಆರ್‌ಡಿಪಿಆರ್	18
ಕೌಶಲ್ಯಾಭಿವೃದ್ಧಿ	3
ಸಮಾಜ ಕಲ್ಯಾಣ	20
ಪ್ರವಾಸೋದ್ಯಮ	3
ನಗರಾಭಿವೃದ್ಧಿ	24
ಜಲ ಸಂಪನ್ಮೂಲ	38
ಮಹಿಳಾ ಮತ್ತು ಕಲ್ಯಾಣ	10
ಖಜಾನೆ	4
ಲೆಕ್ಕಪತ್ರ	4
ಆರ್ಥಿಕ	6
ವಾಣಿಜ್ಯ ಮತ್ತು ತೆರಿಗೆ	5
ಕೈಮಗ್ಗ ಅಭಿವೃದ್ಧಿ ನಿಗಮ	31
ಕೆಐಎಡಿಬಿ	42
ಎಂಎಸ್‌ಐಎಲ್	41

ಇವಿಎಂ ಹ್ಯಾಕ್ ಮಾಡಲು ಸಾಧ್ಯ: ಮಸ್ಕ್

ಒಂದನೇ ಪುಟದಿಂದ...

ಈ ಹಿಂದಿನ ಸರ್ಕಾರದಲ್ಲಿ ಎಲೆಕ್ಟ್ರಾನಿಕ್ಸ್, ಐಟಿ ಖಾತೆ ರಾಜ್ಯ ಸಚಿವರಾಗಿದ್ದ ರಾಜೀವ್ ಚಂದ್ರಶೇಖರ್, 'ಮಸ್ಕ್ ಅವರ ಅಭಿಪ್ರಾಯವು ಇವಿಎಂಗಳ ಕುರಿತು ಬಿಡುಬೀಸಾಗಿ ನೀಡಿರುವ ಸಾಮಾನ್ಯೀಕರಣಗೊಳಿಸಿದ ಹೇಳಿಕೆ ಎನಿಸುತ್ತದೆ. ಒಂದು ಅತ್ಯಂತ ಸುರಕ್ಷಿತವಾದ ಡಿಜಿಟಲ್ ಹಾರ್ಡ್‌ವೇರ್ ಅನ್ನು ಯಾರಿಂದಲೂ ಅಭಿವೃದ್ಧಿಪಡಿಸಲು ಸಾಧ್ಯವಿಲ್ಲ ಎಂದು ಹೇಳಿದಂತಿದೆ, ಅದು ತಪ್ಪು ಅಭಿಪ್ರಾಯ' ಎಂದಿದ್ದಾರೆ.

'ಮಸ್ಕ್ ಅವರ ಅಭಿಪ್ರಾಯ ಅಮೆರಿಕ ಮತ್ತು ಇತರ ದೇಶಗಳಿಗೆ ಅನ್ವಯಿಸಬಹುದು. ಆ ದೇಶಗಳಲ್ಲಿ ಇಂಟರ್‌ನೆಟ್ ಸಂಪರ್ಕದ ಇವಿಎಂ ಅಭಿವೃದ್ಧಿಪಡಿಸುವುದಕ್ಕಾಗಿ ರೂಢಿಯಲ್ಲಿರುವ ಕಂಪ್ಯೂಟರ್ ವೇದಿಕೆಗಳನ್ನು ಬಳಸಲಾಗುತ್ತದೆ' ಎಂದು ಹೇಳಿದ್ದಾರೆ.

'ಭಾರತದಲ್ಲಿ ಬಳಸುವ ಇವಿಎಂಗಳನ್ನು ನಿರ್ದಿಷ್ಟ ಉದ್ದೇಶಕ್ಕೆ ಅಗತ್ಯವಿರುವಂತೆ ವಿನ್ಯಾಸಗೊಳಿಸಲಾಗಿದೆ. ಇವು ಸಂಪೂರ್ಣ ಸುರಕ್ಷಿತವಾಗಿದ್ದು, ಯಾವುದೇ ನೆಟ್‌ವರ್ಕ್ ಅಥವಾ ಮಾಧ್ಯಮದ ಸಂಪರ್ಕ ಇಲ್ಲದೆ, ಪ್ರತ್ಯೇಕವಾಗಿಯೇ ಇರುತ್ತವೆ. ಬ್ಲೂಟೂಥ್, ವೈಫೈ ಸಂಪರ್ಕವೂ ಸಾಧ್ಯವಾಗದಂತೆ ವಿನ್ಯಾಸಗೊಳಿಸಲಾಗಿದೆ' ಎಂದು ರಾಜೀವ್ ಚಂದ್ರಶೇಖರ್ ಹೇಳಿದ್ದಾರೆ.

ರಾಜೀವ್ ಚಂದ್ರಶೇಖರ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿರುವ ಮಸ್ಕ್, 'ಯಾವುದೇ ಯಂತ್ರವನ್ನಾದರೂ ಹ್ಯಾಕ್ ಮಾಡಬಹುದು' ಎಂದಿದ್ದಾರೆ.

ಈ ಮಾತಿಗೆ, 'ತಾಂತ್ರಿಕವಾಗಿ ನಿಮ್ಮ ವಾದ ಸರಿ. ಕ್ವಾಂಟಮ್ ಕಂಪ್ಯೂಟ್ ತಂತ್ರಜ್ಞಾನ ಬಳಸಿ ಎಷ್ಟೇ ಜಟಿಲವಾದ ರಹಸ್ಯವನ್ನು ನಾನು ಭೇದಿಸಬಲ್ಲೆ. ವಿಮಾನವೊಂದರ ಗಾಜಿನ ಕಾಕ್‌ಪಿಟ್‌ನಲ್ಲಿರುವ ವಿಮಾನ ನಿಯಂತ್ರಿಸುವ ಸಾಧನಗಳನ್ನು ಸೇರಿದಂತೆ ಯಾವುದೇ ಡಿಜಿಟಲ್ ಹಾರ್ಡ್‌ವೇರ್/ಸಿಸ್ಟಮ್ ಅನ್ನು ನಾನು ಹ್ಯಾಕ್ ಮಾಡಬಲ್ಲೆ' ಎಂದು ಚಂದ್ರಶೇಖರ್ ಹೇಳಿದ್ದಾರೆ.

ವಿಶ್ವಾಸಾರ್ಹತೆ ಪ್ರಶ್ನಿಸಿದ ರಾಹುಲ್, ಅಖಿಲೇಶ್

ನವದೆಹಲಿ(ಪಿಟಿಐ): 'ದೇಶದ ಚುನಾವಣಾ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕುರಿತು ಗಂಭೀರವಾದ ಅತಂಕಗಳು ವ್ಯಕ್ತವಾಗುತ್ತಿವೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಭಾನುವಾರ ಹೇಳಿದ್ದಾರೆ.

ಇವಿಎಂ ಕುರಿತು ಇಲಾನ್ ಮಸ್ಕ್ ನೀಡಿರುವ ಹೇಳಿಕೆ ಭಾರಿ ಚರ್ಚೆಗೆ ಕಾರಣವಾಗುತ್ತಿದ್ದಂತೆಯೇ ಈ ರೀತಿ ರಾಹುಲ್ ಗಾಂಧಿ ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್ ಮಿತ್ರ ಪಕ್ಷವಾದ ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್ ಕೂಡ ವಿದ್ಯುನ್ಮಾನ ಮತಯಂತ್ರಗಳ ವಿಶ್ವಾಸಾರ್ಹತೆ ಪ್ರಶ್ನಿಸಿದ್ದಾರೆ.

ಭವಿಷ್ಯದಲ್ಲಿ ನಡೆಯುವ ಎಲ್ಲ ಚುನಾವಣೆಗಳಲ್ಲಿ ಮತಪತ್ರಗಳನ್ನೇ ಬಳಕೆ ಮಾಡಬೇಕು ಎಂದು ಅಖಿಲೇಶ್ ಆಗ್ರಹಿಸಿದ್ದಾರೆ.

ರಾಹುಲ್ ಗಾಂಧಿ ಅವರು, ಶಿವಸೇನಾ ಅಭ್ಯರ್ಥಿಯ ಸಂಬಂಧಿಯೊಬ್ಬರು, ವಾಯವ್ಯ ಮುಂಬೈ ಕ್ಷೇತ್ರದಿಂದ 48 ಮತಗಳಿಂದ ಆಯ್ಕೆಯಾಗಿದ್ದು, ಅವರ ಬಳಿ ಇವಿಎಂ ತೆರೆಯಬಲ್ಲ ಫೋನ್ ಇದೆ ಎಂಬ ಬಗ್ಗೆ ಮಾಧ್ಯಮವೊಂದರ ವರದಿಯನ್ನು ತಮ್ಮ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ. ಅಲ್ಲದೇ, ಇವಿಎಂಗಳನ್ನು ತೆಗೆದು ಹಾಕಬೇಕು ಎಂಬ ಇಲಾನ್ ಮಸ್ಕ್ ಅವರ ಮಾತುಗಳಿರುವ ಪೋಸ್ಟ್ ಅನ್ನು ಸಹ ರಾಹುಲ್ ಗಾಂಧಿ ಹಂಚಿಕೊಂಡಿದ್ದಾರೆ.

'ಸಂಬಂಧಿಸಿದ ಸಂಸ್ಥೆಗಳಲ್ಲಿ ಉತ್ತರದಾಯಿತ್ವದ ಕೊರತೆ ಇದ್ದಾಗ, ಪ್ರಜಾಪ್ರಭುತ್ವ ವ್ಯವಸ್ಥೆ ಎಂಬುದು ಕಪಟ ಎನಿಸುತ್ತದೆ ಹಾಗೂ ವಂಚನೆಗೆ ಅವಕಾಶ ಮಾಡಿಕೊಡುತ್ತದೆ' ಎಂದೂ ರಾಹುಲ್ ಗಾಂಧಿ ಹೇಳಿದ್ದಾರೆ.

'ನನ್ನ ಅಭ್ಯರ್ಥಿ ಗೆದ್ದಿದ್ದಕ್ಕೆ ಈ ಪ್ರಶ್ನೆಗಳೇ?'

ಮುಂಬೈ(ಪಿಟಿಐ): 'ನನ್ನ ಪಕ್ಷದ ಅಭ್ಯರ್ಥಿ ವಾಯವ್ಯ ಮುಂಬೈ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದಾರೆ ಎಂಬ ಕಾರಣಕ್ಕೆ ಇವಿಎಂಗಳ ಪಾವಿತ್ರ್ಯ ಹಾಗೂ ವಿಶ್ವಾಸಾರ್ಹತೆ ಬಗ್ಗೆ ಇಷ್ಟೊಂದು ಪ್ರಶ್ನೆಗಳನ್ನು ಕೇಳಲಾಗುತ್ತಿದೆ ಎಂಬುದು ಅಚ್ಚರಿ ಮೂಡಿಸುತ್ತದೆ' ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಭಾನುವಾರ ಹೇಳಿದ್ದಾರೆ.

'ರಾಜ್ಯದ ಇತರ ಲೋಕಸಭಾ ಕ್ಷೇತ್ರಗಳ ಫಲಿತಾಂಶ ಕುರಿತು ಯಾರೂ ಪ್ರಶ್ನೆ ಎತ್ತುತ್ತಿಲ್ಲ... ನನ್ನ ಅಭ್ಯರ್ಥಿ ಗೆದ್ದು, ಇತರರು ಪರಾಭವಗೊಂಡಿದ್ದಕ್ಕಾಗಿ ಇಷ್ಟೆಲ್ಲಾ ಸಂಶಯ–ಪ್ರಶ್ನೆಗಳೇ' ಎಂದಿರುವ ಅವರು, 'ಜನಾದೇಶ ನಮ್ಮ ಅಭ್ಯರ್ಥಿ ವಾಲ್ಕರ್ ಪರ ಇದೆ' ಎಂದೂ ಹೇಳಿದ್ದಾರೆ.

ಅಂಗನವಾಡಿಗೆ ಕುತ್ತು?

ಒಂದನೇ ಪುಟದಿಂದ...

ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಜಾರಿಗೊಳಿಸಲು ರಚಿಸಲಾಗಿದ್ದ ಸಮಿತಿಯು ನೀಡಿದ್ದ ವರದಿಯಂತೆ 2023ರ ಮಾರ್ಚ್‌ವರೆಗೆ ರಾಜ್ಯದಲ್ಲಿ 908 ಪೂರ್ವ ಪ್ರಾಥಮಿಕ ಶಾಲೆಗಳಿದ್ದವು. 14,737 ಮಕ್ಕಳು ದಾಖಲಾಗಿದ್ದರು.

ಯಾವ ಸರ್ಕಾರಿ ಶಾಲೆಗಳಲ್ಲಿ ಪೂರ್ವ ಶಿಕ್ಷಣ ತರಗತಿಗಳನ್ನು ಆರಂಭಿಸಲಾಗಿದೆಯೋ ಆ ಭಾಗಗಳಲ್ಲಿನ ಅಂಗನವಾಡಿಗಳ ಮಕ್ಕಳ ಸಂಖ್ಯೆ 10ರ ಒಳಗಿರುವುದನ್ನೂ ಎನ್‌ಇಪಿ ಸಮಿತಿ ಬಹಿರಂಗಪಡಿಸಿತ್ತು. ಅಂಗನವಾಡಿಗಳನ್ನೂ ಒಳಗೊಂಡು ಎರಡನೇ ತರಗತಿಯವರೆಗಿನ ಶಿಕ್ಷಣವನ್ನು ಬುನಾದಿ ಶಿಕ್ಷಣ ಎಂದು ಪುನರ್ ವಿಭಜಿಸಲಾಗಿತ್ತು. ಅಂಗನವಾಡಿ ಕಾರ್ಯಕರ್ತೆಯರಿಗೆ ಅವರ ವಿದ್ಯಾಭ್ಯಾಸಕ್ಕೆ ಅನುಗುಣವಾಗಿ ತರಬೇತಿ ನೀಡಿ, ಶಿಕ್ಷಕಿಯರ ಸ್ಥಾನ ನೀಡಲು ಶಿಫಾರಸು ಮಾಡಲಾಗಿತ್ತು. 20 ಸಾವಿರಕ್ಕೂ ಹೆಚ್ಚು ಕಾರ್ಯಕರ್ತೆಯರಿಗೆ ಮೊದಲ ಹಂತದ ತರಬೇತಿಯನ್ನೂ ನೀಡಲಾಗಿತ್ತು. ಈಗ ಎನ್‌ಇಪಿ ಜತೆಗೆ ಶಿಫಾರಸುಗಳೂ ನನೆಗುದಿಗೆ ಬಿದ್ದಿವೆ.

'ಪದವಿ, ಸ್ನಾತಕೋತ್ತರ ಪದವಿ ಪಡೆದ 23,263 ಕಾರ್ಯಕರ್ತೆಯರು ಅಂಗನವಾಡಿಗಳಲ್ಲಿ ಇದ್ದಾರೆ. ಅವರಿಗೆ ಅಗತ್ಯ ತರಬೇತಿ ನೀಡಬೇಕು. ಶಿಕ್ಷಕಿಯರ ಸ್ಥಾನ ನೀಡಿ, ಗೌರವಧನ ಹೆಚ್ಚಿಸಬೇಕು. ಅಂಗನವಾಡಿಗಳನ್ನು ಖಾಸಗಿ ಎಲ್‌ಕೆಜಿ, ಯುಕೆಜಿ ಮಾದರಿಯಲ್ಲಿ ಬಲಪಡಿಸಬೇಕು. ಪ್ರತಿ ವರ್ಷ ಶಿಶು ಅಭಿವೃದ್ಧಿ ಯೋಜನೆಗೆ ನೀಡುತ್ತಿರುವ ₹4,500 ಕೋಟಿ ಹಣ ಬುನಾದಿ ಶಿಕ್ಷಣ ಬಲಪಡಿಸಲು ಬಳಸಿಕೊಳ್ಳಬೇಕು' ಎನ್ನುತ್ತಾರೆ ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘದ ಅಧ್ಯಕ್ಷೆ ಎಸ್. ವರಲಕ್ಷ್ಮಿ.

ಕುಶಾಲನಗರ, ಮಡಿಕೇರಿಯಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಕುಶಾಲನಗರದಲ್ಲಿ ಭಾನುವಾರ ಬಿರುಸಿನ ಮಳೆಯಾಯಿತು.

ಮಡಿಕೇರಿ ಮತ್ತು ಸುಂಟಿಕೊಪ್ಪದಲ್ಲಿ ಸಾಧಾರಣ ಮಳೆ ಸುರಿಯಿತು.

ಅಪಹರಣಕ್ಕೆ ಬಳಸಿದ್ದ ಕಾರು ಜಪ್ತಿ

ರೇಣುಕಸ್ವಾಮಿ ಹತ್ಯೆ: ಚಿತ್ರದುರ್ಗದ ನಾಲ್ವರು ಆರೋಪಿಗಳ ಮನೆಯಲ್ಲಿ ಪೊಲೀಸರ ತಪಾಸಣೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ರೇಣುಕಸ್ವಾಮಿ ಅವರನ್ನು ಜೂನ್ 8ರಂದು ನಗರದಿಂದ ಬೆಂಗಳೂರಿಗೆ ಕರೆದೊಯ್ದಿದ್ದ ಇಟಿಯೋಸ್ ಕಾರನ್ನು ಜಪ್ತಿ ಮಾಡಿದ ಬೆಂಗಳೂರಿನ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಭಾನುವಾರ ಹಲವು ಸಾಕ್ಷ್ಯಗಳನ್ನು ಸಂಗ್ರಹಿಸಿದರು.

ಶನಿವಾರ ರಾತ್ರಿಯೇ ನಗರಕ್ಕೆ ಬಂದಿದ್ದ ಪೊಲೀಸರು, ಭಾನುವಾರ ಬೆಳಿಗ್ಗೆ ಪ್ರಕರಣದ 8ನೇ ಆರೋಪಿ, ತಾಲ್ಲೂಕಿನ ಐನಳ್ಳಿ ಕುರುಬರಕಟ್ಟೆ ಗ್ರಾಮದ ಚಾಲಕ ರವಿ ಮನೆಗೆ ತೆರಳಿ ಸ್ಥಳ ಮಹಜರು ನಡೆಸಿದರು. ಮನೆ ಮುಂದೆಯೇ ನಿಂತಿದ್ದ ಇಟಿಯೋಸ್ ಕಾರನ್ನು ಪರಿಶೀಲಿಸಿದರು. ಕಾರಿನ ಸುತ್ತ ಬೆಡ್‌ಶೀಟ್, ಕಂಬಳಿ ಹಿಡಿದು ಗೋಪ್ಯತೆ ಕಾಪಾಡಿ ಪರಿಶೀಲಿಸಿ ನಂತರ ಜಪ್ತಿ ಮಾಡಿದರು. ಬೆರಳಚ್ಚು ತಜ್ಞರೂ ಪರಿಶೀಲಿಸಿದರು.

ಪ್ರಕರಣದ 4ನೇ ಆರೋಪಿ, ರೇಣುಕಸ್ವಾಮಿಯನ್ನು ಬೆಂಗಳೂರಿಗೆ ಕರೆದೊಯ್ದಿದ್ದ ರಾಘವೇಂದ್ರ ಜೊತೆ ಬಂದು ಪೊಲೀಸರು ಜೂನ್ 14ರಂದೇ ಮೊದಲ ಹಂತದ ಸ್ಥಳ ಮಹಜರು ನಡೆಸಿದ್ದರು. ನಂತರ ಪ್ರಕರಣದ ಇತರ ಮೂವರು ಆರೋಪಿಗಳು ಶರಣಾದ ಕಾರಣ ಎಲ್ಲರ ಮನೆಗೂ ಭೇಟಿ ನೀಡಿ ಮಹಜರು ನಡೆಸಿದರು.

ಚಾಲಕ ರವಿ ಮನೆಯ ಒಳಗೂ ತೆರಳಿದ ಪೊಲೀಸರು ಪತ್ನಿ ಕವಿತಾ ಅವರನ್ನು ಪ್ರಶ್ನಿಸಿದರು. ನಟ ದರ್ಶನ್ ಅವರಿಂದ ₹5 ಲಕ್ಷ ಪಡೆದಿದ್ದಾರೆ ಎಂಬ ಆರೋಪ ಕೇಳಿಬಂದಿರುವ ಕಾರಣ ಮನೆಯಲ್ಲಿ ಹಣಕ್ಕಾಗಿ ಹುಡುಕಾಟ ನಡೆಸಿದರು. ನಂತರ 6ನೇ ಆರೋಪಿ, ಮಹವೀರ ನಗರದ ಜಗದೀಶ್ ಮನೆಯಲ್ಲಿ ತಪಾಸಣೆ ನಡೆಸಿದರು. ಆರೋಪಿಗೆ ಸೇರಿದ ಆಟೊ ಜಪ್ತಿ ಮಾಡಿದರು. 7ನೇ ಆರೋಪಿ ಅನುಕುಮಾರ್ ಮನೆಗೂ ಭೇಟಿ ನೀಡಿ ಮಹಜರು ಪ್ರಕ್ರಿಯೆ ನಡೆಸಿದರು. ಸ್ಥಳೀಯ ಪೊಲೀಸರ ಬಿಗಿಭದ್ರತೆ ನಡುವೆ ಪೊಲೀಸರು ಮಹಜರು ಪ್ರಕ್ರಿಯೆ ಪೂರ್ಣಗೊಳಿಸಿದರು.

ಸ್ವಾಮೀಜಿ ಆಕ್ರೋಶ: ವಿಆರ್‌ಎಸ್ ಬಡಾವಣೆಯ ರೇಣುಕಸ್ವಾಮಿ ಮನೆಗೆ ಬಾಳೆಹೊನ್ನೂರು ರಂಭಾಪುರಿ ಪೀಠದ ವೀರಸೋಮೇಶ್ವರ ಸ್ವಾಮೀಜಿ ಭೇಟಿ ನೀಡಿ ಕುಟುಂಬ ಸದಸ್ಯರಿಗೆ ಸಾಂತ್ವನ ಹೇಳಿದರು. ಘಟನೆಯನ್ನು ಕುರಿತು ಆಕ್ರೋಶ ವ್ಯಕ್ತಪಡಿಸಿದರು. 'ಸಿನಿಮೀಯ ರೀತಿಯಲ್ಲಿ ರೇಣುಕಸ್ವಾಮಿಯನ್ನು ಕೊಲೆ ಮಾಡಿರುವುದು ಖಂಡನೀಯ' ಎಂದರು.

ರೇಣುಕಸ್ವಾಮಿ ಪೋಷಕರಾದ ಕಾಶಿನಾಥಯ್ಯ, ಶಿವನಗೌಡರ್ ಹಾಗೂ ರತ್ನಪ್ರಭಾ ದಂಪತಿ ಕಣ್ಣೀರು ಹಾಕುತ್ತಾ ಸ್ವಾಮೀಜಿಯ ಪಾದಪೂಜೆ ಮಾಡಿದರು.

ಚಿತ್ರದುರ್ಗದ ಮೆದೆಹಳ್ಳಿ ಬಡಾವಣೆಯಲ್ಲಿರುವ 4ನೇ ಆರೋಪಿ ರಾಘವೇಂದ್ರ ಮನೆಗೆ ಪೊಲೀಸರು ಬಂದಾಗ ದೊಡ್ಡ ಸಂಖ್ಯೆಯಲ್ಲಿ ಜನ ಸೇರಿದ್ದರು.

ಆರೋಪಿ ಮನೆಯಲ್ಲಿ ಚಿನ್ನ, ನಗದು ಪತ್ತೆ

ಆರೋಪಿ ರಾಘವೇಂದ್ರ ಮನೆಯಲ್ಲಿ ಪರಿಶೀಲನೆ ನಡೆಸಿದಾಗ ರೇಣುಕಸ್ವಾಮಿ ಕತ್ತಿನಲ್ಲಿದ್ದ ಚಿನ್ನದ ಸರ, ಚಿನ್ನದ ಉಂಗುರ ಹಾಗೂ ಬೆಳ್ಳಿಯ ಕೈಕಡಗ ಪತ್ತೆಯಾಗಿವೆ. ರಾಘವೇಂದ್ರ ಮನೆಯಲ್ಲಿ ಪರಿಶೀಲನೆ ನಡೆಸಲು ಶನಿವಾರ ರಾತ್ರಿಯೇ ಪೊಲೀಸರು ಪ್ರಯತ್ನಿಸಿದ್ದರು. ಆದರೆ, ಮನೆಗೆ ಬೀಗ ಹಾಕಿದ್ದ ಕಾರಣ ಮನೆಗೆ ತೆರಳಲು ಸಾಧ್ಯವಾಗಿರಲಿಲ್ಲ. ಭಾನುವಾರ ಬೆಳಿಗ್ಗೆ 11 ಗಂಟೆ ವೇಳೆಗೆ ಪೊಲೀಸರು ಬಂದಾಗಲೂ ಮನೆಗೆ ಬೀಗ ಹಾಕಲಾಗಿತ್ತು.

ಆರೋಪಿ ರಾಘವೇಂದ್ರ ಮೂಲಕವೇ ಆತನ ಪತ್ನಿ ಸಹನಾಗೆ ಕರೆ ಮಾಡಿಸಿ, ಮನೆಗೆ ಕರೆಸಿ ಬೀಗ ತೆರೆಸಲಾಯಿತು. ರಾಘವೇಂದ್ರ ಬೆಂಗಳೂರಿನಿಂದ ತಂದಿದ್ದ ₹4 ಲಕ್ಷ ನಗದು ಹಾಗೂ ರೇಣುಕಸ್ವಾಮಿಯ ಆಭರಣಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ರೇಣುಕಸ್ವಾಮಿ ಧರಿಸಿದ್ದ ಆಭರಣಗಳನ್ನು ರಾಘವೇಂದ್ರ ತೆಗೆದುಕೊಂಡಿದ್ದ. ಪತ್ನಿಯನ್ನು ಬೆಂಗಳೂರಿಗೆ ಕರೆಯಿಸಿಕೊಂಡು ಹಣ ಹಾಗೂ ಆಭರಣಗಳನ್ನು ಕೊಟ್ಟು ಕಳುಹಿಸಿದ್ದ' ಎಂದು ಮೂಲಗಳು ತಿಳಿಸಿವೆ.

'ಕಲಾವಿದರ ವ್ಯಕ್ತಿತ್ವ ಮಾದರಿಯಾಗಿರಲಿ'

ಅಥಣಿ (ಬೆಳಗಾವಿ ಜಿಲ್ಲೆ): 'ಯಾವುದೇ ಕಲಾವಿದರು ಜನರಿಗೆ ಮಾದರಿಯಾಗುವಂಥ ವ್ಯಕ್ತಿತ್ವ ರೂಪಿಸಿಕೊಳ್ಳಬೇಕು. ಇಲ್ಲದಿದ್ದರೆ ರೇಣುಕಸ್ವಾಮಿ ಕೊಲೆಯಂಥ ಘಟನೆ ನಡೆಯುತ್ತದೆ' ಎಂದು ಕೂಡಲಸಂಗಮದ ಪಂಚಮಸಾಲಿ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

'ರಾಜಕುಮಾರ್, ವಿಷ್ಣುವರ್ಧನ್ ಅವರಂಥ ನಟರನ್ನು ನಾವು ಆದರ್ಶವಾಗಿ ತೆಗೆದುಕೊಳ್ಳಬೇಕು. ಪರದೆ ಮೇಲೆ ವಿವಿಧ ಪಾತ್ರ ನಿರ್ವಹಿಸುವ ಕಲಾವಿದರು, ವಾಸ್ತವ ಬದುಕಿನಲ್ಲಿ ಜನರಿಗೆ ಮಾದರಿಯಾಗುವಂತೆ ಬದುಕಬೇಕು. ಕಾನೂನಿನ ಮುಂದೆ ಎಲ್ಲರೂ ಸಮಾನರು. ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ತಪ್ಪಿತಸ್ಥರ ವಿರುದ್ಧ ಪೊಲೀಸರು ಕಠಿಣ ಕ್ರಮ ಕೈಗೊಳ್ಳಬೇಕು' ಎಂದರು.

'ಪಂಚಮಸಾಲಿ ಸಮುದಾಯಕ್ಕೆ ಮೀಸಲಾತಿ ಪಡೆಯುವ ಹೋರಾಟ ನಿಂತಿಲ್ಲ. ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ನಿರಂತರವಾಗಿರಲಿದೆ' ಎಂದು ಅವರು ಸುದ್ದಿಗಾರರ ಬಳಿ ಮಾತನಾಡುವ ಸಂದರ್ಭದಲ್ಲಿ ಹೇಳಿದರು.

ನಕಲಿ ವೈದ್ಯನ ಹೊಲದಲ್ಲಿ ಮೂರು ಭ್ರೂಣ ಪತ್ತೆ

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಬೆಳಗಾವಿ ನಗರದಲ್ಲಿ ಇತ್ತೀಚೆಗೆ ಸಿಕ್ಕಿಬಿದ್ದ ಶಿಶು ಮಾರಾಟ ಜಾಲದಲ್ಲಿ ಆರೋಪಿಯಾಗಿರುವ ಲಾಡಖಾನ್ (ರಿಯಾಜ್) ಕ್ಲಿನಿಕ್‌ನ ಅಬ್ದುಲ್ ಗಫಾರ್ ಲಾಡಖಾನ್ ಅವರು ಕೃಷಿ ಮಾಡಲು ಗುತ್ತಿಗೆ ಪಡೆದಿದ್ದ ಜಮೀನಿನಲ್ಲಿ ಮೂರು ಭ್ರೂಣಗಳು ಪತ್ತೆಯಾಗಿವೆ.

ಬೈಲಹೊಂಗಲ ಉಪ ವಿಭಾಗಾಧಿಕಾರಿ ಪ್ರಭಾವತಿ ಫಕ್ಕೀರಪುರ, ತಹಶೀಲ್ದಾರ್ ರವೀಂದ್ರ ಹಾದಿಮನಿ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮಹೇಶ ಕೋಣಿ, ಡಿವೈಎಸ್ಪಿ ರವಿ ನಾಯಕ, ಫೋರೆನ್ಸಿಕ್ ತಜ್ಞರ ಸಮ್ಮುಖದಲ್ಲಿ ಭಾನುವಾರ ನಡೆದ ತಪಾಸಣೆ ವೇಳೆ, ಮೂರು ಭ್ರೂಣ ಪತ್ತೆಯಾದವು.

'ಕ್ಲಿನಿಕ್‌ನಲ್ಲಿ ಗರ್ಭಪಾತ ಮಾಡಿಸಿದ ಭ್ರೂಣಗಳನ್ನು ಸಹಾಯಕನಾಗಿ ಕೆಲಸ ಮಾಡುತ್ತಿದ್ದ ರೋಹಿತ್ ಕುಪ್ಪಸಗೌಡರ ಮೂಲಕ ಲಾಡಖಾನ್ ಹೊಲದಲ್ಲಿ ಹೂಳಿಸುತ್ತಿದ್ದ ಎಂಬ ಆರೋಪ ಕೇಳಿಬಂದಿತ್ತು. ಹೀಗಾಗಿ ರೋಹಿತ್‌ನನ್ನು ಸ್ಥಳಕ್ಕೆ ಕರೆದೊಯ್ದು ಭ್ರೂಣ ಪತ್ತೆ ಕಾರ್ಯಾಚರಣೆ ನಡೆಸಲಾಯಿತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ನಾಲ್ಕು ತಿಂಗಳ ಮೂರು ಭ್ರೂಣ ಸಿಕ್ಕಿವೆ. ಇವುಗಳನ್ನು ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ತಪಾಸಣೆಗಾಗಿ ಕಳುಹಿಸಲಾಗುವುದು. ಅಲ್ಲಿಂದ ಬರುವ ವರದಿ ಆಧರಿಸಿ ಮುಂದಿನ ತನಿಖೆ ನಡೆಸಲಾಗುವುದು' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಮಹೇಶ ಕೋಣಿ ಹೇಳಿದರು.

'ಈ ನಕಲಿ ವೈದ್ಯನ ಹಿಂದೆ ದೊಡ್ಡ ಜಾಲವೇ ಇರುವ ಸಂಶಯವಿದೆ. ಎಲ್ಲ ಆಯಾಮಗಳಿಂದ ತನಿಖೆ ನಡೆಸಲಾಗುವುದು. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಅಧಿಕೃತವಾಗಿ ವೈದ್ಯಕೀಯ ಪದವಿ ವ್ಯಾಸಂಗ ಮಾಡಿರದಿದ್ದರೂ, ಅಲೋಪತಿ ವೈದ್ಯ ಪದ್ಧತಿ ಪ್ರಕಾರ ಲಾಡ್‌ಖಾನ್ ವೈದ್ಯನಾಗಿ ಕೆಲಸ ಮಾಡುತ್ತಿದ್ದ. ತನ್ನ ಬೆಂಬಲಿಗರ ಜತೆ ಸೇರಿ ಅಕ್ರಮವಾಗಿ ಗರ್ಭಪಾತ ಮಾಡಿಸುತ್ತಿದ್ದ. ನಂತರ ಭ್ರೂಣವನ್ನು ಹೊಲದಲ್ಲಿ ಮುಚ್ಚಿ ನಾಶಪಡಿಸುತ್ತಿದ್ದ' ಎಂದು ಆರೋಪಿಸಿ ತಾಲ್ಲೂಕು ವೈದ್ಯಾಧಿಕಾರಿ ಸಂಜಯ ಸಿದ್ದಣ್ಣವರ ಕಿತ್ತೂರು ಠಾಣೆಯಲ್ಲಿ ದೂರು ದಾಖಲಿಸಿದ್ದರು. ಆ ಹಿನ್ನೆಲೆಯಲ್ಲಿ ಲಾಡಖಾನ್ ಗುತ್ತಿಗೆ ಪಡೆದ ಜಮೀನಿನಲ್ಲಿ ಭ್ರೂಣ ಪತ್ತೆ ಕಾರ್ಯ ನಡೆಯಿತು' ಎಂದು ಮೂಲಗಳು ತಿಳಿಸಿವೆ.

ತನಿಖೆ ನಡೆಯುವ ಸ್ಥಳದ ಸುತ್ತಲೂ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿತ್ತು.

ಪ್ಲಾಸ್ಟಿಕ್ ಡಬ್ಬಿಯಲ್ಲಿ ಸಂಗ್ರಹಿಸಿರುವ ಭ್ರೂಣ

ಮುಖ್ಯಾಂಶಗಳು

- ನಕಲಿ ವೈದ್ಯನ ಹಿಂದೆ ದೊಡ್ಡ ಜಾಲ ಇರುವ ಸಂಶಯ
- ಗರ್ಭಪಾತದ ನಂತರ ಭ್ರೂಣಗಳನ್ನು ಹೊಲದಲ್ಲಿ ಹೂಳುತ್ತಿದ್ದ ಆರೋಪ
- ಪ್ರಯೋಗಾಲಯಕ್ಕೆ ಭ್ರೂಣ ರವಾನೆ

ಡಿಜಿಟಲ್ ಸಾಕ್ಷ್ಯ ಸಂಗ್ರಹ ಚುರುಕು

ಒಂದನೇ ಪುಟದಿಂದ....

'ಪ್ರಕರಣದಲ್ಲಿ ಡಿಜಿಟಲ್ ಸಾಕ್ಷ್ಯವೇ ಪ್ರಮುಖ ಪಾತ್ರ ವಹಿಸಲಿದ್ದು ಆರೋಪಿಗಳು ಕೃತ್ಯ ಎಸಗಿ ಓಡಾಟ ನಡೆಸಿರುವ ಎಲ್ಲ ಸ್ಥಳಗಳಲ್ಲಿ ದೊರೆತ ಸಿಸಿ ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ, ಸಾಂದರ್ಭಿಕ ಸಾಕ್ಷ್ಯಗಳನ್ನು ಸಂಗ್ರಹಿಸಲಾಗುತ್ತಿದೆ. ಜಪ್ತಿ ಮಾಡಿಕೊಂಡಿರುವ 16 ಮೊಬೈಲ್‌ಗಳ ದತ್ತಾಂಶ ಹಾಗೂ ಕರೆಗಳ ವಿವರ ಪಡೆದುಕೊಳ್ಳಲಾಗುತ್ತಿದೆ. ಇನ್ನೂ ಕೆಲವು ಸ್ಥಳಗಳಲ್ಲಿ ಮಹಜರು ನಡೆಸಬೇಕಿದ್ದು ಎಫ್‌ಎಸ್‌ಎಲ್ ತಂಡವು ಮಾಹಿತಿ ಸಂಗ್ರಹಿಸುತ್ತಿದೆ' ಎಂದು ಪೊಲೀಸರು ಹೇಳಿದರು.

'ಎಲ್ಲ ಆಯಾಮಗಳಲ್ಲೂ ತನಿಖೆ ನಡೆಸಿ ಮಾಹಿತಿ ಸಂಗ್ರಹಿಸಲಾಗುವುದು. ಕೃತ್ಯ ಎಸಗಿದವರ ಮೇಲಿನ ಆರೋಪವನ್ನು ಸಾಬೀತು ಪಡಿಸಲು ಬೇಕಾದ ಎಲ್ಲ ಸಾಕ್ಷ್ಯವನ್ನು ಕಲೆ ಹಾಕಲಾಗುತ್ತಿದೆ. ಕೃತ್ಯ ನಡೆದ ಸ್ಥಳದಲ್ಲಿದ್ದ ಎಲ್ಲ ವಸ್ತುಗಳನ್ನೂ ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಪ್ರಕರಣದ ಎ–1 ಆರೋಪಿ ಪವಿತ್ರಾಗೌಡ ಅವರ ರಾಜರಾಜೇಶ್ವರಿ ನಗರದ ಮನೆಯಲ್ಲಿ ಪೊಲೀಸರು ಭಾನುವಾರ ಮಹಜರು ನಡೆಸಿದರು. ಆರೋಪಿ ಮನೆಯಲ್ಲಿ ಕೆಲವು ವಸ್ತುಗಳು ಪತ್ತೆಯಾಗಿದ್ದು ಅವುಗಳನ್ನು ವಶಕ್ಕೆ ಪಡೆಯಲಾಗಿದೆ. ಪವಿತ್ರಾಗೌಡ ಅವರ ಮ್ಯಾನೇಜರ್ ಪವನ್ ಮನೆಯಲ್ಲೂ ಶೋಧ ನಡೆಸಲಾಗಿದೆ.

'ರಾಮನಗರ ಜಿಲ್ಲೆಯ ಅಕ್ಕೂರು ಗ್ರಾಮದ ಪವನ್, ಆರ್‌ಆರ್ ನಗರದಲ್ಲಿ ಕೊಠಡಿ ಬಾಡಿಗೆಗೆ ಪಡೆದು ನೆಲೆಸಿದ್ದರು. ಅವರ ಕೊಠಡಿ ಪರಿಶೀಲಿಸಲಾಗಿದೆ. ಕೃತ್ಯ ನಡೆದ ದಿನ ಪವನ್ ಧರಿಸಿದ್ದ ಶೂ, ಬಟ್ಟೆ ಜಪ್ತಿ ಮಾಡಲಾಗಿದೆ. ಶರ್ಟ್, ಪ್ಯಾಂಟ್‌ನಲ್ಲಿ ರಕ್ತದ ಕಲೆಗಳು ಪತ್ತೆಯಾಗಿವೆ. ರೇಣುಕಸ್ವಾಮಿ ಕಳುಹಿಸಿದ್ದರು ಎನ್ನಲಾದ ಅಶ್ಲೀಲ ಸಂದೇಶಗಳನ್ನು ಆರೋಪಿ ಪವನ್, ದರ್ಶನ್‌ಗೆ ಕಳುಹಿಸಿದ್ದರು. ಇದರಿಂದ ದರ್ಶನ್ ಕೆರಳಿದ್ದರು. ಪವನ್ ಸಹ ಯುವತಿ ಹೆಸರಿನಲ್ಲಿ ರೇಣುಕಸ್ವಾಮಿಗೆ ವಾಟ್ಸ್‌ಆ್ಯಪ್‌ನಲ್ಲಿ ಸಂದೇಶ ಕಳುಹಿಸಿದ್ದರು' ಎಂದು ಮೂಲಗಳು ಹೇಳಿವೆ.

'ರೇಣುಕಸ್ವಾಮಿ ಮೇಲೆ ಹಲ್ಲೆ ನಡೆಸಲು ಆರೋಪಿಗಳು ಕೆಲವು ವಿದ್ಯುತ್ ಉಪಕರಣಗಳನ್ನು ಬಳಸಿದ್ದರು. ಅವುಗಳ ಜಪ್ತಿಗೆ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಜನ ವಿರಳ: ಆರಂಭದಲ್ಲಿ ಅನ್ನಪೂರ್ಣೇಶ್ವರಿ ನಗರ ಪೊಲೀಸ್ ಠಾಣೆಯತ್ತ ದೊಡ್ಡ ಸಂಖ್ಯೆಯಲ್ಲಿ ದರ್ಶನ್ ಅಭಿಮಾನಿಗಳು ಬರುತ್ತಿದ್ದರು. ದಿನ ಕಳೆದಂತೆ ಠಾಣೆಯತ್ತ ಬರುವವರ ಸಂಖ್ಯೆ ಇಳಿಮುಖವಾಗಿದೆ.

ನಿಷೇಧಾಜ್ಞೆ ಜಾರಿ ಮಾಡಲಾಗಿದ್ದು ಬಂದ ಕೆಲವರನ್ನೂ ಪೊಲೀಸರು ಸ್ಥಳದಲ್ಲಿ ನಿಲ್ಲುವುದಕ್ಕೆ ಬಿಡದೇ ಚದುರಿಸುತ್ತಿದ್ದಾರೆ. ಭಾನುವಾರ ಠಾಣೆ ಸುತ್ತಮುತ್ತ ಅಷ್ಟಾಗಿ ಜನರು ಕಾಣಿಸಿಕೊಳ್ಳಲಿಲ್ಲ.

ಜಾಮೀನಿಗೆ ಅರ್ಜಿ ಈಗ ಇಲ್ಲ

'ಪೊಲೀಸ್ ಕಸ್ಟಡಿ ಅಂತ್ಯವಾದ ಮೇಲೆ ಸೆಷನ್ಸ್ ನ್ಯಾಯಾಲಯದಲ್ಲಿ ಜಾಮೀನು ಕೋರಿ ಅರ್ಜಿ ಸಲ್ಲಿಸಲಾಗುವುದು' ಎಂದು ದರ್ಶನ್ ಪರ ವಕೀಲ ಅನಿಲ್ ಬಾಬು ಹೇಳಿದರು. ಅನ್ನಪೂರ್ಣೇಶ್ವರಿ ನಗರ ಠಾಣೆಗೆ ಭಾನುವಾರ ಬೆಳಿಗ್ಗೆ ಬಂದಿದ್ದ ಅವರು, ದರ್ಶನ್ ಅವರನ್ನು ಭೇಟಿ ಮಾಡಿ ಚರ್ಚಿಸಿದರು.

ನಂತರ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಆರೋಪಿಗಳನ್ನು ಶನಿವಾರವೇ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರಿಂದ ತನಿಖೆ ಪೂರ್ಣಗೊಂಡಿದೆ ಎಂದು ಭಾವಿಸಿದ್ದೆವು. ಮತ್ತೆ ಪೊಲೀಸ್ ಕಸ್ಟಡಿಗೆ ಕೇಳುತ್ತಾರೆಂಬ ಅಂದಾಜು ಇರಲಿಲ್ಲ. ಇನ್ನೂ ಹೆಚ್ಚಿನ ವಿಚಾರಣೆಗಾಗಿ 10 ದಿನ ಪೊಲೀಸ್ ಕಸ್ಟಡಿಗೆ ನೀಡುವಂತೆ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್ ಅವರು ಮನವಿ ಮಾಡಿದ್ದರು. ಕೋರ್ಟ್ ಮತ್ತೆ ಪೊಲೀಸ್ ಕಸ್ಟಡಿಗೆ ನೀಡಿದೆ. ದರ್ಶನ್ ಅವರ ಜೊತೆಗೆ ಚರ್ಚಿಸಲಾಗಿದೆ. ಕಾನೂನು ಹೋರಾಟ ಮುಂದುವರಿಸುತ್ತೇವೆ' ಎಂದು ಹೇಳಿದರು.

'ಅಭಿಮಾನಿಯಿಂದ ಜೀವ ಬೆದರಿಕೆ'

ಪ್ರಜಾವಾಣಿ ವಾರ್ತೆ

ಯಾದಗಿರಿ: ಪಂಚರ್ ಅಂಗಡಿಯ ಯುವಕನೊಬ್ಬ ನಟ ದರ್ಶನ್ ಬಗ್ಗೆ ಟೀಕೆ ಮಾಡಿದ್ದನೆಂಬ ಕಾರಣಕ್ಕೆ ದರ್ಶನ್ ಅಭಿಮಾನಿಗಳ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜು ಎಂಬಾತ ಜೀವ ಬೆದರಿಕೆ ಹಾಕಿರುವ ಆರೋಪ ಕೇಳಿ ಬಂದಿದೆ. ರಾಜುನನ್ನು ವಶಕ್ಕೆ ಪಡೆದ ಯಾದಗಿರಿ ನಗರ ಠಾಣೆ ಪೊಲೀಸರು ಎಚ್ಚರಿಕೆ ನೀಡಿ ಕಳಿಸಿದ್ದಾರೆ.

ಪ್ರಕರಣದ ಹಿನ್ನಲೆ: ಯಾದಗಿರಿಯ ಗಂಗಾನಗರದ ಯುವಕ ಅಭಿ ಎಂಬಾತನಿಗೆ ದರ್ಶನ್ ಅಭಿಮಾನಿಗಳ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ರಾಜು ಕೊಲೆ ಬೆದರಿಕೆ ಹಾಕಿದ್ದ. ಬಾಸ್ ಬಾಸ್ ಎಂದು ಯಾಕೆ ಬಕೆಟ್ ಹಿಡಿಯುತ್ತಿರಿ? ಬಕೆಟ್ ಯಾಕ್ ಹಿಡಿತೀರಿ. ತಾಯಿ–ತಂದೆಗೆ ಬಕೆಟ್ ಹಿಡಿಯಿರಿ ಎಂದು ಅಭಿ ಇನ್ಸ್ಟಾಗ್ರಾಂನಲ್ಲಿ ಪೋಸ್ಟ್‌ವೊಂದನ್ನು ಹಾಕಿದ್ದನು. ಹೀಗಾಗಿ ಅಭಿಗೆ ಕರೆ ಮಾಡಿದ್ದ ರಾಜು ಜೀವಂತವಾಗಿ ಸುಡುವುದಾಗಿ ಬೆದರಿಸಿದ್ದ. ನಿನ್ನ ಮನೆ ಹಾಗೂ ಅಂಗಡಿಗೆ ಬೆಂಕಿ ಹಚ್ಚಬೇಕಾಗುತ್ತದೆ ಎಂದು ಕರೆ ಮಾಡಿ ಹೆದರಿಸಿದ್ದನು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಬಾಸ್ ಅಂದರೂ ಅಷ್ಟೇ, ಡಿ ಬಾಸ್ ಅಂದರೂ ಅಷ್ಟೇ. ಬಾಸ್ ಬಗ್ಗೆ ಮಾತಾಡಿದರೆ ಖಾಲಿಯಾಗ್ತಿದಿ ನೀನು, ಅಂಗಡಿ ಸಮೇತ ಬೆಂಕಿ ಹಚ್ತಾರೆ. ಕೂಡಲೇ ಕ್ಷಮೆ ಕೇಳಿ ವಿಡಿಯೊ ಮಾಡಿ ಹಾಕು. ಹಾಕಿರುವ ವಿಡಿಯೊ ಡಿಲೀಟ್ ಮಾಡು' ಎಂದು ಬೆದರಿಕೆ ಹಾಕಿದ್ದನು. ಹೀಗಾಗಿ ರಾಜುನನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

'ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜುನನ್ನು ಠಾಣೆಗೆ ಕಳುಹಿಸಿ ಎಚ್ಚರಿಕೆ ನೀಡಲಾಗಿದೆ. ಎಫ್‌ಐಆರ್‌ಗಾಗಿ ಕೋರ್ಟ್‌ಗೆ ಅರ್ಜಿ ಸಲ್ಲಿಸಲಾಗಿದೆ. ಕೋರ್ಟ್ ಪ್ರಕ್ರಿಯೆ ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು' ಎಂದು ಪಿಎಸ್‌ಐ ಮಂಜನಗೌಡ ಪಾಟೀಲ ಅವರು ತಿಳಿಸಿದರು.

ದಲಿತ ಚಳವಳಿ: ಗದಗದಲ್ಲಿ ಸಮಾವೇಶ

ಗದಗ: 'ದಲಿತ ಚಳವಳಿಗೆ ಪ್ರೊ. ಬಿ.ಕೃಷ್ಣಪ್ಪ ಅವರು ನೀಡಿದ ಕೊಡುಗೆಯ ನೆನಪಿನಲ್ಲಿ 'ದಲಿತ ಚಳವಳಿ 50: ಅವಲೋಕನ- ಮುನ್ನೋಟ' ಹೆಸರಿನಡಿ ರಾಷ್ಟ್ರೀಯ ಸಮಾವೇಶವನ್ನು ನವೆಂಬರ್ ಮೂರನೇ ವಾರದಲ್ಲಿ ಎರಡು ದಿನ ನಗರದಲ್ಲಿ ನಡೆಸಲು ತೀರ್ಮಾನಿಸಲಾಗಿದೆ' ಎಂದು ಸಾಹಿತಿ ಬಸವರಾಜ ಸೂಳಿಭಾವಿ ತಿಳಿಸಿದರು.

ಭಾನುವಾರ ಪೂರ್ವಭಾವಿ ಸಭೆಯಲ್ಲಿ ಮಾನತಾಡಿ, 'ಡಿಎಸ್‌ಎಸ್ ಬೇರೆ ಬೇರೆ ಕಾರಣಗಳಿಂದ ಒಡೆದು ಹೋಗಿದೆ. ಒಡಕು ವೈಯಕ್ತಿಕ ನೆಲೆಯಲ್ಲಿದ್ದು, ಸಂಘಟನೆಗಳು ಮತ್ತೆ ಒಂದಾಗಲು ಈ ಸಮಾವೇಶ ವೇದಿಕೆಯಾಗಲಿದೆ' ಎಂದರು.

ಮೋಡಗಳು ಬೆಟ್ಟ–ಗುಡ್ಡಗಳನ್ನು ಚುಂಬಿಸುತ್ತಿದ್ದ ದೃಶ್ಯವನ್ನು ಭಾನುವಾರ ಮಡಿಕೇರಿಯ ರಾಜಾಸೀಟ್ ಉದ್ಯಾನದಲ್ಲಿ ಪ್ರವಾಸಿಗರು ಕಣ್ತುಂಬಿಕೊಂಡರು

ಪ್ರಜಾವಾಣಿ ಚಿತ್ರ/ರಂಗಸ್ವಾಮಿ

ಶಿಕ್ಷಕರ ವರ್ಗ: ಪರಿಷ್ಕೃತ ವೇಳಾಪಟ್ಟಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರು, ಮುಖ್ಯ ಶಿಕ್ಷಕರು, ತತ್ಸಮಾನ ವೃಂದದ ಅಧಿಕಾರಿಗಳ ಸಾಮಾನ್ಯ ವರ್ಗಾವಣೆಯ ಪರಿಷ್ಕೃತ ವೇಳಾಪಟ್ಟಿಯನ್ನು ಶಾಲಾ ಶಿಕ್ಷಣ ಇಲಾಖೆ ಪ್ರಕಟಿಸಿದೆ.

ಕಡ್ಡಾಯ ಮತ್ತು ಹೆಚ್ಚುವರಿ ಶಿಕ್ಷಕರ ವರ್ಗಾವಣೆಯನ್ನು ಈ ಬಾರಿ ಕೈಬಿಟ್ಟಿರುವ ಸರ್ಕಾರ, ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗಷ್ಟೆ ಅವಕಾಶ ಕಲ್ಪಿಸಿದೆ.

ಶೈಕ್ಷಣಿಕ ವರ್ಷ ಆರಂಭವಾಗಿರುವ ಹಿನ್ನೆಲೆಯಲ್ಲಿ ವಲಯವಾರು ವರ್ಗಾವಣೆ ಈ ವರ್ಷ ಕೈಬಿಡುವಂತೆ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ ಮನವಿ ಮಾಡಿತ್ತು. ಹೀಗಾಗಿ, ಈ ವರ್ಷಕ್ಕೆ ಮಾತ್ರ ಅನ್ವಯವಾಗುವಂತೆ ವಲಯ ವರ್ಗಾವಣೆ ಕೈಬಿಟ್ಟು, ಇತರ ವರ್ಗಾವಣೆಗಳನ್ನು ಮುಂದುವರಿಸಲು ಅನುಮತಿ ನೀಡಲಾಗಿದೆ.

ವರ್ಗಾವಣೆಗೆ ಅರ್ಜಿ ಇತ್ಯಾದಿ ಪ್ರಕ್ರಿಯೆಯನ್ನು ಮಾರ್ಚ್ 18ರಿಂದ ಇಲಾಖೆ ಆರಂಭಿಸಿತ್ತು. ಈ ಮಧ್ಯೆ, ಲೋಕಸಭೆ ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿಗೆ ಬಂದ ಕಾರಣ ವರ್ಗಾವಣೆ ಪ್ರಕ್ರಿಯೆ ಸ್ಥಗಿತವಾಗಿತ್ತು.

ವರ್ಗಾವಣೆ ವೇಳಾಪಟ್ಟಿ: ನಿರ್ದಿಷ್ಟಪಡಿಸಿರುವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ತಾತ್ಕಾಲಿಕ ಕರಡು ಪಟ್ಟಿಯನ್ನು ಇದೇ 18ರಂದು ಪ್ರಕಟಿಸಲಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ಶಿಕ್ಷಕರು 21ರವರೆಗೆ ಆಕ್ಷೇಪಣೆ ಸಲ್ಲಿಸಬಹುದು. 24ರಂದು ಅಂತಿಮ ಆದ್ಯತಾ ಕರಡು ಪಟ್ಟಿ ಪ್ರಕಟವಾಗಲಿದೆ.

ಕೋರಿಕೆ ಮತ್ತು ಪರಸ್ಪರ ವರ್ಗಾವಣೆಗೆ ಅರ್ಜಿ ಸಲ್ಲಿಸಲು ಜೂನ್ 20 ಕೊನೆಯ ದಿನ. ಅರ್ಜಿಗಳ ಪರಿಶೀಲನೆಗೆ ಕೊನೆಯ ದಿನ27. ಅರ್ಜಿ ಸಲ್ಲಿಸಿರುವ ಶಿಕ್ಷಕರ ಪೈಕಿ, ಜಿಲ್ಲೆಯ ಒಳಗೆ, ಹೊರಗೆ ವರ್ಗಾವಣೆಗೆ ಅರ್ಹ/ಅನರ್ಹರ ಪಟ್ಟಿ 29ರಂದು ಪ್ರಕಟವಾಗಲಿದೆ. 29ರಿಂದ ಜುಲೈ 5ರವರೆಗೆ ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸಬಹುದು. ಜುಲೈ 8ರಂದು ತಾತ್ಕಾಲಿಕ ಆದ್ಯತಾ ಪಟ್ಟಿ, 10ರಂದು ಖಾಲಿ ಹುದ್ದೆಗಳ ಪಟ್ಟಿ, 18ರಂದು ಅಂತಿಮ ಆದ್ಯತಾ ಪಟ್ಟಿ ಪ್ರಕಟವಾಗಲಿದೆ.

ಜಿಲ್ಲಾ ಹಂತದ ವರ್ಗಾವಣೆಗೆ ಜುಲೈ 19 (ಪ್ರಾಥಮಿಕ ಶಾಲಾ ಶಿಕ್ಷಕರು) ಮತ್ತು 20ರಂದು (ಪ್ರೌಢ ಶಾಲಾ ಶಿಕ್ಷಕರು) ಕೌನ್ಸೆಲಿಂಗ್ ನಡೆಯಲಿದೆ. ಜುಲೈ 24ರಿಂದ 29ರವರೆಗೆ ಜ್ಯೇಷ್ಠತಾ ಪಟ್ಟಿಯಲ್ಲಿರುವಂತೆ ಕೌನ್ಸೆಲಿಂಗ್ ಮೂಲಕ ಸ್ಥಳ ನಿಯುಕ್ತಿ ನಡೆಯಲಿದೆ. ವಿಭಾಗೀಯ ಹಂತದ ವರ್ಗಾವಣೆಯು ಆಗಸ್ಟ್ 1ರಿಂದ 14ರವರೆಗೆ, ಅಂತರ್ ವಿಭಾಗೀಯ ವರ್ಗಾವಣೆ ಆಗಸ್ಟ್ 14ರಿಂದ 27ರವರೆಗೆ ನಡೆಯಲಿದೆ. 'ತಾಂತ್ರಿಕ ಕಾರಣಗಳಿಗೆ ಅಡಚಣೆಯಾದರೆ ಈ ವೇಳಾಪಟ್ಟಿಯಲ್ಲಿ ಬದಲಾವಣೆ ಆಗಲಿದೆ' ಎಂದು ಇಲಾಖೆಯ ಆಯುಕ್ತರು ತಿಳಿಸಿದ್ದಾರೆ.

'ಸಾಹಿತಿ, ವಿದ್ವಾಂಸರನ್ನು ಗುಲಾಮರಾಗಿಸಿಕೊಂಡ ಕಾಂಗ್ರೆಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಸರ್ಕಾರ ನಾಡಿನ ಸಾಹಿತಿಗಳು ಮತ್ತು ವಿದ್ವಾಂಸರನ್ನು ತನ್ನ ಧೋರಣೆಯ ಗುಲಾಮರನ್ನಾಗಿಸಿಕೊಂಡಿದೆ' ಎಂದು ಶಾಸಕ ವಿ.ಸುನಿಲ್ ಕುಮಾರ್ ಕಿಡಿಕಾರಿದ್ದಾರೆ.

'ಸಾಹಿತ್ಯ– ಸಂಸ್ಕೃತಿ ಹಾಗೂ ಸೃಜನಶೀಲ ಕ್ಷೇತ್ರ ರಾಜಕೀಯ ಒತ್ತಡದಿಂದ ಅತೀತರಾಗಿ ಇರಬೇಕು ಎಂದು ಪ್ರತಿಪಾದಿಸುತ್ತಿದ್ದ ಹಲವು ವ್ಯಕ್ತಿಗಳೇ ಈ ಸಭೆಯಲ್ಲಿ ಭಾಗವಹಿಸಿ ಹಾದಿಬೀದಿಯಲ್ಲಿ ಗೂಂಡಾಗಿರಿ ನಡೆಸುತ್ತಿದ್ದ ನಲಪಾಡ್ ಎದುರು ಕೈಕಟ್ಟಿ ನಿಂತಿದ್ದು ಅಸಹ್ಯದ ಪರಮಾವಧಿ' ಎಂದಿದ್ದಾರೆ.

'ವಿವಿಧ ಅಕಾಡೆಮಿಗಳ ಅಧ್ಯಕ್ಷರು ಹಾಗೂ ಸದಸ್ಯರನ್ನು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಕೆಪಿಸಿಸಿ ಕಚೇರಿಗೆ ಕರೆಸಿ ಇಂಥ ಹುದ್ದೆಗಳು ರಾಜಕಾರಣಕ್ಕೆ ಮೆಟ್ಟಿಲು ಎಂಬ ಉಪದೇಶ ನೀಡಿದ್ದಾರೆ. ಕರೆಸಿದವರು ಮತ್ತು ಬಂದವರು ಇಬ್ಬರಿಗೂ ನಾಚಿಗೆ ಆಗಬೇಕು' ಎಂದು ಸುನಿಲ್ ಹರಿಹಾಯ್ದಿದ್ದಾರೆ.

ವಿ.ಸುನಿಲ್ ಕುಮಾರ್

'ಇಂತಹದ್ದೊಂದು ಘಟನೆ ರಾಜ್ಯದ ಸಾಹಿತ್ಯಿಕ ವಲಯದಲ್ಲಿ ಹಿಂದೆಂದೂ ನಡೆದ ಉದಾಹರಣೆ ಇಲ್ಲ. ಅಧಿಕಾರಿಗಳನ್ನು ಆಳುವ ಸರ್ಕಾರದ ಆಳಾಗಿ ಮಾಡಿಕೊಂಡಿದ್ದ ರಾಜ್ಯ ಸರ್ಕಾರ, ಇದೀಗ ಸಾಹಿತಿಗಳು ಹಾಗೂ ವಿದ್ವಾಂಸರನ್ನು ತನ್ನ ಧೋರಣೆಯ ಗುಲಾಮರನ್ನಾಗಿಸಿಕೊಂಡಿದೆ. ಅಕಾಡೆಮಿಗಳ ಸಭೆಯನ್ನು ವಿಧಾನಸೌಧ ಅಥವಾ ರವೀಂದ್ರ ಕಲಾಕ್ಷೇತ್ರದಲ್ಲಿ ನಡೆಸಿ ಸಂವಾದ ನಡೆಸಿದ್ದರೆ ಒಂದು ಲೆಕ್ಕ. ಆದರೆ, ಕೆಪಿಸಿಸಿ ಕಚೇರಿಯಲ್ಲಿ ... ಬಿತ್ತಿದ್ದೇ ಬೆಳೆಯುತ್ತಿದೆ. ಅನುಭವಿಸಿ' ಎಂದು ವ್ಯಂಗ್ಯಮಾಡಿದ್ದಾರೆ.

'ಕಾವೇರಿ ನೀರು: ರಾಜಕಾರಣಿಗಳ ಮೇಲಷ್ಟೆ ಭಾರ ಹೊರಿಸಲಾಗದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾವೇರಿ ಅಂತರರಾಜ್ಯ ನದಿ ನೀರಿನ ಹಂಚಿಕೆ ವಿವಾದದಲ್ಲಿ ಕರ್ನಾಟಕಕ್ಕೆ ಐತಿಹಾಸಿಕ ಅನ್ಯಾಯವಾಗಿದೆ. ನ್ಯಾಯ ಪಡೆಯಲು ನಡೆಸುವ ಹೋರಾಟದ ಭಾರವನ್ನು ರಾಜಕಾರಣಿಗಳ ಮೇಲಷ್ಟೆ ಹೊರಿಸಲಾಗದು' ಎಂದು ಪತ್ರಕರ್ತ ದಿನೇಶ್ ಅಮಿನ್ ಮಟ್ಟು ಹೇಳಿದರು.

ನಗರದ ಗಾಂಧಿ ಭವನದಲ್ಲಿ ಭಾನುವಾರ ನಡೆದ ನಿವೃತ್ತ ಐಪಿಎಸ್ ಅಧಿಕಾರಿ ಸಿ. ಚಂದ್ರಶೇಖರ್ ಅವರ 'ಕಾವೇರಿ ವಿವಾದ– ಒಂದು ಐತಿಹಾಸಿಕ ಹಿನ್ನೋಟ' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, 'ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ, ಕ್ರಿಕೆಟಿಗರಾದ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಸಾಹಿತಿಗಳು ಸೇರಿದಂತೆ ರಾಜ್ಯದಲ್ಲಿರುವ ಅನೇಕ ಪ್ರಭಾವಿ ಅತಿಗಣ್ಯ ವ್ಯಕ್ತಿಗಳು ಗಟ್ಟಿ ಧ್ವನಿಯಲ್ಲಿ ರಾಜ್ಯದ ಪರ ಮಾತನಾಡಿದ್ದರೆ ನ್ಯಾಯ ದೊರಕುತ್ತಿತ್ತು' ಎಂದರು.

ಈಗ ಇಂತಹ ವಿಚಾರಗಳಲ್ಲಿ ರಾಜ್ಯದ ಪರ ಮಾತನಾಡಬೇಕಾದ ರಾಜಕೀಯ ನಾಯಕತ್ವ ದುರ್ಬಲವಾಗಿದೆ. ಮತದಾರರೂ ದುರ್ಬಲ ಆಗಿರುವುದು ಇದಕ್ಕೆ ಕಾರಣ. ಐತಿಹಾಸಿಕ ಅನ್ಯಾಯದ ಹಳೆಯ ಗಾಯವನ್ನೇ ನೆಕ್ಕಿಕೊಳ್ಳುತ್ತಾ ಕೂರುವ ಕಾಲವೂ ಇದಲ್ಲ. ಇರುವ ನೀರಿನ ಸದ್ಬಳಕೆಯ ಜತೆಗೆ, ಮೇಕೆದಾಟು ಜಲಾಶಯ ನಿರ್ಮಾಣದಂತಹ ಶಾಶ್ವತ ಪರಿಹಾರ ಕ್ರಮಗಳಿಗಾಗಿ ಜನರು ಒಕ್ಕೊರಲಿನ ಹೋರಾಟ ನಡೆಸಬೇಕಿದೆ ಎಂದು ಹೇಳಿದರು.

ಕಾವೇರಿ ಜಲ ವಿವಾದದಲ್ಲಿ ನ್ಯಾಯ ಮಂಡಳಿಯಿಂದ ಕರ್ನಾಟಕಕ್ಕೆ ಸತತವಾಗಿ ಅನ್ಯಾಯ ಆಯಿತು. ಆದರೆ, ಸುಪ್ರೀಂ ಕೋರ್ಟ್‌ನಲ್ಲಿ ಒಂದಷ್ಟು ನ್ಯಾಯ ರಾಜ್ಯಕ್ಕೆ ಸಿಕ್ಕಿದೆ. ಇದಕ್ಕೆ ಕಾರಣ ಫಾಲಿ ಎಸ್. ನರೀಮನ್ ಅವರಂತಹ ಹಿರಿಯ ವಕೀಲರ ಪ್ರಯತ್ನ ಎಂದು ಹೇಳಿದರು.

'ಸರ್ಕಾರದ ಜತೆ ನಿಂತಿದ್ದೆ'

'ಕಾವೇರಿ ನ್ಯಾಯಮಂಡಳಿ ಐ ತೀರ್ಪಿನ ವಿರುದ್ಧ ವಿಧಾನ ಸಭೆಯಲ್ಲಿ ನಿರ್ಣಯ ಅಂಗೀಕರಿಸಿದ್ದರಿಂದ ರಾಜ್ಯ ಸರ್ಕಾರವೇ ಅಪಾಯಕ್ಕೆ ಸಿಲುಕಿತ್ತು. ಆಗ ಸುಪ್ರೀಂ ಕೋರ್ಟ್‌ನಲ್ಲಿದ್ದ ನಾನು ಸರ್ಕಾರದ ಜತೆ ನಿಂತಿದ್ದೆ. ರಾಜ್ಯದ ಹಿತಾಸಕ್ತಿ ರಕ್ಷಿಸಲು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಹುದ್ದೆಗೆ ರಾಜೀನಾಮೆ ನೀಡುವುದಕ್ಕೂ ಸಿದ್ಧ ಎಂಬ ಭರವಸೆಯನ್ನು ಕರ್ನಾಟಕದ ಆಗಿನ ಕಾನೂನು ಸಚಿವರಿಗೆ ನೀಡಿದ್ದೆ' ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ಹೇಳಿದರು.



ವಿ. ಗೋಪಾಲ ಗೌಡ

ಚಡಚಣದಲ್ಲಿ ರೌಡಿ ಶೀಟರ್ ಅಶೋಕ ಹತ್ಯೆ

ಚಡಚಣ (ವಿಜಯಪುರ ಜಿಲ್ಲೆ): ಪಟ್ಟಣದ ಹೊರ ವಲಯದ ನೀವರಗಿ ರಸ್ತೆಯಲ್ಲಿ ರೌಡಿ ಶೀಟರ್ ಅಶೋಕ ಮಲ್ಲಪ್ಪ ಗಂಟಗಲ್ಲಿ ಎಂಬಾತನನ್ನು ಭಾನುವಾರ ಮಧ್ಯಾಹ್ನ ದುಷ್ಕರ್ಮಿಗಳು ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ.

ನೀವರಗಿ ರಸ್ತೆಗೆ ಹೊಂದಿಕೊಂಡಿರುವ ತನ್ನ ತೋಟದ ಮನೆಯಿಂದ ಪಟ್ಟಣದತ್ತ ಬೈಕ್ ಮೇಲೆ ಬರುತ್ತಿದ್ದಾಗ, ಹಿಂಬದಿಯಿಂದ ಬಂದ ದುಷ್ಕರ್ಮಿಗಳು ಗುಂಡು ಹಾರಿಸಿದ್ದಾರೆ. ಗುಂಡು ತಗುಲಿ ಬೈಕ್ ನಿಂದ ಬಿದ್ದಿದ್ದ ಆತನನ್ನು ಅಲ್ಲಿದ್ದ ಜನರು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸುತ್ತಿದ್ದಂತೆ ಆತ ಮೃತಪಟ್ಟಿದ್ದಾಗಿ ಪೊಲೀಸರು ತಿಳಿಸಿದ್ದಾರೆ.

'ಸುಮಾರು 15 ವರ್ಷಗಳ ಹಿಂದೆ ಕೊಲೆ ಪ್ರಕರಣದಲ್ಲಿ ಅಪರಾಧಿಯಾಗಿ ಜೈಲು ಸೇರಿದ್ದ ಅಶೋಕ ಎರಡು ವರ್ಷಗಳ ಹಿಂದೆ ಜೈಲಿನಿಂದ ಬಿಡುಗಡೆಯಾಗಿದ್ದ. ಕೊಲೆಗೆ ಕಾರಣ ತಿಳಿದು ಬಂದಿಲ್ಲ. ಹಳೆಯ ವೈಷಮ್ಯದಿಂದ ಹತ್ಯೆಯಾಗಿದೆ' ಎಂದು ಪೊಲೀಸರು ತಿಳಿಸಿದ್ದು ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗುಟ್ಕಾ ತರಲು ಒಪ್ಪದ್ದಕ್ಕೆ ಬಾಲಕಿಯ ಕೊಲೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಗುಟ್ಕಾ ತಂದುಕೊಡಲು ನಿರಾಕರಿಸಿದ ಕಾರಣಕ್ಕಾಗಿ ವ್ಯಕ್ತಿಯೊಬ್ಬ ತಾಲ್ಲೂಕಿನ ಕಿನ್ನಾಳ ಗ್ರಾಮದಲ್ಲಿ ಏಳು ವರ್ಷದ ಅನುಶ್ರೀ ಮಡಿವಾಳರ ಎಂಬ ಬಾಲಕಿಯನ್ನು ಕೊಲೆ ಮಾಡಿದ್ದಾನೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಯಶೋಧಾ ವಂಟಗೋಡಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಇದೇ ವರ್ಷದ ಏಪ್ರಿಲ್ ತಿಂಗಳಿನಲ್ಲಿ ಅನುಶ್ರೀ ಕೊಲೆಯಾಗಿತ್ತು. ಆರೋಪಿ ಅದೇ ಗ್ರಾಮದ ಸಿದ್ದಲಿಂಗಯ್ಯ ನಾಯ್ಕಲ್ ಬಾಲಕಿಯ ಮನೆ ಪಕ್ಕದಲ್ಲಿಯೇ ವಾಸವಾಗಿದ್ದ.

ಅನುಶ್ರೀ ಮಡಿವಾಳರ

ಘಟನೆ ನಡೆದ ಬೆಳಿಗ್ಗೆ ಒಂದು ಸಲ ಅನುಶ್ರೀಗೆ ಹೇಳಿ ಗುಟ್ಕಾ ತರಿಸಿಕೊಂಡಿದ್ದ. ಅದೇ ದಿನ ಮತ್ತೊಂದು ಸಲ ಗುಟ್ಕಾ ತಂದುಕೊಡುವಂತೆ ಹೇಳಿದಾಗ ಅನುಶ್ರೀ ಒಪ್ಪಿಲ್ಲ. ಇದೇ ಸಿಟ್ಟಿಗೆ ಆರೋಪಿ ಪಕ್ಕದಲ್ಲಿದ್ದ ಕಟ್ಟಿಗೆಯಿಂದ ಬಾಲಕಿಯ ತಲೆಗೆ ಜೋರಾಗಿ ಹೊಡೆದಿದ್ದರಿಂದ ಅನುಶ್ರೀ ಮೃತಪಟ್ಟಿದ್ದಾಳೆ' ಎಂದು ಅವರು ಹೇಳಿದರು.

'ಕೊಲೆ ಮಾಡಿದ ಬಳಿಕ ಆರೋಪಿ ಬಾಲಕಿಯ ಮೃತದೇಹವನ್ನು ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ ಇರಿಸಿದ್ದ' ಎಂದು ತಿಳಿಸಿದರು.

ಕಲುಷಿತ ನೀರು ಸೇವನೆ ಒಬ್ಬರಲ್ಲಿ ಕಾಲರಾ ಪತ್ತೆ

ಪ್ರಜಾವಾಣಿ ವಾರ್ತೆ

ತುಮಕೂರು: ಮಧುಗಿರಿ ತಾಲ್ಲೂಕಿನ ಚಿನ್ನೇನಹಳ್ಳಿ ಗ್ರಾಮದಲ್ಲಿ ಕಲುಷಿತ ನೀರು ಸೇವಿಸಿ ಅಸ್ವಸ್ಥರಾಗಿ ಚಿಕಿತ್ಸೆ ಪಡೆದ ಒಬ್ಬರಲ್ಲಿ ಕಾಲರಾ ಸೋಂಕು ದೃಢಪಟ್ಟಿದೆ.

ಜೂನ್ 10ರಂದು ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದ ಕೃಷ್ಣಪ್ಪ (32) ಎಂಬುವರಲ್ಲಿ ಸೋಂಕು ಕಾಣಿಸಿಕೊಂಡಿದೆ. ಕೃಷ್ಣಪ್ಪ ಈಗಾಗಲೇ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ. ದಾಬಸ್‌ಪೇಟೆಯ ಸಂಬಂಧಿಕರ ಮನೆಯಲ್ಲಿದ್ದಾರೆ. ಇನ್ನೂ ಚಿಕಿತ್ಸೆ ಅಗತ್ಯವಿದೆ ಎಂದು ಜಿಲ್ಲಾ ಆಸ್ಪತ್ರೆಯ ವೈದ್ಯರು ತಿಳಿಸಿದ್ದರೂ ಅವರು ಮನೆಗೆ ತೆರಳಿದ್ದಾರೆ.

ಕೃಷ್ಣಪ್ಪ ಅವರ ಮಲದ ಮಾದರಿಯನ್ನು ಎರಡು ಪ್ರಯೋಗಾಲಯಗಳಿಗೆ ಕಳುಹಿಸಲಾಗಿತ್ತು. ಎರಡೂ ವರದಿಯಲ್ಲಿ ಕೃಷ್ಣಪ್ಪ ಅವರಿಗೆ ಕಾಲರಾ ಸೋಂಕು ದೃಢಪಟ್ಟಿದೆ.

'ಕಲುಷಿತ ನೀರು ಸೇವಿಸಿ ಅಸ್ವಸ್ಥರಾದ ಚಿನ್ನೇನಹಳ್ಳಿಯ 15 ಗ್ರಾಮಸ್ಥರು ಖಾಸಗಿ ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇದರಲ್ಲಿ ಜಯಲಕ್ಷ್ಮಿ (32), ಕೆಂಪಮ್ಮ (60), ಲಕ್ಷ್ಮಿನಾರಾಯಣ (32) ಎಂಬುವರ ಸ್ಥಿತಿ ಗಂಭೀರವಾಗಿದೆ. ಉಳಿದವರು ಆರೋಗ್ಯವಾಗಿದ್ದಾರೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಆರೋಗ್ಯ ಸ್ಥಿತಿ ಗಂಭೀರವಾಗಿರುವ ಗ್ರಾಮಸ್ಥರಿಗೆ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡುತ್ತಿಲ್ಲ. ಖಾಸಗಿ ಆಸ್ಪತ್ರೆಗಳಿಗೆ ಕಳುಹಿಸುತ್ತಿದ್ದಾರೆ. ಅಸ್ವಸ್ಥರಾದವರಲ್ಲಿ ಹೆಚ್ಚಿನವರು ಬಡವರಾಗಿದ್ದು ಖಾಸಗಿ ಆಸ್ಪತ್ರೆ ಶುಲ್ಕ ಪಾವತಿಸಲು ಪರದಾಡುತ್ತಿದ್ದಾರೆ' ಎಂದು ಚಿನ್ನೇನಹಳ್ಳಿ ಗ್ರಾಮದ ರಾಮಸ್ವಾಮಿ ಅವರು ಅಳಲು ತೋಡಿಕೊಂಡರು.

ಸ್ಮಶಾನವಿಲ್ಲದೆ ರಸ್ತೆ ಬದಿಯಲ್ಲೇ ಶವ ದಹನ

ರಾಮನಗರ: ಸ್ಮಶಾನ ಜಾಗದ ಸಮಸ್ಯೆಯಿಂದಾಗಿ ತಾಲ್ಲೂಕಿನ ಕೂನಮುದ್ದನಹಳ್ಳಿಯಲ್ಲಿ ಭಾನುವಾರ ವೃದ್ಧರೊಬ್ಬರ ಶವವನ್ನು ಗ್ರಾಮಸ್ಥರು ರಸ್ತೆ ಬದಿಯೇ ದಹನ ಮಾಡಿದ್ದಾರೆ.

ರುದ್ರಯ್ಯ (65) ಎಂಬುವರ ಶವವನ್ನು ಕಲ್ಯಾಣಿ ಎದುರಿನ ಜಾಗಕ್ಕೆ ತೆಗೆದುಕೊಂಡು ಹೋದಾಗ ವ್ಯಕ್ತಿಯೊಬ್ಬರು ಈ ಜಾಗ ತಮಗೆ ಸೇರಿದ್ದು ಎಂದು ದಾಖಲೆ ತೋರಿಸಿ ಅಂತ್ಯಕ್ರಿಯೆ ಮಾಡದಂತೆ ತಾಕೀತು ಮಾಡಿದರು.

ಬೇರೆ ಜಾಗವಿಲ್ಲದ್ದರಿಂದ ರಸ್ತೆ ಬದಿಯೇ ಶವ ದಹನ ಮಾಡಲಾಯಿತು ಎಂದು ಗ್ರಾಮಸ್ಥರು ಹೇಳಿದರು. ಗ್ರಾಮದಲ್ಲಿ ಸುಮಾರು 250 ಕುಟುಂಬಗಳಿದ್ದು, 125 ಕುಟುಂಬಗಳಿಗೆ ಸ್ವಂತ ಜಮೀನಿಲ್ಲ. ಸ್ಮಶಾನಕ್ಕೆಂದು ಇದುವರೆಗೆ ಜಾಗವನ್ನು ತಾಲ್ಲೂಕು ಆಡಳಿತ ಗುರುತಿಸಿ ಹದ್ದುಬಸ್ತು ಮಾಡಿಕೊಟ್ಟಿಲ್ಲ. ಕಲ್ಯಾಣಿ ಎದುರಿನ ಜಾಗದಲ್ಲೇ ಅಂತ್ಯಸಂಸ್ಕಾರ ಮಾಡಿ ಎಂದು ಮೌಖಿಕವಾಗಿ ಹೇಳಿದ್ದ ಅಧಿಕಾರಿಗಳು ಮತ್ತೆ ತಲೆ ಹಾಕಲಿಲ್ಲ ಎಂದು ಗ್ರಾಮಸ್ಥರು ದೂರಿದರು.

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿಯಮಿತ (ಬೆಂಗಳೂರು ಡೇರಿ)

ಡಿ.ಆರ್.ಕಾಲೇಜು ಅಂಚೆ, ಡಾ: ಎಂ.ಹೆಚ್.ಮರೀಗೌಡರಸ್ತೆ, ಬೆಂಗಳೂರು–560029,

ಇ–ಮೇಲ್: bamulpurchase@gmail.com, ವೆಬ್‌ಸೈಟ್: www.bamulnandini.coop, ದೂರವಾಣಿ: 080–26096248

ಐರಿಫ್‌ಟಿ ಸಂಖ್ಯೆ:ಬಮೂಲ್/ಪಿಯುಆರ್/09/1802/ಟಿ–308/2024–25 ದಿ: 13.06.2024

ಅಲ್ಪಾವಧಿ–ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ಪ್ರಕಟಣೆಯನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್

ಬೆಂಗಳೂರು ಸಹಕಾರ ಹಾಲು ಒಕ್ಕೂಟ ನಿ.(ಬಮೂಲ್), ಬೆಂಗಳೂರು ರವರು ಆಸಕ್ತಿಯುಳ್ಳ ಅರ್ಹ ತಯಾರಕರು/ ಸರಬರಾಜುದಾರರಿಂದ ಈ ಕೆಳಕಂಡ ಸಾಮಗ್ರಿಗಳ ಸರಬರಾಜಿಗೆ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದೆ.

ಕ್ರ.ಸ	ಸಾಮಗ್ರಿಯ ವಿವರ	ಪರಿಮಾಣ	ಅಂದಾಜು (ಲಕ್ಷಗಳಲ್ಲಿ)	ಟೆಂಡರ್ ಸಂಖ್ಯೆ
01	Liquid Petroleum Gas Supply, Operation and maintenance of LPG Bullets at Main Dairy-BAMUL for period of one Year.	14,00,000 Kgs (1400MT)	1428.00	KMF/2024-25/IND0778
02	Supply & fixing of LED Board with Acrylic Letters for a period of one year.	2000 Sq ft	15.00	KMF/2024-25/IND0779
03	Vehicle Painting for advertisement for a period of one year.	50000 Sq ft	10.00	KMF/2024-25/IND0780
04	Supply of Masala Blend to Main Dairy On Staggered Basis for a period of one year.	800 Kgs	9.912	KMF/2024-25/IND0781

1	ಇ–ಟೆಂಡರ್ ದಾಖಲೆಗಳು ಲಭಿಸುವ ದಿನಾಂಕ ಮತ್ತು ಸಮಯ	14.06.2024 ರಿಂದ 15.07.2024 ಅಪರಾಹ್ನ 02.00 ಗಂಟೆವರೆಗೆ
2	ಪ್ರೀ–ಬಿಡ್ ಮೀಟಿಂಗ್ ಮತ್ತು ಟೆಂಡರ್ ಬಗ್ಗೆ ಸ್ಪಷ್ಟನೆ ದಿನಾಂಕ ಮತ್ತು ಸಮಯ	26.06.2024 ಬೆಳಿಗ್ಗೆ 11.00 ಗಂಟೆಗೆ ವರೆಗೆ
3	ಟೆಂಡರ್ ಸಲ್ಲಿಸುವ/ನಮೂದಿಸುವ ಕೊನೆಯ ದಿನಾಂಕ ಮತ್ತು ಸಮಯ	15.07.2024 ಅಪರಾಹ್ನ 02.00 ಗಂಟೆವರೆಗೆ
4	ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	16.07.2024 ಅಪರಾಹ್ನ 02.35 ಗಂಟೆಗೆ
5	ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ	19.07.2024 ಬೆಳಿಗ್ಗೆ 11.30 ಗಂಟೆಗೆ
6	ತಾಂತ್ರಿಕ ಮತ್ತು ವಾಣಿಜ್ಯ ಟೆಂಡರ್ ತೆರೆಯುವ ಸ್ಥಳ	ಬೆಂಗಳೂರು ಸಹಕಾರ ಹಾಲು ಒಕ್ಕೂಟ (ನಿ.) (ಬೆಂಗಳೂರು ಡೇರಿ) ಮಂಡಲಿ ಸಭಾಂಗಣ

ಟೆಂಡರ್‌ದಾರರು ಮೇಲೆ ತಿಳಿಸಿರುವ ಸೇವೆಗಳಿಗೆ ಪ್ರತ್ಯೇಕ ಟೆಂಡರ್ ಸಲ್ಲಿಸಬೇಕು. ಗುತ್ತಿಗೆ ನೀಡಿಕೆಗೆ ಅರ್ಹರಾಗಲು ಹೊಂದಿರಬೇಕಾದ ಅರ್ಹತಾ ಅಗತ್ಯತೆಯನ್ನು ವಿಭಾಗ VII ರಲ್ಲಿ ತಿಳಿಸಲಾಗಿದೆ.

ಇ.ಎಂ.ಡಿ. ಬಾಬ್ತಿನ ಹಣವು ಟೆಂಡರ್ ಅವಧಿಯ 45 ದಿನಗಳ ವಾಯ್ದೆ ಮೀರಿದ್ದು, ಅಂದರೆ ಒಟ್ಟು 135 ದಿನಗಳ ಸಿಂಧುತ್ವದ ಅವಧಿಗೆ ಅನ್ವಯವಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಶುಲ್ಕ ಇ–ಪಾವತಿಯ ವಿಧಾನಗಳು ಮತ್ತು ಟೆಂಡರ್ ದಾಖಲೆಗಳ ವಿವರವನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ವೀಕ್ಷಿಸಬಹುದು. ಆಸಕ್ತಿಯುಳ್ಳ ಟೆಂಡರ್‌ದಾರರು ಹೆಚ್ಚಿನ ಮಾಹಿತಿಯನ್ನು ಮೇಲ್ಕಾಣಿಸಿದ ವಿಳಾಸದಲ್ಲಿ ಪಡೆಯಬಹುದಾಗಿರುತ್ತದೆ, ಸಹಾಯವಾಣಿ ಸಂ.8046010000/8068948777.

ವ್ಯವಸ್ಥಾಪಕ ನಿರ್ದೇಶಕರು
ಟೆಂಡರ್‌ಆಹ್ವಾನಿಸುವ ಪ್ರಾಧಿಕಾರ(ಬಮೂಲ್)

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ನಮ್ಮ ಉದ್ಯೋಗ ಹಾಗೂ ಆದರ್ಶವು ಪರಸ್ಪರ ಹೊಂದಿಕೆ ಆಗದೇ ಇದ್ದರೆ ಜೀವನದಲ್ಲಿ ಸುಖ ಸಿಗಲಾರದು.

-ಶಿವರಾಮ ಕಾರಂತ

ಇಂಧನ ಬೆಲೆ: ಜನಹಿತ– ವರಮಾನದ ನಡುವೆ ಸಮತೋಲನ ಬೇಕು

ಲೋಕಸಭಾ ಚುನಾವಣೆಯ ಪ್ರಕ್ರಿಯೆ ಪೂರ್ಣಗೊಂಡ ನಂತರದಲ್ಲಿ ರಾಜ್ಯದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯನ್ನು ಹೆಚ್ಚಿಸಲಾಗಿದೆ. ದೇಶದಲ್ಲಿ 2010ರಲ್ಲಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರವು ಪೆಟ್ರೋಲ್ ಬೆಲೆಯನ್ನು ನಿಯಂತ್ರಣ ಮುಕ್ತವಾಗಿಸಿತು. ನಂತರ, 2014ರಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಡೀಸೆಲ್ ಬೆಲೆಯನ್ನು ನಿಯಂತ್ರಣದಿಂದ ಮುಕ್ತಗೊಳಿಸಿತು. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಆಗುವ ಏರಿಳಿತಗಳಿಗೆ ಅನುಗುಣವಾಗಿ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಸರಿಹೊಂದಿಸಿಕೊಳ್ಳುವುದು ಈ ನಡೆಯ ಉದ್ದೇಶ ಆಗಿತ್ತು. ಇದನ್ನು ಮಾರುಕಟ್ಟೆ ಸುಧಾರಣೆಯ ದಿಸೆಯಲ್ಲಿ ಕೈಗೊಂಡ ದಿಟ್ಟ ಕ್ರಮ ಎಂದು ಆಗ ಕೆಲವರು ಪ್ರಶಂಸಿಸಿದ್ದರು ಕೂಡ. ಕೇಂದ್ರ ಪೆಟ್ರೋಲಿಯಂ ಸಚಿವರು 2015ರಲ್ಲಿ ಸಂಸತ್ತಿಗೆ ನೀಡಿದ್ದ ಉತ್ತರವೊಂದರಲ್ಲಿ, 'ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಮಾರಾಟ ಕಂಪನಿಗಳು ಮಾರುಕಟ್ಟೆ ಪರಿಸ್ಥಿತಿಯನ್ನು ಆಧರಿಸಿ ತೀರ್ಮಾನಿಸುತ್ತವೆ' ಎಂದಿದ್ದರು. ಆದರೆ, ವಾಸ್ತವದಲ್ಲಿ ಭಾರತದಲ್ಲಿ ಜಾರಿಯಲ್ಲಿ ಇರುವ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು 'ನಿಯಂತ್ರಣದಿಂದ ಮುಕ್ತವಾಗಿಸುವ' ನೀತಿಯು ಮಾರುಕಟ್ಟೆಯ ಪರಿಸ್ಥಿತಿಯನ್ನು ಆಧರಿಸಿಲ್ಲ; ಬದಲಿಗೆ ಅದು ಚುನಾವಣಾ ವೇಳಾಪಟ್ಟಿಯನ್ನು ನೇರವಾಗಿ ಅವಲಂಬಿಸಿದೆ. ದೇಶದಲ್ಲಿ ವಿಧಾನಸಭೆ ಅಥವಾ ಲೋಕಸಭೆ ಚುನಾವಣೆ ಎದುರಾದ ಹೊತ್ತಿನಲ್ಲಿ ಈ ಎರಡು ತೈಲೋತ್ಪನ್ನಗಳ ಬೆಲೆಯನ್ನು ನಿಯಂತ್ರಿಸಲಾಗುತ್ತದೆ, ಚುನಾವಣೆ ಇಲ್ಲದಿದ್ದ ಸಂದರ್ಭಗಳಲ್ಲಿ ಅದನ್ನು ನಿಯಂತ್ರಣದಿಂದ ಮುಕ್ತವಾಗಿಸಲಾಗುತ್ತದೆ. ಈ ಮಾತಿಗೆ ಹಲವು ನಿದರ್ಶನಗಳು ಸಿಗುತ್ತವೆ. ಈ ಹಿನ್ನೆಲೆಯಲ್ಲಿಯೇ ಈಗ ರಾಜ್ಯ ಸರ್ಕಾರವು ಪೆಟ್ರೋಲ್ ಹಾಗೂ ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ಹೆಚ್ಚಿಸಿ, ಇವೆರಡು ಉತ್ಪನ್ನಗಳ ಚಿಲ್ಲರೆ ಮಾರಾಟ ದರ ಏರಿಸಿರುವುದನ್ನು ಅರ್ಥಮಾಡಿಕೊಳ್ಳಬೇಕು.

ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ಏರಿಕೆಯನ್ನು ರಾಜ್ಯ ಸರ್ಕಾರ ಪುನರ್ ಪರಿಶೀಲಿಸಬೇಕು

ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯಲ್ಲಿ ಆಗುವ ಏರಿಕೆಯು ಜನರ ನಿತ್ಯದ ವೆಚ್ಚಗಳನ್ನು ಹೆಚ್ಚಿಸುತ್ತದೆ. ಅಲ್ಲದೆ, ನೇರವಾಗಿ ಹಣದುಬ್ಬರದ ಏರಿಕೆಗೆ ಕಾರಣ ಆಗುತ್ತದೆ. ಕೋವಿಡ್ ಕಾರಣದಿಂದ ಜಾರಿಗೆ ಬಂದ ಲಾಕ್‌ಡೌನ್ ನಂತರದಲ್ಲಿ, 2022ರಲ್ಲಿ ದೇಶದಲ್ಲಿ ಹಣದುಬ್ಬರ ದರವು ವಿಪರೀತ ಮಟ್ಟಕ್ಕೆ ತಲುಪಿತ್ತು. ಆಗ 'ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಯನ್ನು ತಗ್ಗಿಸುವಂತೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಮನವಿ ಮಾಡಿಕೊಂಡಿತ್ತು. ಆದರೆ, ಆರ್‌ಬಿಐ ಮನವಿಗೆ ಸರ್ಕಾರಗಳು ಪೂರಕವಾಗಿ ಸ್ಪಂದಿಸದ ಕಾರಣಕ್ಕೆ, ಹಣದುಬ್ಬರ ದರವನ್ನು ನಿಯಂತ್ರಣದಲ್ಲಿ ಇರಿಸುವ ಹೊಣೆ ಹೊತ್ತಿರುವ ಆರ್‌ಬಿಐನ ಹಣಕಾಸು ನೀತಿ ಸಮಿತಿಯು ಅನಿವಾರ್ಯವಾಗಿ ರೆಪೊ ದರವನ್ನು ಹೆಚ್ಚಿಸಿತು' ಎಂಬ ವರದಿಗಳಿವೆ. ಇದರ ನೇರ ಪರಿಣಾಮವಾಗಿ ಸಾಲಗಳು ತುಟ್ಟಿಯಾದವು. ಈ ಏರಿಕೆಯ ಪರೋಕ್ಷ ಪರಿಣಾಮಗಳು ಇನ್ನೂ ಹಲವು. ಈಗ ಹಣದುಬ್ಬರವು ಶೇಕಡ 4.75ರಷ್ಟು ಇದೆ. ಇದು ಶೇ 4ಕ್ಕೆ ಇಳಿಕೆ ಕಾಣಬೇಕಿದೆ. ಈ ಹಂತದಲ್ಲಿ ರಾಜ್ಯ ಸರ್ಕಾರವು ಪೆಟ್ರೋಲ್, ಡೀಸೆಲ್ ಬೆಲೆಯನ್ನು ಹೆಚ್ಚಿಸಿರುವುದು ಸಮರ್ಥನೀಯ ಅಲ್ಲ. ವರಮಾನ ಸಂಗ್ರಹದ ಗುರಿಯನ್ನು ತಲುಪಲು ಈ ಹೆಚ್ಚಳ ಎಂಬ ಸಮರ್ಥನೆಯನ್ನು ಸರ್ಕಾರ ನೀಡಬಹುದಾದರೂ ಎಲ್ಲ ಬಗೆಯ ಉತ್ಪನ್ನಗಳ ಬೆಲೆ ಏರಿಕೆಯ ಮೇಲೆ ಅದು ಬೀರಬಹುದಾದ ಪರಿಣಾಮವನ್ನು ಗಮನಿಸಿದಾಗ ಈ ಸಮರ್ಥನೆಯು ದುರ್ಬಲವಾಗಿ ಕಾಣುತ್ತದೆ. ಚುನಾವಣೆ ಮುಗಿದಿರುವ ಕಾರಣ ತೈಲೋತ್ಪನ್ನ ಕಂಪನಿಗಳಿಗೆ ಪೆಟ್ರೋಲ್, ಡೀಸೆಲ್ ಬೆಲೆಯನ್ನು ಪ್ರತಿನಿತ್ಯ ಪರಿಷ್ಕರಿಸಲು ಕೇಂದ್ರ ಸರ್ಕಾರ ಕೂಡ ಶೀಘ್ರದಲ್ಲಿಯೇ ಅವಕಾಶ ಕಲ್ಪಿಸಬಹುದು. ಸರ್ಕಾರಗಳು ತಮ್ಮ ವರಮಾನ ಹೆಚ್ಚಳಕ್ಕೆ ಆದ್ಯತೆ ನೀಡುವಾಗ, ಜನರ ಆದಾಯದ ಮಿತಿಗಳ ಬಗ್ಗೆಯೂ ಗಮನಹರಿಸುವುದು ಒಳಿತು.

ಪೆಟ್ರೋಲ್, ಡೀಸೆಲ್‌ನಂತಹ ಜೀವನಾವಶ್ಯಕ ಉತ್ಪನ್ನಗಳ ಬೆಲೆಯಲ್ಲಿ ಸ್ಥಿರತೆ ಸಾಧಿಸದೆ ಹಣದುಬ್ಬರ ನಿಯಂತ್ರಣ ಕಷ್ಟಸಾಧ್ಯ. ಜೀವನಾವಶ್ಯಕ ವಸ್ತುಗಳ ಬೆಲೆಯನ್ನು ನಿರ್ಧರಿಸುವ ಅಧಿಕಾರವನ್ನು ಸಂಪೂರ್ಣವಾಗಿ ಮಾರುಕಟ್ಟೆ ಶಕ್ತಿಗಳಿಗೇ ಬಿಟ್ಟುಕೊಡುವುದು ಯುಕ್ತವಾದ ಕ್ರಮ ಆಗುವುದಿಲ್ಲ. ತೈಲೋತ್ಪನ್ನಗಳ ಬೆಲೆಯನ್ನು ಸಂಪೂರ್ಣವಾಗಿ ಸರ್ಕಾರಗಳೇ ತೀರ್ಮಾನಿಸುವ ವ್ಯವಸ್ಥೆಯು ಕಂಪನಿಗಳ ಆರ್ಥಿಕ ಹಿತಾಸಕ್ತಿಗೆ ಧಕ್ಕೆ ಉಂಟುಮಾಡಬಹುದು. ಚುನಾವಣೆಯ ಸಂದರ್ಭಗಳಲ್ಲಿ ಮಾತ್ರ ಬೆಲೆಯನ್ನು ಸಂಪೂರ್ಣವಾಗಿ ನಿಯಂತ್ರಣದಲ್ಲಿ ಇರಿಸುವುದು ಜನಹಿತದ ಕಾರ್ಯ ಆಗುವುದಿಲ್ಲ; ಅದು ಚುನಾವಣಾ ಹಿತಾಸಕ್ತಿಯ ಕಾರ್ಯ ಆಗುತ್ತದೆ. ಅಲ್ಲದೆ, ತೈಲೋತ್ಪನ್ನ ಮಾರಾಟ ಕಂಪನಿಗಳ ಹಣಕಾಸಿನ ಸ್ಥಿತಿಯ ಮೇಲೆ ಕೆಟ್ಟ ಪರಿಣಾಮ ಉಂಟುಮಾಡಬಹುದು. ಹೀಗಾಗಿ, ಜನರ ನಿತ್ಯದ ಬದುಕು, ಬೆಲೆ ಏರಿಕೆಯ ನಿಯಂತ್ರಣ, ತೈಲೋತ್ಪನ್ನ ಮಾರಾಟ ಕಂಪನಿಗಳ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಸರ್ಕಾರಗಳು ಪೆಟ್ರೋಲ್, ಡೀಸೆಲ್ ಬೆಲೆಯ ಮೇಲೆ ನಿಗಾ ಇರಿಸಬೇಕು. ರಾಜ್ಯ ಸರ್ಕಾರವು ಈಗ ಮಾಡಿರುವ ಏರಿಕೆಯನ್ನು ಪುನರ್ ಪರಿಶೀಲಿಸಬೇಕು.

ಕಾಂಗ್ರೆಸ್ ನೇತೃತ್ವದ ಸರ್ಕಾರಕ್ಕೆ ವರ್ಷ: 'ಗ್ಯಾರಂಟಿ'ಯಾಚೆಗೆ ಬೇಕಿದೆ ಓಟ

ಇನ್ನಾದರೂ ಸಿಗಲಿ ಪ್ರಗತಿಗೆ ಸ್ಪರ್ಶ

ಗತಿಬಿಂಬ

ವೈ.ಗ. ಜಗದೀಶ್

ಆಡಳಿತವೆಂಬ ದೋಣಿಯನ್ನು ನಾಡಿನ ಜನ ಸಿದ್ದರಾಮಯ್ಯ ಅವರ ಕೈಗೆ ಕೊಟ್ಟು ಒಂದು ವರ್ಷ ದಾಟಿತು. ಕೆಲವರು ಅವರ ಜತೆ ದೋಣಿ ಏರಿದರು. ದೋಣಿ ಏರಲಾರದೆ ನೀರಿನಲ್ಲಿದ್ದವರು ಈಜಾಡುತ್ತಾ, ಮುಳುಗೇಳುತ್ತಲೇ ಇದ್ದಾರೆ. ಆಚೀಚೆಯ ದಡಗಳಲ್ಲಿ ನಿಂತವರು ದೋಣಿ ತಮ್ಮತ್ತ ಬಂದು ನೆಮ್ಮದಿಯ ದಡವನ್ನು ಸೇರಿಸಬಹುದೆಂಬ ನಿರೀಕ್ಷೆಯಲ್ಲಿಯೇ ಕಾದಿದ್ದಾರೆ.

ಬಿಜೆಪಿ ನೇತೃತ್ವದ ಸರ್ಕಾರದ ವಿರುದ್ಧ ಭ್ರಷ್ಟಾಚಾರ, ಬೆಲೆ ಏರಿಕೆಯಂತಹ ಆರೋಪಗಳ ಸರಮಾಲೆಯನ್ನೇ ಮುಂದಿಟ್ಟುಕೊಂಡು ಚುನಾವಣೆ ಎದುರಿಸಿದ ಕಾಂಗ್ರೆಸ್ ನಾಯಕರು, ಇವೆರಡಕ್ಕೂ ಕೊನೆಹಾಡುವ ಮಾತುಗಳನ್ನು ಆಡಿದ್ದುಂಟು. 'ಬೆಲೆ ಏರಿಕೆಯಿಂದ ಕಂಗಾಲಾಗಿರುವ ಜನರಿಗೆ ನೆರವಾಗಲು 'ಗ್ಯಾರಂಟಿ'ಗಳನ್ನು ನೀಡುತ್ತೇವೆ' ಎಂಬ ವಾಗ್ದಾನವನ್ನು ಬಹುಮಟ್ಟಿಗೆ ಈಡೇರಿಸಿದ್ದಾರೆ. ಆದರೆ, ಬೆಲೆ ಏರಿಕೆ ನಿಯಂತ್ರಿಸಲು ಸಾಧ್ಯವಾಗಿಲ್ಲ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಾಗುವ ಏರಿಳಿತ, ವ್ಯಾಪಾರಿಗಳು ಮತ್ತು ಮಧ್ಯವರ್ತಿಗಳ ಕಳ್ಳಾಟಗಳು ನಿತ್ಯ ಬಳಕೆಯ ವಸ್ತುಗಳ ಬೆಲೆಯನ್ನು ನಿರ್ಧರಿಸುತ್ತವೆ. ಹಾಗಾಗಿ, ಎಲ್ಲ ವಸ್ತುಗಳ ಬೆಲೆಗಳನ್ನೂ ರಾಜ್ಯ ಸರ್ಕಾರವೊಂದೇ ನಿಯಂತ್ರಿಸಲು ಅಥವಾ ಕಡಿಮೆ ಮಾಡಲು ಸಾಧ್ಯವಾಗದು. ಕೇಂದ್ರ– ರಾಜ್ಯ ಸರ್ಕಾರಗಳು ಕೂಡಿ ಕೆಲಸ ಮಾಡಿದರಷ್ಟೇ ಸಾಧ್ಯ. ಆದರೆ, ಸ್ಥಳೀಯವಾಗಿ ಬೆಳೆಯುವ ಅಥವಾ ಉತ್ಪಾದನೆಯಾಗಿ ಮಾರುಕಟ್ಟೆ ಪ್ರವೇಶಿಸುವ ವಸ್ತುಗಳ ಬೆಲೆಯನ್ನು ಮಧ್ಯವರ್ತಿಗಳು, ವ್ಯಾಪಾರಿಗಳು ಹಾಗೂ ಕಾಳಸಂತೆಕೋರರ ಕೂಟವೇ ನಿರ್ಧರಿಸುತ್ತದೆ. ಇದನ್ನು ಹದ್ದುಬಸ್ತಿಗೆ ತರಲು ಆಹಾರ ಇಲಾಖೆ, ಕಾನೂನು ಮಾಪನ ಇಲಾಖೆಯ ಬಳಿ ಹಲವು ಅಸ್ತ್ರಗಳಿವೆ. ವ್ಯಾಪಾರಿಗಳಿಂದ 'ಮಾಮೂಲು' ದೋಚಲು ಈ ಇಲಾಖೆಗಳನ್ನು ಬಳಸಿಕೊಂಡಿದ್ದರಿಂದಾಗಿ ಜನರ ಹಿತಾಸಕ್ತಿಯನ್ನು ಕಾಪಾಡಲು ಆದ್ಯತೆಯೇ ಇಲ್ಲದಂತಾಗಿದೆ.

ಬೆಲೆ ಏರಿಕೆಯಿಂದ ಈಗಲೂ ಬೇಯುತ್ತಲೇ ಇರುವ ಜನರಿಗೆ ಮತ್ತೊಂದು ಬರೆ ಹಾಕುವ ರೀತಿಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಮಾರಾಟ ತೆರಿಗೆಯನ್ನು ರಾಜ್ಯ ಸರ್ಕಾರ ಭಾರಿ ಪ್ರಮಾಣದಲ್ಲಿ ಹೆಚ್ಚಿಸಿದೆ. ಇಂಧನ ದರ ಹೆಚ್ಚಳವಾದರೆ ಸರಕು ಸಾಗಣೆ ವೆಚ್ಚ ಏರಿಕೆಯಾಗುವುದರಿಂದ, ದಿನಬಳಕೆಯ ಎಲ್ಲ ವಸ್ತುಗಳ ಬೆಲೆಯೂ ಹೆಚ್ಚಾಗುತ್ತದೆ. ಖಾಸಗಿ ವಾಹನ ಬಳಸುವವರಿಗೆ ಹೊರೆಯಾಗುತ್ತದೆ. ಸರ್ಕಾರಿ ಬಸ್ ಪ್ರಯಾಣ ದರ ಹೆಚ್ಚಳದ ಬೇಡಿಕೆ ಸಾರಿಗೆ ನಿಗಮಗಳಿಂದ ಬಂದರೆ, ಆ ದರ ಹೆಚ್ಚಿಸುವ ಅನಿವಾರ್ಯವೂ ಎದುರಾಗಲಿದೆ. ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಿಸಿದ್ದರಿಂದ ವರ್ಷಕ್ಕೆ ಹೆಚ್ಚುವರಿಯಾಗಿ ₹ 3 ಸಾವಿರ ಕೋಟಿ ಸಿಗಲಿದೆ ಎಂದು ವಾಣಿಜ್ಯ ತೆರಿಗೆ ಇಲಾಖೆ ಅಂದಾಜಿಸಿದೆ. ವಾಣಿಜ್ಯ ತೆರಿಗೆಯ ಬಾಬ್ತಿನಿಂದ ₹ 1.10 ಲಕ್ಷ ಕೋಟಿ ಸಿಗಲಿದೆ ಎಂದು ಬಜೆಟ್‌ನಲ್ಲಿ ಅಂದಾಜಿಸಲಾಗಿದೆ. ಅಷ್ಟು ದೊಡ್ಡ ಮೊತ್ತಕ್ಕೆ, ಇಂಧನ ತೆರಿಗೆ ಏರಿಸಿದ್ದರಿಂದಾಗಿ ಸಿಗುವ ಮೊತ್ತ ಅಂತಹ ದೊಡ್ಡದೇನಲ್ಲ. ಈವರೆಗೆ 15 ಬಾರಿ ಬಜೆಟ್ ಮಂಡಿಸಿ ದಾಖಲೆ ನಿರ್ಮಿಸಿರುವ ಸಿದ್ದರಾಮಯ್ಯನವರಿಗೆ ₹ 3 ಸಾವಿರ ಕೋಟಿಯನ್ನು ಹೆಚ್ಚುವರಿಯಾಗಿ ಹೊಂದಿಸುವುದೇನೂ ಕಷ್ಟವಲ್ಲ. ವಿವಿಧ ಇಲಾಖೆಗಳಲ್ಲಿ ನಿತ್ಯ ಆಗುತ್ತಿರುವ ಸೋರಿಕೆ ತಡೆ, ಅನಗತ್ಯ ವೆಚ್ಚಕ್ಕೆ ನಿರ್ಬಂಧ ವಿಧಿಸಿದರೆ ಇಂಧನ ಬೆಲೆ ಏರಿಕೆಯಿಂದ ಲಭ್ಯವಾಗುವ ಮೊತ್ತಕ್ಕಿಂತ ಹೆಚ್ಚಿನ ಹಣವೇ ಸಿಕ್ಕೀತು.

ಬಿಜೆಪಿ ನೇತೃತ್ವದ ಸರ್ಕಾರದಲ್ಲಿ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿದೆ ಎಂದು ವಿರೋಧ ಪಕ್ಷದಲ್ಲಿದ್ದಾಗ ಕಾಂಗ್ರೆಸ್ ದೊಡ್ಡ ಸದ್ದು ಮಾಡಿತ್ತು. 'ಪೇಸಿಎಂ' ಎಂಬ ವಿಶಿಷ್ಟ ಅಭಿಯಾನವನ್ನೂ ನಡೆಸಿತ್ತು. ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಭ್ರಷ್ಟಾಚಾರ ತೊಲಗಿ, ಉತ್ತಮ ಆಡಳಿತ ಬರುತ್ತದೆ ಎಂಬ ನಿರೀಕ್ಷೆಯೇನೂ ಇರಲಿಲ್ಲ. ಆದರೂ ಭ್ರಷ್ಟಾಚಾರಕ್ಕೆ ಮೂಗುದಾರ ಬಿದ್ದು, ಉತ್ತಮ ಆಡಳಿತ ಸಿಗಬಹುದೆಂಬ ಹಂಬಲದಲ್ಲಿ ಕಾಂಗ್ರೆಸ್‌ಗೆ ಜನ ಭಾರಿ ಬಹುಮತ ಕೊಟ್ಟರು. ಒಂದು ವರ್ಷದಲ್ಲಿ ಭ್ರಷ್ಟಾಚಾರ ಕಡಿಮೆಯಾಗಿದೆಯೇ ಎಂಬ ಪ್ರಶ್ನೆಗೆ '9' ಧುತ್ತೆಂದು ಎದುರಾಗುತ್ತದೆ. ಕಾಮಗಾರಿಗಳ ಟೆಂಡರ್‌ಗಳಲ್ಲಿ ಪಾರದರ್ಶಕತೆ ತಂದಂತೆ ಕಾಣದು. ಒಮ್ಮೆ ಶೇ 40ರ ಕಮಿಷನ್‌ವರೆಗೆ ಕೊಂಡೊಯ್ದ ಮೇಲೆ ಮತ್ತೆ ಹಿಂದಕ್ಕೆ ದಬ್ಬುವುದು ಸುಲಭದ ಕೆಲಸವಲ್ಲ. ಅದನ್ನು ಕಡಿಮೆ ಮಾಡಬೇಕೆಂಬ ಇಚ್ಛಾಶಕ್ತಿ ಇಲ್ಲದೇ ಇರುವುದರಿಂದ ಅದು 'ಬೆಂಚ್ ಮಾರ್ಕ್' ಆಗಿ ನಿಂತುಬಿಟ್ಟಿದೆ. ಗ್ಯಾರಂಟಿಗಳಿಗೆ ಸುಮಾರು ₹ 36 ಸಾವಿರ ಕೋಟಿ ವೆಚ್ಚ ಮಾಡಬೇಕಾಗಿದ್ದರಿಂದ ಸರ್ಕಾರ ಬೃಹತ್ ಗಾತ್ರದ ಹೊಸ ಕಾಮಗಾರಿಗಳನ್ನು ಕೈಗೆತ್ತಿಕೊಂಡಿಲ್ಲ. ಹೀಗಾಗಿ, ಟೆಂಡರ್‌ಗಳಲ್ಲಿನ ಕಮಿಷನ್ ಮೊತ್ತ ಎಷ್ಟೆಂದು ಸ್ಪಷ್ಟವಾಗಿ ಗೋಚರವಾಗುತ್ತಿಲ್ಲ.

ರಾಜಕಾರಣಿಗಳು, ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು ತಾವು ಬಳಸುವ ಅಥವಾ ಖರೀದಿಸುವ ವಾಹನ ಸಂಖ್ಯೆ '9' ಇರಬೇಕೆಂದು ಬಯಸುತ್ತಾರೆ. ಅದೃಷ್ಟ ಸಂಖ್ಯೆ ಎಂಬ ಹುಸಿ ನಂಬಿಕೆಯೇ ಇದಕ್ಕೆ ಕಾರಣ. ಕಾಂಗ್ರೆಸ್ ನೇತೃತ್ವದ ಸರ್ಕಾರ ಬಂದ ಮೇಲೆ 9 ಹೆಚ್ಚು ಪ್ರಿಯವಾಗಿದೆ. ಬಿಜೆಪಿ ನೇತೃತ್ವದ ಸರ್ಕಾರದ ಅವಧಿಯಲ್ಲಿ ಕಮಿಷನ್ ಕೊಟ್ಟು ಕಾಮಗಾರಿಗಳ ಗುತ್ತಿಗೆ ಪಡೆದವರು, ಈಗ ಅಂತಿಮ ಬಿಲ್ ಮೊತ್ತ ಪಡೆಯಲು ಈ '9'ರಷ್ಟು ಕೊಟ್ಟರೆ ಮಾತ್ರ ಹಣ ಪಾವತಿಯಾಗುವ ಸನ್ನಿವೇಶ ಸೃಷ್ಟಿಯಾಗಿದೆ. ಅಂದರೆ, ಬಿಜೆಪಿಯವರ ವಿರುದ್ಧ ಶೇ 40 ಕಮಿಷನ್ ಆಪಾದನೆ ಮಾಡುತ್ತಿದ್ದವರು, ಈಗ ಅದಕ್ಕೆ 9 ಸೇರಿಸಿಕೊಂಡಿದ್ದಾರೆ ಎಂದು ವಿಧಾನಸೌಧದ ಗೋಡೆಗಳೇ ಗುನುಗುತ್ತವೆ. ಸರ್ಕಾರಿ ಕಚೇರಿಗಳಲ್ಲಿ ಕೂಡ ಲಂಚದ ಪ್ರಮಾಣವೇನೂ ಕಡಿಮೆಯಾಗಿಲ್ಲ.

ಸರ್ಕಾರಕ್ಕೆ ಒಂದು ವರ್ಷ ಕಳೆಯುವ ಹೊತ್ತಿಗೆ ವಾಲ್ಮೀಕಿ ಅಭಿವೃದ್ಧಿ ನಿಗಮದ ₹ 187 ಕೋಟಿ ನಾಪತ್ತೆಯಾಗಿರುವ ಸುದ್ದಿ ಹೊರಬಿದ್ದಿತು. ಲೆಕ್ಕಾಧಿಕಾರಿ ಚಂದ್ರಶೇಖರನ್ ಆತ್ಮಹತ್ಯೆ ಮಾಡಿಕೊಂಡಿದ್ದರಿಂದ ಈ ಹಗರಣ ಬಯಲಿಗೆ ಬಂತು. ಈ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ ಎಂಬ ಆರೋಪಕ್ಕೆ ಗುರಿಯಾಗಿರುವ ಸಚಿವ ಬಿ.ನಾಗೇಂದ್ರ ರಾಜೀನಾಮೆ ನೀಡಿದ್ದಾರೆ. ಹಾಗಂತ, ಇದು ಹೊಸ ಹಗರಣವೇನೂ ಅಲ್ಲ. ಲಾಗಾಯ್ತಿನಿಂದಲೂ ವಿವಿಧ ನಿಗಮಗಳ ಹಣವನ್ನು ಹೀಗೆ ಬೇರೆಲ್ಲೋ ವರ್ಗಾಯಿಸಿ ಲಪಟಾಯಿಸುವುದು ನಡೆದೇ ಇದೆ. ಆಗೊಮ್ಮೆ ಈಗೊಮ್ಮೆ ಬಯಲಿಗೆ ಬಂದರೂ ಅದನ್ನು ಮುಚ್ಚಿ ಹಾಕುತ್ತಲೇ ಬರಲಾಗಿದೆ. ಇಲ್ಲವೇ ಕಳ್ಳ ಲೆಕ್ಕ ತೋರಿಸಿ ಚುಕ್ತಾ ಮಾಡಿದ್ದೂ ಇದೆ. ಏನೇ ಇದ್ದರೂ ಈ ಹಗರಣ ಸರ್ಕಾರಕ್ಕೆ ಕಪ್ಪುಚುಕ್ಕೆಯೇ. ಭ್ರಷ್ಟಾಚಾರಕ್ಕೆ ಕಡಿವಾಣ ಹಾಕದಿದ್ದರೆ ಇಂತಹ ಪ್ರಕರಣಗಳು ಸರ್ಕಾರಕ್ಕೆ ಮುಜುಗರ ತರುವುದಂತೂ ಖಚಿತ.

'ಗ್ಯಾರಂಟಿ'ಗಳನ್ನೇ ಮುಂದಿಟ್ಟು, ಸಾಧನೆ ಮಾಡಿದ್ದೇವೆ ಎಂದು ಹೇಳುವ ಕಾಲ ಮುಗಿಯಿತು. ಚುನಾವಣೆಗಳೂ ಮುಗಿದವು. ಇನ್ನಾದರೂ ರಾಜ್ಯದ ಪ್ರಗತಿಗೆ ತಕ್ಕ ರೂಪುರೇಷೆ ಸಿದ್ಧ ಮಾಡಬೇಕು. ಗ್ಯಾರಂಟಿಗಳನ್ನು ಅರ್ಹರಿಗೆ ತಲುಪಿಸುವ ಕೆಲಸವೂ ಆಗಬೇಕು. ಸಾಮಾಜಿಕ ನ್ಯಾಯವೆಂದರೆ ಸಂಗ್ರಹಿತ ಸಂಪನ್ಮೂಲವನ್ನು ಎಲ್ಲರಿಗೂ ಹಂಚುವುದಲ್ಲ. 100 ಎಕರೆ ಜಮೀನಿರುವ, ಹತ್ತಾರು ಮನೆಗಳಿಂದ ಬಾಡಿಗೆ ಬರುವ ಮನೆಯ ಯಜಮಾನಿಗೂ ಜಮೀನಿನಲ್ಲಿ ಕಳೆ ತೆಗೆಯುವ, ಅನ್ಯರ ಮನೆಯ ಮುಸುರೆ ತಿಕ್ಕುವ ಮಹಿಳೆಗೂ ₹ 2 ಸಾವಿರ ಕೊಡುವುದು ಸರಿಯಾದುದಲ್ಲ. ಶ್ರೀಮಂತರು, ಸರ್ಕಾರಿ ನೌಕರರು ಬಿಪಿಎಲ್ ಪಡಿತರ ಚೀಟಿ ಹೊಂದಿದ್ದು, ಅನ್ನಭಾಗ್ಯದ ಸೌಲಭ್ಯ ಪಡೆಯುತ್ತಿದ್ದಾರೆ. ಅನರ್ಹರನ್ನು ಈ ಪಟ್ಟಿಯಿಂದ ಹೊರತೆಗೆದರೆ ನಿಜವಾದ ಬಡವರಿಗೆ ಭಾಗ್ಯದ ಫಲ ಸಿಗಲಿದೆ.

'ಗ್ಯಾರಂಟಿ' ಹೆಸರಿನಲ್ಲಿ ಆಗುತ್ತಿರುವ ಸೋರಿಕೆ ತಡೆಯುವ ಜತೆಗೆ, ನೇರ್ಪುಗೊಳಿಸಿದರೆ ಸಂಪನ್ಮೂಲವೂ ಉಳಿಯುತ್ತದೆ. ಗ್ಯಾರಂಟಿಗಳು ನೆಮ್ಮದಿ ಕೊಡಬಹುದೇ ವಿನಾ ದೀರ್ಘಕಾಲಕ್ಕೆ ಪರಿಹಾರಗಳಲ್ಲ. ನೀರಾವರಿ, ಕೈಗಾರಿಕೆ, ಮೂಲಸೌಕರ್ಯಕ್ಕೆ ಆದ್ಯತೆ ಕೊಟ್ಟರೆ ಉದ್ಯೋಗ ಸೃಷ್ಟಿಯಾಗುತ್ತದೆ, ಪ್ರಗತಿಗೂ ದಾರಿಯಾಗುತ್ತದೆ. ಸಿದ್ದರಾಮಯ್ಯನವರು ಒಂದು ಬಾರಿ ಪೂರ್ಣಾವಧಿ ಮುಖ್ಯಮಂತ್ರಿಯಾದ ಬಳಿಕ, ಮತ್ತೊಂದು ಅವಧಿಯಲ್ಲಿ ಒಂದು ವರ್ಷ ಪೂರೈಸಿ, ಆಡಳಿತದಲ್ಲೂ ದಾಖಲೆಯತ್ತ ಮುನ್ನಡೆದಿದ್ದಾರೆ. ಒಳ್ಳೆಯ ಆಡಳಿತ, ರಾಜ್ಯದ ಅಭಿವೃದ್ಧಿಯ ದಿಕ್ಕನ್ನು ಬದಲಿಸುವತ್ತ ಉಳಿದ ಕಾಲವನ್ನು ವ್ಯಯಿಸಬೇಕಿದೆ. ಭ್ರಷ್ಟಾಚಾರರಹಿತ ಆಡಳಿತ ಎಂದರೆ ಹೇಗಿರುತ್ತದೆ ಎಂಬುದನ್ನು ಅವರು ತೋರಿಸಬೇಕಿದೆ.

ಉತ್ತಮ ಆಡಳಿತವೆಂದರೆ ನಾಡ ಜನ ಕೊಟ್ಟ ದೋಣಿಯಲ್ಲಿ ತಮ್ಮ ವಂದಿಮಾಗಧರು, ತಮ್ಮ ಮಗನನ್ನು ಮಾತ್ರ ದಡ ಹತ್ತಿಸುವುದಲ್ಲ. ಅಪಾತ್ರರನ್ನು ದೋಣಿಯಿಂದ ಕೆಳಗಿಳಿಸಿ, ಸಜ್ಜನರು, ಪ್ರಾಮಾಣಿಕರನ್ನು ಜತೆಗೂಡಿಸಿಕೊಂಡರೆ ಸಿದ್ದರಾಮಯ್ಯನವರನ್ನು ಜನ ನೂರ್ಕಾಲ ನೆನಪಿಸಿಕೊಂಡಾರು. ಇಲ್ಲದಿದ್ದರೆ ದೋಣಿಯ ಹುಟ್ಟನ್ನು ಕಸಿದುಕೊಳ್ಳುವ ಕಾಲವೂ ಬರುತ್ತದೆ.

ಚುರುಮುರಿ



ದ್ವೇಷದ ರಾಜಕಾರಣ!

• ಬಿ.ಎನ್.ಮಲ್ಲೇಶ್

ಹರಟೆಕಟ್ಟೆಗೆ ಸೈಕಲ್‌ನಲ್ಲಿ ಬಂದಿಳಿದ ಗುಡ್ಡೆಯನ್ನು ನೋಡಿ ದುಬ್ಬೀರ 'ಏನ್ಲೇ ಇದು ಸೈಕಲ್ಲು... ಬೈಕ್ ಏನ್ ಮಾಡ್ದೆ?' ಎಂದ.

'ಪೆಟ್ರೋಲ್ ರೇಟು ಜಾಸ್ತಿ ಆತಲ್ಲಪಾ. ಅದ್ಕೆ ಸೈಕಲ್ ಹೊರಕ್ಕೆ ತೆಗೆದಿದೀನಿ' ಗುಡ್ಡೆ ನಕ್ಕ.

'ಇಷ್ಟ್ ದಿನ ಸೆಂಟ್ರಲ್‌ನೋರ ಬಯ್ತಿದ್ರಿ, ಈಗ ಯಾರ್‍ನ ಬಯ್ತಿಯೋ ಗುಡ್ಡೆ?' ಮಂಜಮ್ಮ ಕೆಣಕಿದಳು.

'ನಿನ್ನೇ ಬೈಬೇಕು, ಲೋಕಸಭೆ ಎಲೆಕ್ಷನ್ನಲ್ಲಿ ನೀನು ವೋಟ್ ಹಾಕಿ ನಮ್ ಪಾರ್ಟಿ ಗೆಲ್ಲಿಸಿದ್ದಿದ್ರೆ ಇವತ್ತು ಪೆಟ್ರೋಲ್ ರೇಟು ಜಾಸ್ತಿ ಆಗ್ತಿದ್ದಿಲ್ಲ'.

'ಅಂದ್ರೇ ಈಗ ಒಂಬತ್ತು ಕಡಿ ಗೆದ್ದಿದೀರಲ್ಲ, ಅಲ್ಲೆಲ್ಲ ಪೆಟ್ರೋಲ್‌ನ ಕಮ್ಮಿ ರೇಟಿಗೆ ಕೊಡ್ತಿದೀರಾ?'

'ಅದೆಂಗೆ ಕೊಡಕೆ ಬರ್ತತಿ? ಒಬ್ರಿಗೆ ಆಗಿದ್ದು ಎಲ್ರಿಗೆ'.

'ಇದು ಅನ್ಯಾಯ ಕಣಲೆ, ನಾವೆಲ್ಲ ವೋಟ್ ಹಾಕಿದೀವಿ, ನಮ್ಗೂ ಯಾಕೆ ಬರೆ?' ತೆಪರೇಸಿ ಆಕ್ಷೇಪಿಸಿದ.

'ನಿಮ್ಗೆಲ್ಲ ಎಣ್ಣೆ ರೇಟು ಕಡಿಮಿ ಮಾಡಿದೀವಲ್ಲ, ಪೇಪರ್ ನೋಡ್ಲಿಲ್ವಾ?'

'ಅದು ಜಾಸ್ತಿ ರೊಕ್ಕಿದ್ದೋರು ಕುಡಿಯೋ ಕಾಸ್ಟ್‌ಲೀ ಎಣ್ಣೆ'.

'ಇದು ದ್ವೇಷದ ರಾಜಕಾರಣ, ನಾ ಒಪ್ಪಲ್ಲ' ಮಂಜಮ್ಮ ವಾದಿಸಿದಳು.

'ದ್ವೇಷದ ರಾಜಕಾರಣನಾ? ಆತುಬಿಡು, ನೀನು ಕಲಬೆರಕೆ ಚಾಪುಡಿ ಹಾಕಿ ಚಾ ಮಾಡ್ತಿದೀಯ ಅಂತ ಕೇಸ್ ಹಾಕ್ಸಿ ಒಳಗೆ ಹಾಕಿಸ್ತೀನಿ'.

'ನಿಂಗೆ ಧಮ್ಮಿದ್ರೆ, ತಾಕತ್ತಿದ್ರೆ ಹಾಕ್ಸೋ ನೋಡಾಣ' ಮಂಜಮ್ಮ ಸಿಟ್ಟಿಗೆದ್ದಳು.

'ನಂಗೆ ದಮ್ಮು, ಅಸ್ತಮ ಏನಿಲ್ಲ, ಹೋಗ್ಲಿ ಎಲ್ರಿಗೂ ಚಾ ಹಾಕು' ಗುಡ್ಡೆ ಮೆತ್ತಗಾದ.

'ಇವತ್ತಿಂದ ಚಾ ರೇಟು ಜಾಸ್ತಿ. ಪೆಟ್ರೋಲ್ ರೇಟು ಜಾಸ್ತಿ ಆಗೇತಲ್ಲ'.

'ಅಲೆ ಇವ್ಳ, ಪೆಟ್ರೋಲ್‌ಗೂ ನಿನ್ ಚಾಗೂ ಏನ್ ಸಂಬಂಧ?'

'ಸಂಬಂಧ ಐತಿ, ಪೆಟ್ರೋಲ್ ರೇಟ್ ಜಾಸ್ತಿ ಆದ್ರೆ ಆಟೊದೋರು ಜಾಸ್ತಿ ರೊಕ್ಕ ಕೇಳ್ತಾರೆ. ತರಕಾರಿ, ಹಾಲು ಎಲ್ಲ ದುಬಾರಿ ಆಗ್ತಾವು. ಮತ್ತೆ ನಾ ಹೋಟ್ಲು ನಡೆಸೋದೆಂಗೆ?'

ಗುಡ್ಡೆ ಪಿಟಿಕ್ಕನ್ನಲಿಲ್ಲ.

ದಿನದ ಟ್ವೀಟ್

ಭಲೇ ಪೊಲೀಸರೇ...

ದರ್ಶನ್ ಪ್ರಕರಣದಲ್ಲಿ ಕರ್ನಾಟಕ ಪೊಲೀಸರ ಕ್ರಮ ಕಂಡು ನಿಜಕ್ಕೂ ಆಶ್ಚರ್ಯಚಕಿತನಾಗಿದ್ದೇನೆ. ಬರೀ 24 ಗಂಟೆಗಳಲ್ಲಿ ಅವರು ಎಲೆಕ್ಟ್ರಾನಿಕ್ ಸಾಕ್ಷ್ಯಗಳನ್ನು ಸಂಗ್ರಹಿಸಿ ಪ್ರಕರಣ ದೃಢವಾಗಿ ನಿಲ್ಲುವಂತೆ ಮಾಡಿದ್ದಾರೆ, ಎ1 ಮತ್ತು ಎ2 ಆರೋಪಿಗಳೂ ಸೇರಿದಂತೆ 48 ಗಂಟೆಗಳಲ್ಲಿ 13 ಆರೋಪಿಗಳನ್ನು ಬಂಧಿಸಿದ್ದಾರೆ, ಅಪರಾಧಕ್ಕೆ ಬಳಸಿದ್ದ ಪರಿಕರಗಳನ್ನು ವಶಪಡಿಸಿಕೊಂಡಿದ್ದಾರೆ. ರಾಜಕೀಯ ಒತ್ತಡವನ್ನು ನಾಜೂಕಾಗಿ ನಿಭಾಯಿಸಿದ್ದಾರೆ. ಭಲೇ ಕರ್ನಾಟಕ ಪೊಲೀಸರೇ.

ಉಮೇಶ್ ಶಿವರಾಜು

ಕಿಡಿನುಡಿ

ಎಲ್ಲ ಸಿನಿಮಾನಟರ ಅಭಿಮಾನಿ ಸಂಘಗಳನ್ನು ಮುಚ್ಚಲು ಮತ್ತು ಅವರ ಸಾಮಾಜಿಕ ಜಾಲತಾಣಗಳ ಟ್ರೋಲ್ ಗುಂಪುಗಳನ್ನು ನಿರ್ಬಂಧಿಸಲು ಇದು ಸಕಾಲ. ಅವು ಕಾನೂನನ್ನು ಕೈಗೆತ್ತಿಕೊಳ್ಳುತ್ತಿವೆ. ಪೊಲೀಸರು ತ್ವರಿತವಾಗಿ ಮತ್ತು ಕಠಿಣವಾಗಿ ಕ್ರಮ ಜರುಗಿಸಬೇಕಿದೆ.

('ಡಿ' ಬಾಸ್ ಬಗ್ಗೆ ಮಾತನಾಡಿದರೆ ಜೀವಂತ ಸುಡುವುದಾಗಿ ಯುವಕನೊಬ್ಬನಿಗೆ ಬೆದರಿಕೆ ಹಾಕಿದ್ದ ಆರೋಪದ ಮೇಲೆ, ಯಾದಗಿರಿಯ ದರ್ಶನ್ ಅಭಿಮಾನಿಗಳ ಸಂಘದ ಜಿಲ್ಲಾ ಅಧ್ಯಕ್ಷನನ್ನು ಪೊಲೀಸರು ವಶಕ್ಕೆ ಪಡೆದಿರುವ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ)

ಗಣೇಶ್ ಚೇತನ್

25 ವರ್ಷಗಳ ಹಿಂದೆ

ಗುರುವಾರ, 17-6-1999

• ಪ್ರೊ. ಮೂರ್ತಿ ರಾವ್‌ಗೆ ನೂರು ಕುಂದದ ಉತ್ಸಾಹ

ಬೆಂಗಳೂರು, ಜೂನ್ 16– 'ಮಾನವೀಯತೆಯೇ ದೇವರು' ಎಂದು ಪ್ರತಿಪಾದಿಸುತ್ತಾ ಬಂದಿರುವ ನಾಡಿನ ಹಿರಿಯ ಲೇಖಕ ಪ್ರೊ. ಎ.ಎನ್. ಮೂರ್ತಿ ರಾವ್ ಅವರಿಗೆ ಇಂದು ನೂರರ ಹರೆಯ.

ಶತಾಯುಷಿ ಮೂರ್ತಿ ರಾಯರಿಗೆ ಅಭಿನಂದಿಸಲು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ರವೀಂದ್ರ ಕಲಾಕ್ಷೇತ್ರದಲ್ಲಿ ಆತ್ಮೀಯ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ಆಕಾಶ ನೀಲಿ ಬಣ್ಣದ ಅಂಗಿ ಹಾಗೂ ಬಿಳಿ ಲುಂಗಿ ಧರಿಸಿ, ಯಾರ ಸಹಾಯವೂ ಇಲ್ಲದೆ ತಾವೇ ಕೋಲೂರಿಕೊಂಡು ಎಂದಿನ ಲವಲವಿಕೆಯಿಂದ ವೇದಿಕೆ ಏರಿದ ಮೂರ್ತಿ ರಾಯರನ್ನು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರು ಫಲ ತಾಂಬೂಲ ನೀಡಿ ಶಾಲು ಹೊದಿಸಿ ಸನ್ಮಾನಿಸಿದರು.

50 ವರ್ಷಗಳ ಹಿಂದೆ

ಸೋಮವಾರ, 17-6-1974

• ಫೋನ್ ಸಮಿತಿ ಸದಸ್ಯತ್ವಕ್ಕಾಗಿ ಪೈಪೋಟಿ

ನವದೆಹಲಿ, ಜೂನ್ 16– ದೆಹಲಿಯ ಟೆಲಿಫೋನ್ ಸಲಹಾ ಸಮಿತಿ ಪುನರ್‌ರಚನೆಗೆ ಇನ್ನು ಎರಡು ವಾರ ಇದೆ. ಆ ಸಮಿತಿಯಲ್ಲಿ ಒಂದು ಜಾಗ ಗಿಟ್ಟಿಸಿಕೊಳ್ಳಲು ಈ ಬಾರಿ ಬಹಳ ನೂಕುನುಗ್ಗಲು. ಅದಕ್ಕೆ ನಾಮಕರಣ ಮಾಡುವ ಸಂಪರ್ಕ ಖಾತೆ ಮೇಲೆ ಆಸಕ್ತ ಜನರಿಂದ ಹಿಂದೆ ಎಂದೂ ಇಲ್ಲದಷ್ಟು ಒತ್ತಡ.

ಇಂಥವರನ್ನು ನಾಮಕರಣ ಮಾಡಿ; ಇವರು ಯೋಗ್ಯರು ಎಂದು ಶಿಫಾರಸು ಪತ್ರ ಹಾಗೂ ತಂತಿ ಸಂದೇಶಗಳ ಸುರಿಮಳೆಯೇ ಈಗ ಆಗಿದೆ. ಭೂಪರೊಬ್ಬರು 40ಕ್ಕಿಂತ ಹೆಚ್ಚು ಜನ ಸಂಸತ್ ಸದಸ್ಯರಿಂದ ಶಿಫಾರಸು ಪತ್ರಗಳನ್ನು ಜಮಾಯಿಸಿ ಸಾದರಪಡಿಸಿದ್ದಾರೆ!

ಈಗ ಸಮಿತಿ ಸದಸ್ಯರ ಸಂಖ್ಯೆ 43. ಅದನ್ನು 20 ಅಥವಾ 22ಕ್ಕೆ ಈ ಬಾರಿ ಇಳಿಸುತ್ತಾರೆ ಎನ್ನುವ ವದಂತಿಯೇ ಇಷ್ಟೊಂದು ಪೈಪೋಟಿಗೆ ಕಾರಣ.

• ಪ್ರಾಮಾಣಿಕ ಬೇಕೆ?: ಹುಡುಕಿ ಫಲವಿಲ್ಲ

ಕಲ್ಕತ್ತ, ಜೂನ್ 16– 'ಲಂಚ ರುಷುವತ್ತು ದೇಶದ ತುಂಬೆಲ್ಲಾ ಎಷ್ಟು ತುಂಬಿಕೊಂಡಿದೆ ಎಂದರೆ, ಲಂಚಗುಳಿ ಅಲ್ಲದವನು ಎಲ್ಲಾದರೂ ಸಿಗಬಹುದೇ ಎಂದು ಟಾರ್ಚ್ ಹಿಡಿದುಕೊಂಡು ಹುಡುಕಾಡಬೇಕು' ಸಂಸತ್ತಿನಲ್ಲಿ ಸಂಸ್ಥಾ ಕಾಂಗ್ರೆಸ್ ಗುಂಪಿನ ನಾಯಕ ಎಸ್.ಎನ್. ಮಿಶ್ರ ಅವರು ಸಂಸ್ಥಾ ಎ.ಐ.ಸಿ.ಸಿ. ಅಧಿವೇಶನದಲ್ಲಿ ಇಂದು ಈ ಚಿತ್ರಣ ನೀಡಿದರು.

'ಅವಿಭಜಿತ ಕಾಂಗ್ರೆಸ್ ಇದ್ದ ಕಾಲದಲ್ಲಿ ಈಗ ಇರುವುದರ ತದ್ವಿರುದ್ಧ ಪರಿಸ್ಥಿತಿ ಇತ್ತು. ಆಗ ಲಂಚಗುಳಿಯನ್ನು ಹುಡುಕಬೇಕಾದರೆ ತನಿಖೆ ಎಂಬ, ಹಲವು ಸೆಲ್‌ಗಳನ್ನು ತುಂಬಿದ ಟಾರ್ಚ್ ಹೊತ್ತಿಸಿಕೊಂಡು ಹುಡುಕಬೇಕಾಗಿತ್ತು' ಎಂದು ಮಿಶ್ರ ನುಡಿದರು.

ಸಂಗತ

ಎಸ್‌ಇಪಿ: ಗೊಂದಲ ನಿವಾರಣೆ

ಕೆಲವು ರೂಪಾಂತರಗಳೊಂದಿಗೆ ಪರಿಷ್ಕರಣೆಗೊಂಡ ಶಿಕ್ಷಣ ನೀತಿ

• ಶಿವಲಿಂಗಸ್ವಾಮಿ ಎಚ್.ಕೆ.

ಯಾವುದೇ ಕಾಲಘಟ್ಟದಲ್ಲಿ ಹೊಸ ಶಿಕ್ಷಣ ನೀತಿ ಜಾರಿಗೆ ಬಂದಾಗ, ಅದು ಸಾಮಾನ್ಯವಾಗಿ ಶಿಕ್ಷಣ ವ್ಯವಸ್ಥೆಯ ಹಲವಾರು ಆಯಾಮಗಳಲ್ಲಿ ವೈವಿಧ್ಯಮಯ ಪರಿಣಾಮಗಳಿಗೆ ಕಾರಣವಾಗುತ್ತದೆ. ಇಂತಹ ಪ್ರತಿ ನೀತಿಯೂ ಶೈಕ್ಷಣಿಕ ಸಂರಚನೆಯಲ್ಲಿ ಗಮನಾರ್ಹ ಬದಲಾವಣೆಗಳನ್ನು ಪರಿಚಯಿಸುವ ಪ್ರಯತ್ನಗಳನ್ನು ಮಾಡುತ್ತದೆ. ಈ ಬದಲಾವಣೆಗಳು ಸಾಂಪ್ರದಾಯಿಕ ಅಭ್ಯಾಸಗಳನ್ನು ಬದಿಗೊತ್ತಿ ಹೊಸ ಪ್ರಯತ್ನಗಳಿಗೆ ಒತ್ತು ನೀಡಲು ಮುಂದಾದಾಗ, ತಕ್ಷಣವೇ ಅದಕ್ಕೆ ಹೊಂದಿಕೊಳ್ಳುವುದು ಮಕ್ಕಳು, ಅಧ್ಯಾಪಕರು ಮತ್ತು ಶಿಕ್ಷಣ ಸಂಸ್ಥೆಗಳಿಗೆ ದೊಡ್ಡ ಸವಾಲಾಗುತ್ತದೆ. ಬೋಧನೆಗೆ ಅಧ್ಯಾಪಕರ ನಿಯೋಜನೆ ಮತ್ತು ಕೆಲವು ಶೈಕ್ಷಣಿಕ ಸಂಸ್ಥೆಗಳಲ್ಲಿ ಸಂಪನ್ಮೂಲ ನಿರ್ವಹಣೆ ಕಷ್ಟವಾಗುತ್ತದೆ. ಆದರೆ ಹೊಸ ಶಿಕ್ಷಣ ನೀತಿ ಎಂದಮೇಲೆ ಇಂತಹ ಬೆಳವಣಿಗೆ ಸರ್ವೇಸಾಮಾನ್ಯ.

ರಾಜ್ಯದಲ್ಲಿ ಅತ್ಯಂತ ಮಹತ್ವಾಕಾಂಕ್ಷೆಯಿಂದ 2021ರಲ್ಲಿ ಅನುಷ್ಠಾನಕ್ಕೆ ತಂದ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಮಿಶ್ರ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದು ಎಲ್ಲರಿಗೂ ತಿಳಿದಿರುವ ವಿಷಯ. ಎನ್‌ಇಪಿಯು ವಿದ್ಯಾರ್ಥಿಗಳ ವೃತ್ತಿಜೀವನಕ್ಕೆ ಹೆಚ್ಚು ಪೂರಕವಾದ ವಿಷಯಗಳ ಬಗ್ಗೆ ಸಮಗ್ರವಾದ ಜ್ಞಾನವನ್ನು ಪಡೆಯಲು ಅವಕಾಶ ನೀಡುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದರು. ಆದರೆ ಇದು ಕೆಲವು ವಿದ್ಯಾರ್ಥಿಗಳಿಗೆ ಒಪ್ಪಿತವಾದಂತೆ ತೋರಲಿಲ್ಲ. ಎನ್‌ಇಪಿ ಬಳಸುತ್ತಿದ್ದ 'ಟೆಕ್ನಲಾಜಿಕಲ್ ಇಂಟಿಗ್ರೇಶನ್', 'ಕ್ರಿಟಿಕಲ್ ಥಿಂಕಿಂಗ್'ನಂತಹ ಕೆಲವು ಪದಗಳೇ ಬಹಳ ಮಂದಿಗೆ ಆಪ್ಯಾಯಮಾನವಾಗಲಿಲ್ಲ. ಆದ್ದರಿಂದ, ರಾಜ್ಯದಲ್ಲಿ ಅಸ್ತಿತ್ವಕ್ಕೆ ಬಂದ ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರವು ಎನ್‌ಇಪಿ ಬದಲಾಗಿ ಎಸ್‌ಇಪಿ, ಅಂದರೆ ರಾಜ್ಯ ಶಿಕ್ಷಣ ನೀತಿಯನ್ನು ರೂಪಿಸಲು ಪ್ರೊ. ಸುಖದೇವ್ ಥೋರಟ್ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು. ಅದರಂತೆ ಈಗ ಎಸ್‌ಇಪಿ ಜಾರಿಗೆ ಸುತ್ತೋಲೆ ಹೊರಡಿಸಿದೆ.

ಎನ್‌ಇಪಿಯನ್ನು ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ದೇಶದಾದ್ಯಂತ ಎಲ್ಲಾ ಶೈಕ್ಷಣಿಕ ಹಂತಗಳ ಮೇಲೆ ಪರಿಣಾಮ ಬೀರುವ ರೀತಿಯಲ್ಲಿ ವಿನ್ಯಾಸಗೊಳಿಸಲಾಗಿದೆ. ಈ ಬದಲಾವಣೆಗಳು ಸುಧಾರಿತ ಶಿಕ್ಷಣ ವ್ಯವಸ್ಥೆಯನ್ನು ಕಲ್ಪಿಸುತ್ತವೆ ಎಂದುಕೊಳ್ಳುತ್ತಿರುವಾಗ, ಎನ್‌ಇಪಿಯಲ್ಲಿರುವ ನ್ಯೂನತೆಗಳು ಬಹಳಷ್ಟು ಸರ್ಕಾರಿ ಕಾಲೇಜುಗಳಲ್ಲಿ ಬೆಳಕಿಗೆ ಬರಲಾರಂಭಿಸಿದವು. ಮೇಲ್ನೋಟಕ್ಕೆ ಉಪಯುಕ್ತ ಎನಿಸುವಂತಿದ್ದರೂ ಎನ್‌ಇಪಿಯನ್ನು ಹಿಂಪಡೆದು ಎಸ್‌ಇಪಿ ಅನುಷ್ಠಾನಕ್ಕೆ ತರಲು ನಾಲ್ಕು ಪ್ರಮುಖ ಕಾರಣಗಳಿವೆ:

ಮೊದಲನೆಯದಾಗಿ, ಸ್ನಾತಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ನಾಲ್ಕು ವರ್ಷಗಳ ಆನರ್ಸ್ ಕೋರ್ಸ್ ಪರಿಚಯಿಸಲಾಗಿತ್ತು ಮತ್ತು ನಂತರ ಪಿಎಚ್.ಡಿಗೆ ನೇರ ಪ್ರವೇಶಕ್ಕೆ ಅವಕಾಶ ಒದಗಿಸಲಾಗಿತ್ತು. ಆದರೆ ಇದು ಸರ್ಕಾರಿ ಕಾಲೇಜುಗಳಲ್ಲಿ ಮೂಲ ಸೌಕರ್ಯ ಮತ್ತು ಅಧ್ಯಾಪಕರ ಕೊರತೆಯಿಂದ ಗೊಂದಲಮಯ ಅಂಶವಾಗಿ ಕಂಡುಬಂತು. ಹಾಗಾಗಿ, ಸಾಂಪ್ರದಾಯಿಕ ಕೋರ್ಸುಗಳನ್ನು ಬಯಸಿ ರಾಜ್ಯದ ಸರ್ಕಾರಿ ಕಾಲೇಜುಗಳಲ್ಲಿ, ಬಹಳ ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರವೇಶಕ್ಕೆ ಅರ್ಜಿ ಹಾಕುವವರ ಸಂಖ್ಯೆ ಇಳಿಮುಖವಾಗಲಾರಂಭಿಸಿತು.

ಎರಡನೆಯದಾಗಿ, ಭಾರತದ ಉನ್ನತ ಶಿಕ್ಷಣ ವ್ಯವಸ್ಥೆಯನ್ನು ಒಟ್ಟಾರೆ ವರ್ಧಿಸಲು ಮತ್ತು ವಿದ್ಯಾರ್ಥಿಗಳಲ್ಲಿ ಸಂಶೋಧನಾ ಮನೋಭಾವ, ಅಂತರಶಿಸ್ತೀಯ ಸಂಸ್ಕೃತಿಯನ್ನು ಬೆಳೆಸಲು ನೀಡುತ್ತಾ ಬಂದಿದ್ದ ಆಂತರಿಕ ಅಂಕಗಳನ್ನು 20ರಿಂದ 40ಕ್ಕೆ ಏರಿಸಿದ್ದು ಮತ್ತಷ್ಟು ಆತಂಕ ಮತ್ತು ಗೊಂದಲಕ್ಕೆ ಕಾರಣವಾಯಿತು.

ಮೂರನೆಯದಾಗಿ, ಎನ್‌ಇಪಿ ಪರಿಚಯಿಸಿದ ಅತಿ ಮುಖ್ಯ ಬದಲಾವಣೆಯೆಂದರೆ, ಮೂರು ಸಹವರ್ತಿ ವಿಷಯಗಳನ್ನು ನೀಡುವ ಸಾಂಪ್ರದಾಯಿಕ ಪದ್ಧತಿಯನ್ನು ಪರಿಷ್ಕರಿಸಿ ಬರೀ ಎರಡಕ್ಕೆ ಒತ್ತು ನೀಡಿದ್ದು. ಈ ಬದಲಾವಣೆಯ ಉದ್ದೇಶ ಮೂರು ಕ್ಷೇತ್ರಗಳ ಕಡೆ ಗಮನಹರಿಸುವ ಬದಲು ಎರಡು ವಿಷಯಗಳ ಬಗ್ಗೆ ಸಮಗ್ರವಾದ ತಿಳಿವಳಿಕೆ ಒದಗಿಸುವುದಾಗಿತ್ತು. ಆದರೆ ಈ ಬದಲಾವಣೆಯನ್ನು ಸ್ವಾಗತಿಸಲು ಉನ್ನತ ಶಿಕ್ಷಣಾರ್ಥಿಗಳು ಹಿಂಜರಿದದ್ದು ಗಮನಾರ್ಹ.



ಕಡೆಯದಾಗಿ, ಅಧಿಕ ಸಂಖ್ಯೆಯಲ್ಲಿ ಮುಕ್ತ ಆಯ್ಕೆಯ ವಿಷಯಗಳನ್ನು (ಓಪನ್ ಎಲೆಕ್ಟಿವ್ಸ್) ಪರಿಚಯಿಸಿದ್ದು ವಿದ್ಯಾರ್ಥಿಗಳಲ್ಲಿ ಗೊಂದಲ ಸೃಷ್ಟಿಸಿತ್ತು. ಜೊತೆಗೆ, ಕಾಲೇಜುಗಳಲ್ಲಿ ಅಧ್ಯಾಪಕರ ಕಾರ್ಯಭಾರದಿಂದ ಹಿಡಿದು ಮೂಲ ಸೌಕರ್ಯಗಳವರೆಗೆ ಹಲವು ರೀತಿಯ ಸಮಸ್ಯೆಗಳನ್ನು ತಂದೊಡ್ಡಿದ್ದು ಸಹ ಎಲ್ಲರ ಅನುಭವಕ್ಕೆ ಬಂದಿತ್ತು. ಎಸ್‌ಇಪಿಯು ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಬರುವ ಮೊದಲು ಇದ್ದಂತೆಯೇ ಮೂರು ಪ್ರಧಾನ ವಿಷಯಗಳನ್ನು ಉಳಿಸಿಕೊಳ್ಳುತ್ತದೆ. ಹಾಗೆಯೇ ವೃತ್ತಿಪರ ಬೆಳವಣಿಗೆಗೆ ಪೂರಕವಾಗುವಂತೆ, ಮೂರನೇ ವರ್ಷದಲ್ಲಿ ಆಯ್ಕೆ ಮಾಡಿಕೊಂಡ ಮೂರು ವಿಷಯಗಳಲ್ಲಿ ಒಂದನ್ನು ಮಾತ್ರ 'ಡೀಪ್ ಸ್ಪೆಷಲೈಸೇಶನ್' ವಿಷಯವಾಗಿ ಕಲಿಯುವ ಅವಕಾಶ ಮಾಡಿಕೊಡಲಾಗಿದೆ.

ಅತಿಶಯ ಎನಿಸುವಷ್ಟು ಮುಕ್ತ ಆಯ್ಕೆ ವಿಷಯಗಳನ್ನು ಅಳವಡಿಸಿದ್ದ ಎನ್‌ಇಪಿ ಪಠ್ಯಕ್ರಮದ ವಿನ್ಯಾಸವನ್ನು ಈಗ ಬದಲಿಸಲಾಗಿದೆ. ವಿದ್ಯಾರ್ಥಿಗಳು ಹಿಂದಿನಂತೆಯೇ ಪ್ರಧಾನ ವಿಷಯಗಳನ್ನು ಕಲಿಯಲಿದ್ದಾರೆ. ಇದರಿಂದಾಗಿ ಅಧ್ಯಾಪಕರ ನಿಯೋಜನೆ ಮತ್ತು ಶೈಕ್ಷಣಿಕ ಸಂಸ್ಥೆಗಳ ಸಂಪನ್ಮೂಲ ನಿರ್ವಹಣೆಯಲ್ಲಿ ತೊಡಕು ಎದುರಾಗುವುದಿಲ್ಲ. ನಾಲ್ಕು ವರ್ಷದ ಆನರ್ಸ್ ಕೋರ್ಸ್ ಸಹ ಎನ್‌ಇಪಿಯಡಿ ಈಗಾಗಲೇ ಪ್ರವೇಶಾತಿ ಪಡೆದವರಿಗೆ ಮಾತ್ರ ಲಭ್ಯವಿರುತ್ತದೆ. ನಾಲ್ಕು ವರ್ಷದ ಪದವಿ ಮುಗಿಸಿ ನೇರವಾಗಿ ಪಿಎಚ್.ಡಿಗೆ ಪ್ರವೇಶ ಪಡೆಯುವುದು ಇನ್ನು ಮುಂದೆ ಸಾಧ್ಯವಾಗದು. ಒಟ್ಟಿನಲ್ಲಿ, ಸ್ಥಳೀಯ ರೂಪಾಂತರಗಳೊಂದಿಗೆ ಅನುಷ್ಠಾನಕ್ಕೆ ಬರಲಿರುವ ಎಸ್‌ಇಪಿಯು ಗೊಂದಲಗಳಿಗೆ ತೆರೆ ಎಳೆಯಲಿದೆ.

ಲೇಖಕ: ಪ್ರಾಧ್ಯಾಪಕ, ತುಮಕೂರು ವಿಶ್ವವಿದ್ಯಾಲಯ, ತುಮಕೂರು

ವಾಚಕರ ವಾಣಿ

ಹೊರವಲಯಕ್ಕೂ ಬರಲಿ 'ನಮ್ಮ ಕ್ಲಿನಿಕ್'

ಬೆಂಗಳೂರಿನಲ್ಲಿ ಇನ್ನೂ ಹಲವೆಡೆ 'ನಮ್ಮ ಕ್ಲಿನಿಕ್' ಆರಂಭಿಸಲು ಆರೋಗ್ಯ ಇಲಾಖೆ ತೀರ್ಮಾನಿಸಿದ್ದು, ಅಗತ್ಯ ಸ್ಥಳ ಗುರುತಿಸುವಂತೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಅಧಿಕಾರಿಗಳಿಗೆ ಸೂಚಿಸಿರುವುದು ವರದಿಯಾಗಿದೆ (ಪ್ರ.ವಾ., ಜೂನ್ 14). ಬೆಂಗಳೂರಿಗೆ ಕೂಲಿ ಕೆಲಸಕ್ಕೆ ಬರುವ ಹಲವರು ಬೆಂಗಳೂರಿನ ಹೊರವಲಯ ಮತ್ತು ಅದಕ್ಕೆ ಹೊಂದಿಕೊಂಡಿರುವ ಗ್ರಾಮೀಣ ಪ್ರದೇಶದ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಮನೆ ಬಾಡಿಗೆ ಕಡಿಮೆ ಎಂಬ ಕಾರಣಕ್ಕಾಗಿ ನೆಲಸಿದ್ದಾರೆ. ಜನಸಂದಣಿ ಹೆಚ್ಚಾಗಿರುವ ಆ ವ್ಯಾಪ್ತಿಯಲ್ಲಿ ಸರಿಯಾಗಿ ನೀರು, ನಲ್ಲಿ, ಒಳಚರಂಡಿ, ರಸ್ತೆ, ಬಸ್ ಸೌಲಭ್ಯಗಳಿಲ್ಲ. ಆರೋಗ್ಯ ಸೇವೆಯಂತಹ ಮೂಲಸೌಲಭ್ಯಗಳ ಕೊರತೆಯಿದೆ. ಅಂತಹ ಕಡೆಗಳಲ್ಲಿ 'ನಮ್ಮ ಕ್ಲಿನಿಕ್' ಜೊತೆಗೆ ಇಂದಿರಾ ಕ್ಯಾಂಟೀನ್‌ಗಳನ್ನು ತೆರೆಯುವ ಅಗತ್ಯವಿದೆ. 'ನಮ್ಮ ಕ್ಲಿನಿಕ್'ಗಳಲ್ಲಿ ಅಲೋಪಥಿ ವೈದ್ಯರ ಜೊತೆಗೆ ಆಯುರ್ವೇದ ವೈದ್ಯರ ನೇಮಕಾತಿಗೂ ಸರ್ಕಾರ ಚಿಂತಿಸಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ವಂಶಾಡಳಿತದ ವಿರುದ್ಧ ಸೂಕ್ತ ಸಂದೇಶ

ಲೋಕಸಭಾ ಚುನಾವಣೆಯಲ್ಲಿ ತಮ್ಮದೇ ಮಾತೃಪಕ್ಷದ ಅಭ್ಯರ್ಥಿಗೆ ಸಡ್ಡು ಹೊಡೆದು, ವಂಶಾಡಳಿತದ ವಿರುದ್ಧ ತೋಳು ತಟ್ಟಿ ಸ್ಪರ್ಧಿಸಿದ್ದ ಕೆ.ಎಸ್.ಈಶ್ವರಪ್ಪ ಠೇವಣಿಯನ್ನೂ ಕಳೆದುಕೊಂಡಿದ್ದು ಅನಿರೀಕ್ಷಿತವೇನಲ್ಲ. ಚುನಾವಣೆಯಲ್ಲಿ ಅವರು ಸೋತರೂ ತಮ್ಮ ಸೈದ್ಧಾಂತಿಕ ನಿಲುವನ್ನು ಸ್ಪಷ್ಟಪಡಿಸಿ, ರಾಜ್ಯದಲ್ಲಿ ವಂಶಾಡಳಿತದ ಬಗ್ಗೆ ಹೈಕಮಾಂಡ್‌ಗೆ ಸಂದೇಶವೊಂದನ್ನು ರವಾನಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇತರ ಪಕ್ಷಗಳಲ್ಲಿ ಹೀಗೆ ದಿಟ್ಟವಾಗಿ ಪ್ರಶ್ನಿಸುವವರು ಇಲ್ಲದಿರುವುದರಿಂದ ವಂಶಾಡಳಿತದ ಪ್ರಭಾವಕ್ಕೆ ಸಿಲುಕಿ ದಿನದಿಂದ ದಿನಕ್ಕೆ ಅವು ಕುಂದುತ್ತಿವೆ.

ಸತ್ಯಬೋಧ, ಬೆಂಗಳೂರು

ಪೊಲೀಸರ ಕಾರ್ಯಶೈಲಿ ಅಭಿನಂದನಾರ್ಹ

ಚಿತ್ರದುರ್ಗದ ರೇಣುಕಸ್ವಾಮಿ ಎಂಬ ವ್ಯಕ್ತಿಯ ಕೊಲೆ ಪ್ರಕರಣವನ್ನು ಅತ್ಯಂತ ಯಶಸ್ವಿಯಾಗಿ ಭೇದಿಸಿರುವ ರಾಜ್ಯದ ಪೊಲೀಸರ ಕಾರ್ಯಶೈಲಿ ಅಭಿನಂದನಾರ್ಹ. ಅತ್ಯಂತ ಬರ್ಬರ ರೀತಿಯ ಕೊಲೆ ಇದಾಗಿದ್ದು, ಪ್ರಕರಣದ ಎಲ್ಲಾ ಆರೋಪಿಗಳನ್ನು ಪೊಲೀಸರು ಅತ್ಯಂತ ತ್ವರಿತವಾಗಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಈ ಪ್ರಕರಣದಲ್ಲಿ ಸಿಲುಕಿರುವ ನಾಯಕನಟನನ್ನು ರಕ್ಷಿಸಲು ಕೆಲವು ಪ್ರಭಾವಿ ವ್ಯಕ್ತಿಗಳು ನಡೆಸಿದ ಅವಿರತ ಪ್ರಯತ್ನ ವಿಫಲವಾಗಿದೆಯೆಂದು ಹೇಳಲಾಗಿದೆ. ಅಂತಹ ಪ್ರಾಮಾಣಿಕತೆ ಮತ್ತು ಕರ್ತವ್ಯನಿಷ್ಠೆ ಮೆರೆದ ಪೊಲೀಸ್ ಅಧಿಕಾರಿಗಳು, ಅದರಲ್ಲೂ ವಿಶೇಷವಾಗಿ ತನಿಖಾಧಿಕಾರಿ ಹಾಗೂ ಇತರ ಸಿಬ್ಬಂದಿಯ ಕಾರ್ಯ ಶ್ಲಾಘನೀಯವಾದುದು. ಈ ಪ್ರಕರಣವು ಕಾನೂನಿನ ಮುಂದೆ ಎಲ್ಲರೂ ಸಮಾನರು ಎಂಬುದು ಪರಮ ಸತ್ಯವಾದ ಮಾತು ಎಂಬುದನ್ನು ಜನ ನಂಬುವಂತೆ ಮಾಡಿದೆ.

ಕೆ.ವಿ.ವಾಸು, ಮೈಸೂರು

ಪಕ್ಷದ ಕಚೇರಿಯಲ್ಲಿ ಸಭೆ ಸರಿಯೇ?

ವಿವಿಧ ಅಕಾಡೆಮಿಗಳು ಹಾಗೂ ನಿಗಮಗಳ ಅಧ್ಯಕ್ಷರ ಜೊತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸಮಾಲೋಚನಾ ಸಭೆ ನಡೆಸಿರುವುದು ಸರಿಯೇ. ಅವರ ಸಾಂಸ್ಕೃತಿಕ ಕಾಳಜಿಯನ್ನು ಮೆಚ್ಚೋಣ. ಆದರೆ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ನಿಗಮ, ಮಂಡಳಿಗಳ ಅಧ್ಯಕ್ಷರ ಜೊತೆ ಸಾಂಸ್ಕೃತಿಕ ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳ ಅಧ್ಯಕ್ಷರನ್ನೂ ಆಹ್ವಾನಿಸಿ ಸಭೆ ನಡೆಸಿರುವುದು ಸಾಂಸ್ಕೃತಿಕ ವಲಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ರಾಜಕೀಯ ನೇಮಕಾತಿಗಳ ಮೂಲಕ ಅಧಿಕಾರ ಪಡೆದಿರುವ ನಿಗಮ, ಮಂಡಳಿ ಅಧ್ಯಕ್ಷರ ಜೊತೆ ಉಪಮುಖ್ಯಮಂತ್ರಿ ಸಮಾಲೋಚನೆ ಸರಿ ಇರಬಹುದು. ಆದರೆ ಅವರ ಜೊತೆ ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳ ಅಧ್ಯಕ್ಷರನ್ನೂ ಕರೆದು ಒಟ್ಟಾಗಿ ಮಾತನಾಡಿರುವುದು ಚರ್ಚೆಗೆ ಗ್ರಾಸವಾಗಿದೆ. ಈ ರೀತಿಯ ಬೆಳವಣಿಗೆ ಮುಂದಿನ ದಿನಗಳಲ್ಲಿ ಹೊಸ ಸಂಪ್ರದಾಯಕ್ಕೆ ಕಾರಣವಾಗಬಹುದು. ಏಕೆಂದರೆ, ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳು ಸ್ವಾಯತ್ತ ಸಂಸ್ಥೆಗಳಾಗಿ ತಮ್ಮ ಕೆಲಸಗಳನ್ನು ನಿರ್ವಹಿಸಬೇಕು ಎನ್ನುವ ಅಭಿಪ್ರಾಯ ಇದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಂಗಸಂಸ್ಥೆಗಳಾಗಿ ಇವು ಕೆಲಸ ಮಾಡಿದರೂ ಅವುಗಳ ಕ್ರಿಯಾಯೋಜನೆ ಹಾಗೂ ಅನುಷ್ಠಾನದಲ್ಲಿ ಸರ್ಕಾರ ಸಾಮಾನ್ಯವಾಗಿ ತನ್ನ ಮೂಗು ತೂರಿಸಲಾರದು ಎಂಬ ನಂಬಿಕೆ ಇದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳನ್ನು ನೇರವಾಗಿ ಪಕ್ಷಗಳೇ ನಿಯಂತ್ರಿಸುವ ಕಾರ್ಯಕ್ಕೆ ಮುಂದಾಗಿರುವುದು ಈ ಹಿಂದಿನ ಸರ್ಕಾರದ ಸಂದರ್ಭದಲ್ಲೂ ಅನುಭವಕ್ಕೆ ಬಂದಿದೆ. ಈ ಪರಂಪರೆ ಪ್ರಸ್ತುತ ಸರ್ಕಾರದಲ್ಲೂ ಮುಂದುವರಿಯುತ್ತಿರುವ ಬಗ್ಗೆ ಸಾಂಸ್ಕೃತಿಕ ರಂಗ ಕಳವಳ ವ್ಯಕ್ತಪಡಿಸುತ್ತಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಚೇರಿಯಲ್ಲೇ ಉಪಮುಖ್ಯಮಂತ್ರಿ ಸಭೆ ನಡೆಸಬಹುದಿತ್ತು. ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಗೆ ನೂತನವಾಗಿ ನೇಮಕಗೊಂಡಿರುವ ಅಧ್ಯಕ್ಷರು ಹೋಗಿರುವುದು ಅಷ್ಟು ಸರಿಯಾದ ನಡೆಯಲ್ಲ. ಇನ್ನು ಮುಂದಾದರೂ ಈ ಬಗ್ಗೆ ಅಧಿಕಾರಸ್ಥರಾಗಲೀ ಅಧ್ಯಕ್ಷರಾಗಲೀ ಸ್ವಲ್ಪ ಆಲೋಚಿಸಿ ಹೆಜ್ಜೆ ಇಡುವಂತಾಗಲಿ. ಸಾಂಸ್ಕೃತಿಕ ಸಂಸ್ಥೆಗಳ ಸ್ವಾಯತ್ತತೆಗಾಗಿ ಬಹಳಷ್ಟು ಹೋರಾಟಗಳು ನಡೆಯುತ್ತಿದ್ದರೂ ಅವನ್ನೆಲ್ಲ ನಿರ್ಲಕ್ಷಿಸಿ ಸರ್ಕಾರ ಹಾಗೂ ಅಧಿಕಾರಿಗಳೇ ಎಲ್ಲವನ್ನೂ ನಿಯಂತ್ರಿಸುತ್ತಿರುವುದು ಈಗಾಗಲೇ ಅನೇಕ ಬಾರಿ ಚರ್ಚೆಗೆ ಬಂದಿದೆ. ಮುಂದಾದರೂ ನಮ್ಮ ಅಕಾಡೆಮಿಗಳು ಹಾಗೂ ಪ್ರಾಧಿಕಾರಗಳು ತಮ್ಮ ಸ್ವಾಯತ್ತತೆಯ ಪರಿಧಿಯೊಳಗೆ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಮುಂದಾಗುತ್ತವೆ ಎಂದು ಆಶಿಸಬಹುದೇ?

ಶಶಿಧರ ಭಾರಿಘಾಟ್, ಬೆಂಗಳೂರು

ನೀಟು... ಘಾಟು!

ಎಷ್ಟೊಂದು
ಶಿಸ್ತು, ಕ್ರಮವಾಗಿ
ನಡೆಯುತ್ತಿತ್ತು
ಪರೀಕ್ಷೆ 'ನೀಟ್'
ಈಗ ಅದಕ್ಕೂ
ಅಂಟಿಬಿಟ್ಟಿತಲ್ಲ
ಅಕ್ರಮಗಳ ಘಾಟು!

ಮ.ಗು.ಬಸವಣ್ಣ
ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಫಲಿತಾಂಶದ ಕತೆ ಹೇಳುವ ದತ್ತಾಂಶಗಳು

• ಯೋಗೇಂದ್ರ ಯಾದವ್, ರಾಹುಲ್ ಶಾಸ್ತ್ರಿ, ಶ್ರೇಯಸ್ ಸರ್ದೇಸಾಯಿ

ಈ ಲೋಕಸಭಾ ಚುನಾವಣೆಯ ಅಚ್ಚರಿಯ ಫಲಿತಾಂಶದ ನಂತರ ಹಲವು ಪ್ರಶ್ನೆಗಳು ಮೂಡಿದ್ದವು. ರೈತರ ಸಿಟ್ಟು ಬಿಜೆಪಿಗೆ ಮುಳುವಾಯಿತೇ? ಅತ್ಯಂತ ಹಿಂದುಳಿದ ವರ್ಗಗಳ ಮತಗಳು ಬಿಜೆಪಿಯಿಂದ ದೂರ ಸರಿದವೇ? ಅಥವಾ ಮುಸ್ಲಿಂ ಮತಬ್ಯಾಂಕ್ ಈ ಅಚ್ಚರಿಗೆ ಕಾರಣವಾಯಿತೇ? ಬಿಜೆಪಿ ಹೊಸದಾಗಿ ಗಳಿಸಿಕೊಂಡಿದ್ದ ಮಹಿಳಾ ಮತಬುಟ್ಟಿಗೆ ಏನಾಯಿತು? ಅಚ್ಚರಿಯ ಫಲಿತಾಂಶದ ವಿಶ್ಲೇಷಣೆಯಲ್ಲಿ ಈ ಮೇಲಿನ ಪ್ರಶ್ನೆಗಳೇ ರಾರಾಜಿಸಿದ್ದವು.

ಲೋಕನೀತಿ–ಸಿಎಸ್‌ಡಿಎಸ್ ನಡೆಸಿದ್ದ ಮತದಾನೋತ್ತರ ಸಮೀಕ್ಷೆಯ ದತ್ತಾಂಶಗಳನ್ನು ಇರಿಸಿಕೊಂಡು ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಯತ್ನಿಸಿದ್ದೇವೆ. 'ದಿ ಹಿಂದೂ'ವಿನಲ್ಲಿ ಪ್ರಕಟವಾಗಿದ್ದ ಅವರ ಸಮೀಕ್ಷಾ ವರದಿಗಳು ಮತ್ತು ಅವರ ಜಾಲತಾಣದಲ್ಲಿ ಇದ್ದ ಆರ್ಕೈವ್‌ಗಳನ್ನು ಬಳಸಿಕೊಂಡು ಈ ದತ್ತಾಂಶಗಳನ್ನು ವಿಶ್ಲೇಷಿಸಲಾಗಿದೆ.

ಈ ವಿಶ್ಲೇಷಣೆಯು ಹಲವು ಮಿಥ್ಯೆಗಳನ್ನು ಒಡೆದುಹಾಕಿವೆ. ರಾಷ್ಟ್ರಮಟ್ಟದಲ್ಲಿ ಪ್ರಮುಖ ಸಾಮಾಜಿಕ ಸಮುದಾಯಗಳ ಮತ ಪ್ರಾಶಸ್ತ್ಯ ತೀರಾ ಬದಲಾವಣೆಯೇನೂ ಆಗಿಲ್ಲ. ಆದರೆ ದಲಿತರು ಮತ್ತು ಗ್ರಾಮೀಣ ಭಾರತದ ಭೂಮಿ ಸಹಿತ ಕೃಷಿಕ ಸಮುದಾಯಗಳು ಗಣನೀಯ ಮಟ್ಟದಲ್ಲಿ ಬಿಜೆಪಿಯಿಂದ ದೂರ ಸರಿದಿವೆ. 'ಮೇಲ್ಜಾತಿ' ಮತಗಳನ್ನು ಉಳಿಸಿಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದ್ದರೂ ರಾಷ್ಟ್ರಮಟ್ಟದಲ್ಲಿ ಸಣ್ಣ ಮಟ್ಟದ ಇಳಿಕೆಗೆ ಬಿಜೆಪಿಗೆ ಸಾಕ್ಷಿಯಾಗಿದೆ. ಆದರೆ ಕುತೂಹಲಕಾರಿಯಾದ ಮತ್ತು ಫಲಿತಾಂಶವನ್ನು ಪ್ರಭಾವಿಸಿದ ಬದಲಾವಣೆ ಉಂಟಾಗಿರುವುದು ರಾಜ್ಯಮಟ್ಟದಲ್ಲಿ.

2019ರ ಯುಪಿಎ ಮತ್ತು 2024ರ 'ಇಂಡಿಯಾ' ಕೂಟಗಳಿಗೆ ಭೂಮಿ ಸಹಿತ ಕೃಷಿಕ ಸಮುದಾಯಗಳು ನೀಡಿದ ಮತ ಪ್ರಮಾಣ



- ಗ್ರಾಮೀಣ ಭಾರತದಲ್ಲಿ ಪ್ರಬಲವಾಗಿರುವ ಸವರ್ಣೀಯರಲ್ಲದ ಮತ್ತು ಬಹುತೇಕ ಒಬಿಸಿ ಭೂಮಿಸಹಿತ ಕೃಷಿಕ ಸಮುದಾಯಗಳು ಈ ಬಾರಿ 'ಇಂಡಿಯಾ' ಮೈತ್ರಿಕೂಟದತ್ತ ಸರಿದಿವೆ ಎಂದು ಫಲಿತಾಂಶವು ಹೇಳುತ್ತದೆ. ಕೃಷಿ ಸಮಸ್ಯೆಗಳು ಮತ್ತು ರೈತ ಹೋರಾಟಗಳ ಕಾರಣದಿಂದ ಈ ಸಮುದಾಯಗಳು ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳಿಂದ ದೂರ ಸರಿದಿವೆ
- ರಾಜಸ್ಥಾನ, ಹರಿಯಾಣದಲ್ಲಿ ಜಾಟರು, ಉತ್ತರ ಪ್ರದೇಶದಲ್ಲಿ ಯಾದವರು, ಮಹಾರಾಷ್ಟ್ರದಲ್ಲಿ ಮರಾಠರು ಮತ್ತು ಕರ್ನಾಟಕದಲ್ಲಿ ಸ್ವಲ್ಪ ಮಟ್ಟಿಗೆ ಒಕ್ಕಲಿಗ ಮತ್ತು ಲಿಂಗಾಯತರು ಬಿಜೆಪಿಯಿಂದ ದೂರ ಸರಿದ ಪರಿಣಾಮವಾಗಿ ಎನ್‌ಡಿಎ ಹಲವು ಸ್ಥಾನಗಳನ್ನು ಕಳೆದುಕೊಂಡಿದೆ
- ಆದರೂ ಗುಜರಾತ್‌ನಲ್ಲಿ ಪಾಟೀದಾರರು ಮತ್ತು ಮಧ್ಯಪ್ರದೇಶದಲ್ಲಿ ಯಾದವರ ಮತಗಳನ್ನು ಹೆಚ್ಚಿಸಿಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ. ಆದರೆ ದೇಶದಾದ್ಯಂತ ಇದಕ್ಕೆ ವಿರುದ್ಧವಾದ ಪ್ರವೃತ್ತಿ ಇತ್ತು ಎಂಬುದು ಮತದಾನದಲ್ಲಿ ಕಾಣುತ್ತದೆ

ಬಿಜೆಪಿಯ ಕೈಬಿಡದ 'ಮೇಲ್ಜಾತಿ' ಮತಗಳು

ಹಿಂದೂ 'ಮೇಲ್ಜಾತಿ'ಗಳಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಮತ ಪ್ರಮಾಣ



- ರಜಪೂತರು ಬಿಜೆಪಿ ವಿರುದ್ಧ ಸಿಟ್ಟಾಗಿದ್ದಾರೆ, ಕ್ಷತ್ರಿಯರು ಗುಜರಾತ್‌ನಲ್ಲಿ ಬಿಜೆಪಿ ವಿರುದ್ಧ ಮತ ಚಲಾಯಿಸಲಿದ್ದಾರೆ ಎಂಬ ಸುದ್ದಿ–ಚರ್ಚೆಗಳಿಗೆ ವ್ಯತಿರಿಕ್ತವಾಗಿ ದೇಶದಾದ್ಯಂತ 'ಮೇಲ್ಜಾತಿ' ಸಮುದಾಯಗಳು ಬಿಜೆಪಿಗೇ ನಿಷ್ಠವಾಗಿವೆ. 2024ರ ಚುನಾವಣೆಯಲ್ಲಿ ಹೀಗೆಯೇ ಆಗಿದೆ
- ಈ ಸಮುದಾಯಗಳ ಮತಗಳ ಸಂಖ್ಯೆಯು, ಕಾಂಗ್ರೆಸ್‌ಗೆ ಮತ್ತು ಅದರ ಮಿತ್ರಪಕ್ಷಗಳಿಗೆ ನಿಷ್ಠವಾಗಿರುವ ಮುಸ್ಲಿಮರ ಮತಗಳ ಸಂಖ್ಯೆಗಿಂತ ದೊಡ್ಡದು
- ಈ ಹಿಂದಿನ ಚುನಾವಣೆಗಳಲ್ಲಿ ಈ ಜಾತಿ ಸಮುದಾಯಗಳ ಮತಗಳು ಬಿಜೆಪಿಯಿಂದ ದೂರ ಸರಿಯುತ್ತವೆ ಎಂಬ ಮಾತಿದ್ದಾಗ, ಅವು ನಿಜಕ್ಕೂ ದೂರ ಸರಿದಿದ್ದವು

ಬಿಜೆಪಿಯಿಂದ ದೂರ ಸರಿಯುತ್ತಿರುವ ಇಬಿಸಿ

ಅತ್ಯಂತ ಹಿಂದುಳಿದ ವರ್ಗಗಳಲ್ಲಿ ಬಿಜೆಪಿ ಮತ ಪ್ರಮಾಣ ಬದಲಾವಣೆ: 2019ರಲ್ಲಿ ಬಿಜೆಪಿಗೆ ದೊರೆತಿದ್ದ ಮತ ಪ್ರಮಾಣಕ್ಕೆ ಹೋಲಿಸಿದರೆ 2024ರಲ್ಲಿ ಬಿಜೆಪಿಗೆ ದೊರೆತ ಮತ ಪ್ರಮಾಣದಲ್ಲಿ ಆದ ಬದಲಾವಣೆ

(ಶೇಕಡಾವಾರು ಅಂಶಗಳಲ್ಲಿ)



- ಗ್ರಾಮೀಣ ಭಾರತದಲ್ಲಿನ ಭೂರಹಿತ ಕೃಷಿ ಕಾರ್ಮಿಕ ಸಮುದಾಯಗಳು, ಕರಕುಶಲ ಸಮುದಾಯಗಳು ಮತ್ತು ಇತರ ಸಣ್ಣ ಜಾತಿಗಳನ್ನು ಒಳಗೊಂಡ ಅತ್ಯಂತ ಹಿಂದುಳಿದ ವರ್ಗಗಳು ಬಿಜೆಪಿಯ ಮತಬುಟ್ಟಿಗಳು. ರಾಷ್ಟ್ರಮಟ್ಟದಲ್ಲಿ ಗಮನಿಸಿದರೆ ಈ ಸಮುದಾಯಗಳು ಬಿಜೆಪಿಗೇ ಮತ ನೀಡಿವೆ
- ದೇಶದ ಆಯ್ದ ಕೆಲವು ರಾಜ್ಯಗಳಲ್ಲಿ (ಉತ್ತರ ಪ್ರದೇಶ, ಹರಿಯಾಣ, ಬಿಹಾರ, ಮಹಾರಾಷ್ಟ್ರ) ಅತ್ಯಂತ ಹಿಂದುಳಿದ ವರ್ಗಗಳಲ್ಲಿ ಬಿಜೆಪಿಯು ತನ್ನ ಮತ ಪ್ರಮಾಣವನ್ನು ಕಳೆದುಕೊಂಡಿರುವುದು ಢಾಳಾಗಿ ಕಾಣುತ್ತದೆ. ಇದಲ್ಲದೇ ಉತ್ತರದ ಕೆಲವು ರಾಜ್ಯಗಳಲ್ಲಿ ಈ ಸಮುದಾಯಗಳು ಬಿಜೆಪಿಯಿಂದ ದೂರ ಸರಿದಿವೆ. 2019ರಲ್ಲಿ ಈ ಸಮುದಾಯಗಳು ಬಿಜೆಪಿಗೆ ನೀಡಿದ್ದ ಮತ ಪ್ರಮಾಣವು 2024ರ ಚುನಾವಣೆಯಲ್ಲಿ ಗಣನೀಯ ಮಟ್ಟದಲ್ಲಿ ಕುಸಿತವಾಗಿದೆ

ದಲಿತರ ಮತ ಅತ್ತ ಇತ್ತ



- ಉತ್ತರ ಪ್ರದೇಶ ಮತ್ತು ಉತ್ತರದ ಕೆಲವು ರಾಜ್ಯಗಳಲ್ಲಿ ದಲಿತ ಮತದಾರರು ಬಿಎಸ್‌ಪಿಯಿಂದ ದೂರ ಸರಿದಿದ್ದಾರೆ. ಮಹಾರಾಷ್ಟ್ರದಲ್ಲಿ ವಂಚಿತ ಬಹುಜನ ಆಘಾಡಿಯಿಂದ (ವಿಬಿಎ) ಬೌದ್ಧ ಮತದಾರರು ದೂರ ಸರಿದಿದ್ದಾರೆ
- ಬಿಎಸ್‌ಪಿ ಮತ್ತು ವಿಬಿಎಯ ಕುಸಿತದಿಂದ ಬಿಜೆಪಿಗೆ ಸ್ವಲ್ಪ ಲಾಭವಾಗಿದ್ದರೂ, ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ದೇಶದಾದ್ಯಂತ ಒಟ್ಟಾರೆ 5 ಶೇಕಡಾವಾರು ಅಂಶಗಳಷ್ಟು ದಲಿತ ಮತಗಳನ್ನು ಕಳೆದುಕೊಂಡಿವೆ. ಉತ್ತರ ಪ್ರದೇಶದಲ್ಲಿ ಜಾಟವೇತರ ಪರಿಶಿಷ್ಟ ಜಾತಿಗಳು, ದುಸಾಧರು ಮತ್ತು ಪಾಸ್ವಾನ್‌ಗಳು, ಬಿಹಾರ ಮತ್ತು ಹರಿಯಾಣದ ದಲಿತ ಸಮುದಾಯಗಳು ಎನ್‌ಡಿಎಯಿಂದ ದೂರ ಸರಿದು, 'ಇಂಡಿಯಾ' ಮೈತ್ರಿಕೂಟದ ಅಭ್ಯರ್ಥಿಗಳಿಗೆ ಮತ ನೀಡಿವೆ

ಎನ್‌ಡಿಎಯತ್ತ ಹಿಂದೂ ಆದಿವಾಸಿ ಸಮುದಾಯಗಳ ಮತ

2024ರ ಚುನಾವಣೆ



- ಈ ಬದಲಾವಣೆ ಬಗ್ಗೆ ಕಾಂಗ್ರೆಸ್ ಗಂಭೀರವಾಗಿ ಪರಾಮರ್ಶೆ ನಡೆಸಲೇಬೇಕು. ಬಹುತೇಕ ಬೇರೆಲ್ಲಾ ಸಮುದಾಯಗಳಲ್ಲಿ ಬಿಜೆಪಿ ವಿರುದ್ಧವಾಗಿ ಮತನಿರ್ಣಯ ಬದಲಾವಣೆಯಾಗಿದ್ದರೆ, ಆದಿವಾಸಿ ಸಮುದಾಯಗಳು ಬಿಜೆಪಿಗೆ ಇನ್ನಷ್ಟು ಹತ್ತಿರವಾಗಿವೆ
- 2009ರಲ್ಲಿ ಒಟ್ಟು ಆದಿವಾಸಿ ಸಮುದಾಯಗಳ ಮತಗಳಲ್ಲಿ ಬಿಜೆಪಿಗೆ ಬಿದ್ದಿದ್ದು ಸುಮಾರು ಶೇ 25ರಷ್ಟು ಮತಗಳು ಮಾತ್ರ. 2024ರಲ್ಲಿ ಈ ಪ್ರಮಾಣವು ಶೇ 50ರ ಆಸುಪಾಸಿನಲ್ಲಿದೆ
- ಆದಿವಾಸಿ ಸಮುದಾಯಗಳ ಮತಗಳು ಬಿಜೆಪಿಯತ್ತ ಹೋದ ಕಾರಣದಿಂದಲೇ ಬಿಜೆಡಿ ಮತ್ತು ಬಿಆರ್‌ಎಸ್ ಸೋಲಬೇಕಾಯಿತು. ಕೆಲವು ಕ್ಷೇತ್ರಗಳಲ್ಲಿ ಟಿಎಂಸಿಯ ಗೆಲುವು ದೂರವಾಯಿತು. ಮಧ್ಯಪ್ರದೇಶ ಮತ್ತು ಛತ್ತೀಸಗಡದಲ್ಲೂ ಕಾಂಗ್ರೆಸ್ ಇದರ ನಷ್ಟವನ್ನು ಅನುಭವಿಸಬೇಕಾಯಿತು

ಮೊದಲ ಲೇಖಕ: ಭಾರತ ಜೋಡೊ ಯಾತ್ರೆಯ ರಾಷ್ಟ್ರೀಯ ಸಂಚಾಲಕ,
ಎರಡನೇ ಲೇಖಕ: ಸಂಶೋಧಕ,
ಮೂರನೇ ಲೇಖಕ: ಸಮೀಕ್ಷಾ ಸಂಶೋಧನಾ ಸಂಶೋಧಕ

ನುಡಿ ಬೆಳಗು

ಸ್ತ್ರೀ ಸಮಾನತೆ ಎಂದರೆ...



ಎಚ್.ಎಸ್.ನವೀನಕುಮಾರ್ ಹೊಸದುರ್ಗ

ಈಕೆಯ ಹೆಸರು ಲಿಮ್ ಲೀ ಬೆಂಗ್. ಹೊಳೆವ ಕಂಗಳ ಹಾಗೂ ಸದಾ ಚಟುವಟಿಕೆಯ ಚಿಲುಮೆಯಂತಿರುತ್ತಿದ್ದ ಈಕೆ ನಮ್ಮ ಸಿಂಗಪುರ ಪ್ರವಾಸದ ಟೂರಿಸ್ಟ್ ಗೈಡ್. ತನ್ನ ದೇಶಕ್ಕೆ 1965ರಲ್ಲಿ ಸ್ವಾತಂತ್ರ್ಯ ಸಿಕ್ಕಾಗಿನಿಂದ, ತನ್ನ ದೇಶದ ಅನನ್ಯ ಹಸಿರು ಕಾಳಜಿ, ಇದಕ್ಕೆ ಮೂಲ ಕಾರಣಕರ್ತರಾದ ದೇಶದ ಮೊದಲ ಪ್ರಧಾನಿ ಲಿನ್ ಕ್ವೂನ್ ಅವರ ಕಾರ್ಯಕ್ಷಮತೆ ಮುಂತಾದುದರ ಬಗ್ಗೆ ತುಂಬು ಅಭಿಮಾನದಿಂದ 'ಮೈ ಕಂಟ್ರಿ', 'ಮೈ ಪ್ರೈಮ್ ಮಿನಿಸ್ಟರ್' ಎಂದು ಹೇಳಿಕೊಳ್ಳುತ್ತಿದ್ದ, ಈಕೆಯ ವಯಸ್ಸೆಷ್ಟೆಂದು ಕೇಳಿದಾಗ ನನಗೆ ನಿಜಕ್ಕೂ ಅಚ್ಚರಿ ಆಯ್ತು. ನಾವು ನಿವೃತ್ತಿಯ ವಯಸ್ಸು ಎಂದು ಪರಿಗಣಿಸುವ 60ರ ಹರೆಯವನ್ನು ಈಕೆ ದಾಟಿದ್ದಾಳೆ ಎನ್ನುವುದು ನಿಜಕ್ಕೂ ನಂಬಲಸಾಧ್ಯವಾಗಿತ್ತು.

ನಮ್ಮ ಪ್ರವಾಸೀ ಗುಂಪಿನ ಜೊತೆಗಿದ್ದು, ಬೇರೆ ಬೇರೆ ವಿಶೇಷ ಸ್ಥಳಗಳಿಗೆ ನಮ್ಮನ್ನು ಕರೆದೊಯ್ದು, ಅಲ್ಲಿನ ವೈಶಿಷ್ಟ್ಯಗಳ ಕುರಿತು ವಿವರವಾದ ಮಾಹಿತಿಗಳನ್ನು ನಮಗೆ ನೀಡುತ್ತಿದ್ದ ಈಕೆ, ಸಿಂಗಪುರದ ಮುಖ್ಯ ಉದ್ಯೋಗಗಳಲ್ಲಿ ಒಂದಾದ 6,000ಕ್ಕೂ ಹೆಚ್ಚಿರುವ ಟೂರಿಸ್ಟ್ ಗೈಡ್ ಗಳಲ್ಲಿ ಒಬ್ಬಳು. ವಿಶೇಷವೆಂದರೆ ಈ ಟೂರಿಸ್ಟ್ ಗೈಡ್‌ಗಳಲ್ಲಿ ಶೇಕಡ 50ಕ್ಕೂ ಹೆಚ್ಚು ಮಹಿಳೆಯರೇ.

'ಮಹಿಳೆಯರಿಗೆ ಈ ಕೆಲಸ ಕಷ್ಟಕರವಲ್ಲವೇ' ಎಂದು ನಾನು ನಮ್ಮ ದೇಶವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಪ್ರಶ್ನಿಸಿದಾಗ ಆಕೆ ಕೊಟ್ಟ ಉತ್ತರ: 'ನಮ್ಮ ದೇಶದಲ್ಲಿ ಹೆಣ್ಣು–ಗಂಡು, ಜಾತಿ, ಮತ, ಧರ್ಮವೆಂಬ ಯಾವುದೇ ಭೇದಭಾವಗಳಿಲ್ಲ. ಇಲ್ಲಿನ ಏಕೈಕ ಮಾನದಂಡ ಪ್ರತಿಭೆ'. ಸಮಯಕ್ಕೆ ಸರಿಯಾಗಿ ಬೇರೆ ಬೇರೆ ಬಸ್‌ಗಳನ್ನು ಬದಲಾಯಿಸುತ್ತಾ, ನಮಗೆ ಬೇಕಾದ ಊಟ ತಿಂಡಿ ಹಾಗೂ ಪ್ರೇಕ್ಷಣೀಯ ಸ್ಥಳಗಳ ಟಿಕೆಟ್ ವ್ಯವಸ್ಥೆ ಮಾಡಿಸುತ್ತಾ, ತಂಡವನ್ನು ಈಕೆ ಮುನ್ನಡೆಸುತ್ತಿದ್ದ ರೀತಿ ನನಗೆ ನಿಜಕ್ಕೂ ವಿಶೇಷವೆನಿಸಿತು.

ಯಾನ್ ಹೇಳಿದಂತೆ, 'ಈ ದೇಶದಲ್ಲಿ ಮಧ್ಯರಾತ್ರಿಯಲ್ಲೂ ಒಂಟಿ ಹೆಣ್ಣು ಎಲ್ಲಿ ಬೇಕಾದರೂ ಸಂಚರಿಸಬಹುದು. ನಗರದ ರಸ್ತೆಗಳಲ್ಲಿ ಎಲ್ಲೂ ಪೊಲೀಸರಿಲ್ಲ. ಆದರೆ ಕಾಣದ ಕಣ್ಣುಗಳು ಎಲ್ಲವನ್ನೂ ವೀಕ್ಷಿಸುತ್ತಿರುತ್ತವೆ. ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಇಲ್ಲಿನ ಕಾನೂನಿನಲ್ಲಿ ಅತ್ಯಂತ ಕಠಿಣ ಶಿಕ್ಷೆ ಇದೆ. ಹಾಗಾಗಿ ಎಲ್ಲಾ ಸಮಯ ಸಂದರ್ಭಗಳಲ್ಲೂ ಮಹಿಳೆ ಅತ್ಯಂತ ಸುರಕ್ಷಿತ'.

ಸ್ತ್ರೀಯರಿಗೆ ವಿಶೇಷ ಗೌರವ ನೀಡುವುದೇ ನಮ್ಮ ಸಂಸ್ಕೃತಿ ಎಂದು ಬಡಾಯಿ ಕೊಚ್ಚಿಕೊಳ್ಳುವ ನಮ್ಮ ದೇಶದಲ್ಲಿ ಏಕೆ ಇದು ಸಾಧ್ಯವಾಗಿಲ್ಲ? ನಮ್ಮ ಸಂಸ್ಕೃತಿಯೇ ಶ್ರೇಷ್ಠ ಎಂದು ಸದಾ ಹೇಳಿಕೊಂಡು ಓಡಾಡುವ ನಮ್ಮ ಸಮಾಜದ ಕಿವಿಗೇಕೆ ದಿನ ಬೆಳಗಾದರೆ ಕೇಳಿ ಬರುವ ದೌರ್ಜನ್ಯಕ್ಕೊಳಗಾದ ಸಂತ್ರಸ್ತೆಯರ ಕೂಗು ಬೀಳುತ್ತಿಲ್ಲ? ಯೋಚಿಸಬೇಕಾದ ವಿಚಾರವಲ್ಲವೇ?

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

2ನೇ ಆವೃತ್ತಿ

'ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ'ದ ಎರಡನೇ ಆವೃತ್ತಿಗೆ 'ಸಾಮಾಜಿಕ ಪರಿಣಾಮ ಬೀರಿದ ಅತ್ಯುತ್ತಮ ಚಿತ್ರ' ವಿಭಾಗದಲ್ಲಿ ನಾಮನಿರ್ದೇಶಿತಗೊಂಡ ಚಿತ್ರಗಳ ವಿವರ

ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ
prajavani.net/cinesamman/season2

ಜೀವಾ ನವೀನ್ ನಿರ್ದೇಶನದ ಚಿತ್ರ **'ಪಾಲಾರ್'**. ಇದೊಂದು ಮಹಿಳಾ ಪ್ರಧಾನ, ಸಂಘರ್ಷದ, ಹೋರಾಟದ ಕಥನ. ತೆಲುಗಿನ 'ಸಿನಿಮಾ ಬಂಡಿ' ನಟಿ, ಗಾಯಕಿ ಉಮಾ ವೈ.ಜಿ. ಕೋಲಾರ ಅವರು ಚಿತ್ರದಲ್ಲಿ ಮುಖ್ಯಪಾತ್ರದಲ್ಲಿ ನಟಿಸಿದ್ದಾರೆ. ಕೋಲಾರ, ದೇವನಹಳ್ಳಿ ಸುತ್ತಮುತ್ತ ನಡೆದ ನೈಜ ಘಟನೆಯನ್ನು ಆಧಾರವಾಗಿಟ್ಟುಕೊಂಡು ಜೀವಾ ನವೀನ್ ಕಥೆ ಬರೆದಿದ್ದಾರೆ. ಜನರ ಹಕ್ಕುಗಳು, ಜಾತಿ ವ್ಯವಸ್ಥೆ, ಶೋಷಿತ ವರ್ಗದ ಮೇಲಿನ ದೌರ್ಜನ್ಯ, ಮರ್ಯಾದೆಗೇಡು ಹತ್ಯೆ, ಮೇಲ್ವರ್ಗದ ದಬ್ಬಾಳಿಕೆ ಮುಂತಾದ ವಿಷಯಗಳ ಬಗ್ಗೆ ಚರ್ಚೆ ಇದರಲ್ಲಿದೆ. 'ಡೆಕ್ಕನ್ ಹೆರಾಲ್ಡ್'ನಲ್ಲಿ ಬಂದ ಲೇಖನವನ್ನು ಸ್ಫೂರ್ತಿಯಾಗಿಟ್ಟುಕೊಂಡು ಜೀವಾ ನವೀನ್ ಕಥೆ ಹೆಣೆದಿದ್ದರು. ಸಿನಿಮಾದಲ್ಲಿ ನಾಯಕನಾಗಿ ತಿಲಕ್‌ರಾಜ್ ನಟಿಸಿದ್ದಾರೆ.

ರಾಷ್ಟ್ರ ಪ್ರಶಸ್ತಿ ವಿಜೇತ ನಿರ್ದೇಶಕ ಬಿ.ಎಸ್.ಲಿಂಗದೇವರು ನಿರ್ದೇಶನದಲ್ಲಿ 'ವಿರಾಟಪುರ ವಿರಾಗಿ' ಮೂಡಿಬಂದಿದೆ. ಹಾನಗಲ್ ಶ್ರೀ ಕುಮಾರ ಶಿವಯೋಗಿಗಳ ಜೀವನ ಚರಿತ್ರೆ ಆಧಾರಿತ ಚಿತ್ರವಿದು. ಕುಮಾರ ಶಿವಯೋಗಿಗಳ ಪಾತ್ರದಲ್ಲಿ ನಟ ಸುಚೇಂದ್ರ ಪ್ರಸಾದ್ ಇಲ್ಲಿ ನಟಿಸಿದ್ದಾರೆ. ಜಾತಿ ತಾರತಮ್ಯಗಳನ್ನು ಹೊಡೆದೋಡಿಸುತ್ತಾ, ಶರಣ ತತ್ತ್ವಗಳನ್ನು ನಿಜಾರ್ಥದಲ್ಲಿ ಅನುಷ್ಠಾನಗೊಳಿಸಿದವರಲ್ಲಿ ಕುಮಾರ ಶಿವಯೋಗಿಗಳು ಪ್ರಮುಖರು. ಇಂತಹ ಅಪರೂಪದ ಚೇತನದ ಕುರಿತು ಸಾಕಷ್ಟು ಅಧ್ಯಯನ ನಡೆಸಿ, ಚಿತ್ರಕಥೆ ಸಿದ್ಧಪಡಿಸಿ ತಯಾರಿಸಿದ ಸಿನಿಮಾವಿದು. ಸಂಗೀತದ ದೃಷ್ಟಿಯಿಂದ, ಸಾಮಾಜಿಕ ಪರಿಣಾಮದ ಪಾಠವೂ ಆಗುವ ಕಾರಣದಿಂದ ಈ ಸಿನಿಮಾ ಭಿನ್ನವೂ ಹೌದು, ಮುಖ್ಯವೂ ಹೌದು.

ಕೆ.ಪಿ.ಪೂರ್ಣಚಂದ್ರ ತೇಜಸ್ವಿಯವರ ಒಂದು ಕಥೆಯನ್ನಾಧರಿಸಿದ ಚಿತ್ರ 'ಡೇರ್ ಡೆವಿಲ್ ಮುಸ್ತಾಫಾ'. ನಿರ್ದೇಶಕ ಶಶಾಂಕ್ ಸೋಗಾಲ್ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ಪೂರ್ತಿ ಹಿಂದೂಗಳೇ ಇರುವ ಮೂಡಿಗೆರೆಯ ಕಾಲೇಜಿಗೆ ಪ್ರವೇಶ ಪಡೆಯುವ ಏಕೈಕ ಮುಸ್ಲಿಂ ವಿದ್ಯಾರ್ಥಿ 'ಮುಸ್ತಾಫಾ'ನ ಬದುಕಿನ ಸುತ್ತ ಚಿತ್ರ ಸಾಗುತ್ತದೆ. ಹಿಂದೂ ಮುಸ್ಲಿಂ ಭಾವೈಕ್ಯತೆಯನ್ನು ಸಾರುವ ಚಿತ್ರವಿದು. ಕೋಮುದ್ವೇಷ ಹೇಗೆ ಒಂದು ಊರನ್ನು ಹೊತ್ತಿ ಉರಿಸುತ್ತದೆ, ನಾವು ಹೇಗೆ ಸಹಬಾಳ್ವೆ ನಡೆಸಬೇಕು ಎಂಬುದನ್ನು ನಿರ್ದೇಶಕರು ಚಿತ್ರದಲ್ಲಿ ಕಟ್ಟಿಕೊಟ್ಟಿದ್ದಾರೆ. ಮುಸ್ತಾಫಾನ ಪಾತ್ರದಲ್ಲಿ ನಟ ಶಿಶಿರ್, ಅಯ್ಯಂಗಾರಿ ಪಾತ್ರದಲ್ಲಿ ನಟ ಆದಿತ್ಯ, ನಾಗಭೂಷಣ್ ಕನ್ನಡ ಪ್ರಾಧ್ಯಾಪಕರಾಗಿ ಕಾಣಿಸಿಕೊಂಡಿದ್ದಾರೆ.

ಪೃಥ್ವಿ ಕೊಣನೂರು ನಿರ್ದೇಶಿಸಿದ ಚಿತ್ರ 'ಪಿಂಕಿ ಎಲ್ಲಿ?'. 'ಕಳೆದುಹೋದದ್ದನ್ನು ಹುಡುಕುತ್ತ ಸಾಗುವ' ಮಾದರಿಯ ಕಥಾವಸ್ತು ಇದರಲ್ಲಿದೆ. ಕಳೆದುಹೋದ ಕೂಸು 'ಪಿಂಕಿ'ಯನ್ನು ಹುಡುಕುವ ಪ್ರಕ್ರಿಯೆಯಲ್ಲಿ ಹಲವು ಸೂಕ್ಷ್ಮ ಜಗತ್ತುಗಳನ್ನು ಪೃಥ್ವಿ ತೋರಿಸುತ್ತ ಹೋಗುತ್ತಾರೆ. ಇವುಗಳನ್ನು ಬಹಳ ಪರಿಣಾಮಕಾರಿಯಾಗಿ ಅವರು ತೆರೆಮೇಲೆ ತಂದಿದ್ದಾರೆ. ಅಕ್ಷತಾ ಪಾಂಡವಪುರ, ದೀಪಕ್ ಸುಬ್ರಹ್ಮಣ್ಯ, ಅನೂಪ್ ಶೂನ್ಯ ಎಂಬ ವೃತ್ತಿಪರ ನಟರ ಜೊತೆಗೆ ಗುಂಜಲಮ್ಮ, ಸುಭದ್ರ, ಲಕ್ಷ್ಮಿ ಮೊದಲಾದ ನಟರಲ್ಲದ ನಟ-ನಟಿಯರ ಅಭಿನಯವೂ ಸಾಕಷ್ಟು ಪ್ರಬುದ್ಧವಾಗಿದೆ. 13ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಕನ್ನಡ ಸಿನಿಮಾ ಸ್ಪರ್ಧಾ ವಿಭಾಗದಲ್ಲಿ ಪ್ರಥಮ ಪ್ರಶಸ್ತಿ ಪಡೆದಿತ್ತು.



ಶ್ರೀಕಾಂತ್ ಕಟಗಿ ನಿರ್ದೇಶನದ 'ಕ್ಷೇತ್ರಪತಿ' ಚಿತ್ರದಲ್ಲಿ ನವೀನ್ ಶಂಕರ್, ಅರ್ಚನಾ ಜೋಯಿಸ್, ಅಚ್ಯುತ್ ಕುಮಾರ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ. ರೈತರನ್ನು, ಕೃಷಿ ವಿಷಯವನ್ನು ಕೇಂದ್ರವಾಗಿಟ್ಟುಕೊಂಡು ಕಮರ್ಷಿಯಲ್ ರೂಪದಲ್ಲಿ ಹೆಣೆದ ಕಥೆ ಸಿನಿಮಾದಲ್ಲಿದೆ. ರೈತರ ಆರ್ಥಿಕ ಸ್ಥಿತಿ, ವ್ಯವಸ್ಥೆಯ ಕುತಂತ್ರಗಳು, ಕಾರ್ಪೊರೇಟ್ ಕಂಪನಿಗಳ ಹಿಡಿತ, ದಲ್ಲಾಳಿಗಳ ಆಟ ಮುಂತಾದ ವಿಷಯಗಳನ್ನು ಪ್ರಸ್ತಾಪಿಸುತ್ತಾ, ಬೆಳೆ ಬೆಳೆಯುವ ಮುನ್ನವೇ ಲಾಭದಾಯಕ ಬೆಲೆ ನಿಗದಿ ಎನ್ನುವ ಕಾನೂನು ಬರಬೇಕು ಎನ್ನುವ ಗಟ್ಟಿಯಾದ ಸಂದೇಶವನ್ನು ಸಿನಿಮಾ ಸಾರಿದೆ. ಉತ್ತರ ಕರ್ನಾಟಕ ಭಾಷೆಯ ಸೊಗಡಿನಲ್ಲಿ ಕಟ್ಟಿಕೊಡಲಾಗಿರುವ ಈ ಸಿನಿಮಾದಲ್ಲಿ 'ಬಸವ' ಎಂಬ ಯುವಕನ ಪಾತ್ರದಲ್ಲಿ ನವೀನ್ ಜೀವಿಸಿದ್ದಾರೆ.

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಸೋಮವಾರ ಜೂನ್ 17, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಏಕಾದಶಿ ಅಹೋರಾತ್ರ ನಕ್ಷತ್ರ: ಚಿತ್ತಾ ಗಂ. 13-51 ಯೋಗ: ಪರಿಘ ಗಂ. 21-34 ಕರಣ: ವಣಿಜ ಗಂ. 17-39, ಮಿಥುನ ಮಾಸದ ನೇ 03 ದಿನ, ಮಳೆನಕ್ಷತ್ರ: ಮೃಗಶಿರ 3.

ರಾಹುಕಾಲ : ಬೆಳಿಗ್ಗೆ 07-30 – 09-00

ಸೂರ್ಯೋದಯ : 06-08 ಸೂರ್ಯಾಸ್ತ : 06-55

ಮುಸ್ಲಿಂ ದಿನಾಂಕ : 10 ಜುಲ್‌ಹಿಜಾ

ಅದೃಷ್ಟ ಸಂಖ್ಯೆ : 5, 12

ಮೇಷ: ಪದವಿ ವಿದ್ಯಾರ್ಥಿಗಳ ಅತಿರೇಕದ ವರ್ತನೆಯು ಹಲವು ಬಾರಿ ಶಿಕ್ಷಕರಿಂದ ಗಮನಿಸಲ್ಪಟ್ಟದ್ದರಿಂದ ಕಠಿಣ ಕ್ರಮ ಕೈಗೊಳ್ಳಬಹುದು. ಹವ್ಯಾಸಿ ಬರಹಗಾರರಿಗೆ ಖ್ಯಾತಿ ಪಡೆಯಲು ಉತ್ತಮ ವೇದಿಕೆ ದೊರಕುವುದು.

ವೃಷಭ: ರಾಜಕೀಯ ವ್ಯಕ್ತಿಗಳಿಗೆ ನಂಬಿಕೆ ದ್ರೋಹ ಅಥವಾ ಅಪಪ್ರಚಾರದಂಥ ಸಮಸ್ಯೆಗಳು ಎದುರಾಗಬಹುದು. ಬಿಸಿನೆಸ್ ಸಂಬಂಧ ಬ್ಯಾಂಕ್ ಅಧಿಕಾರಿಗಳ ಜತೆ ತಕ್ಷಣದಲ್ಲಿ ಮಾತುಕತೆ ನಡೆಸಬೇಕಾದೀತು.

ಮಿಥುನ: ಸಂಗಾತಿಯ ಮನಸ್ಸಿನ ಮಾತುಗಳನ್ನು ಅರಿತು ಅದನ್ನು ಈಡೇರಿಸುವ ಸಂಕಲ್ಪವನ್ನು ಮಾಡುವಿರಿ. ಅಸಾಧಾರಣ ರೀತಿಯಿಂದ ಸಮಸ್ಯೆಗಳಿಗೆ ಪರಿಹಾರ ಕಂಡು ಹಿಡಿಯುತ್ತೀರಿ. ಆರೋಗ್ಯದಲ್ಲಿ ವ್ಯತ್ಯಯ ಕಾಣಲಿದೆ.

ಕರ್ಕಾಟಕ: ವಾದ ವಿವಾದಗಳಿಂದಾಗಿ ಸಂಬಂಧದಲ್ಲಿ ಉಂಟಾದ ಒಡಕುಗಳು ಸಮಾಧಾನದ ಮಾತುಗಳಿಂದಾಗಿ ಪರಿಹಾರವಾಗುತ್ತದೆ. ಹಣಕಾಸಿನ ಸಮಸ್ಯೆಗೆ ತಾತ್ಕಾಲಿಕ ಪರಿಹಾರ ದೊರೆಯಲಿದೆ.

ಸಿಂಹ: ಮನೆಯಲ್ಲಿನ ಮಂಗಳ ಕಾರ್ಯಕ್ರಮಕ್ಕೆ ಆಪ್ತರ ಸಹಾಯ ನೀವಂದುಕೊಂಡ ಮಟ್ಟಕ್ಕೆ ದೊರೆಯದೆ ಇದ್ದರೂ ಉತ್ತಮವಾಗಿ ಮಾಡುವಿರಿ. ವಿದ್ವಾಂಸರ ಎದುರು ಉಚಿತವಾದ ಮಾತನಾಡಿ ಪ್ರಶಂಸೆಗೆ ಒಳಗಾಗುವಿರಿ.

ಕನ್ಯಾ: ಕೆಲಸಗಳನ್ನು ಸಾಧಿಸಿಕೊಳ್ಳಲೇ ಬೇಕಿದ್ದರೆ ಅವಿರತ ಶ್ರಮ ಅಗತ್ಯ ಮತ್ತು ಅನಿವಾರ್ಯವಾಗುವುದು. ನಿಮ್ಮನ್ನು ನೀವೇ ವಿಮರ್ಶಿಕೊಂಡರೆ ತಪ್ಪುಗಳ ಅರಿವಾಗುವುದು.

ತುಲಾ: ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ ಇಂದು ಆಪತ್ತು ಉಂಟಾದಾಗ ಹಳೆಯ ಹರಕೆಗಳ ನೆನಪು ಬರಬಹುದು. ಆಹಾರ ಪದಾರ್ಥಗಳ ಅದರಲ್ಲೂ ಸಿಹಿ ತಿಂಡಿಗಳ ಉತ್ಪಾದನೆಯಿಂದ ಲಾಭ ಗಳಿಸುವಿರಿ.

ವೃಶ್ಚಿಕ: ಖರೀದಿಯಲ್ಲಿ ಮೋಸ ಹೋಗುವ ಲಕ್ಷಣವಿರುವುದರಿಂದ ಹೆಚ್ಚಿನ ಗಮನವಿರಲಿ. ಉತ್ತಮ ಹಂತದಲ್ಲಿರುವ ಕಟ್ಟಡ ನಿರ್ಮಾಣವನ್ನು ಅನಿವಾರ್ಯ ಕಾರಣಗಳಿಂದ ನಿಲ್ಲಿಸುವಿರಿ. ವಾತ ಸಂಬಂಧಿ ಕಾಯಿಲೆಗಳು ಆಗಬಹುದು.

ಧನು: ಮನೆಯಿಂದ ದೂರ ಇರುವ ಮಕ್ಕಳ ವರ್ತನೆಗಳು ಇಂದು ಪದೇ ಪದೇ ನೆನಪಾಗುತ್ತದೆ. ಕೆಲಸಗಳು ಸುಲಭವಾಗಿಸಲು ಸ್ನೇಹಿತರೊಬ್ಬರು ನೆರವಾಗಲಿದ್ದಾರೆ. ಸೋಲನ್ನು ಒಪ್ಪಿಕೊಳ್ಳುವ ಮನಸ್ಥಿತಿಯನ್ನು ಬಿಟ್ಟುಬಿಡಿ.

ಮಕರ: ಮನರಂಜನೆಗಾಗಿ ತಮಾಷೆಯ ಮಾತುಗಳನ್ನಾಡುವಾಗ ಗುಪ್ತವಾದ ಸಂಗತಿಗಳು ಬಯಲಾಗಬಹುದು. ಕೆಲವರು ನಡೆಸುತ್ತಿರುವ ಕಾನೂನುಬಾಹಿರ ವಿಚಾರಗಳನ್ನು ಬಯಲು ಮಾಡುವಿರಿ.

ಕುಂಭ: ಹಿಂದಿನ ದಿನದ ವಿಶೇಷ ಕಾರ್ಯಕ್ರಮದಲ್ಲಿ ಮಾಡಿದ ಭೋಜನವು ಅಡ್ಡಪರಿಣಾಮವನ್ನು ತೋರಿಸುವ ಸಾಧ್ಯತೆ ಇದೆ. ಗಣಿತಜ್ಞರಿಗೆ ಹಾಗು ಸಂಗೀತಗಾರರಿಗೆ ಪ್ರತಿಭಾ ಪ್ರದರ್ಶನಕ್ಕೆ ಅವಕಾಶಗಳು ದೊರೆಯುವುದು.

ಮೀನ: ವಿವಾಹದ ವಿಚಾರದಲ್ಲಿ ಕೆಲವೊಂದು ವಿಷಯಗಳ ಬಗ್ಗೆ ನಿಷ್ಠೂರವಾದ ತೀರ್ಮಾನ ತೆಗೆದುಕೊಳ್ಳದಿದ್ದರೆ ಪಶ್ಚಾತಾಪ ಪಡಬೇಕಾದೀತು. ನಿರುದ್ಯೋಗಿಗಳಿಗೆ ಹಂಗಾಮಿ ನೌಕರಿ ದೊರೆಯುವ ಮಾರ್ಗ ಸಿಗಲಿದೆ.

ಪದಬಂಧ 5714

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಭಸ್ಮವಿಟ್ಟು ಮಹಾಪುರುಷನಿಗೆ ಮಾಡುವ ಆದರ (5)
3.ಕನ್ನಡಿಗ ಹಿಡಿದಿರುವ ಸ್ಪೂನ್! (3)
5.ಗುಂಪು ಗುಂಪಾಗಿ ವರ್ಗೀಕರಿಸುವುದು (5)
7.ಕಟ ಕಟ ಶಬ್ದ ಮಾಡುವ ಬಾಗಿಲು! (3)
8.ಪ್ರಣಯಿಗಳ ಸುಳ್ಳು ಕೋಪ (5)
11.ಹಸುವಿನ ಮರಿಯ ಪಚನಾಂಗ (3)
12.ಹೆಸರಿಡುವ ಶಾಸ್ತ್ರ (5)
14.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
15.ಲೋಹದ ಹಕ್ಕಿಯಲ್ಲಿನ ಪಯಣ (5)

ಮೇಲಿಂದ ಕೆಳಕ್ಕೆ

1.ಕವಿಕಲ್ಪನೆಯ ನಡುವೆ ಅಕ್ಕನಗಂಡ ನುಸುಳಿದ್ದಾನಲ್ಲಾ? (4)
2.ಈತ ಭಿಕ್ಷೆ ಬೇಡುವವನು (3)
4.ನಿಸ್ಸಾರವಾದ ಗಸಿ (3)
6. ತಂತಿವಾದ್ಯವಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)
7.ಇನ್ನೂ ಕರು ಹಾಕದ ಹಸು (3)
8.ಹುಳುವಿನಲ್ಲಿರುವ ಸತ್ವ ಕಾಣುತ್ತಿದೆಯೇ? (3)
9.ಯಮನಿದ್ದಾಗಿನ ಸೂತ್ರ (3)
10.ಇದು ಬುದ್ಧಿವಂತಿಕೆ! (4)
11.ಕರುವಿನಲ್ಲಿನ ಬೆನ್ನೆಲುಬು (3)
13.ದನಕ್ಕಾಗಿ ನಡೆದ ಹೋರಾಟ (3)

5713ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಸ್ಥಾವರ 4.ಗಮನ
5.ಅಂತರಾಳ 6.ಬಲವಂತ 7.ತೆನೆ
9.ನವ 13.ಸಮೀಕ್ಷಕ
14.ಬಲರಾಮ 15.ರಸನ
16.ಕರಣ

ಮೇಲಿಂದ ಕೆಳಕ್ಕೆ:
1.ಅಂಗಸಾಧನೆ
2.ಸ್ಥಾನಬದ್ಧತೆ 3.ವಿರಾಗಿ
5.ಅಂತರ್ಧಾನ
8.ನೆಲಸಮ 10.ವಶೀಕರಣ
11.ಆಮ್ಲಜನಕ 12.ಓಲಗ

ಸುಡೊಕು 6099

			7		2		8	6
						3		4
	7	8	3		9		1	
1		4			5		2	3
	2			3				
8		7	6					9
		3	9		6	5	4	8
5	4					1		
	8		5		4		3	2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6098 ಸುಡೊಕು

5	6	3	9	2	7	8	1	4
8	1	7	6	5	4	2	3	9
4	2	9	3	8	1	7	5	6
2	4	6	7	1	3	9	8	5
3	9	1	8	4	5	6	7	2
7	5	8	2	9	6	3	4	1
6	8	5	1	7	9	4	2	3
1	3	2	4	6	8	5	9	7
9	7	4	5	3	2	1	6	8

ಪರೀಕ್ಷಾ ಅವ್ಯವಹಾರ: ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಒತ್ತಾಯ • ಪ್ರಧಾನಿ ಮೌನವಾಗಿರುವುದಕ್ಕೆ ಆಕ್ಷೇಪ

‘ಸುಪ್ರೀಂ’ ಮೇಲ್ವಿಚಾರಣೆಯಲ್ಲಿ ತನಿಖೆ ಆಗಲಿ


ಕಪಿಲ್ ಸಿಬಲ್

ನವದೆಹಲಿ (ಪಿಟಿಐ): ‘ನೀಟ್–ಯುಜಿ’ ಅಕ್ರಮ ಆರೋಪಗಳ ಕುರಿತು ಸುಪ್ರೀಂ ಕೋರ್ಟ್ ನೇಮಿಸಿದ ಅಧಿಕಾರಿಗಳಿಂದ ತನಿಖೆ ಆಗಬೇಕು ಹಾಗೂ ಈ ಪರೀಕ್ಷೆಯನ್ನು ಭವಿಷ್ಯದಲ್ಲಿ ಹೇಗೆ ನಡೆಸಬೇಕು ಎಂಬುದರ ಕುರಿತು ಕೇಂದ್ರ ಸರ್ಕಾರವು ಎಲ್ಲ ರಾಜ್ಯಗಳ ಜತೆಗೆ ಸಮಗ್ರವಾಗಿ ಸಮಾಲೋಚನೆ ನಡೆಸಬೇಕು ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಆಗ್ರಹಿಸಿದರು.

ಯಾವುದೇ ಪರೀಕ್ಷಾ ವ್ಯವಸ್ಥೆ ಭ್ರಷ್ಟವಾಗಿದ್ದರೆ, ಪ್ರಧಾನಿ ಮೌನವಾಗಿರುವುದು ಸರಿಯಲ್ಲ ಎಂದು ಅವರು ಪಿಟಿಐಗೆ ನೀಡಿದ ಸಂದರ್ಶನದಲ್ಲಿ ತರಾಟೆಗೆ ತೆಗೆದುಕೊಂಡರು.

ಈ ಹಿಂದಿನ ಮಾನವ ಸಂಪನ್ಮೂಲ ಅಭಿವೃದ್ಧಿ ಇಲಾಖೆಯ ಮಾಜಿ ಸಚಿವರೂ ಆಗಿರುವ ಸಿಬಲ್ ಅವರು, ಮುಂದಿನ ಸಂಸತ್ ಅಧಿವೇಶನದಲ್ಲಿ ಎಲ್ಲ ರಾಜಕೀಯ ಪಕ್ಷಗಳು ಈ ವಿಷಯವನ್ನು ಬಲವಾಗಿ ಪ್ರಸ್ತಾಪಿಸಬೇಕು ಎಂದು ಕರೆ ನೀಡಿದರು. ಆದರೆ ಇದನ್ನು ಚರ್ಚೆಗೆ ತೆಗೆದುಕೊಳ್ಳುವುದರ ಬಗ್ಗೆ ಸಂಶಯ ವ್ಯಕ್ತಪಡಿಸಿದ ಅವರು, ಈ ಕುರಿತ ವಿಷಯವು ನ್ಯಾಯಾಲಯದಲ್ಲಿ ಇರುವುದನ್ನು ಸರ್ಕಾರ ಉಲ್ಲೇಖಿಸಿ ಚರ್ಚೆಗೆ ಅನುಮತಿ ನೀಡದಿರಬಹುದು ಎಂದೂ ಭವಿಷ್ಯ ನುಡಿದರು.

ನೀಟ್–ಯುಜಿಯಲ್ಲಿನ ಅಕ್ರಮಗಳನ್ನು ವಿರೋಧಿಸಿ ಮತ್ತು ಮರು ಪರೀಕ್ಷೆಗೆ ಒತ್ತಾಯಿಸಿ ದೇಶದಾದ್ಯಂತ ವಿದ್ಯಾರ್ಥಿಗಳು ನಡೆಸುತ್ತಿರುವ ಪ್ರತಿಭಟನೆಗಳಿಗೆ ಸಾರ್ವಜನಿಕರು ಬೆಂಬಲ ನೀಡಬೇಕು
–ಸೌರಭ್ ಭಾರದ್ವಾಜ್, ದೆಹಲಿಯ ಆರೋಗ್ಯ ಸಚಿವ

ನೀಟ್ ಅಕ್ರಮ

ನೀಟ್ ಕುರಿತ ಭ್ರಷ್ಟಾಚಾರದ ಸುದ್ದಿಗಳು ಮಾಧ್ಯಮಗಳ ಮೂಲಕ ಬಯಲಾಗುತ್ತಿವೆ. ಗುಜರಾತಿನಲ್ಲಿ ನಡೆದ ಕೆಲ ಘಟನೆಗಳು ದಿಗ್ಭ್ರಮೆ ಮೂಡಿಸಿದ್ದು, ಅದು ರಾಷ್ಟ್ರೀಯ ಕಾಳಜಿಯ ವಿಷಯ ಎಂಬುದನ್ನು ಮನದಟ್ಟು ಮಾಡಿದೆ. ಈ ಕೆಲವು ಗಂಭೀರ ಪ್ರಶ್ನೆಗಳಿಗೆ ಎನ್‌ಟಿಎ ಉತ್ತರಿಸಬೇಕಿದೆ ಎಂದು ಅವರು ಹೇಳಿದರು.

ಯುಪಿಎಗೂ ಇದಕ್ಕೂ ಸಂಬಂಧವಿಲ್ಲ: ಇನ್ನೂ ಆಶ್ಚರ್ಯದ ಸಂಗತಿಯೆಂದರೆ, ಈಗಿನ ಸರ್ಕಾರದ ಅವಧಿಯಲ್ಲಿ ಭ್ರಷ್ಟಾಚಾರ ನಡೆದಾಗ, ಅದರ ಕೆಲ ಅಂಧ ಭಕ್ತರು ಯುಪಿಎ ಸರ್ಕಾರದ ಅವಧಿಯನ್ನು ದೂಷಿಸುತ್ತಾರೆ. ವಿಷಯವೇ ಗೊತ್ತಿಲ್ಲದೇ ಹೀಗೆಲ್ಲ ಹೇಳುವುದು ಅತ್ಯಂತ ದುರದೃಷ್ಟಕರ. ನೀಟ್ ಕುರಿತ ಕಾನೂನನ್ನು ಪರಿಚಯಿಸಿರುವುದು ಮೋದಿ ನೇತೃತ್ವದ ಸರ್ಕಾರವೇ ಹೊರತು ಯುಪಿಎ ಅಲ್ಲ. ಹೀಗಾಗಿ ಅದಕ್ಕೂ ಯುಪಿಎಗೂ ಯಾವುದೇ ಸಂಬಂಧವಿಲ್ಲ ಎಂದು ಅವರು ಪ್ರತಿಪಾದಿಸಿದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಮತ್ತು ಅಕ್ರಮ ಆರೋಪಗಳನ್ನು ತಿರಸ್ಕರಿಸಿರುವ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರ ವಿರುದ್ಧ ವಾಗ್ದಾಳಿ ನಡೆಸಿದ ಸಿಬಲ್, ‘ಸಚಿವರು, ಗುಜರಾತಿನಲ್ಲಿ ಹೇಗೆಲ್ಲ ನಡೆದಿದೆ ಎಂಬುದನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ತಿಳಿದುಕೊಳ್ಳಲಿ’ ಎಂದರು. ಇದೇ ರೀತಿ ದೇಶದ ವಿವಿಧೆಡೆ ವ್ಯಾಪಕ ಭ್ರಷ್ಟಾಚಾರ ನಡೆದಿದೆ ಎಂದೂ ಅವರು ಆರೋಪಿಸಿದರು.

ಅತ್ಯಂತ ಸ್ಪರ್ಧಾತ್ಮಕವಾಗಿರುವ ‘ನೀಟ್’ನಲ್ಲಿ ಯಾವುದೇ ರೀತಿಯ ಅವ್ಯವಹಾರ ಕಂಡು ಬಂದಲ್ಲಿ ಕೂಡಲೇ ಸಮಗ್ರ ತನಿಖೆ ನಡೆಸಬೇಕು. ಸಿಬಿಐ ತನಿಖೆಯು ಆಡಳಿತವನ್ನು ರಕ್ಷಿಸುತ್ತದೆ. ಆದ್ದರಿಂದ ಸ್ವತಂತ್ರ ಸಂಸ್ಥೆ ಅಥವಾ ಸುಪ್ರೀಂ ಕೋರ್ಟ್ ಆಯ್ಕೆ ಮಾಡಿದ ಸ್ವತಂತ್ರ ಅಧಿಕಾರಿಗಳ ಮೂಲಕ ತನಿಖೆ ನಡೆಸುವ ಅಗತ್ಯವಿದೆ ಎಂದು ಅವರು ಆಗ್ರಹಿಸಿದರು.

ಎನ್‌ಟಿಎ ವಿಶ್ವಾಸಾರ್ಹತೆ ಕುರಿತು ಗಂಭೀರ ಪ್ರಶ್ನೆಗಳಿವೆ: ಕಾಂಗ್ರೆಸ್


ಜೈರಾಮ್ ರಮೇಶ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯ (ಎನ್‌ಟಿಎ) ವಿಶ್ವಾಸಾರ್ಹತೆ ಮತ್ತು ಅದು ‘ನೀಟ್’ ಅನ್ನು ರೂಪಿಸಿ, ನಿರ್ವಹಿಸಿದ ವಿಧಾನದ ಬಗ್ಗೆ ಗಂಭೀರ ಪ್ರಶ್ನೆಗಳು ಕಾಡುತ್ತಿವೆ ಎಂದು ಕಾಂಗ್ರೆಸ್ ಭಾನುವಾರ ಆರೋಪಿಸಿದೆ.

ಸಂಸತ್ತಿನ ಹೊಸ ಸ್ಥಾಯಿ ಸಮಿತಿಗಳು ರಚನೆಯಾದಾಗ, ಅದು ‘ನೀಟ್’, ಎನ್‌ಟಿಎ ಮತ್ತು ಎನ್‌ಸಿಇಆರ್‌ಟಿ ಕುರಿತು ಆಳವಾದ ಪರಿಶೀಲನೆ ನಡೆಸಲಿವೆ ಎಂಬ ವಿಶ್ವಾಸ ಇದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

‘ನಾನು 2014ರಿಂದ 2019ರ ಅವಧಿಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣಕ್ಕೆ ಸಂಬಂಧಿಸಿದ ಸಂಸತ್ತಿನ ಸ್ಥಾಯಿ ಸಮಿತಿ ಸದಸ್ಯನಾಗಿದ್ದೆ. ಆಗ ನೀಟ್‌ಗೆ ವ್ಯಾಪಕವಾಗಿ ದೊರೆತ ಬೆಂಬಲವನ್ನೂ ಸ್ಮರಿಸುತ್ತೇನೆ. ಆದರೆ, ನೀಟ್ ಪರೀಕ್ಷೆಯು ಸಿಬಿಎಸ್‌ಇ ಪಠ್ಯಕ್ರಮದ ಶಾಲಾ ವಿದ್ಯಾರ್ಥಿಗಳಿಗೆ ಮಾತ್ರ ಅನುಕೂಲಕರವಾಗಿದ್ದು, ಇತರ ಪಠ್ಯಕ್ರಮಗಳ ಶಾಲಾ ವಿದ್ಯಾರ್ಥಿಗಳಿಗೆ ಅನನುಕೂಲವನ್ನು ಉಂಟು ಮಾಡುತ್ತದೆ ಎಂದು ತಮಿಳುನಾಡಿನ ಸದಸ್ಯರು ಕಳವಳ ವ್ಯಕ್ತಪಡಿಸಿದ್ದರು’ ಎಂದು ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಸಿಬಿಎಸ್‌ಇ ಈ ಕುರಿತ ವಿಚಾರವನ್ನು ಸರಿಯಾಗಿ ವಿಶ್ಲೇಷಣೆಗೆ ಒಳಪಡಿಸಬೇಕಿದೆ. ನೀಟ್‌ನಲ್ಲಿ ತಾರತಮ್ಯ ಆಗಿದೆಯೇ? ಬಡ ಹಿನ್ನೆಲೆಯ ವಿದ್ಯಾರ್ಥಿಗಳಿಗೆ ಅವಕಾಶಗಳನ್ನು ನಿರಾಕರಿಸಲಾಗುತ್ತಿದೆಯೇ?’ ಎಂದು ಪ್ರಶ್ನಿಸಿರುವ ಅವರು, ಮಹಾರಾಷ್ಟ್ರ ಸೇರಿದಂತೆ ಕೆಲ ರಾಜ್ಯಗಳು ನೀಟ್ ಮೇಲೆ ಕೆಲ ಗಂಭೀರ ಅನುಮಾನಗಳನ್ನು ವ್ಯಕ್ತಪಡಿಸಿವೆ ಎಂದಿದ್ದಾರೆ. ದಶಕದಿಂದ ಎನ್‌ಸಿಇಆರ್‌ಟಿ ತನ್ನ ವೃತ್ತಿಪರತೆಯನ್ನು ಕಳೆದುಕೊಂಡಿದೆ ಎಂದೂ ಅವರು ಆರೋಪಿಸಿದ್ದಾರೆ.

‘ನೀಟ್’ ಸಾಮಾಜಿಕ ನ್ಯಾಯಕ್ಕೆ ವಿರುದ್ಧ: ಸಿ.ಎಂ ಸ್ಟಾಲಿನ್

ಚೆನ್ನೈ (ಪಿಟಿಐ): ರಾಷ್ಟ್ರೀಯ ಮಟ್ಟದಲ್ಲಿ ನಡೆಯುವ ‘ನೀಟ್’ ವಿದ್ಯಾರ್ಥಿಗಳ ಹಿತಾಸಕ್ತಿಗೆ ವಿರುದ್ಧವಾಗಿದೆ. ಅಲ್ಲದೆ ಅದು ಸಾಮಾಜಿಕ ನ್ಯಾಯ ಮತ್ತು ಬಡತನದ ವಿರುದ್ಧವೂ ಇದೆ. ಹೀಗಾಗಿ ಕೇಂದ್ರ ಸರ್ಕಾರವು ನೀಟ್ ಅನ್ನು ಸಮರ್ಥಿಸುವುದನ್ನು ಮೊದಲು ನಿಲ್ಲಿಸಬೇಕು ಎಂದು ತಮಿಳುನಾಡಿನ ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಆಗ್ರಹಿಸಿದ್ದಾರೆ.

‘ನೀಟ್ ಸುತ್ತ ನಡೆಯುತ್ತಿರುವ ವಿವಾದಗಳನ್ನು ಗಮನಿಸಿದರೇ, ಅದು ಮೂಲಭೂತವಾಗಿ ಅಸಮಾನತೆಯನ್ನು ಎತ್ತಿ ತೋರಿಸುತ್ತದೆ. ಸಹಸ್ರಾರು ವರ್ಷಗಳಿಂದ ಶಿಕ್ಷಣವನ್ನು ನಿರಾಕರಿಸಿದ ಸಮಾಜದ ಪ್ರಗತಿಗೆ ಹೆಚ್ಚಿನ ಅವಕಾಶಗಳನ್ನು ನೀಡಬೇಕಾಗಿದೆ. ಆದರೆ ನೀಟ್ ಅದಕ್ಕೆ ವಿರುದ್ಧವಾಗಿದ್ದು, ಅಂತಹ ವಿದ್ಯಾರ್ಥಿಗಳ ಅವಕಾಶಗಳಿಗೆ ಅಡ್ಡಿಯಾಗಿದೆ’ ಎಂದು ಅವರು ಭಾನುವಾರ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸುದ್ದಿ 2 ನಿಮಿಷ

ನಟ ಸಲ್ಮಾನ್ ಖಾನ್‌ಗೆ ಬೆದರಿಕೆ ಯೂಟ್ಯೂಬರ್ ಬಂಧನ

ಮುಂಬೈ (ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಅವರ ನಿವಾಸದ ಹೊರಗೆ ಏಪ್ರಿಲ್ ತಿಂಗಳಲ್ಲಿ ನಡೆದ ಗುಂಡಿನ ದಾಳಿಗೆ ಸಂಬಂಧಿಸಿದಂತೆ ಹೊಸ ಪ್ರಕರಣವನ್ನು ದಾಖಲಿಸಿಕೊಂಡಿರುವ ಮುಂಬೈ ಪೊಲೀಸರು, ಇದಕ್ಕೆ ಸಂಬಂಧಿಸಿದಂತೆ ರಾಜಸ್ಥಾನದಲ್ಲಿ ಒಬ್ಬರನ್ನು ಬಂಧಿಸಿದ್ದಾರೆ.

ರಾಜಸ್ಥಾನದ ಬುಂಡಿ ಮೂಲದ ಬನ್ವರಿಲಾಲ್ ಲಟೂರ್‌ಲಾಲ್ ಗುಜರ್ (25) ಬಂಧಿತ ವ್ಯಕ್ತಿ.

ರಾಜಸ್ಥಾನದ ಹೆದ್ದಾರಿಯಲ್ಲಿ ಗುಜರ್ ವಿಡಿಯೊವೊಂದನ್ನು ಮಾಡಿದ್ದು, ಅದನ್ನು ತನ್ನ ಯೂಟ್ಯೂಬ್ ಚಾನೆಲ್‌ನಲ್ಲಿ ಅಪ್‌ಲೋಡ್ ಮಾಡಿದ್ದಾನೆ. ಅದರಲ್ಲಿ ‘ಲಾರೆನ್ಸ್ ಬಿಷ್ಣೋಯ್, ಗೋಲ್ಡಿ ಬ್ರಾರ್ ಮತ್ತು ಇತರ ಗ್ಯಾಂಗ್‌ನ ಸದಸ್ಯರು ನನ್ನೊಂದಿಗೆ ಇದ್ದಾರೆ. ಸಲ್ಮಾನ್ ಖಾನ್ ಇನ್ನೂ ಕ್ಷಮೆ ಕೇಳದಿದ್ದರಿಂದ ನಾನು ಆತನನ್ನು ಕೊಲ್ಲಲಿದ್ದೇನೆ ಎಂದು ಹೇಳಿಕೊಂಡಿದ್ದಾನೆ’ ಎಂದು ಅಧಿಕಾರಿಯೊಬ್ಬರು ಹೇಳಿದರು.

ಹನುಮಾನ್ ಚಾಲೀಸಾ ಇಂಗ್ಲಿಷ್‌ಗೆ ತರ್ಜುಮೆ: ಇದೇ ತಿಂಗಳು ಬಿಡುಗಡೆ

ನವದೆಹಲಿ(ಪಿಟಿಐ): ಸಂತ ಕವಿ ತುಳಸಿದಾಸ ರಚಿತ ‘ಹನುಮಾನ್ ಚಾಲೀಸಾ’ ವನ್ನು ಖ್ಯಾತ ಲೇಖಕ ವಿಕ್ರಮ್ ಸೇಠ್ ಅವರು ಇಂಗ್ಲಿಷ್‌ಗೆ ಅನುವಾದ ಮಾಡಿದ್ದು, ಇದೇ ತಿಂಗಳು ಬಿಡುಗಡೆಯಾಗಲಿದೆ ಎಂದು ಪ್ರಕಾಶನ ಸಂಸ್ಥೆ ‘ಸ್ಪೀಕಿಂಗ್ ಟೈಗರ್’ ಭಾನುವಾರ ತಿಳಿಸಿದೆ.

ಇಂಗ್ಲಿಷ್ ಅನುವಾದದ ಜೊತೆಗೆ, ದೇವನಾಗರಿ ಮತ್ತು ರೋಮನ್ ಲಿಪಿಯಲ್ಲಿಯೂ ಹನುಮಾನ್ ಚಾಲೀಸಾ ಪದ್ಯಗಳನ್ನು ಈ ಕೃತಿಯಲ್ಲಿ ಮುದ್ರಿಸಲಾಗಿದೆ ಎಂದು ಸಂಸ್ಥೆ ತಿಳಿಸಿದೆ. ‘ಕಾದಂಬರಿಕಾರರೂ ಆಗಿರುವ ವಿಕ್ರಮ್ ಸೇಠ್ ಕವಿಯಾಗಿಯೂ ಪ್ರಸಿದ್ಧರಾಗಿದ್ದಾರೆ. ಈ ಕಾವ್ಯವನ್ನು ಎಲ್ಲ ಲಯ, ಪ್ರಾಸ ಹಾಗೂ ಛಂದಸ್ಸಿಗೆ ಅನುಗುಣವಾಗಿ ಅನುವಾದ ಮಾಡಲು ಹಲವು ವರ್ಷಗಳ ಶ್ರಮ ಹಾಕಿದ್ದಾರೆ. ಅವರ ಪರಿಶ್ರಮದ ಫಲವಾಗಿ ಉತ್ತಮ ಅನುವಾದ ಹೊರಬಂದಿದ್ದು, ಇನ್ನು ಮುಂದೆ ಲಕ್ಷಾಂತರ ಆಸಕ್ತರು ಹನುಮಾನ್ ಚಾಲೀಸಾವನ್ನು ಇಂಗ್ಲಿಷ್‌ನಲ್ಲಿಯೇ ಪಠಿಸಬಹುದು’ ಎಂದು ಸಂಸ್ಥೆ ಪ್ರಕಟಣೆಯಲ್ಲಿ ಹೇಳಿದೆ.

40 ಪದ್ಯಗಳನ್ನು ಒಳಗೊಂಡ ಹನುಮಾನ್ ಚಾಲೀಸಾ, ಹೆಸರೇ ಹೇಳುವಂತೆ ಹನುಮಾನ್ ದೇವರಿಗೆ ಅರ್ಪಿಸಲಾಗಿರುವ ಕೀರ್ತನೆ. ಲಕ್ಷಾಂತರ ಜನರಿಗೆ ಇದು ಬಾಯಿಪಾಠವೂ ಆಗಿದೆ.

17 ಜನರಿದ್ದ ದೋಣಿಯೊಂದು ಪಟ್ನಾದಲ್ಲಿ ಭಾನುವಾರ ಗಂಗಾ ನದಿಯಲ್ಲಿ ಮಗುಚಿ ಸಂಭವಿಸಿದ ಅವಘಡದಲ್ಲಿ ನಾಪತ್ತೆಯಾಗಿರುವವರ ಕುಟುಂಬಗಳ ಸದಸ್ಯರ ರೋದನ ಮುಗಿಲು ಮುಟ್ಟಿತ್ತು. 11 ಜನರನ್ನು ರಕ್ಷಿಸಲಾಗಿದ್ದು, 6 ಜನರು ನಾಪತ್ತೆಯಾಗಿದ್ದಾರೆ —ಪಿಟಿಐ ಚಿತ್ರ

ರೈಲು ವೇಗ ಮಿತಿ: ಅಧ್ಯಯನಕ್ಕೆ ಸಮಿತಿ

ನವದೆಹಲಿ (ಪಿಟಿಐ): ರೈಲು ಚಾಲಕರು ವೇಗದ ಮಿತಿಯನ್ನು ಉಲ್ಲಂಘಿಸುತ್ತಿರುವ ಪ್ರಕರಣಗಳು ಹೆಚ್ಚುತ್ತಿದ್ದು, ರೈಲ್ವೆ ಮಂಡಳಿಯು ಈ ಬಗ್ಗೆ ಅಧ್ಯಯನಕ್ಕೆ ಸಮಿತಿಯೊಂದರನ್ನು ರಚಿಸಿದೆ.

ಅಧ್ಯಯನದ ವೇಳೆ ಕೇಳಿಬರುವ ಸಲಹೆಗಳನ್ನು ಸಮಿತಿಯು ಪರಿಶೀಲಿಸಲಿದ್ದು, ಸುಗಮ ಸಂಚಾರದ ದೃಷ್ಟಿಯಿಂದ ರೈಲುಗಳ ವೇಗ ಮಿತಿ ಕಾರ್ಯವಿಧಾನದಲ್ಲಿ ತಿದ್ದುಪಡಿ ಅಗತ್ಯವಿದೆಯೇ ಎನ್ನುವುದನ್ನು ನಿರ್ಣಯಿಸಲಿದೆ ಎಂದು ರೈಲ್ವೆ ಮಂಡಳಿಯ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

11ನೇ ವರ್ಷದ ಸವಿನೆನಪು

ಹೆಚ್.ಕೆ ವೇಣುಗೋಪಾಲ್ ರೆಡ್ಡಿ
ನಿಧನ: 17–06–2013
ನಿಮ್ಮ ನೆನಪು ನಮ್ಮ ಮನೆ ಮನಗಳಲ್ಲಿ ನಿತ್ಯ ನೂತನ, ನಿರಂತರ ಹಾಗೂ ಅಮರ.
ಸದಾ ನಿಮ್ಮ ನೆನಪಿನಲ್ಲಿ: ಪತ್ನಿ, ಮಕ್ಕಳು, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಪ್ರಸಾದ್ ಸಕ್ಲಾನಿ ಪ್ರತಿಪಾದನೆ

‘ಗಲಭೆ, ಮಸೀದಿ ಧ್ವಂಸದ ಬೋಧನೆ ಅಗತ್ಯ ಇಲ್ಲ’

ನವದೆಹಲಿ(ಪಿಟಿಐ): ‘ಗಲಭೆಗಳ ಕುರಿತ ಬೋಧನೆಯು ರೋಷಾವೇಶಭರಿತ ಮತ್ತು ಖಿನ್ನತೆಯಿಂದ ಬಳಲುವ ನಾಗರಿಕರನ್ನು ಸೃಷ್ಟಿಸುತ್ತದೆ. ಈ ಕಾರಣಕ್ಕಾಗಿಯೇ, ಗುಜರಾತ್ ಗಲಭೆಗಳು, ಬಾಬ್ರಿ ಮಸೀದಿ ಧ್ವಂಸ ಕುರಿತು ಶಾಲೆಗಳಲ್ಲಿ ಬೋಧಿಸುವ ಅಗತ್ಯ ಇಲ್ಲ’ ಎಂದು ಎನ್‌ಸಿಇಆರ್‌ಟಿ ನಿರ್ದೇಶಕ ದಿನೇಶ್ ಪ್ರಸಾದ್ ಸಕ್ಲಾನಿ ಹೇಳಿದ್ದಾರೆ.

ಪಠ್ಯಪುಸ್ತಕಗಳ ಪರಿಶೀಲನೆ ವೇಳೆ, ಗುಜರಾತ್ ಗಲಭೆಗಳು ಹಾಗೂ ಬಾಬ್ರಿ ಮಸೀದಿ ಧ್ವಂಸಕ್ಕೆ ಸಂಬಂಧಿಸಿದ ಮಾಹಿತಿಯನ್ನು ಬದಲಾಯಿಸಲಾಗಿದೆ ಎಂದೂ ಅವರು ಹೇಳಿದ್ದಾರೆ.

ಪಿಟಿಐ ಕೇಂದ್ರ ಕಚೇರಿಯಲ್ಲಿ ಸಂಪಾದಕರೊಂದಿಗೆ ಶನಿವಾರ ನಡೆದ ಸಂವಾದ ಕಾರ್ಯಕ್ರಮದಲ್ಲಿ ಈ ಕುರಿತು ಪ್ರತಿಕ್ರಿಯಿಸಿರುವ ಅವರು, ‘ಪ್ರತಿ ವರ್ಷ ನಡೆಸುವ ಪರಿಷ್ಕರಣೆ ಭಾಗವಾಗಿ ಪಠ್ಯಪುಸ್ತಕಗಳಲ್ಲಿ ಬದಲಾವಣೆ ಮಾಡಲಾಗಿದ್ದು, ವಿವಾದ ಎಬ್ಬಿಸುವಂತಹ ವಿಷಯವೇ ಇದಲ್ಲ’ ಎಂದಿದ್ದಾರೆ. ಗುಜರಾತ್ ಗಲಭೆಗಳು ಬಾಬ್ರಿ ಮಸೀದಿ ಧ್ವಂಸ ಕುರಿತ ಮಾಹಿತಿ ಕೈಬಿಟ್ಟಿರುವುದಕ್ಕೆ ಕುರಿತ ಪ್ರಶ್ನೆಗೆ, ‘ಈ ವಿಷಯಗಳು ಶಾಲಾ ಪಠ್ಯಪುಸ್ತಕಗಳಲ್ಲಿ ಏಕಿರಬೇಕು? ನಾವು ಸಕಾರಾತ್ಮಕ ಯೋಚನೆ ಹೊಂದಿರುವಂತಹ ನಾಗರಿಕರನ್ನು ರೂಪಿಸಬೇಕೇ ಹೊರತು, ರೋಷಾ ವೇಶದ ಮತ್ತು ಖಿನ್ನರಾದ ವ್ಯಕ್ತಿಗಳನ್ನಲ್ಲ’ ಎಂದು ಉತ್ತರಿಸಿದ್ದಾರೆ.

1984ರಲ್ಲಿ ನಡೆದ ಸಿಖ್ಖರ ಹತ್ಯೆ ಕುರಿತು ಪಠ್ಯಪುಸ್ತಕಗಳಲ್ಲಿ ಪ್ರಸ್ತಾಪವೇ ಇರಲಿಲ್ಲ. ಆಗ ಯಾವುದೇ ವಿವಾದ ಕಂಡುಬರಲಿಲ್ಲ
ದಿನೇಶ್ ಪ್ರಸಾದ್ ಸಕ್ಲಾನಿ, ಎನ್‌ಸಿಇಆರ್‌ಟಿ ನಿರ್ದೇಶಕ

‘ಆಕ್ರಮಣಶೀಲರಾಗುವಂತೆ ನಮ್ಮ ವಿದ್ಯಾರ್ಥಿಗಳಿಗೆ ಕಲಿಸಬೇಕೇ? ಸಮಾಜದಲ್ಲಿ ದ್ವೇಷಕ್ಕೆ ಕಾರಣವಾಗುವ ಅಥವಾ ಇಂತಹ ದ್ವೇಷದ ಸಂತ್ರಸ್ತರಾಗುವಂತೆ ಮಾಡಬೇಕೇ? ಇದು ನಮ್ಮ ಶಿಕ್ಷಣದ ಉದ್ದೇಶವೇ’ ಎಂದು ಮರು ಪ್ರಶ್ನೆ ಹಾಕಿದ್ದಾರೆ.

‘ಈ ರೀತಿ ಗಲಭೆಗಳು ಯಾಕಾದವು, ಯಾಕೆ ಮಸೀದಿಯನ್ನು ಧ್ವಂಸಗೊಳಿಸಲಾಯಿತು ಎಂಬ ಬಗ್ಗೆ ಮಕ್ಕಳು ಬೆಳೆದು ದೊಡ್ಡವರಾದ ನಂತರ ತಿಳಿದುಕೊಳ್ಳಲಿ. ಈಗ ಪಠ್ಯಪುಸ್ತಕಗಳಲ್ಲಿ ಮಾಡಿರುವ ಬದಲಾವಣೆಗಳ ಕುರಿತು ಹುಯಿಲೆಬ್ಬಿಸುತ್ತಿರುವುದು ಅಪ್ರಸ್ತುತ’ ಎಂದೂ ಹೇಳಿದ್ದಾರೆ.

ಪರಿಷ್ಕರಣೆಗೊಂಡಿರುವ ಪಠ್ಯಪುಸ್ತಕಗಳು ಮಾರುಕಟ್ಟೆಗೆ ಬಂದಿರುವ ಈ ಸಂದರ್ಭದಲ್ಲಿ ಸಕ್ಲಾನಿ ಅವರ ಈ ಹೇಳಿಕೆಗೆ ಮಹತ್ವ ಬಂದಿದೆ. ನೂತನ ರಾಷ್ಟ್ರೀಯ ಶಿಕ್ಷಣ ನೀತಿ , 2020ಕ್ಕೆ ಅನುಗುಣವಾಗಿ ಎನ್‌ಸಿಇಆರ್‌ಟಿ ಶಾಲಾ ಪಠ್ಯಪುಸ್ತಕಗಳನ್ನು ಪರಿಷ್ಕರಣೆ ಮಾಡುತ್ತಿದೆ. ‘ರಾಮ ಮಂದಿರ, ಬಾಬ್ರಿ ಮಸೀದಿ ಅಥವಾ ರಾಮ ಜನ್ಮಭೂಮಿ ಕುರಿತು ಸುಪ್ರೀಂಕೋರ್ಟ್ ತೀರ್ಪು ನೀಡಿದ್ದನ್ನು ನಮ್ಮ ಪಠ್ಯಪುಸ್ತಕಗಳಲ್ಲಿ ಸೇರಿಸುವುದು ಬೇಡವೇ? ಇದರಲ್ಲಿ ಸಮಸ್ಯೆ ಏನಿದೆ? ನಾವು ನೂತನ ಸಂಸತ್ ಭವನ ನಿರ್ಮಾಣ ಮಾಡಿರುವಾಗ ಅದರ ಕುರಿತು ನಮ್ಮ ವಿದ್ಯಾರ್ಥಿಗಳು ತಿಳಿದುಕೊಳ್ಳಬಾರದೇ?’ ಎಂದು ಸಕ್ಲಾನಿ ಹೇಳಿದ್ದಾರೆ.

ಬದಲಾವಣೆಗಳೇನು?

12ನೇ ತರಗತಿಯ ಪರಿಷ್ಕೃತ ರಾಜಶಾಸ್ತ್ರ ಪಠ್ಯಪುಸ್ತಕದಲ್ಲಿ ಬಾಬ್ರಿ ಮಸೀದಿ ಎಂಬ ಪ್ರಸ್ತಾಪ ಇಲ್ಲ. ಆದರೆ, ಅದನ್ನು ಮೂರು ಗುಮ್ಮಟಗಳ ರಚನೆ ಎಂದು ಹೇಳಲಾಗಿದೆ. ಅಯೋಧ್ಯೆಗೆ ಸಂಬಂಧಿಸಿ ಭಾಗದಲ್ಲಿ ನಾಲ್ಕರಿಂದ 2 ಪುಟಗಳಿಗೆ ಇಳಿಸಲಾಗಿದ್ದು, ಈ ಮುಂಚಿನ ಆವೃತ್ತಿಯಲ್ಲಿದ್ದ ವಿವರಗಳನ್ನು ತೆಗೆದು ಹಾಕಲಾಗಿದೆ.

ವಿವಾದಿತ ಕಟ್ಟಡವಿದ್ದ ಸ್ಥಳದಲ್ಲಿ ರಾಮ ಮಂದಿರ ನಿರ್ಮಾಣಕ್ಕೆ ದಾರಿ ಮಾಡಿ ಕೊಟ್ಟಂತಹ ಸುಪ್ರೀಂ ಕೋರ್ಟ್ ತೀರ್ಪಿನ ಕುರಿತು ಈ ಪಠ್ಯಪುಸ್ತಕದಲ್ಲಿ ಹೆಚ್ಚು ಒತ್ತು ನೀಡಲಾಗಿದೆ.ಗುಜರಾತ್‌ನ ಸೋಮನಾಥ್‌ದಿಂದ ಅಯೋಧ್ಯೆವರೆಗೆ ನಡೆದಿದ್ದ ಬಿಜೆಪಿಯ ‘ರಥ ಯಾತ್ರೆ’, ಈ ಕಾರ್ಯಕ್ರಮದಲ್ಲಿ ಕರಸೇವಕರ ಪಾತ್ರ, ಬಾಬ್ರಿ ಮಸೀದಿ ಧ್ವಂಸದ ಹಿನ್ನೆಲೆಯಲ್ಲಿ ಭುಗಿಲೆದ್ದಿದ್ದ ಕೋಮು ಹಿಂಸಾಚಾರ, ಆಗ ಬಿಜೆಪಿ ಆಡಳಿತವಿದ್ದ ರಾಜ್ಯಗಳಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರಿಕೆ ಹಾಗೂ ಅಯೋಧ್ಯೆಯಲ್ಲಿ ಘಟನೆಗಳ ಕುರಿತು ಬಿಜೆಪಿ ವಿಷಾದ ವ್ಯಕ್ತಪಡಿಸಿದ್ದನ್ನು ಪಠ್ಯಪುಸ್ತಕಗಳಿಂದ ತೆಗೆದು ಹಾಕಲಾಗಿದೆ.

ಹುಮಾಯೂನ್, ಶಹಜಹಾನ್, ಅಕ್ಬರ್, ಜಹಾಂಗೀರ್, ಔರಂಗಜೇಬ್ ಸೇರಿದಂತೆ ಮೊಘಲ್ ದೊರೆಗಳ ಸಾಧನೆಗಳನ್ನು ವಿವರಿಸುವ ಎರಡು ಪುಟಗಳ ಕೋಷ್ಟಕವನ್ನು ಸಹ ಕೈಬಿಡಲಾಗಿದೆ.

ಇಂದಿರಾ ಕುರಿತ ಮಾತು: ಗೋಪಿ ಸ್ಪಷ್ಟನೆ

ತಿರುವನಂತಪುರ (ಪಿಟಿಐ): ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ‘ಭಾರತದ ಮಾತೆ’ ಎಂದು ಬಣ್ಣಿಸಿದ್ದು ಜನರ ಗಮನಸೆಳೆದ ನಂತರ ಈ ಕುರಿತು ಕೇಂದ್ರ ಸಚಿವ ಸುರೇಶ್ ಗೋಪಿ ಸ್ಪಷ್ಟನೆ ನೀಡಿದ್ದಾರೆ. ಇಂದಿರಾ ಅವರನ್ನು ದೇಶದಲ್ಲಿ ಕಾಂಗ್ರೆಸ್ ಪಕ್ಷದ ಮಾತೆ ಎಂದು ಕರೆದಿದ್ದಾಗಿ ಹೇಳಿದ್ದಾರೆ. ತಮ್ಮ ಮಾತುಗಳನ್ನು ಮಾಧ್ಯಮಗಳು ತಪ್ಪಾಗಿ ಅರ್ಥೈಸಿವೆ ಎಂದು ಅವರು ದೂರಿದ್ದಾರೆ.

‘ಮನಸ್ಸಿಗೆ ಅನ್ನಿಸಿದ್ದನ್ನು ಹಾಗೆಯೇ ಹೇಳುವ ವ್ಯಕ್ತಿ ನಾನು ಎಂದು ತಮ್ಮನ್ನು ಕರೆದುಕೊಂಡಿರುವ ಗೋಪಿ, ಇಂದಿರಾ ಅವರ ಕುರಿತ ತಮ್ಮ ಮಾತುಗಳಲ್ಲಿ ಯಾವ ತಪ್ಪೂ ಇಲ್ಲ’ ಎಂದು ಬಲವಾಗಿ ನಂಬಿರುವುದಾಗಿ ಹೇಳಿದ್ದಾರೆ.

ಮಾಧ್ಯಮ ಪ್ರತಿನಿಧಿಗಳ ಜೊತೆ ಇಲ್ಲಿ ಮಾತನಾಡಿದ ಅವರು, ‘ಭಾಷೆಯ ಸಾಂದರ್ಭಿಕ ಅರ್ಥವು ನಿಮಗೆ ಗೊತ್ತಾಗುವುದಿಲ್ಲವೇ’ ಎಂದು ಪ್ರಶ್ನಿಸಿದ್ದಾರೆ. ‘ನಾನು ಹೇಳಿದ್ದೇನು? ಕಾಂಗ್ರೆಸ್ಸಿಗೆ ಸಂಬಂಧಿಸಿದಂತೆ... ಯಾರಿಗಾದರೂ ಇಷ್ಟವಾಗಲಿ, ಇಷ್ಟ ಆಗದೆ ಇರಲಿ... ಕೆ. ಕರುಣಾಕರನ್ ಅವರು ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಪಿತಾಮಹ ಇದ್ದಂತೆ. ಭಾರತದಲ್ಲಿ ಅದರ ತಾಯಿ ಇಂದಿರಾ ಗಾಂಧಿ. ಇದನ್ನು ನಾನು ಹೃದಯದಿಂದ ಹೇಳಿದ್ದೇನೆ’ ಎಂದು ಗೋಪಿ ಅವರು ಹೇಳಿದ್ದಾರೆ.

‘ಇಂದಿರಾ ಅವರು ಸ್ವಾತಂತ್ರ್ಯಾನಂತರ, ತಾವು ಇರುವವರೆಗೆ ಭಾರತದ ನಿಜವಾದ ಶಿಲ್ಪಿಯಾಗಿದ್ದರು... ದೇಶಕ್ಕಾಗಿ ಪ್ರಾಮಾಣಿಕವಾಗಿ ಕೆಲಸ ಮಾಡಿದ ವ್ಯಕ್ತಿಯು ಎದುರಾಳಿ ರಾಜಕೀಯ ಪಕ್ಷಕ್ಕೆ ಸೇರಿದವರು ಎಂಬ ಕಾರಣಕ್ಕೆ ನಾನು ಅವರನ್ನು ಮರೆಯಲು ಆಗುವುದಿಲ್ಲ’ ಎಂದಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗೇಮ್ ಜೋನ್: ದಾಖಲೆ ತಿರುಚಿದ ಇಬ್ಬರ ಬಂಧನ

ರಾಜ್‌ಕೋಟ್: ಕಳೆದ ತಿಂಗಳು ನಡೆದ ಅಗ್ನಿ ಅವಘಡದಲ್ಲಿ 27 ಮಂದಿ ಮೃತಪಟ್ಟ ನಂತರ, ಟಿಆರ್‌ಪಿ ಗೇಮ್ ಜೋನ್‌ಗೆ ಸಂಬಂಧಿಸಿದ ದಾಖಲೆಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿದ ಆರೋಪದ ಮೇಲೆ ರಾಜ್‌ಕೋಟ್ ಮಹಾನಗರ ಪಾಲಿಕೆಯ ಇಬ್ಬರು ಉದ್ಯೋಗಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಇದರೊಂದಿಗೆ, ಗುಜರಾತ್‌ನ ರಾಜ್‌ಕೋಟ್ ನಗರದಲ್ಲಿನ ಗೇಮ್ ಜೋನ್‌ನಲ್ಲಿ ಮೇ 25ರಂದು ನಡೆದ ಘಟನೆಗೆ ಸಂಬಂಧಿಸಿದಂತೆ ಆರು ಮಂದಿ ಸರ್ಕಾರಿ ನೌಕರರು ಸೇರಿದಂತೆ ಒಟ್ಟು 12 ಜನರನ್ನು ಬಂಧಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಬೆಂಕಿ ದುರಂತದ ನಂತರ ಅಧಿಕೃತ ರಿಜಿಸ್ಟರ್‌ನಲ್ಲಿ ಕೆಲವು ಬದಲಾವಣೆಗಳನ್ನು ಮಾಡುವಲ್ಲಿ ಭಾಗಿಯಾಗಿದ್ದಕ್ಕಾಗಿ, ಪಾಲಿಕೆಯ ಸಹಾಯಕ ನಗರ ಯೋಜನಾಧಿಕಾರಿ ರಾಜೇಶ್ ಮಕ್ವಾನಾ ಮತ್ತು ಸಹಾಯಕ ಎಂಜಿನಿಯರ್ ಜೈದೀಪ್ ಚೌಧರಿ ಅವರನ್ನು ಶನಿವಾರ ಬಂಧಿಸಲಾಗಿದೆ.

ಲೈಂಗಿಕ ಅಲ್ಪಸಂಖ್ಯಾತರಿಗೆ ಶೇಕಡ 1ರಷ್ಟು ಮೀಸಲಾತಿ

ಕೋಲ್ಕತ್ತ (ಪಿಟಿಐ): ರಾಜ್ಯದ ಎಲ್ಲ ಸರ್ಕಾರಿ ನೌಕರಿಗಳಲ್ಲಿ ಲೈಂಗಿಕ ಅಲ್ಪಸಂಖ್ಯಾತರಿಗೆ ಶೇಕಡ 1ರಷ್ಟು ಹುದ್ದೆಗಳನ್ನು ಮೀಸಲಿಡುವಂತೆ ಕಲ್ಕತ್ತ ಹೈಕೋರ್ಟ್, ಪಶ್ಚಿಮ ಬಂಗಾಳ ಸರ್ಕಾರಕ್ಕೆ ಸೂಚನೆ ನೀಡಿದೆ.

ಲೈಂಗಿಕ ಅಲ್ಪಸಂಖ್ಯಾತರಿಗೆ ಉದ್ಯೋಗಗಳಲ್ಲಿ ಸಮಾನ ಅವಕಾಶ ಎನ್ನುವ ನೀತಿಯನ್ನು ರಾಜ್ಯ ಸರ್ಕಾರವು ಅಳವಡಿಸಿಕೊಂಡಿದ್ದರೂ, ಅವರಿಗೆ ಇನ್ನೂ ಮೀಸಲಾತಿಯನ್ನು ಕಲ್ಪಿಸಿಲ್ಲ ಎಂದು ನ್ಯಾಯಮೂರ್ತಿ ರಾಜಶೇಖರ್ ಮಂಥಾ ಅವರು ಹೇಳಿದ್ದಾರೆ.

2014 ಹಾಗೂ 2022ರಲ್ಲಿ ನಡೆದ ಶಿಕ್ಷಕರ ಅರ್ಹತಾ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಲೈಂಗಿಕ ಅಲ್ಪಸಂಖ್ಯಾತರೊಬ್ಬರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಈ ಸೂಚನೆ ನೀಡಿದ್ದಾರೆ. ಎರಡೂ ಪರೀಕ್ಷೆಗಳಲ್ಲಿ ಉತ್ತೀರ್ಣ ಆಗಿದ್ದರೂ ತಮ್ಮನ್ನು ಕೌನ್ಸೆಲಿಂಗ್ ಅಥವಾ ಸಂದರ್ಶನಕ್ಕೆ ಕರೆದಿಲ್ಲ ಎಂದು ಅರ್ಜಿದಾರರು ಅಳಲು ತೋಡಿಕೊಂಡಿದ್ದರು.

ಲೈಂಗಿಕ ಅಲ್ಪಸಂಖ್ಯಾತರನ್ನು ಸಾಮಾಜಿಕವಾಗಿ ಹಾಗೂ ಶೈಕ್ಷಣಿಕವಾಗಿ ಹಿಂದುಳಿದವರು ಎಂದು ಗುರುತಿಸಲು ಕ್ರಮ ಕೈಗೊಳ್ಳುವಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ನೀಡುವಾಗ, ಸರ್ಕಾರಿ ಉದ್ಯೋಗಗಳಲ್ಲಿ ನೇಮಕಾತಿ ನಡೆಸುವಾಗ ಅವರಿಗೆ ಎಲ್ಲ ಬಗೆಯ ಮೀಸಲಾತಿ ನೀಡುವಂತೆ ಸೂಚಿಸಿತ್ತು ಎಂದು ನ್ಯಾಯಮೂರ್ತಿ ಮಂಥಾ ಅವರು ಉಲ್ಲೇಖಿಸಿದ್ದಾರೆ.

ಉಕ್ರೇನ್ ಶಾಂತಿ ಒಪ್ಪಂದಕ್ಕೆ 80 ದೇಶಗಳ ಜಂಟಿ ಕರೆ

ಬರ್ಗನ್ (ಸ್ವಿಟ್ಜರ್ಲೆಂಡ್) (ಎಪಿ): ರಷ್ಯಾ ಎರಡು ವರ್ಷಗಳಿಂದ ನಡೆಸುತ್ತಿರುವ ಯುದ್ಧ ಕೊನೆಗೊಳಿಸುವ ಯಾವುದೇ ಶಾಂತಿ ಒಪ್ಪಂದವು ಉಕ್ರೇನ್‌ನ ಪ್ರಾದೇಶಿಕ ಸಮಗ್ರತೆ ಕಾಪಾಡುವಂತಿರಬೇಕು ಎಂದು ಸುಮಾರು 80 ದೇಶಗಳು ಭಾನುವಾರ ಜಂಟಿ ಕರೆ ನೀಡಿವೆ.

ಬರ್ಗನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಎರಡು ದಿನಗಳಿಂದ ನಡೆದ ಸ್ವಿಸ್ ಶಾಂತಿ ಸಮ್ಮೇಳನದ ಕೊನೆಯಲ್ಲಿ ಈ ಒಮ್ಮತದ ಕರೆ ನೀಡಲಾಗಿದೆ. ಆದರೆ, ರಷ್ಯಾ ಅನುಪಸ್ಥಿತಿಯಲ್ಲಿ ಈ ಕರೆ ಕೊಡುವಲ್ಲಿ ಕೆಲವು ಪ್ರಮುಖ ಅಭಿವೃದ್ಧಿಶೀಲ ದೇಶಗಳು ಹೊರಗುಳಿದವು.

ಸಹಿ ಹಾಕದೇ ಹೊರಗುಳಿದವರಲ್ಲಿ ಭಾರತ, ಸೌದಿ ಅರೇಬಿಯಾ, ದಕ್ಷಿಣ ಆಫ್ರಿಕಾ, ಸಂಯುಕ್ತ ಅರಬ್ ಸಂಸ್ಥಾನ ಪ್ರಮುಖವಾಗಿವೆ.

ಈ ಶಾಂತಿ ಸಮ್ಮೇಳನಕ್ಕೆ ರಷ್ಯಾಕ್ಕೆ ಆಹ್ವಾನ ನೀಡಲಾಗಿರಲಿಲ್ಲ. ಆದರೆ, ಇದರಲ್ಲಿ ಪಾಲ್ಗೊಂಡಿದ್ದ ಬಹುತೇಕ ದೇಶಗಳ ನಾಯಕರು ರಷ್ಯಾ ಶಾಂತಿ ಒಪ್ಪಂದಕ್ಕೆ ಕಿವಿಗೊಡಬಹುದೆಂದು ಭರವಸೆ ವ್ಯಕ್ತಪಡಿಸಿದ್ದಾರೆ.

ದೇಗುಲದ ಆವರಣದೊಳಗೆ ಗೋವಿನ ತಲೆ ಎಸೆದ ನಾಲ್ವರ ಬಂಧನ

ರತಲಾಮ್ (ಮಧ್ಯಪ್ರದೇಶ), (ಪಿಟಿಐ): ಮಧ್ಯಪ್ರದೇಶದ ಜಾವರಾ ಪಟ್ಟಣದ ದೇವಾಲಯವೊಂದರ ಆವರಣದೊಳಗೆ ಕತ್ತರಿಸಿದ್ದ ಗೋವಿನ ತಲೆಯನ್ನು ಎಸೆದ ಆರೋಪದ ಮೇಲೆ ನಾಲ್ವರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ (ಎನ್‌ಎಸ್‌ಎ) ಪ್ರಕರಣ ದಾಖಲಿಸಿದ್ದು, ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಶುಕ್ರವಾರ ಬೆಳಿಗ್ಗೆ ಎರಡು ಬೈಕ್‌ಗಳಲ್ಲಿ ಬಂದ ಆರೋಪಿಗಳು ಗೋವಿನ ದೇಹದ ಭಾಗಗಳನ್ನು ದೇಗುಲದ ಆವರಣದೊಳಗೆ ಎಸೆದಿದ್ದಾರೆ.

ಸಂಸತ್ ಆವರಣದಲ್ಲಿನ ರಾಷ್ಟ್ರ ನಾಯಕರ ಪ್ರತಿಮೆ ಸ್ಥಳಾಂತರಕ್ಕೆ ವಿರೋಧ

ಪ್ರತಿಮೆ ಸ್ಥಳಾಂತರ; ಕಾಂಗ್ರೆಸ್ ಟೀಕೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮಹಾತ್ಮ ಗಾಂಧಿ, ಬಿ.ಆರ್.ಅಂಬೇಡ್ಕರ್ ಸೇರಿದಂತೆ 13 ಮಂದಿ ಗಣ್ಯರ ಪ್ರತಿಮೆಗಳನ್ನು ಸಂಸತ್ ಆವರಣದಿಂದ ತೆಗೆದು ‘ಪ್ರೇರಣಾ ಸ್ಥಳ’ ಎನ್ನುವಲ್ಲಿ ಪ್ರತಿಷ್ಠಾಪಿಸಲಾಗಿದ್ದು, ವಿರೋಧದ ನಡುವೆಯೂ ಭಾನುವಾರ ಉಪರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವುಗಳನ್ನು ಅನಾವರಣಗೊಳಿಸಿದರು.

ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ, ರಾಜ್ಯಸಭೆಯ ಉಪಸಭಾಪತಿ ಹರಿವಂಶ್ ನಾರಾಯಣ ಸಿಂಗ್ ಮತ್ತು ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು ಮತ್ತು ಇತರ ಗಣ್ಯರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಪ್ರತಿಮೆಗಳ ಸ್ಥಳಾಂತರ ವಿರುದ್ಧ ಟೀಕೆಗಳು ಕೇಳಿಬಂದಿವೆ. ಆದಾಗ್ಯೂ, ಸಂಬಂಧಪಟ್ಟವರೊಂದಿಗೆ ಚರ್ಚಿಸಿದ ನಂತರವೇ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಓಂ ಬಿರ್ಲಾ ತಿಳಿಸಿದರು.

‘ಯಾವ ಪ್ರತಿಮೆಯನ್ನೂ ತೆಗೆದುಹಾಕಿಲ್ಲ, ಸ್ಥಳಾಂತರ ಮಾಡಲಾಗಿದೆ ಅಷ್ಟೇ. ಈ ವಿಚಾರದಲ್ಲಿ ರಾಜಕೀಯ ಮಾಡುವ ಅಗತ್ಯವಿಲ್ಲ. ಎಲ್ಲರ ಪ್ರತಿಮೆಗಳು ಒಂದು ಕಡೆ ಇದ್ದರೆ, ಅವರ ಬದುಕು ಮತ್ತು ಸಾಧನೆಯ ಬಗ್ಗೆ ಮಾಹಿತಿ ನೀಡುವುದು ಸುಲಭ’ ಎಂದು ಹೇಳಿದರು.

ಈ ಬಗ್ಗೆ ‘ಎಕ್ಸ್’ ವೇದಿಕೆಯಲ್ಲಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘ಲೋಕಸಭೆಯ ವೆಬ್‌ಸೈಟ್ ಪ್ರಕಾರ, ಸಂಸತ್ತಿನ ಪ್ರತಿಮೆಗಳ ಸಮಿತಿಯು ಕೊನೆಯ ಬಾರಿಗೆ ಸಭೆ ಸೇರಿರುವುದು 2018ರ ಡಿಸೆಂಬರ್ 18ರಂದು. 17ನೇ ಲೋಕಸಭೆ (2019–2024) ಅವಧಿಯಲ್ಲಿ ಅದರ ಪುನರ್ ರಚನೆಯೇ ಆಗಿಲ್ಲ. ಅದು ಮೊದಲ ಬಾರಿಗೆ ಉಪಸಭಾಪತಿ ಇಲ್ಲದೆಯೇ ಕಾರ್ಯ ನಿರ್ವಹಿಸಿದೆ. ಇಂದು, ಸಂಸತ್ ಸಂಕೀರ್ಣದಲ್ಲಿ ದೊಡ್ಡ ಮಟ್ಟದಲ್ಲಿ ಪ್ರತಿಮೆಗಳ ಸ್ಥಳಾಂತರ ನಡೆದಿದೆ. ಇದು ಆಡಳಿತಾರೂಢ ಪಕ್ಷ ಏಕಪಕ್ಷೀಯವಾಗಿ ತೆಗೆದುಕೊಂಡಿರುವ ನಿರ್ಣಯ ಎನ್ನುವುದು ಸ್ಪಷ್ಟ’ ಎಂದು ಟೀಕಿಸಿದ್ದಾರೆ.

‘ಪ್ರತಿಮೆಗಳ ಸ್ಥಳಾಂತರ ಮಾಡಿರುವುದು ಮತ್ತು ಆ ಸ್ಥಳಕ್ಕೆ ಭವ್ಯವಾದ ಹೆಸರು ನೀಡಿರುವುದರ ಉದ್ದೇಶ, ಮಹಾತ್ಮ ಗಾಂಧಿ ಮತ್ತು ಅಂಬೇಡ್ಕರ್ ಅವರ ಪ್ರತಿಮೆಗಳು ಸಂಸತ್ತಿನ ಪ್ರಮುಖ ಸ್ಥಳದಲ್ಲಿ ಇರಬಾರದು ಎನ್ನುವುದಾಗಿದೆ. ಸಂಸತ್ತಿನ ಮುಂಭಾಗದಲ್ಲಿದ್ದ ಈ ಪ್ರತಿಮೆಗಳ ಮುಂದೆ ಸಂಸದರು ಶಾಂತಿಯುತವಾಗಿ ಮತ್ತು ಪ್ರಜಾಸತ್ತಾತ್ಮಕ ರೀತಿಯಲ್ಲಿ ಪ್ರತಿಭಟನೆ ನಡೆಸುತ್ತಿದ್ದರು. ಮೋದಿ ಸರ್ಕಾರದ ಅವಧಿಯಲ್ಲಿ ಹಾಗೆ ಪ್ರತಿನಿತ್ಯ ಪ್ರತಿಭಟನೆ ಮಾಡಬೇಕಾಗುತ್ತದೆ. ಪ್ರತಿಭಟನೆ ಮಾಡಲು ಸ್ಥಳ ಇಲ್ಲದಂತೆ ಮಾಡುವುದೇ ಸರ್ಕಾರದ ಉದ್ದೇಶ’ ಎಂದು ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಮಾಡಿರುವ ಮತ್ತೊಂದು ಪೋಸ್ಟ್‌ನಲ್ಲಿ ಉಲ್ಲೇಖಿಸಿದ್ದಾರೆ.

ರಾಜ್ಯಸಭೆಯ ಸಭಾಪತಿ ಜಗದೀಪ್ ಧನಕರ್ ಅವರು ಮಹಾತ್ಮ ಗಾಂಧಿ ಪ್ರತಿಮೆ ಪ್ರತಿಷ್ಠಾಪನೆ ಬಳಿಕ ಗೌರವ ನಮನ ಸಲ್ಲಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000ಗೆ ಕರೆ ಮಾಡಿ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ತಕ್ಷಣಬೇಕಾಗಿದ್ದಾರೆ. ಟಾಟಾಮೋಟಾರ್ಸ್, ಟಯೋಟಾ, ಬ್ರಿಟಾನಿಯಾ,TVSಗಳಿಗೆ, ಆಫೀಸ್‌ಗಳಿಗೆ, SSLC, PUC,Degree, ITIನವರುಗಳು. 18,100- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

ರಾವ್ ಸಂಸ್ಥೆಗೆ ವಯಸ್ಸಾದವರನ್ನು, ರೋಗಿಗಳನ್ನು, ಮಕ್ಕಳನ್ನು ನೋಡಿಕೊಳ್ಳಲು ಮನೆಕೆಲಸಕ್ಕೆ, ಅಡುಗೆಗೆ, ಮಹಿಳೆಯರು, ಹುಡುಗಿಯರು ಬೇಕಾಗಿದ್ದಾರೆ ಊಟವಸತಿಯಿದೆ. 13,000/- - 17,000/-, 8951315839, 9141634619

Wanted

ವರ್ಕ್ ಫ್ರಮ್ ಹೋಮ್, ಆಫೀಸ್ ಕೆಲಸಕ್ಕೆ ಬೇಕಾಗಿದ್ದಾರೆ. 15,000–43,500/–. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000 20,000ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6364468422 9663542555

ಅಣಬೆ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ ತರಬೇತಿಗಾಗಿ ಬೆಂಗಳೂರು 8095555516 ಶಿವ್ಮೊಗ 8095555517

Multiple Vacancy

REQUIRED EXPERIENCED Telecaller, Field Executive For Bank Loan collection Salary + Incentive, Commission. 9916276701, 9900709308.

ಶಿಕ್ಷಣ

Training

ವಿಜಯನಗರ, ರಾಮಮೂರ್ತಿನಗರ, ಬನಶಂಕರಿಯಲ್ಲಿರುವ ಸಂಭವ್ ಫೌಂಡೇಶನ್ ನಿಂದ ಹೇರ್ & ಬ್ಯೂಟಿ ಕೋರ್ಸ್‌ಗಳು. 5 ತಿಂಗಳಲ್ಲಿ ಇಂಟರ್ನ್‌ಶಿಪ್ ಮತ್ತು ಪ್ಲೇಸ್‌ಮೆಂಟ್. ಕಲಿಯಿರಿ ಮತ್ತು ಗಳಿಸಿ @ ರೂ . 500 ದೈನಂದಿನ : + 91 9620414072, 9011264528

ಪ್ರವಾಸ

Travel

ವಿಮಾನ ಮತ್ತು ಎ.ಸಿ.ಬಸ್ಸಿನಲ್ಲಿ 12ದಿನಗಳ:ಅಮರನಾಥ್ ಕಾಶ್ಮೀರ್`,ಗುಲ್ಮಾರ್ಗ ವೈಷ್ಣೋದೇವಿ`ಇತ್ಯಾದಿ. 13ದಿನಗಳ: ಚಾರಧಾಮ್, ಮಸ್ಸೂರಿ,ನವದೆಹಲಿ,ಹರಿದ್ವಾರ್ ಇತ್ಯಾದಿ. 12ದಿನಗಳ:`ಜೈಪುರ, ಉದಯಪುರ,ಜೈಸಲ್ಮೇರ್ ಮೌಂಟ್‌ಅಬು`ಇತ್ಯಾದಿ. 13/16 ದಿನಗಳ:-`ಕಾಶಿ,ಮುಕ್ತಿನಾಥ್ ಅಯೋಧ್ಯ,ನೈಮಿಷರಾಣ್ಯ,ದೆಹಲಿ ಆಗ್ರಾ`ಇತ್ಯಾದಿ`ಪ್ರವಾಸಗಳಿಗೆ ಏಷ್ಯನ್`ಟ್ರಾವಲ್`ಲೈನ್ಸ್. 8105657052/ 9480182865.

ಗುಜರಾತ್ ಪ್ರವಾಸ 18/7/24 ನೇಪಾಳ ಮುಕ್ತಿನಾಥ ಪ್ರವಾಸ 24/7/24 ಕಾಶಿ ಅಯೋಧ್ಯ ಪ್ರವಾಸ 23/7/24 ಶಿರಡಿ ಪ್ರವಾಸ 12/7/24 ಸುವರ್ಣಯಾತ್ರ 8660233673 9019462508

12.07.2024 13/17ದಿನಗಳು ರೈಲು/ವಿಮಾನದಲ್ಲಿ ಅಮರನಾಥ ವೈಷ್ಣೋದೇವಿ ಕಾಶ್ಮೀರ ಕುರುಕ್ಷೇತ್ರ ಅಮೃತಸರ್ ಆಗ್ರ,ದೆಹಲಿ ಇತ್ಯಾದಿ 28000/ 40000/(ಕೆಲವೇ ಸೀಟುಗಳಿವೆ) ಆಗಸ್ಟ್/ ಸೆಪ್ಟಂಬರ್ನಲ್ಲಿ 6ದಿನಗಳು ಕಾಶಿ ಅಯೋಧ್ಯಯಾತ್ರೆಗೆ 32000/ 'ಶ್ರೀಸಾಯಿ ರಾಘವೇಂದ್ರ ಟ್ರಾವೆಲ್ಸ್' 9739847429/ 9845560219/ 9886968166

ವ್ಯಾಪಾರ

Business to Business

Business

ಮಾಸಿಕ ಆಧಾರದ ಮೇಲೆ EV ಟ್ಯಾಕ್ಸಿಗಳು ಬೇಕಾಗಿದೆ. 360 Hrs/ 2880 K.M. ರೂ. 65,000/- ಸ್ಥಳ ಬಿಡದಿ ಮತ್ತು ನಾಗನಾಥಪುರಕ್ಕೆ ಮಾತ್ರ, Premium Cars ಹಲಸೂರು, ಸಂಪರ್ಕಿಸಿ, 8660961962

ಭವಿಷ್ಯ

Astrology

★ಸ್ತ್ರೀವಶೀಕರಣ ಸ್ಪೆಷಲಿಸ್ಟ್★ ಕೇರಳ ಅಘೋರಿ ನಾಗಸಾಧು, ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು`ನಿಜ ನಂಬಿ`ಕರೆಮಾಡಿ. ಪಂಡಿತ್.ಜೈದೇವ್‌ಭಟ್. 9901724082

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
www.dhclassifieds.com
@ 500/-* PER SQCM
BOOK NOW
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9845114560
+91 9731810277 | 080- 45557163/164

ಇಂಗ್ಲೆಂಡ್‌ಗೆ ನೆರವಾದ ಮಿಚೆಲ್ ಮಾರ್ಷ್ ಬಳಗದ ಗೆಲುವು

ಹೋರಾಡಿ ಹೊರಬಿದ್ದ ಸ್ಕಾಟ್ಲೆಂಡ್

ಬಿರುಸಿನ ಅರ್ಧ ಶತಕ ಗಳಿಸಿದ ಮಾರ್ಕಸ್ ಸ್ಟೊಯಿನಿಸ್ ಎಪಿ/ಪಿಟಿಐ ಚಿತ್ರ

ಗ್ರಾಸ್ ಐಲ್ (ಸೇಂಟ್ ಲೂಸಿಯಾ), (ಪಿಟಿಐ): ಆಸ್ಟ್ರೇಲಿಯ ತಂಡದವರು ವಿರೋಚಿತ ಆಟವಾಡಿದ ಸ್ಕಾಟ್ಲೆಂಡ್ ತಂಡವನ್ನು ಭಾನುವಾರ ಐದು ವಿಕೆಟ್‌ಗಳಿಂದ ಸೋಲಿಸಿದರು. ಈ ಫಲಿತಾಂಶದಿಂದ ಅದರ ಸಾಂಪ್ರದಾಯಿಕ ಎದುರಾಳಿ ಇಂಗ್ಲೆಂಡ್ ತಂಡ 'ಬಿ' ಗುಂಪಿನಿಂದ ಎರಡನೇ ತಂಡವಾಗಿ ಟಿ20 ವಿಶ್ವಕಪ್ ಸೂಪರ್ ಎಂಟರ ಘಟ್ಟ ಪ್ರವೇಶಿಸಲು ಅನುಕೂಲವಾಯಿತು.

'ಬಿ' ಗುಂಪಿನ ಲೀಗ್ ವ್ಯವಹಾರ ಮುಗಿದಿದ್ದು ಸೋಲಿನಿಂದ ಸ್ಕಾಟ್ಲೆಂಡ್ ನಿರಾಶೆಗೊಳಗಾಯಿತು.

'ಇಂಗ್ಲೆಂಡ್ ಮತ್ತು ಸ್ಕಾಟ್ಲೆಂಡ್ ತಲಾ ಐದು ಪಂದ್ಯಗಳನ್ನು ಗೆದ್ದುಕೊಂಡರೂ, ಇಂಗ್ಲೆಂಡ್ ಉತ್ತಮ ನೆಟ್ ರನ್ ರೇಟ್ (3.611) ಆಧಾರದಲ್ಲಿ ಮುನ್ನಡೆಯಿತು. ರಿಚೀ ಬೆರಿಂಗ್ಟನ್ ಸಾರಥ್ಯದ ತಂಡ (1.255) ಮೂರನೇ ಸ್ಥಾನಕ್ಕೆ ಸರಿಯಿತು.

181 ರನ್‌ಗಳ ಗುರಿ ಎದುರಿಸಿದ ಆಸ್ಟ್ರೇಲಿಯಾ 19.4 ಓವರುಗಳಲ್ಲಿ 5 ವಿಕೆಟ್‌ಗೆ 186 ರನ್ ಬಾರಿಸಿತು. ನಾಟೌಟ್ ಆಸೆ ಈಡೇರಿಸಿಕೊಳ್ಳಲು ಸ್ಕಾಟ್ಲೆಂಡ್ ಕೊನೆಯವರೆಗೂ ಯತ್ನ ನಡೆಸಿತು.

5 ವಿಕೆಟ್‌ಗೆ 181 ರನ್‌ಗಳ ಉತ್ತಮ ಮೊತ್ತ ಗಳಿಸಿದ ಸ್ಕಾಟ್ಲೆಂಡ್ ಒಂದು ಹಂತದಲ್ಲಿ ಆಸ್ಟ್ರೇಲಿಯಾದ ಮೂರು ವಿಕೆಟ್‌ಗಳನ್ನು 9.2 ಓವರ್‌ಗಳ ಒಳಗೆ 60 ರನ್ನಿಗೆ ಪಡೆದು ಮೇಲುಗೈ ಸಾಧಿಸುವಂತೆ ಕಂಡಿತು. ವಾರ್ನರ್, ನಾಯಕ ಮಿಚೆಲ್ ಮಾರ್ಷ್ ಮತ್ತು ಮ್ಯಾಕ್ಸ್‌ವೆಲ್ ಬೇಗ ಮರಳಿದರು. ಆದರೆ ಆರಂಭ ಆಟಗಾರ ಟ್ರಾವಿಸ್ ಹೆಡ್ (68, 49ಎ, 4x5, 6x4) ಜೊತೆಗೂಡಿದ ಮಾರ್ಕಸ್ ಸ್ಟೊಯಿನಿಸ್ (59, 29ಎ, 4x9, 6x2) ಮಿಂಚಿನ ಆಟದ ಮೂಲಕ ಆಸ್ಟ್ರೇಲಿಯಕ್ಕೆ ಅಮೋಘ ಚೇತರಿಕೆ ನೀಡಿದರು. ನಾಲ್ಕನೇ ವಿಕೆಟ್‌ಗೆ 80 ರನ್ (44 ಎಸೆತ) ಸೇರಿಸಿದ್ದರಿಂದ ಮಿಚೆಲ್ ಪಡೆ ಚೇತರಿಸಿಕೊಂಡಿತು. ಟಿಮ್ ಡೇವಿಡ್ ಕೊನೆಯಲ್ಲಿ ಅಜೇಯ 24 ರನ್ ಗಳಿಸಿದರು. 'ನಾವು ಯೋಜನೆಗೆ ಅಂಟಿಕೊಳ್ಳಬೇಕೆಂದು ಮಾತಾಡಿಕೊಂಡಿದ್ದೆವು. ಸ್ಕಾಟ್ಲೆಂಡ್ ಉತ್ತಮ ತಂಡ. ಅವರು ಸಾಕಷ್ಟು ಸುಧಾರಿಸಿದ್ದಾರೆ. ಸ್ಥಿರ ಪ್ರದರ್ಶನ ನೀಡುವುದು ನಮ್ಮ ಗುರಿಯಾಗಿತ್ತು. ತಂಡಕ್ಕೆ ಸವಾಲು ಎದುರಾದಾಗಲೆಲ್ಲಾ ನಮ್ಮಿಂದ ಉತ್ತಮ ಆಟ ಬಂದಿದೆ' ಎಂದು ಮಿಚೆಲ್ ಮಾರ್ಷ್ ಪಂದ್ಯದ ನಂತರ ಪ್ರತಿಕ್ರಿಯಿಸಿದರು.

ಆಸ್ಟ್ರೇಲಿಯಾ ತಂಡವು ಅನುಭವಿ ವೇಗಿಗಳಾದ ಪ್ಯಾಟ್ ಕಮಿನ್ಸ್ ಮತ್ತು ಜೋಶ್ ಹ್ಯಾಜಲ್‌ವುಡ್ ಅವರಿಗೆ ವಿಶ್ರಾಂತಿ ನೀಡಿತು. ಅವರ ಗೈರಿನಲ್ಲಿ ಇತರ ಬೌಲರ್‌ಗಳು ಅಷ್ಟೇನೂ ಪರಿಣಾಮ ಬೀರಲಿಲ್ಲ. ಇದಕ್ಕೆ ಮೊದಲು ಸ್ಕಾಟ್ಲೆಂಡ್ ಪರ ಬ್ರಾಂಡನ್ ಮೆಕ್‌ಮುಲೆನ್ ಕೇವಲ 34 ಎಸೆತಗಳಲ್ಲಿ 60 ರನ್ ಸಿಡಿಸಿ ಮಿಂಚಿದ್ದರು. ಅವರ ಇನಿಂಗ್ಸ್‌ನಲ್ಲಿ 2 ಬೌಂಡರಿ ಜೊತೆ 6 ಸಿಕ್ಸರ್‌ಗಳಿದ್ದವು. ಆರಂಭ ಆಟಗಾರ ಮುನ್ಸಿ (35, 23ಎ, 4x2, 6x3) ಮತ್ತು ಮೆಕ್‌ಮುಲೆನ್ ಎರಡನೇ ವಿಕೆಟ್ ಬಿರುಸಿನ ಆಟವಾಡಿ 48 ಎಸೆತಗಳಲ್ಲಿ 89 ರನ್ ಸೇರಿಸಿದ್ದರು.

ನಾಯಕ ಬೆರಿಂಗ್ಟನ್ 31 ಎಸೆತಗಳಲ್ಲಿ ಅಜೇಯ 42 ರನ್ ಗಳಿಸಿ ತಂಡ 180 ರನ್ ತಲುಪಲು ನೆರವಾದರು. ಕೊನೆಯ ಐದು ಓವರುಗಳಲ್ಲಿ ಸ್ಕಾಟ್ಲೆಂಡ್ 42 ರನ್ ಬಾಚಿತು.

ಸ್ಕೋರುಗಳು: ಸ್ಕಾಟ್ಲೆಂಡ್: 20 ಓವರುಗಳಲ್ಲಿ 5 ವಿಕೆಟ್‌ಗೆ 180 (ಜಾರ್ಜ್ ಮುನ್ಸಿ 35, ಬ್ರಾಂಡನ್ ಮೆಕ್‌ಮುಲೆನ್ 60, ರಿಚಿ ಬೆರಿಂಗ್ಟನ್ ಔಟಾಗದೇ 42; ಆಸ್ಟನ್ ಅಗರ್ 39ಕ್ಕೆ1, ನೇಥನ್ ಎಲ್ಲಿಸ್ 34ಕ್ಕೆ1, ಗ್ಲೆನ್ ಮ್ಯಾಕ್ಸ್‌ವೆಲ್ 44ಕ್ಕೆ2, ಆಡಂ ಜಂಪಾ 30ಕ್ಕೆ1); **ಆಸ್ಟ್ರೇಲಿಯಾ:** 19.4 ಓವರುಗಳಲ್ಲಿ 5 ವಿಕೆಟ್‌ಗೆ 186 (ಟ್ರಾವಿಸ್ ಹೆಡ್ 68, ಮಾರ್ಕಸ್ ಸ್ಟೊಯಿನಿಸ್ 59, ಟಿಮ್ ಡೇವಿಡ್ ಔಟಾಗದೇ 34; ಬ್ರಾಡ್ ವೀಲ್ 28ಕ್ಕೆ1, ಮಾರ್ಕ್ ವಾಟ್ 34ಕ್ಕೆ2, ಸಫ್ಯಾನ್ ಶರೀಫ್ 42ಕ್ಕೆ2). ಪಂದ್ಯದ ಆಟಗಾರ: ಮಾರ್ಕಸ್ ಸ್ಟೊಯಿನಿಸ್.

ಪಾಕಿಸ್ತಾನ ತಂಡಕ್ಕೆ ಪ್ರಯಾಸದ ಗೆಲುವು

ಮಿಂಚಿದ ಶಹೀನ್ ಶಾ ಅಫ್ರಿದಿ ಮತ್ತು ಬಾಬರ್ ಆಜಂ: ಐರ್ಲೆಂಡ್‌ಗೆ ಸೋಲು

ಪಾಕಿಸ್ತಾನ ತಂಡದ ಶಹೀನ್ ಅಫ್ರಿದಿ ಬೌಲಿಂಗ್ ವೈಖರಿ –ಎಪಿ/ಪಿಟಿಐ ಚಿತ್ರ

ಲಾಡರ್‌ಹಿಲ್ (ಪಿಟಿಐ): ವೇಗಿ ಶಹೀನ್ ಶಾ ಅಫ್ರಿದಿ, ಸ್ಪಿನ್ನರ್ ಇಮಾದ್ ವಾಸೀಂ ಅವರ ಅಮೋಘ ಬೌಲಿಂಗ್ ಹಾಗೂ ನಾಯಕ ಬಾಬರ್ ಆಜಂ (ಅಜೇಯ 32, 34ಎ) ಅವರ ಜವಾಬ್ದಾರಿಯುತ ಬ್ಯಾಟಿಂಗ್ ನೆರವಿನಿಂದ ಪಾಕಿಸ್ತಾನ ತಂಡ ಭಾನುವಾರ ಐರ್ಲೆಂಡ್ ಎದುರು ಮೂರು ವಿಕೆಟ್‌ಗಳ ಗೆಲುವು ದಾಖಲಿಸಿತು.

ಪಾಕಿಸ್ತಾನ 4 ಪಂದ್ಯಗಳಿಂದ 4 ಅಂಕ ಗಳಿಸಿ ಲೀಗ್ ಹಂತದ ಅಭಿಯಾನ ಪೂರ್ಣಗೊಳಿಸಿತು. ಭಾರತ ಮತ್ತು ಅಮೆರಿಕ ತಂಡಗಳು ಈಗಾಗಲೇ ಗುಂಪಿನಿಂದ ಸೂಪರ್ ಎಂಟರ ಹಂತ ಪ್ರವೇಶಿಸಿವೆ.

ಟಿ20 ವಿಶ್ವಕಪ್ ಟೂರ್ನಿಯ ಎ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಪಾಕಿಸ್ತಾನ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಅಫ್ರಿದಿ (22ಕ್ಕೆ3) ಮತ್ತು ವಾಸೀಂ (8ಕ್ಕೆ3) ಅವರ ಪರಿಣಾಮಕಾರಿ ದಾಳಿಯ ಮುಂದೆ ಐರ್ಲೆಂಡ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 106 ರನ್ ಗಳಿಸಿತು.

ಈ ಅಲ್ಪ ಮೊತ್ತದ ಗುರಿ ಬೆನ್ನಟ್ಟಿದ ಪಾಕ್ ತಂಡಕ್ಕೆ ಬ್ಯಾರಿ ಮೆಕಾರ್ಥಿ (15ಕ್ಕೆ3) ಹಾಗೂ ಕರ್ಟಿಸ್ ಕ್ಯಾಂಫರ್ (24ಕ್ಕೆ2) ಆಘಾತ ನೀಡಿದರು. ಆದರೆ ಬಾಬರ್ ಅವರ ಸಮಯೋಚಿತ ಆಟದಿಂದ 18.5 ಓವರ್‌ಗಳಲ್ಲಿ 7 ವಿಕೆಟ್‌ಗೆ 111 ರನ್ ಗಳಿಸಿ ಜಯಭೇರಿ ಬಾರಿಸಿತು.

ಈ ಪಂದ್ಯದಲ್ಲೂ ಪಾಕಿಸ್ತಾನದ ಮಧ್ಯಮ ಕ್ರಮಾಂಕದ ಆಟಗಾರರು ವಿಫಲರಾದರು. ಫಖರ್ ಜಮಾನ್ (5), ಉಸ್ಮಾನ್ ಖಾನ್ (2), ಶದಾಬ್ ಖಾನ್ (0), ಇಮಾದ್ ವಾಸೀಂ (4), ಅಬ್ಬಾಸ್ ಅಫ್ರಿದಿ (17) ಅವರು ನಿರಾಸೆ ಮೂಡಿಸಿದರು. ಒಂದು ಹಂತದಲ್ಲಿ ಹತ್ತು ಓವರ್‌ಗಳಲ್ಲಿ 62 ರನ್‌ಗೆ 6 ವಿಕೆಟ್ ಕಳೆದುಕೊಂಡು ಇಕ್ಕಟ್ಟಿಗೆ ಸಿಲುಕಿತ್ತು. ಒಂದೆಡೆ ವಿಕೆಟ್‌ಗಳು ನಿಯಮಿತವಾಗಿ ಪತನವಾಗುತ್ತಿದ್ದರೆ ಬಾಬರ್ ಅವರು ದಿಟ್ಟತನದಿಂದ ಆಟವಾಡಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಶಹೀನ್ ಅಫ್ರಿದಿ ಅವರು ಐದು ಎಸೆತಗಳಲ್ಲಿ 13 ರನ್ ಗಳಿಸಿ ಅಜೇಯರಾದರು. ಎರಡು ಸಿಕ್ಸರ್ ಸಹ ಬಾರಿಸಿದರು.

ಇದಕ್ಕೂ ಮುನ್ನ ಗರೆತ್ ಡೆಲನಿ (31; 19ಎ) ಅವರು ಕೊನೆಯ ಹಂತದಲ್ಲಿ ಮಿಂಚಿದ್ದರಿಂದ ಐರ್ಲೆಂಡ್ ತಂಡವು 100ರ ಗಡಿ ದಾಟಿತು. ಗರೆತ್ ಅವರು 3 ಸಿಕ್ಸರ್ ಬಾರಿಸಿದರು.

ಅಫ್ರಿದಿ ಹಾಕಿದ ಇನಿಂಗ್ಸ್‌ನ ಮೊದಲ ಓವರ್‌ನಲ್ಲಿ ಆಂಡ್ರ್ಯೂ ಬಲ್ಬಿರ್ನಿ ಮತ್ತು ಲಾರ್ಕನ್ ಟಕ್ಕರ್ ವಿಕೆಟ್‌ಗಳು ಪತನವಾದವು. ಇನ್ನೊಂದೆಡೆಯಿಂದ ಅಮೀರ್ ಮತ್ತು ಹ್ಯಾರಿಸ್ ರವೂಫ್ ಕೂಡ ಉತ್ತಮ ಬೌಲಿಂಗ್ ಮಾಡಿದರು. ಇಮಾದ್ ವಾಸೀಂ ಅವರು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವಿಕೆಟ್ ಗಳಿಸಿ ಐರ್ಲೆಂಡ್ ಹೆಚ್ಚು ಮೊತ್ತ ಗಳಿಸದಂತೆ ನೋಡಿಕೊಂಡರು.

ನಿಂತ ಮಳೆ – ನಡೆದ ಪಂದ್ಯ: ಫ್ಲಾರಿಡಾದ ಈ ಕ್ರೀಡಾಂಗಣದಲ್ಲಿ ಗುಂಪು ಹಂತದ ನಾಲ್ಕು ಪಂದ್ಯಗಳನ್ನು ಆಯೋಜಿಸಲಾಗಿತ್ತು. ಅದರ ಕಳೆದ ಮೂರು ಪಂದ್ಯಗಳು ಮಳೆಯಿಂದಾಗಿ ರದ್ದಾಗಿದ್ದವು. ಭಾನುವಾರ ಮಾತ್ರ ಮಳೆ ಇರದ ಕಾರಣ ಪಾಕ್ ಮತ್ತು ಐರ್ಲೆಂಡ್ ಪಂದ್ಯವು ನಡೆಯಿತು.

ಸಂಕ್ಷಿಪ್ತ ಸ್ಕೋರು: ಐರ್ಲೆಂಡ್: 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 106 (ಗರೆತ್ ಡೆಲನಿ 31, ಮಾರ್ಕ್ ಅಡೇರ್ 15, ಜೋಶುವಾ ಲಿಟಲ್ ಔಟಾಗದೆ 22, ಶಹೀನ್ ಅಫ್ರಿದಿ 22ಕ್ಕೆ3, ಮೊಹಮ್ಮದ್ ಅಮೀರ್ 11ಕ್ಕೆ2, ಇಮಾದ್ ವಾಸೀಂ 8ಕ್ಕೆ3) **ಪಾಕಿಸ್ತಾನ:** 18.5 ಓವರ್‌ಗಳಲ್ಲಿ 7 ವಿಕೆಟ್‌ಗೆ 111 (ಮೊಹಮ್ಮದ್ ರಿಜ್ವಾನ್ 17, ಬಾಬರ್ ಆಜಂ ಔಟಾಗದೆ 32, ಶಹೀನ್ ಅಫ್ರಿದಿ ಔಟಾಗದೆ 13, ಬ್ಯಾರಿ ಮೆಕಾರ್ಥಿ 15ಕ್ಕೆ3, ಕರ್ಟಿಸ್ ಕ್ಯಾಂಫರ್ 24ಕ್ಕೆ2)

ಪಂದ್ಯ ಶ್ರೇಷ್ಠ: ಶಹೀನ್ ಅಫ್ರಿದಿ

ಇಂದಿನ ಪಂದ್ಯ

ಬಾಂಗ್ಲಾದೇಶ Vs ನೇಪಾಳ	ಬೆಳಿಗ್ಗೆ	5
ಶ್ರೀಲಂಕಾ Vs ನೆದರ್ಲೆಂಡ್	ಬೆಳಿಗ್ಗೆ	6
ನ್ಯೂಜಿಲೆಂಡ್ Vs ಪಾಪುವಾ ನ್ಯೂಗಿನಿ	ರಾತ್ರಿ	8

ಲೈವ್: ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್

ವಿರಾಟ್ ಉತ್ತಮ ಲಯದಲ್ಲಿದ್ದಾರೆ: ವಿಕ್ರಮ್

ಭಾರತ ತಂಡದ ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೋಡ್

ಲಾಡೆರ್‌ಹಿಲ್, ಫ್ಲಾರಿಡಾ (ಪಿಟಿಐ): ವಿರಾಟ್ ಕೊಹ್ಲಿ ಅವರ ಬ್ಯಾಟಿಂಗ್ ಫಾರ್ಮ್ ಬಗ್ಗೆ ಯಾವುದೇ ಚಿಂತೆ ಇಲ್ಲ. ಅವರು ಉತ್ತಮ ಲಯದಲ್ಲಿದ್ದಾರೆ ಎಂದು ಭಾರತ ಕ್ರಿಕೆಟ್ ತಂಡದ ಬ್ಯಾಟಿಂಗ್ ಕೋಚ್ ವಿಕ್ರಮ್ ರಾಥೋಡ್ ಸ್ಪಷ್ಟಪಡಿಸಿದ್ದಾರೆ.

'ನಾನು ಪ್ರತಿಬಾರಿ ಸುದ್ದಿಗೋಷ್ಠಿಗೆ ಬಂದಾಗಲೂ ವಿರಾಟ್ ಕುರಿತ ಪ್ರಶ್ನೆ ಇರುತ್ತದೆ. ಹೆಚ್ಚು ಚಿಂತೆ ಇಲ್ಲ. ಅವರು ಉತ್ತಮವಾಗಿ ಅಭ್ಯಾಸ ನಡೆಸಿದ್ದಾರೆ. ಐಪಿಎಲ್‌ನಲ್ಲಿ ಅವರ ಶ್ರೇಷ್ಠ ಬ್ಯಾಟಿಂಗ್ ನೋಡಿದ್ದೇವೆ. ಅಲ್ಲಿಂದ ಇಲ್ಲಿಗೆ ಬಂದಿದ್ದಾರೆ. ಕೆಲವು ಪಂದ್ಯಗಳಲ್ಲಿ ವಿಫಲರಾಗಿದ್ದಾರೆ.

ಆದರೆ ಅದರಿಂದ ಅವರು ಕುಗ್ಗಿಲ್ಲ' ಎಂದು ಸುದ್ದಿಗಾರರಿಗೆ ವಿಕ್ರಮ್ ತಿಳಿಸಿದರು.

'ಅವರಿಗೆ ಹೆಚ್ಚು ರನ್ ಗಳಿಸಬೇಕು ಎಂಬ ಹಸಿವು ಇದೆ. ಇದರಿಂದಾಗಿ ಅವರು ಒಮ್ಮೆ ದೊಡ್ಡ ಇನಿಂಗ್ಸ್ ಆಡಲು ಶುರು ಮಾಡಿದರೆ ಹಿಂತಿರುಗಿ ನೋಡುವುದಿಲ್ಲ. ಅವರಿಂದ ಶ್ರೇಷ್ಠ ಇನಿಂಗ್ಸ್‌ಗಳು ಇನ್ನಷ್ಟೇ ಬರಬೇಕಿದೆ' ಎಂದರು.

ಟಿ20 ವಿಶ್ವಕಪ್ ಟೂರ್ನಿಯ ಗುಂಪು ಹಂತದ ಮೂರು ಪಂದ್ಯಗಳಲ್ಲಿ ಕೊಹ್ಲಿ ಬ್ಯಾಟಿಂಗ್‌ನಲ್ಲಿ ಎರಡಂಕಿ ಗಳಿಸಲಿಲ್ಲ.

ಎ ಗುಂಪಿನಲ್ಲಿ ಭಾರತವು ಆಡಬೇಕಿದ್ದ ಕೆನಡಾ ವಿರುದ್ಧದ ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಭಾರತ ತಂಡವು ಸೂಪರ್ 8ರ ಹಂತ ಪ್ರವೇಶಿಸಿದೆ.

ನೇಪಾಳ ತಂಡದ ವಿರುದ್ಧ ಮುಖಾಮುಖಿ ಇಂದು

ಬಾಂಗ್ಲಾದೇಶಕ್ಕೆ ಮಾಡು-ಮಡಿ ಪಂದ್ಯ

ಬಾಂಗ್ಲಾದೇಶದ ವೇಗಿ ತಂಜಿಮ್ ಹಸನ್ ಸಕಿಬ್ ಎಎಫ್‌ಪಿ ಚಿತ್ರ

ಕಿಂಗ್‌ಸ್ಟೌನ್ (ಸೇಂಟ್ ವಿನ್ಸೆಂಟ್), (ಪಿಟಿಐ): ಬಾಂಗ್ಲಾದೇಶ ತಂಡ ಟಿ20 ವಿಶ್ವಕಪ್ 'ಡಿ' ಗುಂಪಿನ ಪಂದ್ಯದಲ್ಲಿ ಸೋಮವಾರ ನೇಪಾಳ ತಂಡವನ್ನು ಎದುರಿಸಲಿದ್ದು, ಸೂಪರ್ ಎಂಟರಲ್ಲಿ ಸ್ಥಾನ ಪಡೆಯುವತ್ತ ಲಕ್ಷ್ಯ ಇರಿಸಿಕೊಂಡಿದೆ.

ಬಾಂಗ್ಲಾದೇಶ ಮೂರು ಪಂದ್ಯಗಳಿಂದ ನಾಲ್ಕು ಪಾಯಿಂಟ್ಸ್ ಗಳಿಸಿದ್ದು, ಗೆದ್ದರೆ ಮಾತ್ರ ಅದರ ಹಾದಿ ಸುಲಭ.

ಆದರೆ ಸ್ಫೂರ್ತಿಯುತ ಪ್ರದರ್ಶನ ನೀಡಿರುವ ನೇಪಾಳ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಹಿಮಾಲಯ ಮಡಿಲಿನ ಈ ಪುಟ್ಟ ರಾಷ್ಟ್ರ ಈಗಾಗಲೇ ಸೂಪರ್ ಎಂಟರ ಅವಕಾಶ ಕಳೆದುಕೊಂಡರೂ ಎದುರಾಳಿ ತಂಡಕ್ಕೆ ಮಗ್ಗುಲ ಮುಳ್ಳಾಗಬಹುದು.

ಒಂದು ದಿನ ಹಿಂದೆಯಷ್ಟೇ ಪ್ರಬಲ ದಕ್ಷಿಣ ಆಫ್ರಿಕಾ ತಂಡವು, ಈ ತಂಡದ ವಿರುದ್ಧ ಗೆಲ್ಲಲು ಹರಸಾಹಸ ಪಡಬೇಕಾಯಿತು.

ದಕ್ಷಿಣ ಆಫ್ರಿಕಾ ಈಗಾಗಲೇ ಗುಂಪಿನಿಂದ ಸೂಪರ್ ಎಂಟರ ಹಂತ ತಲುಪಿದೆ.

ಒಂದೊಮ್ಮೆ ಬಾಂಗ್ಲಾದೇಶ ದೊಡ್ಡ ಅಂತರದಿಂದ ನೇಪಾಳಕ್ಕೆ ಸೋತಲ್ಲಿ, ನೆದರ್ಲೆಂಡ್ಸ್, ರೇಸ್‌ನಿಂದ ಹೊರಬಿದ್ದಿರುವ ಶ್ರೀಲಂಕಾ ವಿರುದ್ಧ ಸುಲಭ ಗೆಲುವು ಪಡೆದಲ್ಲಿ ಆಗ ಲೆಕ್ಕಾಚಾರಗಳ ಬದಲಾಗಬಹುದು. ಆ ಸಾಧ್ಯತೆ ಕಡಿಮೆಯಾದರೂ ಈ ಟೂರ್ನಿಯಲ್ಲಿ ಕೆಲವು ಅನಿರೀಕ್ಷಿತಗಳು ಘಟಿಸಿರುವುದನ್ನು ಮರೆಯುವಂತಿಲ್ಲ.

ಏಪ್ರಿಲ್–ಮೇ ಅವಧಿಯಲ್ಲಿ ಶೇ 4.6ರಷ್ಟು ಏರಿಕೆ

ಎಂ.ಎಫ್: 81 ಲಕ್ಷ ಹೊಸ ಖಾತೆ

18.6 ಕೋಟಿ
ಮ್ಯೂಚುವಲ್ ಫಂಡ್ ಹೂಡಿಕೆದಾರರ ಖಾತೆ ಸಂಖ್ಯೆ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ ಮತ್ತು ಮೇ ತಿಂಗಳ ಅವಧಿಯಲ್ಲಿ ಮ್ಯೂಚುವಲ್ ಫಂಡ್ (ಎಂ.ಎಫ್) ಉದ್ಯಮಕ್ಕೆ ಹೊಸದಾಗಿ 81 ಲಕ್ಷ ಹೂಡಿಕೆದಾರರ ಖಾತೆಗಳು ಸೇರ್ಪಡೆಯಾಗಿವೆ.

ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟದ (ಎಎಂಎಫ್ಐ) ಮಾಹಿತಿ ಪ್ರಕಾರ, ಮಾರ್ಚ್ ಅಂತ್ಯಕ್ಕೆ ಒಟ್ಟು ಖಾತೆಗಳ ಸಂಖ್ಯೆ 17.78 ಕೋಟಿ ಇತ್ತು. ಮೇ ತಿಂಗಳ ಅಂತ್ಯಕ್ಕೆ 18.6 ಕೋಟಿಗೆ ಮುಟ್ಟಿದೆ. ಈ ಎರಡು ತಿಂಗಳಲ್ಲಿ ಒಟ್ಟಾರೆ ಶೇ 4.6ರಷ್ಟು ಏರಿಕೆಯಾಗಿದೆ.

ಮ್ಯೂಚುವಲ್ ಫಂಡ್ ಮಾರುಕಟ್ಟೆಯಲ್ಲಿನ ಸ್ಥಿರತೆ, ಕಂಪನಿಯ ಬ್ರ್ಯಾಂಡ್‌ಗಳಿಗೆ ಉತ್ತೇಜನ ಹಾಗೂ ಫಂಡ್‌ಗಳ ವಿತರಣೆಯ ಜಾಲದ ಸಕ್ರಿಯ ಕಾರ್ಯಾಚರಣೆಯಿಂದಾಗಿ ಖಾತೆಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

'ಮ್ಯೂಚುವಲ್ ಫಂಡ್‌ಗಳು ಹೂಡಿಕೆದಾರರಿಗೆ ಹೆಚ್ಚು ಗಳಿಕೆ ನೀಡುತ್ತಿದ್ದು, ಅವರ ಆದಾಯದ ಮಟ್ಟ ಹೆಚ್ಚಳಕ್ಕೆ ನೆರವಾಗುತ್ತಿವೆ. ಬ್ಯಾಂಕ್‌ನ ನಿಶ್ಚಿತ ಅವಧಿ ಠೇವಣಿಗಳಲ್ಲಿ ಹೂಡಿಕೆಯಿಂದ ಇಷ್ಟು ಲಾಭ ಗಳಿಕೆ ಸಾಧ್ಯವಿಲ್ಲ. ಈ ಬಗ್ಗೆ ಜನರಲ್ಲಿದ್ದ ಗ್ರಹಿಕೆಯೂ ಬದಲಾಗಿದೆ. ಹಾಗಾಗಿ, ಮ್ಯೂಚುವಲ್ ಫಂಡ್‌ಗಳತ್ತ ಮುಖ ಮಾಡಿದ್ದಾರೆ' ಎಂದು ಷೇರು ಮಾರಾಟ ವೇದಿಕೆಯಾದ ಟ್ರೇಡ್‌ಜಿನಿ ಸಿಒಒ ತ್ರಿವೇಶ್ ಡಿ. ತಿಳಿಸಿದ್ದಾರೆ.

'ಷೇರುಪೇಟೆಯಲ್ಲಿ ಗೂಳಿಯ ಓಟ ಮುಂದುವರಿದಿದ್ದು, ಮಾರುಕಟ್ಟೆಯ ಪರಿಸ್ಥಿತಿ ಸುಧಾರಿಸಿದೆ. ಜನರಿಗೆ ತಿಳಿವಳಿಕೆ ಹೆಚ್ಚಾಗುತ್ತಿರುವುದು ಕೂಡ ಮ್ಯೂಚುವಲ್ ಫಂಡ್ ಉದ್ಯಮದ ಮೇಲೆ ಪ್ರಭಾವ ಬೀರಿದೆ' ಎಂದು ಹೇಳಿದ್ದಾರೆ.

'ದೇಶದ ತಲಾ ಆದಾಯ ಹೆಚ್ಚಾದಂತೆ ಹೂಡಿಕೆದಾರರ ಚಿತ್ತವು ಸಂಪತ್ತು ವೃದ್ಧಿಸುವ ಮಾರ್ಗಗಳತ್ತ ಹರಿಯುವುದು ಸಹಜ. ಹಣದುಬ್ಬರವನ್ನು ಮೀರಿ ಆದಾಯ ತಂದುಕೊಡುವಂತಹ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಾರೆ. ಹಾಗಾಗಿ, ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವವರ ಸಂಖ್ಯೆಯು ಏರುಗತಿಯಲ್ಲಿದೆ' ಎಂದು ಪಿಜಿಐಎಂ ಇಂಡಿಯಾ ಮ್ಯೂಚುವಲ್ ಫಂಡ್‌ನ ಸಿಬಿಒ ಅಭಿಷೇಕ್ ತಿವಾರಿ ಹೇಳಿದ್ದಾರೆ.

ಏಪ್ರಿಲ್‌ನಲ್ಲಿ ಈ ಉದ್ಯಮಕ್ಕೆ 36.11 ಲಕ್ಷ ಹೊಸದಾಗಿ ಸೇರ್ಪಡೆಯಾಗಿದ್ದರೆ, ಮೇ ತಿಂಗಳಿನಲ್ಲಿ 45 ಲಕ್ಷ ಹೂಡಿಕೆದಾರರು ಸೇರ್ಪಡೆಯಾಗಿದ್ದಾರೆ. ಕಳೆದ ವರ್ಷದಲ್ಲಿ ಮಾಸಿಕವಾರು ಹೊಸದಾಗಿ ಹೂಡಿಕೆದಾರರ ಸರಾಸರಿ ಸೇರ್ಪಡೆ 22.3 ಲಕ್ಷ ಇತ್ತು.

20ಕ್ಕೆ ಬಜೆಟ್ ಪೂರ್ವ ಸಭೆ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಜುಲೈನಲ್ಲಿ 2024–25ನೇ ಆರ್ಥಿಕ ಸಾಲಿನ ಬಜೆಟ್ ಮಂಡಿಸಲಿದ್ದಾರೆ. ಇದರ ಅಂಗವಾಗಿ ಜೂನ್ 20ರಂದು ದೇಶದ ಕೈಗಾರಿಕಾ ಒಕ್ಕೂಟಗಳ ಜೊತೆಗೆ ಅವರು, ಬಜೆಟ್ ಪೂರ್ವ ಸಭೆ ನಡೆಸುವ ಸಾಧ್ಯತೆಯಿದೆ.

ಬಜೆಟ್ ಪೂರ್ವ ಸಮಾಲೋಚನೆ ಸಭೆಗೂ ಮೊದಲು ಜೂನ್ 18ರಂದು ಕಂದಾಯ ಕಾರ್ಯದರ್ಶಿ ಸಂಜಯ್ ಮಲ್ಹೋತ್ರಾ ಅವರನ್ನು ಭೇಟಿ ಮಾಡಿ ಚರ್ಚಿಸಲಾಗುವುದು ಎಂದು ಕೈಗಾರಿಕಾ ಒಕ್ಕೂಟದ ಮೂಲಗಳು ತಿಳಿಸಿವೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ ಸರ್ಕಾರದ ಆರ್ಥಿಕ ಕಾರ್ಯಸೂಚಿಯನ್ನು ಈ ಬಜೆಟ್ ಒಳಗೊಂಡಿರಲಿದೆ.

ಚಿಲ್ಲರೆ ಹಣದುಬ್ಬರ ನಿಯಂತ್ರಿಸುವ ಜೊತೆಗೆ ದೇಶದ ಆರ್ಥಿಕತೆಗೆ ಬಲವರ್ಧನೆ ನೀಡಲು ಅಗತ್ಯವಿರುವ ಕ್ರಮಗಳತ್ತ ಸಚಿವೆ ನಿರ್ಮಲಾ ಎದುರು ನೋಡಬೇಕಿದೆ. ಅಲ್ಲದೆ, ಮೈತ್ರಿಕೂಟದ ಅಗತ್ಯತೆ ಪೂರೈಸಲು ಸಂಪನ್ಮೂಲಗಳನ್ನು ಕ್ರೋಡೀಕರಿಸುವ ಸವಾಲು ಕೂಡ ಅವರ ಮುಂದಿದೆ.

ಭಾರತದ ಆರ್ಥಿಕತೆಯನ್ನು 5 ಟ್ರಿಲಿಯನ್ ಡಾಲರ್‌ಗೆ ಹೆಚ್ಚಿಸಲು ಮತ್ತು 2047ರ ವೇಳೆಗೆ 'ವಿಕಸಿತ ಭಾರತ'ವಾಗಿ ರೂಪಿಸಲು ಅಗತ್ಯವಿರುವ ಆರ್ಥಿಕ ಕಾರ್ಯಸೂಚಿಯನ್ನೂ ರೂಪಿಸಬೇಕಿದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿಯು ಶೇ 7.2ರಷ್ಟು ಪ್ರಗತಿ ಕಾಣಲಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ ಅಂದಾಜಿಸಿದೆ.

ಐದು ಕಂಪನಿಗಳ ಎಂ–ಕ್ಯಾಪ್ ಏರಿಕೆ

ನವದೆಹಲಿ (ಪಿಟಿಐ): ಕಳೆದ ವಾರದ ವಹಿವಾಟಿನಲ್ಲಿ ಷೇರು ಸೂಚ್ಯಂಕಗಳು ಏರಿಕೆ ಕಂಡಿದ್ದರಿಂದ ಪ್ರಮುಖ 10 ಕಂಪನಿಗಳ ಪೈಕಿ 5 ಕಂಪನಿಗಳ ಮಾರುಕಟ್ಟೆ ಮೌಲ್ಯಕ್ಕೆ (ಎಂ–ಕ್ಯಾಪ್) ₹85,582 ಕೋಟಿ ಸೇರ್ಪಡೆಯಾಗಿದೆ.

ಸರ್ಕಾರಿ ಸ್ವಾಮ್ಯದ ಭಾರತೀಯ ಜೀವ ವಿಮಾ ನಿಗಮದ ಎಂ–ಕ್ಯಾಪ್‌ಗೆ (ಎಲ್‌ಐಸಿ) ₹46,425 ಕೋಟಿ ಸೇರ್ಪಡೆಯಾಗಿದೆ. ಇದರಿಂದ ನಿಗಮದ ಮಾರುಕಟ್ಟೆ ಮೌಲ್ಯ ₹6.74 ಲಕ್ಷ ಕೋಟಿಗೆ ಮುಟ್ಟಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್ ₹18,639 ಕೋಟಿ, ರಿಲಯನ್ಸ್ ಇಂಡಸ್ಟ್ರೀಸ್ ₹10,216 ಕೋಟಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ₹9,192 ಕೋಟಿ ಮತ್ತು ಭಾರ್ತಿ ಏರ್‌ಟೆಲ್ ₹1,108 ಕೋಟಿ ಎಂ–ಕ್ಯಾಪ್ ಗಳಿಸಿದೆ.

ಎಫ್‌ಪಿಐ: ₹11,730 ಕೋಟಿ ಒಳಹರಿವು

ನವದೆಹಲಿ (ಪಿಟಿಐ): ದೇಶೀಯ ಹಾಗೂ ಜಾಗತಿಕ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದಿದ್ದರಿಂದಾಗಿ ಜೂನ್ 14ಕ್ಕೆ ಕೊನೆಗೊಂಡ ವಾರದಲ್ಲಿ ದೇಶದ ಷೇರುಪೇಟೆಗಳಲ್ಲಿ ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ₹11,730 ಕೋಟಿ ಹೂಡಿಕೆ ಮಾಡಿದ್ದಾರೆ.

ಪ್ರಸಕ್ತ ತಿಂಗಳ ಮೊದಲ ವಾರದಲ್ಲಿ ₹14,794 ಕೋಟಿ ಬಂಡವಾಳವನ್ನು ಹಿಂತೆಗೆದುಕೊಂಡಿದ್ದರು. ಎರಡನೇ ವಾರದಲ್ಲಿ ₹3,064 ಕೋಟಿ ಹಿಂಪಡೆದಿದ್ದಾರೆ.

'ಮೊದಲ ವಾರ ಏರಿಳಿತ ಕಂಡಿದ್ದ ದೇಶೀಯ ಮಾರುಕಟ್ಟೆಗಳು ಎರಡನೇ ವಾರದ ವಹಿವಾಟಿನಲ್ಲಿ ಸ್ಥಿರತೆ ಕಂಡಿವೆ. ಭಾರತದ ಚಂಚಲತೆಯ ಮಾಪಕವಾದ ಇಂಡಿಯಾ ವಿಐಎಕ್ಸ್ ಕುಸಿತ ಕಂಡಿದ್ದರಿಂದ ಮಾರುಕಟ್ಟೆಗಳ ಬಲವರ್ಧನೆಗೆ ಸಹಕಾರಿಯಾಗಿದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯ್‌ಕುಮಾರ್ ಹೇಳಿದ್ದಾರೆ.

'ಕೇಂದ್ರದಲ್ಲಿ ಮೂರನೇ ಬಾರಿಗೆ ಎನ್‌ಡಿಎ ಮೈತ್ರಿಕೂಟದ ಸರ್ಕಾರ ಅಧಿಕಾರದ ಚುಕ್ಕಾಣಿ ಹಿಡಿದಿದೆ. ಹಣಕಾಸು ನೀತಿಗಳ ಸುಧಾರಣೆ ಮತ್ತು ಆರ್ಥಿಕತೆಯ ಬೆಳವಣಿಗೆಗೆ ಒತ್ತು ನೀಡಲಿದೆ ಎಂಬ ಭರವಸೆ ಹೂಡಿಕೆದಾರರಿಗೆ ಮೂಡಿದೆ. ಹಾಗಾಗಿ, ಸೂಚ್ಯಂಕಗಳು ಏರಿಕೆ ಕಂಡಿವೆ' ಎಂದು ಮಾರ್ನಿಂಗ್‌ಸ್ಟಾರ್ ಇನ್‌ವೆಸ್ಟ್‌ಮೆಂಟ್ಸ್ ರಿಸರ್ಚ್ ಇಂಡಿಯಾದ ಸಹ ನಿರ್ದೇಶಕ (ಸಂಶೋಧನಾ ವಿಭಾಗ) ಹಿಮಾಂಶು ಶ್ರೀವಾಸ್ತವ ಹೇಳಿದ್ದಾರೆ.

'ಅಮೆರಿಕದಲ್ಲಿ ಚಿಲ್ಲರೆ ಹಣದುಬ್ಬರ ತಗ್ಗಿದೆ. ಹಾಗಾಗಿ, ಫೆಡರಲ್ ರಿಸರ್ವ್ ಬಡ್ಡಿದರ ಕಡಿತಗೊಳಿಸುವ ಆಸೆ ಚಿಗುರೊಡೆದಿದೆ. ಇದರಿಂದ ಅಲ್ಲಿ ಬಾಂಡ್‌ಗಳ ಮೇಲಿನ ಗಳಿಕೆ ಕಡಿಮೆಯಾಗುತ್ತದೆ. ಹೂಡಿಕೆದಾರರು ಸುರಕ್ಷಿತ ಮಾರುಕಟ್ಟೆಗಳತ್ತ ಮುಖ ಮಾಡಿದ್ದು, ದೇಶೀಯ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುತ್ತಿದ್ದಾರೆ' ಎಂದು ಹೇಳಿದ್ದಾರೆ.

ಯಾವುದಕ್ಕೆ ಯಾವ ಸಾಲ ಸೂಕ್ತ?

ಬಂಡವಾಳ ಮಾರುಕಟ್ಟೆ
ಕಾವ್ಯ ಡಿ.

ಸಾಲವನ್ನು ಸರಿಯಾಗಿ ಬಳಸಿಕೊಂಡರೆ ಅದಕ್ಕೆ ಸಂಪತ್ತು ಸೃಷ್ಟಿಸಿ ಕೊಡುವ ಶಕ್ತಿಯಿದೆ. ಆದರೆ, ಅರಿವು–ಅಂದಾಜು–ಲೆಕ್ಕಾಚಾರವಿಲ್ಲದೆ ಸಾಲ ಪಡೆದರೆ ಅದು ನಿಮ್ಮನ್ನು ಸಂಕಷ್ಟಕ್ಕೆ ದೂಡುತ್ತದೆ.

ತಂತ್ರಜ್ಞಾನದ ಈ ಕಾಲದಲ್ಲಿ ಕ್ಷಣ ಮಾತ್ರದಲ್ಲಿ ಸಾಲ ಕೊಡುವ ಹತ್ತಾರು ಹಣಕಾಸು ಸಂಸ್ಥೆಗಳಿದ್ದರೂ ಸರಿಯಾದ ಸಂಸ್ಥೆಯಿಂದ ಸರಿಯಾದ ಸಾಲ ಪಡೆಯದಿದ್ದರೆ ಇಕ್ಕಟ್ಟಿಗೆ ಸಿಲುಕಬೇಕಾಗುತ್ತದೆ. ಯಾವುದಕ್ಕೆ ಯಾವ ಸಾಲ ಪಡೆಯಬೇಕು? ಬನ್ನಿ ವಿವರವಾಗಿ ಕಲಿಯೋಣ.

ಸಾಲದ ಎರಡು ಪ್ರಮುಖ ವಿಧಗಳು: ಸಾಲದಲ್ಲಿ ಹತ್ತಾರು ಬಗೆಯ ಸಾಲಗಳಿವೆ. ಆದರೆ, ಸಾಲಗಳನ್ನು ಒಟ್ಟಾರೆಯಾಗಿ ಎರಡು ರೀತಿಯಲ್ಲಿ ವರ್ಗೀಕರಿಸಬಹುದು. ಒಂದನೆಯದು ಅಡಮಾನ ಸಾಲ (ಸೆಕ್ಯೂರ್ಡ್ ಲೋನ್). ಎರಡನೆಯದು ಅಡಮಾನರಹಿತ ಸಾಲ (ಅನ್ ಸೆಕ್ಯೂರ್ಡ್ ಲೋನ್). ಬ್ಯಾಂಕ್‌ನಿಂದ ಸಾಲ ಪಡೆಯಲು ಬಂಗಾರ, ಆಸ್ತಿ, ವಾಹನ, ಷೇರುಗಳು, ಮನೆ ಇತ್ಯಾದಿ ಮೌಲ್ಯ ಹೊಂದಿರುವ ವಸ್ತುಗಳನ್ನು ಒತ್ತೆ ಇಟ್ಟರೆ ಅದು ಅಡಮಾನ ಸಾಲವಾಗುತ್ತದೆ.

ಉದಾಹರಣೆಗೆ ಗೃಹ ಸಾಲ ಅಡಮಾನ ಸಾಲವಾಗುತ್ತದೆ. ಬ್ಯಾಂಕ್‌ನಿಂದ ಸಾಲ ಪಡೆಯಲು ಯಾವುದೇ ಆಸ್ತಿಯನ್ನು ಒತ್ತೆ ಇಡದೆ ಇದ್ದರೆ ಅಂತಹ ಸಾಲವು ಅಡಮಾನರಹಿತ ಸಾಲ ಎನಿಸಿಕೊಳ್ಳುತ್ತದೆ. ವೈಯಕ್ತಿಕ ಸಾಲ (ಪರ್ಸನಲ್ ಲೋನ್) ಅಡಮಾನರಹಿತ ಸಾಲಕ್ಕೆ ಉತ್ತಮ ಉದಾಹರಣೆ.

ಪ್ರಮುಖ ಅಡಮಾನ ಸಾಲಗಳು

- **ಗೃಹ ಸಾಲ:** ಮನೆ ಖರೀದಿಗೆ ಅಥವಾ ಮನೆ ನಿರ್ಮಾಣಕ್ಕಾಗಿ ಪಡೆಯುವ ದೊಡ್ಡ ಮೊತ್ತದ ಸಾಲವೇ ಗೃಹ ಸಾಲ. ಈ ಸಾಲದಲ್ಲಿ ಮನೆಯೇ ಬ್ಯಾಂಕ್ ಸಾಲಕ್ಕೆ ಆಧಾರವಾಗಿರುತ್ತದೆ.

ಸಾಮಾನ್ಯವಾಗಿ 10 ವರ್ಷ, 15 ವರ್ಷ, 20 ವರ್ಷ, 25 ವರ್ಷ ಹೀಗೆ ದೀರ್ಘಾವಧಿಗೆ ಗೃಹ ಸಾಲ ಪಡೆಯಲಾಗುತ್ತದೆ. ಬ್ಯಾಂಕ್‌ಗಳು ಮನೆ/ಆಸ್ತಿಯ ಮೌಲ್ಯದ ಶೇ 80ರಷ್ಟು ಮೊತ್ತವನ್ನು ಸಾಲವಾಗಿ ಕೊಡುತ್ತವೆ. ಅಂದರೆ ಆಸ್ತಿಯ ಮೌಲ್ಯ ₹1 ಕೋಟಿ ಇದ್ದರೆ ಬ್ಯಾಂಕ್‌ಗಳು ₹80 ಲಕ್ಷದ ವರೆಗೆ ಸಾಲ ಒದಗಿಸುತ್ತವೆ. ಬೇರೆ ಸಾಲಗಳಿಗೆ ಹೋಲಿಕೆ ಮಾಡಿ ನೋಡಿದಾಗ ಗೃಹ ಸಾಲದ ಬಡ್ಡಿದರ ಕಡಿಮೆ ಇರುತ್ತದೆ. ಸದ್ಯದ ಗೃಹ ಸಾಲದ ಬಡ್ಡಿದರ ಶೇ 9ರ ಆಸುಪಾಸಿನಲ್ಲಿದೆ.

ಗೃಹ ಸಾಲ ಪಡೆದ ವ್ಯಕ್ತಿ ಮರುಪಾವತಿ ಮಾಡದಿದ್ದರೆ ಮನೆಯನ್ನು ಬ್ಯಾಂಕ್ ವಶಕ್ಕೆ ಪಡೆದು ಹರಾಜಿನಲ್ಲಿ ಮಾರಾಟ ಮಾಡುತ್ತದೆ.

- **ವಾಹನ ಸಾಲ:** ಹೊಸ ಅಥವಾ ಹಳೆಯ ಕಾರು, ಬೈಕ್ ಇನ್ಯಾವುದೇ ಮಾದರಿಯ ವಾಹನ ಖರೀದಿಸಲು ಪಡೆಯುವ ಸಾಲವೇ ವಾಹನ ಸಾಲ. ಇಲ್ಲಿ ವಾಹನವನ್ನೇ ಆಧಾರವಾಗಿಟ್ಟುಕೊಂಡು ಸಾಲ ಒದಗಿಸಲಾಗುತ್ತದೆ. ಸಾಮಾನ್ಯವಾಗಿ 3ರಿಂದ 7 ವರ್ಷದ ಅವಧಿಗೆ ವಾಹನ ಸಾಲ ಕೊಡಲಾಗುತ್ತದೆ. ಸಾಲ ಪಡೆದ ವ್ಯಕ್ತಿ ಅದರ ಮರುಪಾವತಿ ಮಾಡದಿದ್ದರೆ ವಾಹನವನ್ನು ಬ್ಯಾಂಕ್ ವಶಕ್ಕೆ ಪಡೆದುಕೊಳ್ಳುತ್ತದೆ. ಸದ್ಯದ ವಾಹನ ಸಾಲದ ಬಡ್ಡಿದರ ಶೇ 8.5ರಿಂದ ಶೇ 11ರ ವರೆಗೂ ಇದೆ.
- **ಚಿನ್ನದ ಸಾಲ:** ಬ್ಯಾಂಕ್‌ಗೆ ಚಿನ್ನ ಅಡಮಾನ ಇಟ್ಟು ಪಡೆದುಕೊಳ್ಳುವ ಸಾಲಕ್ಕೆ ಚಿನ್ನದ ಸಾಲ ಎನ್ನಲಾಗುತ್ತದೆ. ಬಂಗಾರದ ಮೌಲ್ಯದ ಶೇ90ರಷ್ಟು ಮೊತ್ತವನ್ನು ಬ್ಯಾಂಕ್‌ಗಳು ಸಾಲದ ರೂಪದಲ್ಲಿ ಕೊಡುತ್ತವೆ. ಸಾಮಾನ್ಯವಾಗಿ ಗರಿಷ್ಠ 5 ವರ್ಷದ ಅವಧಿಗೆ ಚಿನ್ನದ ಸಾಲ ಲಭಿಸುತ್ತದೆ. ಚಿನ್ನದ ಸಾಲ ಪಡೆದಾಗ ಬಡ್ಡಿಯನ್ನು ಮಾಸಿಕ ಕಂತಿನ ಲೆಕ್ಕಾಚಾರದಲ್ಲಿ (ಇಎಂಐ) ಪಾವತಿಸಲು ಅವಕಾಶವಿದ್ದು, ಸಾಲದ ಅವಧಿಯ ಕೊನೆಗೆ ಪೂರ್ತಿ ಅಸಲು ಕಟ್ಟಬಹುದಾಗಿದೆ. ಹಾಗಾಗಿ, ಬಂಗಾರದ ಸಾಲ ಜನಪ್ರಿಯವಾಗಿದೆ.
- **ಆಸ್ತಿ ಮೇಲೆ ಸಾಲ:** ಮನೆ ಅಥವಾ ವಾಣಿಜ್ಯ ಆಸ್ತಿಯನ್ನು ಒತ್ತೆ ಇಟ್ಟು ಪಡೆಯುವ ಸಾಲಕ್ಕೆ ಆಸ್ತಿ ಮೇಲಿನ ಸಾಲ ಎಂದು ಕರೆಯಬಹುದು. ಆಸ್ತಿ ಮೌಲ್ಯದ ಶೇ 65ರಿಂದ ಶೇ 70ರಷ್ಟು ಮೊತ್ತದ ಸಾಲ ನಿಮಗೆ ಸಿಗುತ್ತದೆ.
- **ಷೇರು/ ಬಾಂಡ್‌ಗಳ ಮೇಲೆ ಸಾಲ:** ನೀವು ಯಾವುದಾದರು ಕಂಪನಿಯ ಷೇರುಗಳು, ಬಾಂಡ್‌ಗಳು, ಮ್ಯೂಚುಯಲ್ ಫಂಡ್‌ಗಳ ಮೇಲೆ ಹೂಡಿಕೆ ಮಾಡಿದ್ದರೆ, ಅದನ್ನು ಆಧಾರವಾಗಿಟ್ಟು ಬ್ಯಾಂಕ್‌ಗಳಿಂದ ಸಾಲ ಪಡೆಯಬಹುದು. ಷೇರುಗಳ ಮೌಲ್ಯದ ಶೇ 50ರಷ್ಟು ಮೊತ್ತವನ್ನು ಹಣಕಾಸು ಸಂಸ್ಥೆಗಳು ಸಾಲವಾಗಿ ಕೊಡುತ್ತವೆ.

ಅಡಮಾನರಹಿತ ಸಾಲಗಳು

- **ವೈಯಕ್ತಿಕ ಸಾಲ:** ವೈಯಕ್ತಿಕ ಸಾಲ ಪಡೆಯಲು ಬ್ಯಾಂಕ್‌ನಲ್ಲಿ ಯಾವುದೇ ಅಡಮಾನ ಇಡಬೇಕಾಗಿಲ್ಲ. ಈ ಸಾಲವನ್ನು ವೈದ್ಯಕೀಯ ತುರ್ತು, ಪ್ರವಾಸ ಹೀಗೆ ನಿಮ್ಮ ಅಗತ್ಯಕ್ಕೆ ತಕ್ಕಂತೆ ಬಳಸಬಹುದು. ವೈಯಕ್ತಿಕ ಸಾಲದ ಹಣವನ್ನು ಇಂಥದ್ದೇ ಉದ್ದೇಶಕ್ಕೆ ಬಳಸಬೇಕು ಎಂಬ ನಿಬಂಧನೆಯಿಲ್ಲ. ಇಲ್ಲಿ ಎಷ್ಟು ಮೊತ್ತದ ಸಾಲ ಸಿಗುತ್ತದೆ ಎನ್ನುವುದು ನಿಮ್ಮ ಆದಾಯ ಮತ್ತು ಕ್ರೆಡಿಟ್ ಸ್ಕೋರ್ ಮೇಲೆ ಅವಲಂಬಿಸಿರುತ್ತದೆ.

ಕ್ರೆಡಿಟ್ ಸ್ಕೋರ್ ಉತ್ತಮವಾಗಿಲ್ಲ ಎಂದರೆ ಬ್ಯಾಂಕ್ ನಿಮ್ಮ ವೈಯಕ್ತಿಕ ಸಾಲದ ಅರ್ಜಿಯನ್ನು ತಿರಸ್ಕರಿಸಬಹುದು. ಮದುವೆ ಸಾಲ, ಪ್ರವಾಸಕ್ಕಾಗಿ ಸಾಲ, ಮನೆ ನವೀಕರಣ ಸಾಲ, ಶಿಕ್ಷಣ ಸಾಲ, ಪಿಂಚಣಿ ಸಾಲಗಳೆಲ್ಲವೂ ವೈಯಕ್ತಿಕ ಸಾಲಗಳಾಗಿವೆ.

- **ತ್ವರಿತ ಸಾಲ (ಇನ್‌ಸ್ಟೆಂಟ್ ಲೋನ್):** ಹಣಕಾಸಿನ ತುರ್ತು ಅಗತ್ಯ ಬಿದ್ದಾಗ ತಕ್ಷಣಕ್ಕೆ ಸಿಗುವ ಸಣ್ಣ ಮೊತ್ತದ ಸಾಲವನ್ನು ತ್ವರಿತ ಸಾಲ ಎಂದು ಪರಿಗಣಿಸಬಹುದು. ತ್ವರಿತ ಸಾಲ ಸಹ ಒಂದು ರೀತಿಯ ವೈಯಕ್ತಿಕ ಸಾಲವಾಗಿದೆ
- **ಅಲ್ಪಾವಧಿ ಬ್ಯುಸಿನೆಸ್ ಸಾಲ:** ಉದ್ಯಮವೊಂದು ಹಣಕಾಸಿನ ಕೊರತೆ ಎದುರಿಸಿದಾಗ ಅಲ್ಪಾವಧಿ ಬ್ಯುಸಿನೆಸ್ ಸಾಲದ ಮೊರೆ ಹೋಗಬಹುದು. ಈ ಸಾಲ ಪಡೆಯಲು ಬ್ಯಾಂಕ್‌ನ ಕೆಲ ನಿಬಂಧನೆಗಳನ್ನು ಪೂರೈಸಬೇಕಾಗುತ್ತದೆ.
- **ಕ್ರೆಡಿಟ್ ಕಾರ್ಡ್:** ತುರ್ತು ಅಗತ್ಯಗಳಿಗೆ ಕ್ರೆಡಿಟ್ ಕಾರ್ಡ್ ಸಾಲ ಬಳಸಿದರೆ ತಪ್ಪಿಲ್ಲ. ಆದರೆ, ಲೆಕ್ಕಾಚಾರವಿಲ್ಲದ ಖರ್ಚಿಗೆ ಕ್ರೆಡಿಟ್ ಕಾರ್ಡ್ ಉಪಯೋಗಿಸಿ ಬಳಿಕ ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡದಿದ್ದರೆ ದೊಡ್ಡಮಟ್ಟದ ಬಡ್ಡಿ ಹೊರೆ ಹೊರಬೇಕಾಗುತ್ತದೆ. ಹಾಗಾಗಿ, ಕ್ರೆಡಿಟ್ ಕಾರ್ಡ್ ಸಾಲವನ್ನು ಎಚ್ಚರಿಕೆಯಿಂದ ಬಳಸಿ.

ಕೊನೆಯ ಮಾತು: ಯಾವ ಸಾಲ ನಮಗೆ ಸಂಪತ್ತು ಸೃಷ್ಟಿಸಿಕೊಳ್ಳಲು ನೆರವಾಗುತ್ತದೋ ಅಂತಹ ಸಾಲ ಪಡೆದರೆ ಸಮಸ್ಯೆಯಿಲ್ಲ. ಉದಾಹರಣೆಗೆ ಗೃಹ ಸಾಲದಿಂದ ಆಸ್ತಿ ಗಳಿಕೆ ಸಾಧ್ಯವಾಗುತ್ತದೆ.

ಆದರೆ, ಅನುತ್ಪಾದಕ ಸಾಲಗಳನ್ನು ಆದಷ್ಟು ಕಡಿಮೆ ಮಾಡಬೇಕು. ಉದಾಹರಣೆಗೆ ವೈಯಕ್ತಿಕ ಸಾಲ ಪಡೆದು ವಿದೇಶ ಪ್ರವಾಸಕ್ಕೆ ಹೋಗುವುದು ತಪ್ಪಾಗುತ್ತದೆ. ವೈಯಕ್ತಿಕ ಸಾಲವನ್ನು ತುರ್ತು ಅಗತ್ಯಗಳಿಗೆ ಮಾತ್ರ ಬಳಸಬೇಕು. ನೆನಪಿರಲಿ; ನಿಮ್ಮ ಸಾಲಗಳ ಒಟ್ಟು ಕಂತು ನಿಮ್ಮ ತಿಂಗಳ ಆದಾಯದ ಶೇ30ರಿಂದ 35ಕ್ಕಿಂತ ಹೆಚ್ಚಾಗಬಾರದು.

(ಲೇಖಕಿ: ಚಾರ್ಟರ್ಡ್ ಅಕೌಂಟೆಂಟ್)

ಎರಡನೇ ವಾರವೂ ಜಿಗಿದ ಷೇರುಪೇಟೆ

ಷೇರುಪೇಟೆ ಸೂಚ್ಯಂಕಗಳು ಸತತ ಎರಡನೇ ವಾರವೂ ಗಳಿಕೆ ಕಂಡಿವೆ.

76,922 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 0.39ರಷ್ಟು ಗಳಿಸಿಕೊಂಡಿದೆ. 23,465 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 0.75ರಷ್ಟು ಜಿಗಿದಿದೆ. ನರೇಂದ್ರ ಮೋದಿ ಅವರು ಮತ್ತೆ ಪ್ರಧಾನಿಯಾಗುವ ಬಗ್ಗೆ ಇದ್ದ ಅನಿಶ್ಚಿತತೆ ಬಗೆಹರಿದ ಬಳಿಕ ಷೇರು ಮಾರುಕಟ್ಟೆಗಳು ದೊಡ್ಡ ಪ್ರಮಾಣದಲ್ಲಿ ಚೇತರಿಸಿಕೊಂಡಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಐ.ಟಿ ಮತ್ತು ಎಫ್‌ಎಂಸಿಜಿ ಹೊರತುಪಡಿಸಿ ಉಳಿದ ಎಲ್ಲಾ ಸೂಚ್ಯಂಕಗಳು ಗಳಿಕೆ ಕಂಡಿವೆ. ರಿಯಲ್ ಎಸ್ಟೇಟ್ ಶೇ 5.57, ಮಾಧ್ಯಮ ಶೇ 4.42, ಅನಿಲ ಮತ್ತು ತೈಲ ಶೇ 3.41, ವಾಹನ ಉತ್ಪಾದನೆ ಶೇ 2.81, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 2.5, ಎನರ್ಜಿ ಸೂಚ್ಯಂಕ ಶೇ 1.88, ಫಾರ್ಮಾ ಶೇ 1.62ರಷ್ಟು ಗಳಿಸಿಕೊಂಡಿವೆ. ನಿಫ್ಟಿ ಐ.ಟಿ ಸೂಚ್ಯಂಕ ಶೇ 1.62ರಷ್ಟು ಕುಸಿದಿದ್ದರೆ, ಎಫ್‌ಎಂಸಿಜಿ ವಲಯ ಶೇ 1.26ರಷ್ಟು ತಗ್ಗಿದೆ.

ಗಳಿಕೆ–ಇಳಿಕೆ: ನಿಫ್ಟಿಯಲ್ಲಿ ಶ್ರೀರಾಮ್ ಫೈನಾನ್ಸ್ ಶೇ 9.34, ಅಲ್ಟ್ರಾ ಟೆಕ್ ಸಿಮೆಂಟ್ ಶೇ 7.66, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 6.26, ಒಎನ್‌ಜಿಸಿ ಶೇ 5.68, ಸಿಪ್ಲಾ ಶೇ 4.55, ಬಿಪಿಸಿಎಲ್ ಶೇ 4.45, ಎಲ್ ಆ್ಯಂಡ್ ಟಿ ಶೇ 4.35, ಪವರ್ ಗ್ರಿಡ್ ಶೇ 4.02ರಷ್ಟು ಹೆಚ್ಚಳ ಕಂಡಿವೆ.

ಹಿಂದುಸ್ತಾನ್ ಯೂನಿಲಿವರ್ ಶೇ 3.78, ಇನ್ಫೊಸಿಸ್ ಶೇ 2.92, ಕೋಟಕ್ ಮಹೀಂದ್ರ ಬ್ಯಾಂಕ್ ಶೇ 2.06, ಟಾಟಾ ಕನ್ಸ್ಯೂಮರ್ ಶೇ 2.02, ಐಟಿಸಿ ಶೇ 1.82, ಟಿಸಿಎಸ್ ಶೇ 1.57 ಮತ್ತು ಐಸಿಐಸಿಐ ಬ್ಯಾಂಕ್ ಶೇ 1.5ರಷ್ಟು ಕುಸಿದಿದೆ.

ಮುನ್ನೋಟ: ಮಾರುಕಟ್ಟೆಯಲ್ಲಿ ಸದ್ಯದ ಸ್ಥಿತಿಯಲ್ಲಿ ಏರಿಳಿತದ ಹಾದಿ ಮುಂದುವರಿಯಲಿದೆ. ಸೂಚ್ಯಂಕಗಳು ಕುಸಿತ ಕಂಡಾಗ ಆಯ್ದ ಉತ್ತಮ ಕಂಪನಿಗಳ ಷೇರು ಖರೀಸುವುದನ್ನು ಪರಿಗಣಿಸಬಹುದು. ಉಳಿದಂತೆ ಜಾಗತಿಕ ವಿದ್ಯಮಾನಗಳು ಹಾಗೂ ದೇಶೀಯ ಬೆಳವಣಿಗೆಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.

ಬಕ್ರೀದ್ ಹಬ್ಬದ ಪ್ರಯುಕ್ತ ಜೂನ್ 17ರಂದು ಷೇರುಪೇಟೆಗೆ ರಜೆ ಇದೆ.

ಆರ್‌ಬಿಐಗೆ 'ಅಪಾಯ ನಿರ್ವಾಹಕ' ಪ್ರಶಸ್ತಿ

ಮುಂಬೈ (ಪಿಟಿಐ): ಲಂಡನ್ ಮೂಲದ ಸೆಂಟ್ರಲ್ ಬ್ಯಾಂಕಿಂಗ್ ಪ್ರಕಾಶನಾಲಯವು ಕೊಡಮಾಡುವ 2024ನೇ ಸಾಲಿನ 'ಅಪಾಯ ನಿರ್ವಾಹಕ' (ರಿಸ್ಕ್ ಮ್ಯಾನೇಜರ್) ಪ್ರಶಸ್ತಿಗೆ ಭಾರತೀಯ ರಿಸರ್ವ್ ಬ್ಯಾಂಕ್ ಭಾಜನವಾಗಿದೆ.

ಆರ್ಥಿಕ ಅಪಾಯ ತಡೆ ಮತ್ತು ಜಾಗೃತಿಗೆ ಸಂಬಂಧಿಸಿದಂತೆ ಮತ್ತಷ್ಟು ಸುಧಾರಣಾ ಕ್ರಮಕೈಗೊಳ್ಳಲು ಈ ಪ್ರಶಸ್ತಿಯು ಪ್ರೇರಣೆ ನೀಡಲಿದೆ ಎಂದು ಆರ್‌ಬಿಐ 'ಎಕ್ಸ್'ನಲ್ಲಿ ತಿಳಿಸಿದೆ.

ಲಂಡನ್‌ನಲ್ಲಿ ನಡೆದ ಸಮಾರಂಭದಲ್ಲಿ ಆರ್‌ಬಿಐ ಪರವಾಗಿ ಕಾರ್ಯನಿರ್ವಾಹಕ ನಿರ್ದೇಶಕ ಮನೋರಂಜನ್ ಮಿಶ್ರಾ ಅವರು ಈ ಪ್ರಶಸ್ತಿ ಸ್ವೀಕರಿಸಿದ್ದಾರೆ ಎಂದು ತಿಳಿಸಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹555
12 ಕ್ಕೆ	₹75
ಮೈಸೂರು	
100ಕ್ಕೆ	₹557

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹303-483
ದ್ವಿತಳಿ (ಬಿ.ವಿ)	₹352-605

ವಂಚಕರ ಕರೆ: ಜಾಗ್ರತೆ ಅಗತ್ಯ

ನವದೆಹಲಿ (ಪಿಟಿಐ): ಕಸ್ಟಮ್ಸ್ ಅಧಿಕಾರಿಗಳ ಸೋಗಿನಲ್ಲಿ ಮೊಬೈಲ್ ಕರೆ ಮಾಡಿ ಹಣ ದೋಚುವವರ ಬಗ್ಗೆ ನಾಗರಿಕರು ಜಾಗರೂಕರಾಗಿರಬೇಕು ಎಂದು ಪರೋಕ್ಷ ತೆರಿಗೆಗಳು ಮತ್ತು ಕಸ್ಟಮ್ಸ್‌ನ ಕೇಂದ್ರೀಯ ಮಂಡಳಿ (ಸಿಬಿಐಸಿ) ತಿಳಿಸಿದೆ.

'ಇಂತಹ ಕೃತ್ಯಗಳ ಬಗ್ಗೆ ಸುದ್ದಿ ತಾಣಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಮಾಹಿತಿಗಳು ಪ್ರಕಟವಾಗುತ್ತಿವೆ. ಸಾರ್ವಜನಿಕರು ಕಷ್ಟಪಟ್ಟು ಗಳಿಸಿದ ಹಣವನ್ನು ಲಪಟಾಯಿಸುತ್ತಿದ್ದಾರೆ' ಎಂದು ಸಿಬಿಐಸಿ ಹೇಳಿದೆ. ಈ ಕೃತ್ಯ ಎಸಗಲು ವಂಚಕರು ಮೊಬೈಲ್ ಕರೆ ಅಥವಾ ಸಂದೇಶವನ್ನು ಬಳಸಿಕೊಳ್ಳುತ್ತಾರೆ. ನೀವು ತೆರಿಗೆ ಪಾವತಿಯಲ್ಲಿ ತಪ್ಪೆಸಗಿದ್ದೀರಿ. ಹಾಗಾಗಿ, ದಂಡಾರ್ಹ ಕ್ರಮಕೈಗೊಳ್ಳುವುದಾಗಿ ಭಯ ಹುಟ್ಟಿಸಿ ಹಣ ವಸೂಲಿ ಮಾಡುತ್ತಾರೆ. ಈ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂದು ಸೂಚಿಸಿದೆ.

ಮಹಿಳಾ ಕ್ರಿಕೆಟ್: ಮಿಂಚಿದ ಆಶಾ, ಆತಿಥೇಯರಿಗೆ 1–0 ಮುನ್ನಡೆ

ಮಂದಾನ ಶತಕ; ಭಾರತಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಮೃತಿ ಮಂದಾನ ಅವರಿಗೆ ಚಿನ್ನಸ್ವಾಮಿ ಕ್ರೀಡಾಂಗಣವು ಅದೃಷ್ಟದ ತಾಣ ಎಂಬುವುದು ಮತ್ತೊಮ್ಮೆ ಸಾಬೀತಾಯಿತು.

ಭಾನುವಾರ ಇಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಉಪನಾಯಕಿ ಸ್ಮೃತಿ ಭರ್ಜರಿ ಶತಕ ಗಳಿಸಿದರು. ಅವರ ಬ್ಯಾಟಿಂಗ್ ಮತ್ತು ಆಶಾ ಶೋಭನಾ ಅವರ ಪರಿಣಾಮಕಾರಿ ಬೌಲಿಂಗ್‌ನಿಂದ ಭಾರತ ಮಹಿಳಾ ತಂಡವು ದಕ್ಷಿಣ ಆಫ್ರಿಕಾ ಎದುರು 143 ರನ್‌ಗಳ ಬೃಹತ್ ಜಯ ದಾಖಲಿಸಿತು. ಮೂರು ಪಂದ್ಯಗಳ ಸರಣಿಯಲ್ಲಿ 1-0 ಮುನ್ನಡೆಯನ್ನೂ ಸಾಧಿಸಿತು.

ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಈ ಸಲದ ಚಾಂಪಿಯನ್ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ನಾಯಕಿಯಾಗಿರುವ ಸ್ಮೃತಿಗೆ ಚಿನ್ನಸ್ವಾಮಿ ಕ್ರೀಡಾಂಗಣವು 'ತವರಿನ ಅಂಗಳ'ವೂ ಆಗಿದೆ.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಆದರೆ ಪ್ರವಾಸಿ ತಂಡದ ಮಧ್ಯಮವೇಗಿ ಮಸಾಬೆತಾ ಕ್ಲಾಸ್ (51ಕ್ಕೆ2) ಅವರ ಪರಿಣಾಮಕಾರಿ ದಾಳಿಯಿಂದ ಆತಿಥೇಯ ಬಳಗವು ಆರಂಭಿಕ ಆಘಾತ ಎದುರಿಸಿತು. ಕೇಲವ 55 ರನ್‌ಗಳಿಗೆ 3 ವಿಕೆಟ್ ಪತನವಾದವು.

ಆದರೆ ಈ ಹಂತದಲ್ಲಿ ದಿಟ್ಟ ಹೋರಾಟ ನಡೆಸಿದ ಸ್ಮೃತಿ (117; 127ಎ, 4X12, 6X1) ಶತಕ ದಾಖಲಿಸಿದರು. ಇದರಿಂದಾಗಿ ತಂಡವು 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 265 ರನ್ ಗಳಿಸಲು ಸಾಧ್ಯವಾಯಿತು. ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡವು 37.4 ಓವರ್‌ಗಳಲ್ಲಿ 122 ರನ್‌ಗಳಿಗೆ ಕುಸಿಯಿತು.

ಇದಕ್ಕೆ ಸ್ಪಿನ್ನರ್ ಆಶಾ ಶೋಭನಾ (21ಕ್ಕೆ4) ಮತ್ತು ದೀಪ್ತಿ ಶರ್ಮಾ (10ಕ್ಕೆ2) ಕಾರಣರಾದರು.

ಎಡಗೈ ಬ್ಯಾಟರ್ ಸ್ಮೃತಿ ಅವರಿಗೆ ಏಕದಿನ ಕ್ರಿಕೆಟ್‌ನಲ್ಲಿ ಇದು ಆರನೇ ಶತಕ. 27 ವರ್ಷದ ಸ್ಮೃತಿ ಅವರ ಆಟವು ಅಪಾರ ತಾಳ್ಮೆ ಮತ್ತು ಏಕಾಗ್ರತೆಯಿಂದ ಕೂಡಿತ್ತು. 116 ಎಸೆತದಲ್ಲಿ ಅವರು 100ರ ಗಡಿ ಮುಟ್ಟಿದರು.

ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ದೀಪ್ತಿ ಶರ್ಮಾ (37; 48ಎ) ಹಾಗೂ ಪೂಜಾ (ಔಟಾಗದೆ 31; 42) ಅವರು ಮಹತ್ವದ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 265 (ಸ್ಮೃತಿ ಮಂದಾನ 117, ದೀಪ್ತಿ ಶರ್ಮಾ 37, ಪೂಜಾ ವಸ್ತ್ರಕರ್ ಔಟಾಗದೆ 31, ಅಯಾಬೊಂಗಾ ಕಾಕಾ 47ಕ್ಕೆ3, ಮಸಾಬೆತಾ ಕ್ಲಾಸ್ 51ಕ್ಕೆ2)

ದಕ್ಷಿಣ ಆಫ್ರಿಕಾ: 37.4 ಓವರ್‌ಗಳಲ್ಲಿ 122 (ಸೂನ್ ಲೂಸ್ 33, ಮರಿಜಾನೆ ಕಾಪ್ 24, ಸಿನಾಲೊ ಜಫ್ತಾ ಔಟಾಗದೆ 27, ದೀಪ್ತಿ ಶರ್ಮಾ 10ಕ್ಕೆ2, ಆಶಾ ಶೋಭನಾ 21ಕ್ಕೆ4) ಫಲಿತಾಂಶ: ಭಾರತಕ್ಕೆ 143 ರನ್‌ಗಳ ಜಯ. ಸರಣಿಯಲ್ಲಿ 1-0 ಮುನ್ನಡೆ.

ಮುಂದಿನ ಪಂದ್ಯ: ಜೂನ್ 19

ಭಾರತ ಮಹಿಳಾ ತಂಡದ ಬ್ಯಾಟರ್ ಸ್ಮೃತಿ ಮಂದಾನ (ಎಡ) ಮತ್ತು ಸ್ಪಿನ್ನರ್ ಆಶಾ ಶೋಭನಾ.

ಪ್ರಜಾವಾಣಿ ಚಿತ್ರ/ ಎಸ್‌.ಕೆ. ದಿನೇಶ್

ಆರ್ಚರಿ: ಭಜನ್, ಅಂಕಿತಾಗೆ ಒಲಿಂಪಿಕ್ಸ್ ಕೋಟಾ

ಅಂತಾಲ್ಯ (ಟರ್ಕಿ) (ಪಿಟಿಐ): ಮೂರನೇ ಶ್ರೇಯಾಂಕ ಪಡೆದಿದ್ದ ಭಾರತದ ಭಜನ್ ಕೌರ್ , ವಿಶ್ವ ಆರ್ಚರಿ ಅಂತಿಮ ಕ್ವಾಲಿಫೈಯರ್ ಟೂರ್ನಿಯ ಮಹಿಳೆಯರ ವೈಯಕ್ತಿಕ ರಿಕರ್ವ್ ವಿಭಾಗದಲ್ಲಿ ಭಾನುವಾರ ಚಿನ್ನ ಗೆಲ್ಲುವ ಮೂಲಕ ಒಲಿಂಪಿಕ್ಸ್‌ಗೆ ಅರ್ಹತೆ ಸಂಪಾದಿಸಿದರು.

18 ವರ್ಷದ ಭಜನ್ ಕೌರ್ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕ ಪಡೆದಿರುವ ಇರಾನ್‌ನ ಮೊಬಿನಾ ಫಲ್ಲಾ ಅವರನ್ನು 6-2 ರಿಂದ ಸೋಲಿಸಿದರು. ಇದಕ್ಕೆ ಮೊದಲು ಅಂಕಿತಾ ಭಕತ್ ಕ್ವಾರ್ಟರ್‌ಫೈನಲ್‌ನಲ್ಲಿ ಮೊಬಿನಾ ಅವರಿಗೆ ಸೋತಿದ್ದರು. ಕ್ವಾರ್ಟರ್‌ಫೈನ-ಲ್ ತಲುಪಿದ್ದರಿಂದ ಅವರು ಅರ್ಹತೆ ಪಡೆಯುವಲ್ಲಿ ಯಶಸ್ವಿಯಾದರು. ಭಾರತದ ಅನುಭವಿ ಬಿಲ್ಗಾರ್ತಿ ದೀಪಿಕಾ ಕುಮಾರಿ ಮೂರನೇ ಸುತ್ತಿನಲ್ಲಿ ಅಚ್ಚರಿಯ ರೀತಿ ನಿರ್ಗಮಿಸಿದ್ದರು.

ಪುರುಷರ ವಿಭಾಗದ ರಿಕರ್ವ್‌ನಲ್ಲಿ ಧೀರಜ್ ಬೊಮ್ಮದೇವರ ಅವರು ಒಲಿಂಪಿಕ್ಸ್‌ಗೆ ರಹದಾರಿ ಪಡೆದಿದ್ದಾರೆ. ಮಧ್ಯಾಹ್ನ ನಡೆದ ಸ್ಪರ್ಧೆಯಲ್ಲಿ, ಅಂಕಿತಾ ಭಕತ್ ಅವರು ಫಿಲಿಪ್ಪೀನ್ಸ್‌ನ ಗೇಬ್ರಿಯೆಲ್ ಮೋನಿಕಾ ಬಿದೌರೆ ಅವರನ್ನು ಸೋಲಿಸಿ ಕ್ವಾರ್ಟರ್ ಫೈನಲ್ ಪ್ರ-ವೇಶಿಸಿದ್ದರು. ಆದರೆ ಅವರು ಮುಂದಿನ ಪಂದ್ಯದಲ್ಲಿ ಮೊಬಿನಾ ಅವರಿಗೆ ಮಣಿದರು.

32ರ ಸುತ್ತಿಗೆ ಬೈ ಪಡೆದಿದ್ದ ಮೂರನೇ ಶ್ರೇಯಾಂಕದ ಭಜನ್, ಮಂಗೋಲಿಯಾದ ಉರಂತುಂಗಳಗ್ ಬಿಶಿಂಡಿ ಅವರನ್ನು 6-2 (29-27, 28-26, 26-29, 27-24) ರಿಂದ ಸೋಲಿಸಿದ್ದರು. ಪ್ರಿಕ್ವಾರ್ಟರ್ ಫೈನಲ್‌ನಲ್ಲಿ ಸ್ಲೊವೇನಿಯಾದ ಉರ್ಸ್ಕಾ ಕ್ಯಾವಿಕ್ ಅವರನ್ನು ಮಣಿಸಿದ್ದರು. ವೈಯಕ್ತಿಕ ಕೋಟಾಗಳನ್ನು ಅಗ್ರ ಎಂಟು ರಾಷ್ಟ್ರಗಳಿಗೆ ಹಂಚಿಕೆ ಮಾಡಲಾಗುತ್ತದೆ. ಪ್ರತಿ ದೇಶವು ಒಂದು ವೈಯಕ್ತಿಕ ಕೋಟಾ ಪಡೆಯುತ್ತದೆ.

ಅಂಕಿತಾ ಭಕತ್

ಇಟಲಿಗೆ ಮಣಿದ ಅಲ್ಬೇನಿಯಾ

ಯುರೋ ಕಪ್: ಬೆಸ್ಟೊನಿ, ನಿಕೊಲೊ ಬರೇಲಿ ಗೋಲುಗಳಿಗೆ ಒಲಿದ ಜಯ

ಡಾರ್ಟ್‌ಮಂಡ್, ಜರ್ಮನಿ (ಎಪಿ): ಇಟಲಿ ತಂಡವು ಯೂರೋ ಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯ ಆರಂಭವಾಗಿ 23 ಸೆಕೆಂಡುಗಳಲ್ಲಿ ಎದುರಾಳಿ ಅಲ್ಬೇನಿಯಾಗೆ 'ಉಡುಗೊರೆ' ಗೋಲು ಕೊಟ್ಟಿತು. ನಂತರದ ಆಟದಲ್ಲಿ ಪುಟಿದೆದ್ದು ಗೆಲುವನ್ನೂ ಸಾಧಿಸಿತು.

ಶನಿವಾರ ತಡರಾತ್ರಿ ನಡೆದ ಬಿ ಗುಂಪಿನ ಪಂದ್ಯದಲ್ಲಿ ಇಟಲಿ ತಂಡವು 2–1ರಿಂದ ಅಲ್ಬೇನಿಯಾ ವಿರುದ್ಧ ಜಯಿಸಿತು. 64 ವರ್ಷಗಳ ನಂತರ ಈ ಸಾಧನೆ ಮಾಡಿತು.

ಪಂದ್ಯ ಆರಂಭವಾದ 23ನೇ ಸೆಕೆಂಡಿನಲ್ಲಿ ಇಟಲಿಯ ನೆದಿಮ್ ಬೆಜ್ರಾಮಿ ಅವರು ಅಲ್ಬೇನಿಯಾಕ್ಕೆ ಗೋಲು 'ಉಡುಗೊರೆ' ನೀಡಿದರು. ಕ್ರೀಡಾಂಗಣದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಅಲ್ಬೇನಿಯನ್ ಅಭಿಮಾನಿಗಳು ಸಂಭ್ರಮದಿಂದ ಕುಣಿದು ಕುಪ್ಪಳಿಸಿದರು.

ಈ ತಪ್ಪನ್ನು ಸರಿಪಡಿಸಲು ಇಟಲಿಗೆ ಹತ್ತು ನಿಮಿಷಗಳ ಸಮಯ ಬೇಕಾಯಿತು. 11ನೇ ನಿಮಿಷದಲ್ಲಿ ಅಲೆಕ್ಸಾಂದ್ರೊ ಬೆಸ್ಟೊನಿ ಗೋಲು ಹೊಡೆದು ತಂಡಕ್ಕೆ ಸಮಬಲದ ಸಮಾಧಾನ ನೀಡಿದರು. ಇದಾಗಿ ಐದು ನಿಮಿಷ ಕಳೆದಾಗ ಇಟಲಿ 2–1ರ ಮುನ್ನಡೆ ಸಾಧಿಸುವಲ್ಲಿ ಯಶಸ್ವಿಯಾಯಿತು. 16ನೇ ನಿಮಿಷದಲ್ಲಿ ಬ್ಯಾಕ್ ಪೋಸ್ಟ್‌ನಿಂದ ಲೊರೆಂಝೊ ಪೆಲೆಗ್ರಿನಿ ಕ್ರಾಸ್ ಮಾಡಿದ ಚೆಂಡನ್ನು ಪಡೆದ ನಿಕೊಲೊ ಬರೆಲಿ ಗೋಲ್ ಕೀಪರ್‌ವಂಚಿಸುವಲ್ಲಿಯಶಸ್ವಿಯಾದರು.

ಮತ್ತೊಂದು ಪಂದ್ಯದಲ್ಲಿ ನೆದರ್ಲೆಂಡ್ ತಂಡವು 2–1 ರಿಂದ ಪೋಲೆಂಡ್ ವಿರುದ್ಧ ಗೆಲುವು ಸಾಧಿಸಿತು.

ಯುರೋ ಕಪ್ 2024 ಜರ್ಮನಿ

ಇಂದಿನ ಪಂದ್ಯಗಳು

ಸರ್ಬಿಯಾ Vs ಇಂಗ್ಲೆಂಡ್

ರೊಮೇನಿಯಾ Vs ಉಕ್ರೇನ್

ಬೆಲ್ಜಿಯಂ Vs ಸ್ಲೋವಾಕಿಯಾ

ಲೈವ್: ಸೋನಿ ಸ್ಪೋರ್ಟ್ಸ್

ಇಟಲಿಯ ನಿಕೊಲೊ ಬರೇಲಿ ಅವರು ಚೆಂಡು ಅನ್ನು ನಿಯಂತ್ರಣಕ್ಕೆ ತೆಗೆದುಕೊಳ್ಳಲು ಯತ್ನಿಸಿದರು. ಎಎಫ್‌ಪಿ ಚಿತ್ರ

ಸೋತ ನಗಾಲ್

ಪೆರುಗಿಯಾ (ಇಟಲಿ), (ಪಿಟಿಐ): ಆತಿಥೇಯ ಇಟಲಿಯ ಲೂಸಿಯಾನೊ ದರ್ದೇರಿ ಅವರು ಭಾನುವಾರ ನಡೆದ ಪೆರುಗಿಯಾ ಚಾಲೆಂಜರ್ ಟೆನಿಸ್ ಟೂರ್ನಿಯ ಫೈನಲ್‌ನಲ್ಲಿ 6-1, 6-2 ರಿಂದ ಭಾರತದ ಸುಮಿತ್ ನಗಾಲ್ ಅವರನ್ನು ಸೋಲಿಸಿ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ವಿಶ್ವ ಕ್ರಮಾಂಕದಲ್ಲಿ 37ನೇ ಸ್ಥಾನದಲ್ಲಿರುವ ಹಾಗೂ ಇಲ್ಲಿ ಅಗ್ರ ಶ್ರೇಯಾಂಕ ಪಡೆದಿದ್ದ ಲೂಸಿಯಾನೊ ಅವರಿಗೆ ಆರನೇ ಶ್ರೇಯಾಂಕದ ಸುಮಿತ್ ಸಾಟಿಯಾಗಲಿಲ್ಲ. ಎರಡನೇ ಸೆಟ್‌ನ ಆರಂಭದಲ್ಲಿ 0–2 ಹಿನ್ನಡೆಯಿಂದ ಚೇತರಿಸಿಕೊಂಡ ನಗಾಲ್ 2–2ರಲ್ಲಿ ಸಮಮಾಡಿಕೊಂಡರೂ, ಇಟಲಿಯ ಆಟಗಾರ ನಂತರ ಸತತವಾಗಿ ನಾಲ್ಕು ಗೇಮ್‌ಗಳನ್ನು ಪಡೆದು ಪಂದ್ಯವನ್ನು 62 ನಿಮಿಷಗಳಲ್ಲಿ ತಮ್ಮದಾಗಿಸಿಕೊಂಡರು.

ಸುಮಿತ್ ಇದಕ್ಕೆ ಮೊದಲು ಹೀಲ್‌ಬ್ರಾನ್ ನೆಕರ್‌ಕಪ್ ಚಾಲೆಂಜರ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದಿದ್ದರು. ಈ ಟೂರ್ನಿಯಲ್ಲೂ ಉತ್ತಮ ಸಾಧನೆಯಿಂದ ಎಟಿಪಿ ಲೈವ್ ರ್‍ಯಾಂಕಿಂಗ್‌ನಲ್ಲಿ 71ನೇ ಸ್ಥಾನಕ್ಕೇರಿದ್ದಾರೆ.

ಬಾಕ್ಸಿಂಗ್: ಲವ್ಲೀನಾಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಲವ್ಲೀನಾ ಬೋರ್ಗೊಹೈನ್ ಜೆಕ್ ಗಣರಾಜ್ಯದ ಲ್ಯಾಬೆಮ್ ನಲ್ಲಿ ನಡೆದ ಗ್ರ್ಯಾನ್ ಪ್ರಿ ಉಸ್ತಿನಾದ್ ಬಾಕ್ಸಿಂಗ್‌ನಲ್ಲಿ ಬೆಳ್ಳಿ ಪದಕ ಗಳಿಸಿದರು.

ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸಲಿರುವ ಲವ್ಲೀನಾ ಶನಿವಾರ ತಡರಾತ್ರಿ ನಡೆದ 75 ಕೆ.ಜಿ ವಿಭಾಗದ ಫೈನಲ್ ಬೌಟ್‌ನಲ್ಲಿ 2-3ರ ಸ್ಪ್ಲಿಟ್ ತೀರ್ಮಾನದಲ್ಲಿ ಚೀನಾದ ಲೀ ಕಿಯಾನ್ ವಿರುದ್ಧ ಸೋತರು.

ಲಿ ಕಿಯಾನ್ ಅವರು ಎರಡು ಬಾರಿ ಒಲಿಂಪಿಕ್ ಪದಕವಿಜೇತೆಯಾ-ಗಿದ್ದಾರೆ. ಅಲ್ಲದೇ ಮೂರು ಬಾರಿ ವಿಶ್ವ ಚಾಂಪಿಯನ್‌ಷಿಪ್ ಪದಕ ವಿಜೇತರೂ ಹೌದು. ಹೋದ ವರ್ಷ ಏಷ್ಯನ್ ಕ್ರೀ-ಡಾಕೂಟದಲ್ಲಿಯೂ ಲವ್ಲೀನಾ ಅವರು ಕಿಯಾನ್ ವಿರುದ್ಧ ಸೋತರು.

'ಈ ಚಾಂಪಿಯನ್‌ಷಿಪ್‌ನಲ್ಲಿ ಸ್ಪರ್ಧಿ-ಸಿರುವುದು ಒಳ್ಳೆಯ ಅನುಭವವಾಗಿದೆ. ಪ್ಯಾರಿಸ್ ಒಲಿಂಪಿಕ್ಸ್‌ಗೆ ತೆರಳಲು ಉತ್ತಮ ಪೂರ್ವಾಭ್ಯಾಸ ದೊರೆಯಿತು' ಎಂದು ಲವ್ಲೀನಾ ಅವರು ಹೇಳಿರುವ ವಿಡಿಯೊ ತುಣುಕನ್ನು ಕೇಂದ್ರ ಕ್ರೀಡಾ ಸಚಿವ ಮನ್ಸೂಕ್ ಮಾಂಡವಿಯಾ ಸಾಮಾಜಿಕ ಜಾಲತಾಣದಲ್ಲಿ ಹಾಕಿದ್ದಾರೆ. ಮಾಂಡವಿಯಾ ಅವರೂ ಲವ್ಲೀನಾ ಅವರ ಸಾಧನೆಯನ್ನು ಅಭಿನಂದಿಸಿ ದ್ದಾರೆ. ಈ ಟೂರ್ನಿಯನ್ನು ವಿಶ್ವ ಬಾಕ್ಸಿಂಗ್ (ಡಬ್ಲ್ಯುಬಿ) ಆಶ್ರಯದಲ್ಲಿ ಆಯೋಜಿಸಲಾಗಿತ್ತು. ಮಹಿಳೆಯರ 75 ಕೆ.ಜಿ ವಿಭಾಗದಲ್ಲಿ ಲವ್ಲೀನಾ, ಲಿ ಕಿಯಾನ್, ರೆಫ್ಯುಜಿ ಬಾಕ್ಸಿಂಗ್ ತಂಡದ ಸಿಂಡಿ ಎನ್‌ಗ್ಯಾಂಬಾ ಹಾಗೂ ಇಂಗ್ಲೆಂಡ್‌ನ ಚಂತಲಾ ರೀಡ್ ಸ್ಪ-ರ್ಧಿಸಿದ್ದರು. ಲವ್ಲೀನಾ ತಾವು ಆಡಿದ ಮೂರು ಬೌಟ್‌ಗಳಲ್ಲಿ ಒಂದರಲ್ಲಿ ಮಾತ್ರ ಜಯಿಸಿದರು. ಎರಡರಲ್ಲಿ ಸೋತರು.

ಅಸ್ಸಾಂ ರಾಜ್ಯದ ಲವ್ಲೀನಾ ಅವರು ಈ ಟೂರ್ನಿಯಲ್ಲಿ ಭಾಗವಹಿಸಿದ ಭಾರತದ ಏಕೈಕ ಸ್ಪರ್ಧಿಯಾಗಿದ್ದಾರೆ.

ಲವ್ಲೀನಾ ಸೇರಿದಂತೆ ಭಾರತದ ಆರು ಮಂದಿ ಬಾಕ್ಸರ್‌ಗಳು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿದ್ದಾರೆ.

ಲವ್ಲೀನಾ ಬೋರ್ಗೊಹೈನ್

1000 ಮೀ. ಓಟ: ಮುಸ್ಕಾನ್ ಕೂಟ ದಾಖಲೆ

ಬಿಲಾಸ್‌ಪುರ (ಛತ್ತೀಸಗಢ) : ರಾಜಸ್ಥಾನದ ಮುಸ್ಕಾನ್ ಅವರು ಇಲ್ಲಿ ನಡೆದ 19ನೇ ರಾಷ್ಟ್ರೀಯ ಯೂತ್ ಅಥ್ಲೆಟಿಕ್ ಚಾಂಪಿಯನ್‌ಷಿಪ್‌ನ-ಲ್ಲಿ ಬಾಲಕಿಯರ ವಿಭಾಗದ 1000 ಮೀಟರ್ ಓಟದಲ್ಲಿ ಮೊದಲ ಸ್ಥಾನ ಗಳಿಸಿದರು. ಕರ್ನಾಟಕದ ಪ್ರಣತಿ ಎರಡನೇ ಸ್ಥಾನ ಪಡೆದರು.

ಮುಸ್ಕಾನ್ (2ನಿಮಿಷ 51.11 ಸೆಕೆಂಡ್) ಪ್ರಥಮ ಸ್ಥಾನ ಪಡೆದು ನೂತನ ಕೂಟ ದಾಖಲೆ (ಹಳೆಯ ದಾಖಲೆ ಬೆಂಗಳೂರಿನ ಪವಿತ್ರಾ 2ನಿ.51.96) ಬರೆದರು.

ಮುಸ್ಕಾನ್ (ರಾಜಸ್ಥಾನ; 2ನಿಮಿಷ 51.11 ಸೆಕೆಂಡ್)–1, ಪ್ರಣತಿ (ಕರ್ನಾಟಕ, 2ನಿ, 51.67 ಸೆ)–2, ಎಂ. ಅಕ್ಸಲಿನ್ (ತಮಿಳುನಾಡು; 2ನಿ 53.37)–3.

ಹೈ ಜಂಪ್: ಪ್ರಾಚಿ (ಹರಿಯಾಣ; 1.71 ಮೀಟರ್)–1, ಪೂಜಾ (ಹರಿಯಾಣ; 1.69 ಮೀ)–2, ಗೌತಮಿ (ಕರ್ನಾಟಕ; 1.62 ಮೀಟರ್)–3.

For more information give a missed call on 7230032200

Low ROI @ 7.99%*

No Hypothecation*

Instant Cashback of 5% up to ₹3000*

HDFC BANK

For dealer details scan the QR Code

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda.hmsi.in

*Terms and conditions apply. Offer available on all Honda two-wheeler models for EMI transactions made using HDFC Bank credit cards through Pine Labs machines only. Customers can avail a 5% Instant cashback, up to a maximum of Rs 3000. Valid on one transaction per card/order during the offer period. Offer valid until 31st August 2024. The scheme is available in selected outlets only. Product shown in the picture may vary from the actual product available in the market. Accessories shown in the product are not part of the standard equipment. All features and colours may not be part of all variants.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com